ಶುಕ್ರವಾರ, ಮೇ 10, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 2023ನೇ ಸಾಲಿನ ಭುವನ ಸುಂದರಿ ಶೈನಿಸ್ ಪಲಾಸಿಯೋಸ್ ಅವರು ಪಾಲ್ಗೊಂಡಿದ್ದರು



ಶುಕ್ರವಾರ, ಮೇ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 130 | ಪುಟ 22

www.prajavani.net


prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಬಿ.ಎಂ.ಗಿರಿರಾಜ್ ನಿರ್ದೇಶನದಲ್ಲಿ ಪ್ರಾರಂಭವಾಗುತ್ತಿರುವ ಚಿತ್ರದಲ್ಲಿ ರಾಗಿಣಿ ಅಭಿನಯಿಸುತ್ತಿದ್ದಾರೆ



ಆಳ-ಅಗಲ ಪ್ರಧಾನಿ ಆರ್ಥಿಕ ಸಲಹೆಗಾರರ ವರದಿಯಲ್ಲಿ ಹಲವಾರು ದೋಷ

‘ಪ್ರಧಾನಿಯಿಂದ ಜನಾಂಗೀಯ ದ್ವೇಷದ ಮಾತು’ 6

ಬಸವ ಜಯಂತಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,404	21,957	₹73,800 (ಬೆಂಗಳೂರು)	₹84,400 (ಬೆಂಗಳೂರು)	83.48

ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ 10.49 ಕುಸಿತ • ವೆಬ್‌ಕಾಸ್ಟಿಂಗ್ ಪರಿಣಾಮ– ಪರೀಕ್ಷಾ ಮಂಡಳಿ

ಮತ್ತೆ ಬಾಲಕಿಯರದೇ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದ್ದು, ಕಳೆದ ಬಾರಿಗಿಂತ ಶೇ 10.49ರಷ್ಟು ಕುಸಿತದ ಮಧ್ಯೆಯೂ ಬಾಲಕಿಯರು ಉತ್ತಮ ಸಾಧನೆ ಮಾಡಿದ್ದಾರೆ. ಹಳ್ಳಿ ಮಕ್ಕಳು ಈ ಬಾರಿಯೂ ಮೇಲುಗೈ ಸಾಧಿಸಿದ್ದಾರೆ.

ಇದೇ ಮೊದಲ ಬಾರಿ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಮೂಲಕ ವೆಬ್‌ಕಾಸ್ಟಿಂಗ್ ಅಳವಡಿಸಿದ್ದರಿಂದ ಪರೀಕ್ಷಾ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಬಿದ್ದಿದ್ದು, ಫಲಿತಾಂಶ ಕುಸಿತ ಕಂಡಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸಮರ್ಥಿಸಿಕೊಂಡಿದೆ.

2023ನೇ ಸಾಲಿನಲ್ಲಿ ಶೇ 83.89 ಬಂದಿತ್ತು. ಈ ಬಾರಿ ಶೇ 73.40 ಫಲಿತಾಂಶ ಬಂದಿದೆ.

4ನೇ ಪುಟ ನೋಡಿ

ಸಮಗ್ರ ವಿವರ 4



ಸರ್ಕಾರಿ ಶಾಲೆಯಲ್ಲಿ ಓದಿದರೆ ಏನೂ ಆಗಲ್ಲ ಎಂಬುದು ತಪ್ಪು ಕಲ್ಪನೆ. ಆ ಶಾಲೆಯಲ್ಲೂ ಸಾಧನೆ ಮಾಡಬಹುದು ಎಂಬುದಕ್ಕೆ ನಾನೇ ಉದಾಹರಣೆ

ಅಂಕಿತಾ ಬಸಪ್ಪ ಕೊಣ್ಣೂರ
ಮೊದಲ ಸ್ಥಾನ ಪಡೆದ ವಿದ್ಯಾರ್ಥಿನಿ

ಕೃಪಾಂಕ ಕಳೆದರೆ ಶೇ 53ರಷ್ಟೇ ಫಲಿತಾಂಶ

ಮೌಲ್ಯಮಾಪನದ ನಂತರ ಫಲಿತಾಂಶ ಶೇ 53ರಷ್ಟಿತ್ತು. ಇದು ದಶಕದ ಇತಿಹಾಸದಲ್ಲೇ ಅತ್ಯಂತ ಕಡಿಮೆ ಫಲಿತಾಂಶ. ಫಲಿತಾಂಶ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಎಂದು ಮನಗಂಡ ಶಾಲಾ ಶಿಕ್ಷಣ ಇಲಾಖೆ, ಕೃಪಾಂಕ ನಿಯಮದಲ್ಲಿ ಸಡಿಲಿಕೆ ಮಾಡಲು ಪರೀಕ್ಷಾ ಮಂಡಳಿಗೆ ಸೂಚಿಸಿತ್ತು. ಹಿಂದೆ ಮೂರು ವಿಷಯಗಳಲ್ಲಿ 35 ಅಂಕ ಪಡೆದಿದ್ದು, ಉಳಿದ ಮೂರು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೆ ಪ್ರತಿ ವಿಷಯದಲ್ಲೂ ಗರಿಷ್ಠ 10 ಕೃಪಾಂಕ ನೀಡಿ ತೇರ್ಗಡೆ ಮಾಡಲಾಗುತ್ತಿತ್ತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೃಪಾಂಕ ಪಡೆಯಲು ಇದ್ದ ಶೇ 35 ಅರ್ಹ ಅಂಕಗಳನ್ನು 25ಕ್ಕೆ ಇಳಿಸಿ, ಗರಿಷ್ಠ 20 ಕೃಪಾಂಕ ನೀಡಲಾಗಿದೆ. ಇದರಿಂದ ಒಟ್ಟಾರೆ ಫಲಿತಾಂಶ ಶೇ 73.40ಕ್ಕೆ ಹಿಗ್ಗಿದೆ. ಕೃಪಾಂಕ ನೀಡದೇ ಇದ್ದಿದ್ದರೆ ಕಳೆದ ಬಾರಿಗಿಂತಲೂ (2023ರ ಫಲಿತಾಂಶ ಶೇ 83.89) ಶೇ 30ರಷ್ಟು ಫಲಿತಾಂಶ ಕುಸಿತವಾಗುತ್ತಿತ್ತು. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 1.69 ಲಕ್ಷ ವಿದ್ಯಾರ್ಥಿಗಳು ಕೃಪಾಂಕದ ಆಧಾರದಲ್ಲಿ ಉತ್ತೀರ್ಣರಾಗಿದ್ದಾರೆ.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಾಡಿಗೆ ಪ್ರಥಮ ಸ್ಥಾನ ಗಳಿಸಿರುವ ಅಂಕಿತಾಗೆ ತುಂಬು ಹೃದಯದ ಅಭಿನಂದನೆಗಳು. ಅವಳ ಶೈಕ್ಷಣಿಕ ಬದುಕು ಮುಂದೆಯೂ ಸಾಧನೆಗಳಿಂದ ಕೂಡಿರಲಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

94% ಉಡುಪಿ ಜಿಲ್ಲೆ ಮೊದಲ ಸ್ಥಾನ

50.59% ಯಾದಗಿರಿ ಜಿಲ್ಲೆ ಕೊನೆಯ ಸ್ಥಾನ

625 ಅಂಕಿತಾ ಬಸಪ್ಪ ಕೊಣ್ಣೂರ, ಬಾಗಲಕೋಟೆ

624
- ಮೇದಾ ಪಿ.ಶೆಟ್ಟಿ, ಬೆಂಗಳೂರು
- ಡಿ.ಎಂ. ಹರ್ಷಿತಾ, ಶಿರಾ
- ಜಿ.ಕೆ. ಚಿನ್ಮಯ್, ದಕ್ಷಿಣ ಕನ್ನಡ
- ಸಿದ್ಧಾಂತ ನಾಯಿಕಬಾ ಗಡಗೆ, ಬೆಳಗಾವಿ
- ದರ್ಶನ್ ಭಟ್, ಶಿರಸಿ
- ಚಿನ್ಮಯಿ ಹೆಗಡೆ, ಶಿರಸಿ
- ಕೆ.ಎಂ. ಶ್ರೀರಾಮ್, ಶಿರಸಿ

ಶಾಲೆಗಳು	ಶೇ 100 ಫಲಿತ	ಶೂನ್ಯ ಫಲಿತ
ಸರ್ಕಾರಿ	785	03
ಅನುದಾನಿತ	206	13
ಖಾಸಗಿ	1,297	62
ಒಟ್ಟು	2288	78

88.29% ಆಂಗ್ಲ ಮಾಧ್ಯಮ

69.34% ಕನ್ನಡ ಮಾಧ್ಯಮ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಚುನಾವಣೆ ಕಾರ್ಯದಲ್ಲಿ ಕಂದಾಯ ಇಲಾಖೆ ಸಿಬ್ಬಂದಿ: ಹೆಚ್ಚಿದ ಭೂಕಬಳಿಕೆ

ಮಲೆನಾಡು: ಅರಣ್ಯನಾಶ ಅವ್ಯಾಹತ

• ವೆಂಕಟೇಶ ಜಿ.ಎಚ್.

ಪ್ರಜಾವಾಣಿ ವಿಶೇಷ

ಶಿವಮೊಗ್ಗ: ಲೋಕಸಭಾ ಚುನಾವಣೆಗೆ ನೀತಿ-ಸಂಹಿತೆ ಆರಂಭವಾದ ಬಳಿಕ ಮಲೆನಾಡಿನ ಹಲವೆಡೆ ಕಂದಾಯ ಭೂಮಿಯ ಅತಿಕ್ರಮಣ ವೇಗ ಪಡೆದಿದೆ. ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಚುನಾವಣೆ ಕಾರ್ಯದಲ್ಲಿ ತೊಡಗಿಕೊಂಡಿರುವುದು ಭೂಕಬಳಿಕೆದಾರರಿಗೆ ವರದಾನವಾಗಿದೆ.

ಬಗರ್‌ಹುಕುಂ ಅಡಿ ಎರಡು ಎಕರೆ ಮಂಜೂರು ಆದರೆ ಅದಕ್ಕೆ ತಾಗಿಕೊಂಡಿರುವ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಲಾಗುತ್ತಿದೆ. ಆ ಜಾಗದಲ್ಲಿನ ಮರಗಳನ್ನು ರಾತ್ರೋರಾತ್ರಿ ಕಡಿದು ಸುಟ್ಟು ಮಾರಣಹೋಮ ಮಾಡುವ ಕಾರ್ಯ ನಡೆದಿದೆ.

ಸೊರಬ ತಾಲ್ಲೂಕಿನ ಅಂದವಳ್ಳಿ, ಬಾಡದಬೈಲು, ಬೆನ್ನೂರು, ನರ್ಚಿ, ತೆಲಗುಂದ್ಲಿ, ಬಿಕ್ಕಲಗೋಡು, ದ್ಯಾವಸ ಬಳಿ ಗ್ರಾಮ ಅರಣ್ಯ ನಾಶಪಡಿಸಿ ಒತ್ತುವರಿ ಮಾಡಿಕೊಂಡ ಜಾಗಕ್ಕೆ ಬೇಲಿ ಹಾಕಲಾಗಿದೆ. ತೊರಗೊಂಡನಕೊಪ್ಪದಲ್ಲಿ ವರದಾ ನದಿ ದಂಡೆಯ ಮೇಲಿನ ಖರಾಬು ಪ್ರದೇಶದ ಅಂದಾಜು 15 ಎಕರೆ ಜಾಗ ಅತಿಕ್ರಮಣಕ್ಕೀಡಾಗಿದೆ.

5ನೇ ಪುಟ ನೋಡಿ



ಸೊರಬ ತಾಲ್ಲೂಕಿನ ತೊರಗೊಂಡನಕೊಪ್ಪ ಗ್ರಾಮದಲ್ಲಿ ಒತ್ತುವರಿಗಾಗಿ ಅರಣ್ಯದಲ್ಲಿನ ಬೃಹತ್ ಮರ ಕಡಿದು ಹಾಕಲಾಗಿದೆ

ಜಂಗಮಶೆಟ್ಟಿ ರಾಜ್ಯಮಟ್ಟದ ರಂಗಪ್ರಶಸ್ತಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ರಂಗಸಂಗಮ ಕಲಾವೇದಿಕೆ ಕೊಡಮಾಡುವ ಎಸ್.ಬಿ.ಜಂಗಮಶೆಟ್ಟಿ ಮತ್ತು ಸುಭದ್ರಾದೇವಿ ಜಂಗಮಶೆಟ್ಟಿ ರಂಗ ಪ್ರಶಸ್ತಿಗೆ ರಂಗ ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಸಾಧನೆಗೈದ ರಂಗಕರ್ಮಿಗಳ ಹೆಸರನ್ನು ರಂಗಾಸಕ್ತರು ಪ್ರಶಸ್ತಿಗೆ ನಾಮನಿರ್ದೇಶನ ಮಾಡಬಹುದು ಎಂದು ರಂಗಸಂಗಮ ಕಲಾ ವೇದಿಕೆ ಕಾರ್ಯದರ್ಶಿ ಸುಜಾತಾ ಜಂಗಮಶೆಟ್ಟಿ ತಿಳಿಸಿದ್ದಾರೆ.

ಪ್ರಶಸ್ತಿಯು ತಲಾ ₹ 10,000 ನಗದು, ಪ್ರಶಸ್ತಿ ಪತ್ರ ಹಾಗೂ ಸನ್ಮಾನ ಒಳಗೊಂಡಿದೆ.

2014ರಿಂದ ಆರಂಭವಾದ ರಂಗ ಪ್ರಶಸ್ತಿಯನ್ನು ಈವರೆಗೆ ರಂಗಸಾಧಕರಾದ ಬಸವರಾಜಯ್ಯ ಭೀಮನಳ್ಳಿ, ಈಶ್ವರಪ್ಪ ಫರತಾಬಾದ ಕಲಬುರಗಿ, ಮನೂಬಾಯಿ ನಾಕೋಡ ದಾವಣಗೆರೆ, ಮಂಡ್ಯ ರಮೇಶ್ ಮೈಸೂರು, ಜುಲೇಖಾಬೇಗಂ ಶಹಾಪುರ, ಶ್ರೀಪಾದ ಭಟ್ ಧಾರೇಶ್ವರ ಉತ್ತರ ಕನ್ನಡ, ದೀಪಕ್ ಮೈಸೂರು, ಶಿವಯ್ಯಸ್ವಾಮಿ ಬಿಬ್ಬಳ್ಳಿ ಸೇಡಂ, ಡಾ.ಜೀವನರಾಂ ಸುಳ್ಯ, ಶೈಲಜಾ ದುಧನಿಕರ್ ಮೈಂದರ್ಗಿ, ಪ್ರಶಾಂತ ಹಿರೇಮಠ ಹುಬ್ಬಳ್ಳಿ ಪ್ರೇಮಾ ಹೊಸಮನಿ ತುಮಕೂರ ಅವರು ಪಡೆದಿದ್ದಾರೆ.

ಅರ್ಜಿ ಕಳುಹಿಸುವ ಕೊನೆಯ ದಿನ ಜೂನ್ 10. ವಿಳಾಸ: ಸುಜಾತಾ ಜಂಗಮಶೆಟ್ಟಿ, 'ಓಂ' ರೆಸಿಡೆನ್ಸಿ, ಹಳೆಯ ಜೇವರ್ಗಿ ರಸ್ತೆ, ಕಲಬುರಗಿ–585102. ಮೊಬೈಲ್ 9480409732

ವಿಶಾಲ್ ಶಾಲೆಗೆ ಶೇ100 ಫಲಿತಾಂಶ



ಎಸ್.ಎಸ್. ಸ್ಪಂದನ

ನೆಲಮಂಗಲ: ಪಟ್ಟಣದ ವಿಶಾಲ್ ಶಾಲೆಯು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 100 ಫಲಿತಾಂಶ ಪಡೆದಿದೆ.

ಒಟ್ಟು 37 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 10 ವಿದ್ಯಾರ್ಥಿಗಳು ಅತ್ಯುನ್ನತ, 22 ವಿದ್ಯಾರ್ಥಿಗಳು ಮೊದಲ ದರ್ಜೆ, ಐವರು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಎನ್.ಎಸ್. ಸ್ಪಂದನ ಶೇ 98.24ರಷ್ಟು ಅಂಕ ಗಳಿಸಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಟಿ.ಕೆ. ನರಸೇಗೌಡ, ಮುಖ್ಯಶಿಕ್ಷಕ ಜಿ. ಚಿಕ್ಕರುದ್ರಪ್ಪ ತಿಳಿಸಿದ್ದಾರೆ.

ಹೊಂಗಿರಣ ವೈದ್ಯಕೀಯ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಹೊಂಗಿರಣ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶಕ್ಕೆ ಅರ್ಹತೆ ಪಡೆಯುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಸರ್ಕಾರಿ ಶಾಲೆ ಹಾಗೂ ಕಾಲೇಜಿನಲ್ಲಿ ಓದಿದವರಿಗೆ ಆದ್ಯತೆ ನೀಡಲಾಗುವುದು.

ಅರ್ಹ ಆಸಕ್ತರು ಹೊಂಗಿರಣ ಚಾರಿಟಬಲ್ ಟ್ರಸ್ಟ್‌ನ ವೆಬ್‌ಸೈಟ್‌ಗೆ ಭೇಟಿ ನೀಡಿ (http://hongirana.org/project/hongirana-schlorship-program/) ಅರ್ಜಿ ಭರ್ತಿ ಮಾಡಬಹುದು. ಆಧಾರ್ ಕಾರ್ಡ್, ಆದಾಯ ಪ್ರಮಾಣ ಪತ್ರ, ಕುಟುಂಬದ ವಿವರ, ವಿದ್ಯಾಭ್ಯಾಸದ ಪ್ರಮಾಣ ಪತ್ರಗಳೊಂದಿಗೆ ಹೊಂಗಿರಣ ಚಾರಿಟಬಲ್ ಟ್ರಸ್ಟ್ ಸಿಇಒ ವಿನಯ್ ಬಿ.ಎಸ್. (7204123667), ಶಿವಪ್ರಕಾಶ್ ಎಸ್. (9740010544) ಅವರನ್ನು ಸಂಪರ್ಕಿಸಬಹುದು ಎಂದು ಟ್ರಸ್ಟ್‌ನವರು ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 619 ಅಂಕ ಪಡೆದ ವಿದ್ಯಾರ್ಥಿನಿ ಚಂದನಾ

ಬಿಬಿಎಂಪಿ ಶಾಲೆ: ಫಲಿತಾಂಶ ವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 33 ಶಾಲೆಗಳಲ್ಲಿ ಶೇ 68.78ರಷ್ಟು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. 66 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಗಳಿಸಿದ್ದಾರೆ. ಕಳೆದ ವರ್ಷಕ್ಕಿಂತ ಶೇ 1ರಷ್ಟು ಫಲಿತಾಂಶ ವೃದ್ಧಿಯಾಗಿದೆ.

2,502 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 1,721 ಮಂದಿ ಉತ್ತೀರ್ಣರಾಗಿದ್ದು, 781 ಮಂದಿ ಅನುತ್ತೀರ್ಣರಾಗಿದ್ದಾರೆ.

ಮತ್ತಿಕೆರೆ ಬಾಲಕಿಯರ ಪ್ರೌಢಶಾಲೆಯು ಶೇ 92.78 ಫಲಿತಾಂಶ ಪಡೆದು ಅಗ್ರಸ್ಥಾನ ಪಡೆದಿದೆ. ಈ ಶಾಲೆಯಲ್ಲಿ 97 ವಿದ್ಯಾರ್ಥಿಗಳಲ್ಲಿ 90 ಮಂದಿ ಉತ್ತೀರ್ಣರಾಗಿದ್ದಾರೆ. ಭೈರವೇಶ್ವರ ನಗರ ಪ್ರೌಢಶಾಲೆಯಲ್ಲಿ 262ರಲ್ಲಿ 241 ವಿದ್ಯಾರ್ಥಿಗಳು ಪಾಸಾಗಿದ್ದು (ಶೇ 91.98), ಹೇರೋಹಳ್ಳಿ ಪ್ರೌಢಶಾಲೆಯಲ್ಲಿ 233ರಲ್ಲಿ 211 ವಿದ್ಯಾರ್ಥಿಗಳು ಉತ್ತೀರ್ಣರಾಗಿ (ಶೇ 90.56) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

ಭೈರವೇಶ್ವರನಗರ ಪ್ರೌಢಶಾಲೆಯಲ್ಲಿ 19 ವಿದ್ಯಾರ್ಥಿಗಳು, ಶಕ್ತಿಗಣಪತಿ ನಗರ ಶಾಲೆಯಲ್ಲಿ 13, ಹೇರೋಹಳ್ಳಿ ಶಾಲೆಯಲ್ಲಿ 11 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ.



ಯಶವಂತ್

ಕೆ.ಜಿ. ನಗರದ ಪ್ರೌಢಶಾಲೆ ಯಲ್ಲಿ 10 ವಿದ್ಯಾರ್ಥಿಗಳಲ್ಲಿ ಇಬ್ಬರು ಮಾತ್ರ ಉತ್ತೀರ್ಣರಾಗಿದ್ದು, ಶಾಲೆ ಕೊನೆಯ ಸ್ಥಾನ ಗಳಿಸಿದೆ. ಆಸ್ಟೀನ್ ಟೌನ್ ಶಾಲೆಯಲ್ಲಿ 38ರಲ್ಲಿ 9, ಪಿಳ್ಳಣ್ಣ ಗಾರ್ಡನ್ ಶಾಲೆಯಲ್ಲಿ 249ರಲ್ಲಿ 61 ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾಗಿದ್ದಾರೆ.

ಶ್ರೀರಾಂಪುರ ಬಾಲಕಿಯರ ಪ್ರೌಢಶಾಲೆಯ ಪಿ. ಚಂದನಾ ಅವರು 625ಕ್ಕೆ 619 ಅಂಕಗಳನ್ನು (ಶೇ 99) ಪಡೆದು ಪಾಲಿಕೆ ಶಾಲೆಗಳಲ್ಲಿ ಅತಿಹೆಚ್ಚು ಅಂಕ ಗಳಿಸಿದ ದಾಖಲೆ ಬರೆದಿದ್ದಾರೆ. ಲಗ್ಗೆರೆ ಪ್ರೌಢಶಾಲೆಯ ಟಿ.ಜೆ. ಯಶವಂತ್ ಅವರು 610 ಅಂಕಗಳನ್ನು (ಶೇ 97.60) ಪಡೆದಿದ್ದಾರೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

'ವೈದ್ಯೆ ಆಗುವ ಗುರಿ'



ಪಿ. ಚಂದನಾ

ಬೆಂಗಳೂರು: 'ನನಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 621 ಅಂಕಗಳು ಬರುವ ನಿರೀಕ್ಷೆ ಇತ್ತು. ಆದರೆ, ಎರಡು ಅಂಕಗಳು ಕಡಿಮೆ ಬಂದಿದೆ. ನನ್ನ ಈ ಸಾಧನೆ ಪೋಷಕರಿಗೆ ಹಾಗೂ ಶಿಕ್ಷಕರಿಗೆ ಖುಷಿ ಉಂಟು ಮಾಡಿದೆ...'

2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 619 ಅಂಕ (ಶೇ 99) ಪಡೆದಿರುವ ಶ್ರೀರಾಂಪುರ ಬಾಲಕಿಯರ ಬಿಬಿಎಂಪಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪಿ. ಚಂದನಾ ಅವರ ಮಾತುಗಳಿವು.

ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ತಂದೆಯ ಆರೈಕೆ ಮಾಡುವ ಜೊತೆಗೆ ಬಿಬಿಎಂಪಿ ಶಾಲೆಯ ಪಿ. ಚಂದನಾ ಅವರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 99ರಷ್ಟು ಅಂಕಗಳಿಸಿ ಉತ್ತಮ ಸಾಧನೆ ಮಾಡಿದ್ದಾರೆ.

ಅವರು ಸಂಸ್ಕೃತದಲ್ಲಿ 125, ಇಂಗ್ಲಿಷ್‌ನಲ್ಲಿ 98, ಕನ್ನಡದಲ್ಲಿ 100, ಗಣಿತದಲ್ಲಿ 100, ವಿಜ್ಞಾನದಲ್ಲಿ 97 ಹಾಗೂ ಸಮಾಜ ವಿಜ್ಞಾನದಲ್ಲಿ 99 ಅಂಕ ಪಡೆದಿದ್ದಾರೆ. ಚಂದನಾ ಅವರ ತಾಯಿ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಮಾಡಿ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದಾರೆ.

'ಪಿಯುಸಿಯಲ್ಲಿ ವಿಜ್ಞಾನ ವಿಷಯ ತೆಗೆದುಕೊಂಡು, ಮುಂದೆ ವೈದ್ಯೆ ಆಗಬೇಕು ಎಂಬ ಗುರಿ ಹೊಂದಿದ್ದೇನೆ. ವೈದ್ಯ ವೃತ್ತಿ ಬಗ್ಗೆ ಮೊದಲಿಂದಲೂ ನನಗೆ ಅಪಾರ ಹೆಮ್ಮೆ ಇದ್ದು, ಅದನ್ನು ಸಾಕಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ಚಂದನಾ ತಿಳಿಸಿದರು.

'ಚಂದನಾ ಶಾಲೆಯಲ್ಲಿ ಹೇಳಿಕೊಡುತ್ತಿದ್ದ ಪಾಠವನ್ನು ಚೆನ್ನಾಗಿ ಶ್ರದ್ಧೆಯಿಂದ ಕಲಿಯುತ್ತಿದ್ದರು. ಬಿಬಿಎಂಪಿ ಶಾಲೆಗಳಲ್ಲೂ ಒಳ್ಳೆಯ ಶಿಕ್ಷಣ ನೀಡಲಾಗುತ್ತಿದೆ. ಆದರೆ, ಶ್ರದ್ಧೆಯಿಂದ ಒದಬೇಕು. ಇದಕ್ಕೆ ನಾನು ಸೇರಿದಂತೆ ಅನೇಕ ಮಕ್ಕಳು ಸಾಕ್ಷಿಯಾಗಿದ್ದಾರೆ' ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ಸಾಧಕರು

ಅರುಣೋದಯ ಪ್ರೌಢಶಾಲೆ, ವಿಘ್ನೇಶ್ವರನಗರ



ರಾಜಲಕ್ಷ್ಮೀ ಡಿ.ಜೆ. ಶೇ 97.28



ಶಾಲಿನಿ ಆರ್ ಶೇ 98.56



ಲಕ್ಷ್ಮೀಸಾಗರ್ ಶೇ 97.28



ತುಳಸಿ ಎನ್ ಶೇ 98.72 ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಸುಂಕದಕಟ್ಟೆ

ಸೌಂದರ್ಯ ಶಾಲೆ, ಹಾವನೂರು ಬಡಾವಣೆ



ಯಶಸ್ ವಿ.ಎ. ಶೇ 98.56



ಮೇಘಶ್ರೀ ಶೇ 98.72



ಸಮೃದ್ಧ್ ಶೇ 97.44



ವರುಣ್ ಎಸ್ ಶೇ 98.56

ಆಚಾರ್ಯ ಪಾಠಶಾಲೆಗೆ ಶೇ 100 ಫಲಿತಾಂಶ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ಆಚಾರ್ಯ ಪಾಠಶಾಲಾ ಪಬ್ಲಿಕ್ ಸ್ಕೂಲ್ ಶೇ 100 ಫಲಿತಾಂಶ ಪಡೆದಿದೆ.

98 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. 69 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾರೆ. ಅದರಲ್ಲಿ 24 ವಿದ್ಯಾರ್ಥಿಗಳು ಶೇ 90ಕ್ಕಿಂತ ಅಧಿಕ ಅಂಕ ಗಳಿಸಿದ್ದಾರೆ.



ಕೆ.ಕೆ.ಸುಮುಖ್



ಎ.ಹಿತೇಶ್



ಕೀರ್ತನಾ ಬಿ.ಎಂ



ಓಂ ಸಿ.ಎಸ್



ಚೈತ್ರಾ ನಾಯಕ್



ಎಚ್.ಎಸ್.ಬೃಂದಾ



ಎಂ.ಮಾನಸ

ಸ್ವಾಮೀಜಿಗೆ ಹಾಸಿಗೆ, ಮನೆಯೂಟ

ಪೋಕ್ಸೊ ಆರೋಪಿಯ ಮನವಿಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ ಪ್ರಕರಣದ ಆರೋಪಿಯಾಗಿ ಜೈಲಿನಲ್ಲಿರುವ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿಯ ಹಂಗರಹಳ್ಳಿ ಶ್ರೀವಿದ್ಯಾ ಚೌಡೇಶ್ವರಿ ದೇವಸ್ಥಾನ ಶ್ರೀಮಠದ ಬಾಲ ಮಂಜುನಾಥ ಸ್ವಾಮೀಜಿ, 'ಜೈಲಿನಲ್ಲಿ ಮಲಗಲು ನನಗೆ ಹಾಸಿಗೆ ಬೇಕು, ಮನೆಯೂಟವೇ ಬೇಕು' ಎಂಬುದಾಗಿ ಮಾಡಿದ್ದ ಮಧ್ಯಂತರ ಮನವಿಗೆ ಹೈಕೋರ್ಟ್ ಅಸ್ತು ಎಂದಿದೆ.

'ಈ ಸಂಬಂಧ ತುಮಕೂರು ಜೈಲು ಅಧೀಕ್ಷಕರಿಗೆ ನಿರ್ದೇಶಿಸಬೇಕು' ಎಂದು ಕೋರಿ ಬಾಲ ಮಂಜುನಾಥ ಸ್ವಾಮೀಜಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರು ಗುರುವಾರ ಈ ಕುರಿತಂತೆ ಆದೇಶಿಸಿದರು.

'ಅರ್ಜಿದಾರರು ತಾವೇ ಮಠದಿಂದ ಅಥವಾ ಮನೆಯಿಂದ ಊಟ ತರಿಸಿಕೊಳ್ಳಬಹುದು. ಆದರೆ, ಅದರ ಅಪಾಯಗಳ ಹೊಣೆಯನ್ನು ತಾವೇ ಹೊರಬೇಕು. ತಂದ ಊಟವನ್ನು ಜೈಲು ಅಧಿಕಾರಿಗಳು ಪರೀಕ್ಷಿಸಿದ ನಂತರವೇ ಅರ್ಜಿದಾರರು ಸೇವಿಸಲು ಅವಕಾಶ ಕಲ್ಪಿಸಬೇಕು. ಅಂತೆಯೇ, ಅರ್ಜಿದಾರರು ತಮ್ಮದೇ ಆದ ಹಾಸಿಗೆ ವ್ಯವಸ್ಥೆ ಮಾಡಿಕೊಳ್ಳಲು ಅನುಮತಿ ನೀಡಬೇಕು. ಅಗತ್ಯವಿದ್ದರೆ ಈ ಆದೇಶದ ಮಾರ್ಪಾಡಿಗೆ ಜೈಲು ಅಧಿಕಾರಿಗಳು ನ್ಯಾಯಾಲಯವನ್ನು ಕೋರಬಹುದು' ಎಂದು ನ್ಯಾಯಪೀಠ ತುಮಕೂರು ಕಾರಾಗೃಹದ ಸೂಪರಿಂಟೆಂಡೆಂಟ್ ಅವರಿಗೆ ನಿರ್ದೇಶಿಸಿದೆ. ಸ್ವಾಮೀಜಿ ಪರ ಹೈಕೋರ್ಟ್ ವಕೀಲೆ ಲೀಲಾ ಪಿ.ದೇವಾಡಿಗ ವಾದ ಮಂಡಿಸಿದರು.

ಪ್ರಕರಣವೇನು?: ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಸ್ವಾಮೀಜಿ ವಿರುದ್ಧ 2024ರ ಮಾರ್ಚ್ 7ರಂದು ದಾಖಲಾಗಿರುವ ದೂರಿನ ಅನುಸಾರ ಪೊಲೀಸರು ಸ್ವಾಮೀಜಿಯನ್ನು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಅಡಿಯಲ್ಲಿ ಬಂಧಿಸಲಾಗಿದೆ. ಇವರನ್ನು ಮಾರ್ಚ್ 14ರಂದು ನ್ಯಾಯಾಲಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಸ್ವಾಮೀಜಿ ಸದ್ಯ ತುಮಕೂರು ಜೈಲಿನಲ್ಲಿ ವಿಚಾರಣಾಧೀನ ಕೈದಿಯಾಗಿದ್ದಾರೆ. 'ಜೈಲಿನಲ್ಲಿ ಪೂರೈಸಲಾಗುತ್ತಿರುವ ಊಟ ನನಗೆ ಸರಿಹೊಂದುತ್ತಿಲ್ಲ. ಆದ್ದರಿಂದ, ಮಠದಿಂದ ಅಥವಾ ಮನೆಯಿಂದ ಊಟ, ಹಾಸಿಗೆ ತರಿಸಿಕೊಳ್ಳಲು ಅನುಮತಿ ನೀಡಬೇಕು' ಎಂದು ಅವರು ಜೈಲಿನ ಅಧಿಕಾರಿಗಳಿಗೆ ಕೋರಿದ್ದರು. ಆದರೆ, ಅಧಿಕಾರಿಗಳು ಇದಕ್ಕೆ ಸಮ್ಮತಿ ನೀಡಿರಲಿಲ್ಲ.

'ಉತ್ತಮ ವಿದ್ಯೆ ಯಶಸ್ಸಿನ ಗುಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರಿಯಾದ ಗುರು- ಗುರಿ ಇದ್ದರೆ ಜೀವನದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ' ಎಂದು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ ತಿಳಿಸಿದರು.

ನಗರದ ಯುನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ರ‍್ಯಾಂಕ್ ಪಡೆದ ಸಂಸ್ಥೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಉತ್ತಮ ವಿದ್ಯೆ-ಸಂಸ್ಕಾರ ಯಶಸ್ಸಿನ ಗುಟ್ಟು. ಪ್ರತಿ ವಿದ್ಯಾರ್ಥಿಯ ಬಗ್ಗೆ ಹೆತ್ತವರಿಗೆ ಅಪಾರ ನಿರೀಕ್ಷೆಗಳಿರುತ್ತವೆ. ಅದನ್ನು ಶ್ರದ್ಧೆ, ಕಾಯಕ, ಕಠಿಣ ಪರಿಶ್ರಮದ ಮೂಲಕ ಈಡೇರಿಸಲು ಎಲ್ಲರೂ ಪ್ರಯತ್ನಿಸ ಬೇಕು' ಎಂದು ತಿಳಿಸಿದರು.

ಯುಪಿಎಸ್‌ಸಿ ನಾಗರಿಕ ಸೇವೆ ಪರೀಕ್ಷೆಯಲ್ಲಿ 121ನೇ ರ‍್ಯಾಂಕ್ ಪಡೆದ ಶಾಶ್ವತ್, 384ನೇ ರ‍್ಯಾಂಕ್ ಪಡೆದ ಅಂಕುರ್ ಕುಮಾರ್ ಮತ್ತಿತರರನ್ನು ಅವರು ಸನ್ಮಾನಿಸಿದರು.

ಸಂಸ್ಥೆಯ ಅಧ್ಯಕ್ಷ ಆರ್ ಉಪೇಂದ್ರ ಶೆಟ್ಟಿ ಮಾತನಾಡಿದರು. ಕಾರ್ಯಕ್ರಮದ ಭಾಗವಾಗಿ ಸಾಧಕರೊಂದಿಗೆ ಪ್ರಶ್ನೋತ್ತರ ನಡೆಯಿತು. ಪ್ರಭುಲಿಂಗ ಕವಳಿಕಟ್ಟಿ ಮಾರ್ಗದರ್ಶನ ನೀಡಿದರು.

ನಿಧನ ವಾರ್ತೆ

ಡಿ.ಗಂಗಪ್ಪ

ತುಮಕೂರು: ನಿವೃತ್ತ ಐಎಎಸ್ ಅಧಿಕಾರಿ ಡಿ.ಗಂಗಪ್ಪ (84) ಹೃದಯಾಘಾತದಿಂದ ಬೆಂಗಳೂರಿನ ತಮ್ಮ ನಿವಾಸದಲ್ಲಿ ಗುರುವಾರ ನಿಧನರಾದರು.

ಮಧುಗಿರಿ ತಾಲ್ಲೂಕಿನ ತಾಳಕೆರೆ ಗ್ರಾಮದವರಾದ ಅವರಿಗೆ ಇಬ್ಬರು ಪುತ್ರಿಯರು, ಮೂವರು ಪುತ್ರರು ಇದ್ದಾರೆ.



ಡಿ.ಗಂಗಪ್ಪ

ಬೆಂಗಳೂರಿನ ಹೆಬ್ಬಾಳದಲ್ಲಿ ಮೇ 10ರಂದು ಬೆಳಗ್ಗೆ 9 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರಂಭದಲ್ಲಿ ಬೆಂಗಳೂರಿನ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿಕೊಂಡಿದ್ದರು. ನಂತರ ಯುಪಿಎಸ್‌ಸಿ ಪರೀಕ್ಷೆಯಲ್ಲಿ (1967ರಲ್ಲಿ ಐಎಎಸ್) ತೇರ್ಗಡೆ ಆಗಿದ್ದರು. ತಮಿಳುನಾಡು ಕೇಡರ್ ಅಧಿಕಾರಿಯಾಗಿ ನೇಮಕಗೊಂಡು, ಅಲ್ಲೇ ಕರ್ತವ್ಯ ನಿರ್ವಹಿಸಿದ್ದರು. ತಂಜಾವೂರು ಜಿಲ್ಲೆ ಕಲೆಕ್ಟರ್ ಆಗಿಯೂ ಕೆಲಸ ಮಾಡಿದ್ದಾರೆ.

1983ರಲ್ಲಿ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದರು. ನದಿ ಜೋಡಣೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಅವರು ತೊಡಗಿಸಿಕೊಂಡಿದ್ದರು.

ಮಧುಗಿರಿ ತಾಲ್ಲೂಕಿನ ಮಡಕನಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಪದವಿ ಪಡೆದಿದ್ದರು. ಮಾಹಿತಿಗೆ 9449809698 ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಜಗಜ್ಯೋತಿ ಬಸವೇಶ್ವರರ ಜಯಂತಿ, ಬಸವ ಉತ್ಸವ: ಚಾಲನೆ: ಶಿವರುದ್ರ ಸ್ವಾಮೀಜಿ, ಭಾಗವಹಿಸುವವರು: ಗೊ.ರು. ಚನ್ನಬಸಪ್ಪ, ಎಂ. ಕೃಷ್ಣಪ್ಪ, ಬಿ.ಎಸ್. ಪರಮಶಿವಯ್ಯ, ಪ್ರಿಯಕೃಷ್ಣ, ಸಿ. ಸೋಮಶೇಖರ್, ಎಸ್. ಪಿನಾಕಪಾಣಿ, ಬಿ.ಎಸ್. ಪುಟ್ಟರಾಜು, ಅರವಿಂದ್ ಜತ್ತಿ, ಎಸ್. ರಾಜು, ಎಂ.ಎಸ್. ನಟರಾಜ್, ಜಯವಿಭವಸ್ವಾಮಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಜಗಜ್ಯೋತಿ ಬಸವೇಶ್ವರ ವಿದ್ಯಾರ್ಥಿನಿಲಯ ಮುಂಭಾಗ, ಹೊಸಹಳ್ಳಿ ಮೆಟ್ರೊ ನಿಲ್ದಾಣ ಪಕ್ಕ, ವಿಜಯನಗರ, ಬೆಳಿಗ್ಗೆ 6

ಸಿದ್ಧಿ ವಿನಾಯಕನ ಮೂರ್ತಿ ಪ್ರತಿಷ್ಠಾಪನ ಮಹೋತ್ಸವ: ಗೋಪೂಜೆ, ಮಹಾಗಣಪತಿ ಪೂಜೆ ಮತ್ತು ಹೋಮ ಬೆಳಿಗ್ಗೆ 5ಕ್ಕೆ, ಸಿದ್ಧಿ ವಿನಾಯಕನಿಗೆ ಕುಂಭಾಭಿಷೇಕ, ಹೂವಿನ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಬೆಳಿಗ್ಗೆ 8.30ಕ್ಕೆ, ಆಯೋಜನೆ: ಸಿದ್ಧಿವಿನಾಯಕ ಸೇವಾ ಸಮಿತಿ, ಸ್ಥಳ: 3ನೇ ಮುಖ್ಯರಸ್ತೆ, ಜ್ಞಾನಭಾರತಿ 2ನೇ ಹಂತ, ಕಡೆ ಗಾಂಧಿನಗರದ ಪಕ್ಕ, ವಳಗೇರಹಳ್ಳಿ, ಕೆಂಗೇರಿ ಉಪನಗರ

ಡಯಾಲಿಸಿಸ್ ಕೇಂದ್ರ, ವೈದ್ಯಕೀಯ ಸೌಲಭ್ಯಗಳ ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅತಿಥಿಗಳು: ವಿ. ಶ್ರೀನಿವಾಸ್ ಮೂರ್ತಿ, ಮೀನಾ ಕಿರ್ಲೋಸ್ಕರ್, ಆಯೋಜನೆ: ರವಿ ಕಿರ್ಲೋಸ್ಕರ್ ಮೆಮೊರಿಯಲ್ ಆಸ್ಪತ್ರೆ, ರೋಟರಿ ಬೆಂಗಳೂರು ಉದ್ಯೋಗ್, ಸ್ಥಳ: ರವಿ ಕಿರ್ಲೋಸ್ಕರ್ ಮೆಮೊರಿಯಲ್ ಆಸ್ಪತ್ರೆ, ನಂ. 19, 2ನೇ ಮುಖ್ಯರಸ್ತೆ, 1ನೇ ಫೇಸ್, ಪೀಣ್ಯ, ಬೆಳಿಗ್ಗೆ 9ರಿಂದ

ವಾರ್ಷಿಕ ಘಟಿಕೋತ್ಸವ–2024: ಅತಿಥಿ: ಅನಂತನಾಥ್, ಅಧ್ಯಕ್ಷತೆ: ಅಬ್ರಾಹಂ ಎಂ. ಜಾರ್ಜ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ ಆ್ಯಂಡ್ ನ್ಯೂ ಮೀಡಿಯಾ, ಕುಂಬಳಗೂಡು, ಬೆಳಿಗ್ಗೆ 10.30

ಬೇಸಿಗೆ ಚಿಣ್ಣರ ಶಿಬಿರ ಹಬ್ಬ: ಉದ್ಘಾಟನೆ: ಆಶಾರಾಣಿ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಆಯೋಜನೆ: ನಾಟ್ಯ ಮಯೂರಿ ಕಲಾ ಟ್ರಸ್ಟ್, ಸ್ಥಳ: ನಗೆ ಮನೆ, ಮರಿಯಪ್ಪನಪಾಳ್ಯ, ರಾಯಲ್ ಪಬ್ಲಿಕ್ ಸ್ಕೂಲ್, ಮಧ್ಯಾಹ್ನ 3ರಿಂದ

ರಾಮನವಮಿ ಸಂಗೀತೋತ್ಸವ: ಗಾಯನ: ವೇದನಾಥ ಶ್ರೀಗೋವಿಂದ್, ಪಿಟೀಲು: ಭರತ್, ಮೃದಂಗ: ಸುಧನ್ವ, ಗಾಯನ: ವಿವೇಕ್ ಸದಾಶಿವಮ್, ಪಿಟೀಲು: ನಳಿನಾ ಮೋಹನ್, ಮೃದಂಗ: ಜಿ.ಎಸ್. ನಾಗರಾಜ್, ಖಂಜಿರ: ಸಿ.ಪಿ. ವ್ಯಾಸ ವಿಠ್ಠಲ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5ರಿಂದ

ಬಸವ ಜಯಂತಿ–2024 ವಚನ ಸೌರಭ: ಉದ್ಘಾಟನೆ: ಸಾಗರನಹಳ್ಳಿ ನಟರಾಜ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಗೌರಿಶಂಕರ್, ಫಾಲನೇತ್ರ, ಎಂ. ಪ್ರಭುಸ್ವಾಮಿ, ಎಂ. ಜಗದ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಧಾರಿಣಿ ಮಹಿಳಾ ಸಂಘ, ಸ್ಥಳ: ಧಾರಿಣಿ ಮಹಿಳಾ ಸಂಘ, ಬಸವೇಶ್ವರನಗರ, ಸಂಜೆ 5.30

ಬಸವೇಶ್ವರ ಜಯಂತಿ ಅಂಗವಾಗಿ 100ಕ್ಕೂ ಹೆಚ್ಚಿನ ಭರತನಾಟ್ಯ ಕಲಾವಿದರಿಂದ ನಾಟ್ಯ ಸಿಂಚನ: ಸಾನ್ನಿಧ್ಯ: ಮಧುಸೂದನಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಶಿವರಾಜ ಪಾಟೀಲ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ವಿಶೇಷ ಸಂಚಿಕೆ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ್, ಬಡಮಕ್ಕಳಿಗೆ ವಿದ್ಯಾಪರಿಕರ ವಿತರಣೆ: ಜಿ. ಬಾಬು, ಬಿ.ಪಿ. ಪ್ರಕಾಶ್, ಬಿ.ಕೆ. ಸುಮಿತ್ರ, ಶಶಿಧರ ಕೋಟೆ, ಆಯೋಜನೆ: ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ, ಸ್ಥಳ: ಕಸಾಪ, ಚಾಮರಾಜಪೇಟೆ, ಸಂಜೆ 6

'ಪಿಟೀಲು ಯುಗಳ' ಸಂಗೀತ ಕಛೇರಿ: ಲಾಲ್ಗುಡಿ ಜಿ.ಜೆ. ಆರ್. ಕೃಷ್ಣನ್, ಲಾಲ್ಗುಡಿ ವಿಜಯಲಕ್ಷ್ಮಿ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಖಂಜಿರ: ಅಮೃತ ಎನ್., ಆಯೋಜನೆ: ವಾಗಧೀಶ್ವರಿ ಕಲಾ ಕೇಂದ್ರ ಟ್ರಸ್ಟ್, ಸ್ಥಳ: ಜಿ.ವಿ. ಹಾಲ್, ಶ್ರೀ ಜಯರಾಮ ಸೇವಾ ಮಂಡಲಿ, ಜಯನಗರ 8ನೇ ಬ್ಲಾಕ್, ಸಂಜೆ 6

ಶಂಕರ ಜಯಂತಿ, 52ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವ: ವೀಣೆ: ಜೆ. ಯೋಗವಂದನ, ಮೃದಂಗ: ಎಚ್.ಎಸ್. ಕೃಷ್ಣಮೂರ್ತಿ, ಘಟ: ಶ್ರೀನಿಧಿ ಕೌಂಡಿನ್ಯ, ಆಯೋಜನೆ: ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 6ರಿಂದ

ರಾಮನವಮಿ ಸಂಗೀತೋತ್ಸವ–2024: ವಸಂತತೋತ್ಸವ, ಸಂಗೀತ ಕಛೇರಿ: ರಿಕ್ಕಿ ಕೇಜ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6ರಿಂದ

ರೈಲು ಟಿಕೆಟ್ ಕಾಯ್ದಿರಿಸುವ ಕೇಂದ್ರ ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವತಿಯಿಂದ ನವೀಕರಣ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಕೋರಮಂಗಲದಲ್ಲಿ ರೈಲು ಟಿಕೆಟ್ ಕಾಯ್ದಿರಿಸುವ ಕೇಂದ್ರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಕೋರಮಂಗಲದ ಬಿಡಿಎ ಶಾಪಿಂಗ್ ಕಾಂಪ್ಲೆಕ್ಸ್‌ನ ಮೊದಲನೇ ಮಹಡಿಯಲ್ಲಿ ಗಣಕೀಕೃತ ಕಾಯ್ದಿರಿಸುವಿಕೆ ಕೇಂದ್ರ ಇಲ್ಲಿವರೆಗೆ ಕಾರ್ಯಾಚರಿಸುತ್ತಿತ್ತು.

‘ಬೀದಿನಾಯಿಗಳಿಗೆ ಆಹಾರ ನೀಡಲು ನಿರ್ಬಂಧವಿಲ್ಲ’

ಬೆಂಗಳೂರು: ಬೀದಿನಾಯಿಗಳಿಗೆ ಆಹಾರ ನೀಡಲು ಯಾವುದೇ ರೀತಿಯ ನಿರ್ಬಂಧ ವಿಧಿಸಲಾಗಿಲ್ಲ ಎಂದು ಪಶುಪಾಲನಾ ವಿಭಾಗದ ಜಂಟಿ ನಿರ್ದೇಶಕ ಡಾ. ರವಿಕುಮಾರ್ ಸ್ಪಷ್ಟಪಡಿಸಿದ್ದಾರೆ.

ಬೀದಿನಾಯಿಗಳಿಗೆ ಆಹಾರ ನೀಡುವ ಬಗ್ಗೆ ಪ್ರಾಣಿಪ್ರಿಯರು, ಸಾರ್ವಜನಿಕರು, ಸಮುಚ್ಚಯ ನಿವಾಸಿಗಳ ನಡುವೆ ಯಾವುದೇ ರೀತಿಯ ಸಮಸ್ಯೆಯಾಗ ದಂತೆ ಸಮನ್ವಯ ಸಾಧಿಸಿ, ಆಹಾರ ನೀಡುವ ಜಾಗಗಳನ್ನು ಗುರುತಿಸಲಾಗುವುದು.

ಗುರುತಿಸಲಾದ ನಿರ್ದಿಷ್ಟ ಜಾಗಗಳಲ್ಲಿ ಬೀದಿನಾಯಿಗಳಿಗೆ ಆಹಾರ ನೀಡುವ ಕುರಿತು ಮಾರ್ಗಸೂಚಿಗಳ ಫಲಕವನ್ನು ಪ್ರದರ್ಶಿಸಲಾಗುತ್ತದೆ. ಈ ಮೇಲಿನ ಅಂಶಗಳನ್ನು ಹೊರತುಪಡಿಸಿ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿನಾಯಿಗಳಿಗೆ ಆಹಾರ ನೀಡುವ ಕುರಿತು ಯಾವುದೇ ನಿರ್ಬಂಧ ವಿಧಿಸಿರುವುದಿಲ್ಲ ಎಂದು ಡಾ. ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ವಿಭಜಕಕ್ಕೆ ಆಟೊ ಡಿಕ್ಕಿ: ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರ 80 ಅಡಿ ರಸ್ತೆಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿದ್ದು, ಆಟೊ ಚಾಲಕ ಪೂಜಾರಿ ದೇವರಾಜ್ ನಾಯಕ್ (32) ಅವರು ಮೃತಪಟ್ಟಿದ್ದಾರೆ.

‘ಆಂಧ್ರಪ್ರದೇಶದ ದೇವರಾಜ್, ಹೊಸಕೆರೆ ಹಳ್ಳಿಯಲ್ಲಿ ವಾಸವಿದ್ದರು. ದೇವರಾಜ್ ಅವರು ಹೊಸಕೆರೆಹಳ್ಳಿ ಕ್ರಾಸ್‌ನಿಂದ ಸೀತಾ ವೃತ್ತದ ಕಡೆಗೆ ಗಿರಿನಗರ 80 ಅಡಿ ರಸ್ತೆ ಮೂಲಕ ಆಟೊದಲ್ಲಿ ಹೊರಟಿದ್ದರು. ಮಾರ್ಗಮಧ್ಯೆ ನಿಯಂತ್ರಣ ತಪ್ಪಿದ್ದ ಆಟೊ, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು. ಆಟೊ ಉರುಳಿಬಿದ್ದು, ತೀವ್ರ ಗಾಯಗೊಂಡಿದ್ದ ದೇವರಾಜ್ ಅವರನ್ನು ಸಮೀಪದ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ’ ಎಂದು ಬಸವನಗುಡಿ ಸಂಚಾರ ಪೊಲೀಸರು ಹೇಳಿದರು.

ಜಲಮಂಡಳಿ ಫೋನ್‌ಇನ್ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ಸರ್ಕಾರಿ ರಜೆ ದಿನವಾಗಿರುವುದರಿಂದ ಜಲಮಂಡಳಿ ಅಧ್ಯಕ್ಷರೊಂದಿಗೆ ಮೇ 10ರಂದು ಆಯೋಜಿಸಲಾಗಿದ್ದ ಫೋನ್ ಇನ್ ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ಮೇ 17ರಂದು ಬೆಳಿಗ್ಗೆ 9.30ರಿಂದ ಫೋನ್-ಇನ್ ಕಾರ್ಯಕ್ರಮ ನಡೆಯಲಿದೆ ಎಂದು ಜಲಮಂಡಳಿಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

EDUCATION SUCCESS ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

ಸಾರ್ವಜನಿಕರ ಗಮನಕ್ಕೆ

ಕಾರ್ಡ್ ರೋಡ್ ಆಸ್ಪತ್ರೆ ಪ್ರೈ.ಲಿಮಿಟೆಡ್
100/101 ಎಲ್.ಐ.ಸಿ. ಕಾಲೋನಿ, ಪಶ್ಚಿಮ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–79
Ph: 080–67192222

ಸಾರ್ವಜನಿಕರ ಗಮನಕ್ಕೆ ನಮ್ಮ ಆಸ್ಪತ್ರೆಯು ದಿನಾಂಕ 31–3–2019 ರವರೆಗಿನ ನಮ್ಮ ಎಲ್ಲಾ ಒಳರೋಗಿಗಳ ಕೇಸ್ ಶೀಟ್, ಎಕ್ಸ್–ರೆ, ಹಾಗೂ ಇತರೆ ದಾಖಲೆ ಗಳನ್ನು ನಾಶಪಡಿಸುತ್ತಿದ್ದೇವೆ. ಈ ಸಮಯದ ನಿಗದಿಯಲ್ಲಿ ಯಾರಿಗಾದರೂ ತಮ್ಮ ವೈದ್ಯಕೀಯ ದಾಖಲೆ ಬೇಕಾದ್ದಲ್ಲಿ ಆಸ್ಪತ್ರೆಯನ್ನು ಒಂದು ತಿಂಗಳೊಳಗಾಗಿ ಸಂಪರ್ಕಿಸತಕ್ಕದ್ದು. ದಾಖಲೆ ನಾಶಮಾಡುವ ದಿನಾಂಕ 11–06–2024

ಸಹಿ/–
ಕಾರ್ಡ್ ರೋಡ್ ಆಸ್ಪತ್ರೆ ಪ್ರೈ.ಲಿಮಿಟೆಡ್

BUSINESS

Business Offers

Dealers And Stockists

EARN UPTO Rs.40,000 to Rs.60,000 Manufacturing of Paper plate, Areca plates ( ) with minimum investment. With Buy Back agreement for finished goods with best price. Contact:- 9008462323, 9741021222. Our Factory/ office: Bangalore

REAL ESTATE BUYING

General

General

WANTED AGRICULTURE/ Residential/ Commercial/ Industrial Lands for JV or Purchase in BLR. 9916310226/ 9620253180. vernadevelopers1@gmail.com Barton Centre, MG Road.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Rajajinagar

SALE INDUSTRIAL FLAT. 1800 sq.ft 15 HP. Suitable for small manufacturing/ warehouse. Rajajinagar, Bangalore. 9986086288.

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha, Rs.5.50 Crores (negotiable). Party going out of station, one time settlement (more negotiable) Immediate Registration. 9845765559/ 9845043282

Sites

Vishweshwariah Layout

AVAILABLE 40X60 BDA Site North Facing 2nd Block Vishveshwariah Layout Good Location. Contact Buyers: 9844603127

DIRECT OWNER BDA 40x60 SITE SALE VISHVESWARAIAH LAYOUT BLOCK-7, Near KLE Law College, ₹.9000/-. 9742681666


R T Nagar

ANANDNAGAR 40X60 Site for Sale, Clear Titles,close to New Airport Road, adjoining U.A.S campus. 9980233835

EDUCATION
To Place your Classified Ads Contact: 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MORE Classifieds Ads on Subsequent Pages





ನಗರದಲ್ಲಿ ಗುರುವಾರ ಸುರಿದ ಮಳೆಗೆ ಸಂಪಿಗೆ ರಸ್ತೆ ಜಲಾವೃತವಾಗಿ ವಾಹನ ಸವಾರರು ಪರದಾಡಿದರು – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್(ಎಡ ಚಿತ್ರ) ಮಳೆನೀರಿಗೆ ಕಾಲುವೆಯಂತಾಗಿರುವ ನಗರದ ಮೈಸೂರು ರಸ್ತೆ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಹಲವೆಡೆ ಬಿರುಗಾಳಿ, ಗುಡುಗು ಸಹಿತ ಭಾರಿ ಮಳೆ; ರಸ್ತೆಯಲ್ಲಿ ನಿಂತ ನೀರು, ಸಾಲುಗಟ್ಟಿ ನಿಂತ ವಾಹನಗಳು

ನಗರದಲ್ಲಿ ಮುಂದುವರಿದ ಪೂರ್ವ ಮುಂಗಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮುಂಗಾರುಪೂರ್ವ ಮಳೆ ಬುಧವಾರವೂ ಮುಂದುವರಿಯಿತು. ಸಂಜೆ ವೇಳೆಗೆ ಬಿರುಗಾಳಿ, ಗುಡುಗು, ಮಿಂಚು ಸಹಿತ ಭಾರಿ ಮಳೆಯಾಯಿತು. ತಡರಾತ್ರಿಯವರೆಗೂ ನಗರದ ಬಹುತೇಕ ಪ್ರದೇಶಗಳಲ್ಲಿ ಮಳೆ ಸುರಿಯಿತು.

ಹಂಪಿನಗರ, ನಂದಿನಿ ಬಡಾವಣೆ, ಮಾರುತಿ ಮಂದಿರ, ನಾಗಪುರ, ನಾಯಂಡಹಳ್ಳಿಯಲ್ಲಿ ಅತಿಹೆಚ್ಚು ಮಳೆಯಾಯಿತು. ನಗರದ ವಿವಿಧೆಡೆ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕು ಉಂಟಾಯಿತು. ವಾಹನಗಳು ನಿಧಾನ ಗತಿಯಲ್ಲಿ ಸಾಗಿದ್ದರಿಂದ ದಟ್ಟಣೆ ವಿಪರೀತಗೊಂಡಿತು.

ಚಾಲುಕ್ಯ ವೃತ್ತದಿಂದ ಹೆಬ್ಬಾಳ, ಸುಮನಹಳ್ಳಿ ಜಂಕ್ಷನ್, ನಾಯಂಡಹಳ್ಳಿ ಜಂಕ್ಷನ್ ಹಾಗೂ ಸುತ್ತಮುತ್ತ ವಿಪರೀತ ದಟ್ಟಣೆ ಉಂಟಾಯಿತು. ನಗರದ ಅನಿಲ್ ಕುಂಬ್ಳೆ ವೃತ್ತದ ಬಳಿ ರಸ್ತೆ ಮೇಲೆಯೇ ನೀರು ನಿಂತುಕೊಂಡಿತ್ತು. ಬಿಆರ್‌ವಿ ಜಂಕ್ಷನ್ ಕಡೆಗೆ ಸಾಗುತ್ತಿದ್ದ ವಾಹನಗಳು ನಿಧಾನವಾಗಿ ಸಾಗಿದವು.

ಪಂತರಪಾಳ್ಯ ಹೊರವರ್ತುಲ ರಸ್ತೆ, ಹಳೇ ಉದಯ ಟಿ.ವಿ ಜಂಕ್ಷನ್, ಮಲ್ಲೇಶ್ವರದ ಸಂಪಿಗೆ ರಸ್ತೆ, ಬಿನ್ನಿ ಮಿಲ್ ಹಾಗೂ ಸುತ್ತಮುತ್ತಲಿನ ಕೆಲ ರಸ್ತೆಗಳಲ್ಲಿಯೇ ನೀರು ಹರಿಯಿತು. ರಾಜಾಜಿನಗರ, ಯಶವಂತಪುರ, ಶಿವಾಜಿನಗರ, ಆರ್‌ಟಿ ನಗರ, ಮೈಸೂರು ರಸ್ತೆ, ಕನಕಪುರ ರಸ್ತೆ ಸೇರಿದಂತೆ ನಗರದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ.

70 ಮರಗಳು ಧರೆಗೆ: ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ ಗುರುವಾರ ಸುರಿದ ಮಳೆ ಹಾಗೂ ಬಿರುಗಾಳಿಗೆ 70 ಮರಗಳು ಧರೆಗುರುಳಿವೆ. ಇದರಲ್ಲಿ 55 ಮರಗಳನ್ನು ತೆರವು ಮಾಡಲಾಗಿದೆ. 171 ಪ್ರದೇಶಗಳಲ್ಲಿ ಕೊಂಬೆಗಳು ಬಿದ್ದಿವೆ. ಇದರಲ್ಲಿ 119 ಕೊಂಬೆಗಳನ್ನು ತೆರವು ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಒಂದು ವಾರ ಮಳೆ: ಮುಂದಿನ ಒಂದು ವಾರ ಬಿರುಗಾಳಿ, ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.


36 ಸ್ಥಳಗಳ ಗುರುತು: ಮಳೆ ಬಂದಾಗ ಪ್ರವಾಹ ಉಂಟಾಗುವ 36 ಸ್ಥಳಗಳನ್ನು ಬಿಬಿಎಂಪಿ ಗುರುತಿಸಿದೆ. ನೀರು ನಿಲ್ಲುವ ಎಲ್ಲ ಅಂಡರ್‌ಪಾಸ್‌ಗಳಲ್ಲಿ 36 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಲವಕುಶನಗರ, ವೃಷಭಾವತಿ ವ್ಯಾಲಿ, ಪಿಲಪ್ಪನಕಟ್ಟೆ ವ್ಯಾಲಿ, ಕಲ್ಯಾಣನಗರ, ಎಚ್‌ಆರ್‌ಬಿಆರ್ ಬಡಾವಣೆ, ಮಾರ್ಗನ್ ರಸ್ತೆ, ಬ್ರಿಗೇಡ್ ಜಂಕ್ಷನ್, ಆರ್‌ಆರ್‌ನಗರ, ಹೊಯ್ಸಳನಗರ, ನಾಯಂಡಹಳ್ಳಿ ಶಂಕರಪ್ಪ ಬಡಾವಣೆ, ಹೊಸಕೆರೆಹಳ್ಳಿ, ಗ್ಲೋಬಲ್ ವಿಲೇಜ್ ಸೇರಿದಂತೆ ಪ್ರವಾಹ ಉಂಟಾಗುವ ಪ್ರದೇಶಗಳನ್ನು ಗುರುತಿಸಲಾಗಿದೆ.

‘ಸರಿಯಾದ ನಿರ್ವಹಣೆಯಿಲ್ಲ’: ಪ್ರವಾಹ ಪೀಡಿತ ಪ್ರದೇಶಗಳನ್ನು ಬಿಬಿಎಂಪಿ ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕೆಲವು ಭಾಗಗಳಲ್ಲಿ ಜನರಿಗೆ ಸಂಕಷ್ಟ ಉಂಟಾಗಲಿದೆ. ಬಿಬಿಎಂಪಿಯ ಪೂರ್ವ, ಆರ್‌ಆರ್ ನಗರ, ಪಶ್ಚಿಮ ಮತ್ತು ಮಹದೇವಪುರ ವಲಯಗಳಲ್ಲಿ ಇಂಥ ಪ್ರದೇಶಗಳು ಹೆಚ್ಚಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ.



ನಗರದ ಮೈಸೂರು ರಸ್ತೆಯಲ್ಲಿ ಭಾರಿ ಮಳೆಯ ನಡುವೆ ವಾಹನಗಳು ಸಾಗಿದವು – ಪ್ರಜಾವಾಣಿ ಚಿತ್ರ



ಶೇಷಾದ್ರಿ ರಸ್ತೆಯಲ್ಲಿ ಪ್ರಯಾಣಿಕರು ಮಳೆಯಲ್ಲಿ ನೆನೆದುಕೊಂಡು ಬಸ್ ಏರಿದರು – ಪ್ರಜಾವಾಣಿ ಚಿತ್ರ

ಮಳೆ ಎಲ್ಲೆಲ್ಲಿ ಹೆಚ್ಚು? (ಸೆಂ.ಮೀ.ಗಳಲ್ಲಿ)

ಹಂಪಿನಗರ	5.5
ನಂದಿನಿ ಬಡಾವಣೆ	5.2
ಮಾರುತಿಮಂದಿರ	5.05
ನಾಗಪುರ	4.95
ನಾಯಂಡಹಳ್ಳಿ	4.2
ದೊಡ್ಡಬಿದರಕಲ್ಲು	4.15
ವಿದ್ಯಾಪೀಠ	4.15
ಕೊಟ್ಟಿಗೆಪಾಳ್ಯ	4.1
ಮಾರಪ್ಪನಪಾಳ್ಯ	3.9
ಕೆಂಗೇರಿ	3.45
ಕೊಡಿಗೇಹಳ್ಳಿ	3.05
ದಯಾನಂದನಗರ	2.95
ರಾಜಮಹಲ್ ಗುಟ್ಟಹಳ್ಳಿ	2.85
ಎಚ್.ಗೊಲ್ಲಹಳ್ಳಿ	2.65
ರಾಜರಾಜೇಶ್ವರಿನಗರ	2.45
ಕಾಟನ್‌ಪೇಟೆ	2
ಪೀಣ್ಯ ಕೈಗಾರಿಕೆ ಪ್ರದೇಶ	2

ಮೇ 9ರಂದು ಧರೆಗುರುಳಿದ ಮರಗಳೆಷ್ಟು?

ವಲಯ	ಬಿದ್ದ ಮರಗಳು	ಬಿದ್ದ ಕೊಂಬೆಗಳು
ಆರ್.ಆರ್.ನಗರ	32	63
ದಕ್ಷಿಣ	10	30
ಪಶ್ಚಿಮ	10	25
ಬೊಮ್ಮನಹಳ್ಳಿ	6	22
ಪೂರ್ವ	6	22
ಯಲಹಂಕ	3	5
ದಾಸರಹಳ್ಳಿ	2	2
ಮಹದೇವಪುರ	1	2
ಒಟ್ಟು	70	171

ಪ್ರವಾಹ ಪ್ರದೇಶಗಳ ವರ್ಗೀಕರಣ

ಮಳೆಗಾಲದಲ್ಲಿ ಪ್ರವಾಹ ಉಂಟಾಗುವ ಪ್ರದೇಶಗಳನ್ನು ದುರ್ಬಲ ಮತ್ತು ಮಧ್ಯಮ ಎಂದು ವರ್ಗೀಕರಿಸಲಾಗಿದೆ.

25 ತೀವ್ರ ಪ್ರವಾಹ, 49 ಮಧ್ಯಮ ಪ್ರವಾಹ ಪ್ರದೇಶಗಳನ್ನು ಗುರುತಿಸಲಾಗಿದೆ. ಮಳೆಗಾಲಕ್ಕೆ ಮುಂಚಿತವಾಗಿ, ಬಿಬಿಎಂಪಿಯು ವಲಯ ವಿಪತ್ತು ನಿಯಂತ್ರಣ ಕೊಠಡಿಗಳನ್ನು ಸಕ್ರಿಯಗೊಳಿಸಿದೆ. ದೂರು ದಾಖಲಿಸಲು 64 ವಿಭಾಗೀಯ ವಾಟ್ಸ್‌ಆ್ಯಪ್ ಗುಂಪುಗಳನ್ನು ಕೂಡ ರಚಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಪತ್ತು ನಿಯಂತ್ರಣ ಕೊಠಡಿ ಸ್ಥಾಪನೆ

ಬಿಬಿಎಂಪಿ ವಿಪತ್ತು ನಿಯಂತ್ರಣಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದೆ. ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಸಹಾಯವಾಣಿ 1533 ಜೊತೆಗೆ ನಗರದ ಎಂಟೂ ವಲಯಗಳಲ್ಲೂ ಪ್ರತ್ಯೇಕ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

ಬೊಮ್ಮನಹಳ್ಳಿ ವಲಯ: 080-25732447,25735642,9480685707
ದಾಸರಹಳ್ಳಿ ವಲಯ: 080-28394909,9480685709
ಪೂರ್ವ ವಲಯ: 080-22975803,9480685702
ಮಹದೇವಪುರ ವಲಯ: 080-28512300,9480685706
ರಾಜರಾಜೇಶ್ವರಿ ನಗರ ವಲಯ: 080-28601851,9480685708
ದಕ್ಷಿಣ ವಲಯ: 9480685704,8026566362,8022975703
ಪಶ್ಚಿಮ ವಲಯ: 080-23463366,23561692,9480685703
ಯಲಹಂಕ ವಲಯ: 080-23636671,22975936,9480685705

ರಾಜರಾಜೇಶ್ವರಿನಗರ: ಎಸ್– ವ್ಯಾಸ್ ಕ್ಯಾಂಪಸ್ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜರಾಜೇಶ್ವರಿನಗರದ ಗ್ಲೋಬಲ್ ವಿಲೇಜ್ ಟೆಕ್ ಪಾರ್ಕ್‌ನಲ್ಲಿ ಎಸ್‌-ವ್ಯಾಸ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರಾರಂಭಿಸಲಾಗುವುದು’ ಎಂದು ಎಸ್‌-ವ್ಯಾಸ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿ ಎಚ್.ಆರ್. ನಾಗೇಂದ್ರ ತಿಳಿಸಿದರು.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಸ್‌-ವ್ಯಾಸ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್, ಅಲೈಡ್ ಹೆಲ್ತ್‌ಕೇರ್, ಸೈಕಾಲಜಿ, ಬ್ಯುಸಿನೆಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಡೊಮೈನ್ಸ್ ಸೇರಿದಂತೆ 40ಕ್ಕೂ ಹೆಚ್ಚು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುವುದು. ಪ್ರತಿಯೊಂದು ಕೋರ್ಸ್‌ನ ಪಠ್ಯಕ್ರಮವನ್ನು ಉದ್ಯಮ ತಜ್ಞರ ಸಲಹೆಗಳನ್ನು ಪಡೆದು ನಿಖರವಾಗಿ ರಚಿಸಲಾಗಿದೆ. ಕೌಶಲ ಆಧಾರಿತ ಶಿಕ್ಷಣ ನೀಡುವುದರ ಜೊತೆಗೆ ಸಂಶೋಧನೆಗೂ ಆದ್ಯತೆ ನೀಡಲಾಗುವುದು’ ಎಂದು ತಿಳಿಸಿದರು.

ಮಾಜಿ ಅಥ್ಲೀಟ್ ಅಂಜು ಬಾಬಿ ಜಾರ್ಜ್, ‘ಕ್ರೀಡೆಯಿಂದ ನಿವೃತ್ತಿಯಾದ ನಂತರ ಅಂಜು ಬಾಬಿ ಸ್ಪೋರ್ಟ್ಸ್ ಫೌಂಡೇಷನ್ ಮೂಲಕ ಕ್ರೀಡಾಪಟುಗಳಿಗೆ ತರಬೇತಿ ನೀಡುವ ಕೆಲಸ ಮಾಡುತ್ತಿದ್ದೇನೆ. ಈಗ ಎಸ್‌-ವ್ಯಾಸ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳನ್ನು ತರಬೇತಿ ನೀಡುತ್ತೇವೆ. ಕ್ರೀಡಾಪಟುಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವಂತೆ ಪ್ರೋತ್ಸಾಹಿಸಲಾಗುವುದು’ ಎಂದು ತಿಳಿಸಿದರು. ಕಡಬಮ್ಸ್ ಗ್ರೂಪ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಸಂದೇಶ್ ಕಡಬಮ್, ವಿಶ್ವವಿದ್ಯಾಲಯದ ಉಪಕುಲಪತಿ ಮಂಜುನಾಥ್ ಶರ್ಮಾ ಉಪಸ್ಥಿತರಿದ್ದರು.

ದೇವೇಗೌಡ–ಕುಮಾರಸ್ವಾಮಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಸಿ.ಎಂ.ಇಬ್ರಾಹಿಂ ಅವರನ್ನು ಉಚ್ಚಾಟಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಉಚ್ಚಾಟನೆ ಮತ್ತು ಅಧ್ಯಕ್ಷ ಹುದ್ದೆಗೆ ತಾತ್ಕಾಲಿಕವಾಗಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ನೇಮಿಸಿದ ಕ್ರಮವನ್ನು ಪ್ರಶ್ನಿಸಿ ಸಿ.ಎಂ.ಇಬ್ರಾಹಿಂ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಅಸಲು ದಾವೆ ಸಲ್ಲಿಸಿದ್ದರು. ಈ ದಾವೆಯನ್ನು ತಿರಸ್ಕರಿಸಲಾಗಿತ್ತು.

ಈ ಆದೇಶ ರದ್ದು ಕೋರಿ ಸಿ.ಎಂ. ಇಬ್ರಾಹಿಂ ಹೈಕೋರ್ಟ್‌ನಲ್ಲಿ ನಿಯಮಿತ ಮೊದಲ ಮೇಲ್ಮನವಿ (ಆರ್‌ಎಫ್‌ಎ) ಸಲ್ಲಿಸಿದ್ದು, ಈ ಅರ್ಜಿಯನ್ನು ರಜಾ ಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಜೆಡಿಎಸ್ ಪರ ಹಾಜರಿದ್ದ ಹಿರಿಯ ವಕೀಲ ಉದಯ ಹೊಳ್ಳ ಹಾಗೂ ಇಬ್ರಾಹಿಂ ಪರ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಅವರ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಲಾಗಿದೆ.

‘ಬೋಧಿ ಸಪ್ತಾಹ’ ಇದೇ 17ರಿಂದ

ಬೆಂಗಳೂರು: ವೈಶಾಖ ಬುದ್ಧ ಪೂರ್ಣಿಮೆಯ ಅಂಗವಾಗಿ ಮಹಾಬೋಧಿ ಸೊಸೈಟಿ ವತಿಯಿಂದ ಇದೇ 17ರಿಂದ 23ರವರೆಗೆ ‘ಬೋಧಿ ಸಪ್ತಾಹ’ ಆಚರಣೆ ಮಾಡಲಾಗುವುದು ಎಂದು ಕನ್ನಡ ತಿಪಿಟಕ ಗ್ರಂಥಮಾಲಾ ಯೋಜನೆಯ ನಿರ್ದೇಶಕ ಬಿ.ವಿ. ರಾಜಾರಾಂ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗಾಂಧಿನಗರದ ಮಹಾಬೋಧಿ ಸೊಸೈಟಿಯಲ್ಲಿ ಬುದ್ಧ ಪೂರ್ಣಿಮೆಯ ಅಂಗವಾಗಿ ಏಳು ದಿನ ಪಬ್ಬಜ್ಜ ತರಬೇತಿ, ತಿಪಿಟಕ ಪಠಣೆ, ರಕ್ತದಾನ ಮತ್ತು ಆರೋಗ್ಯ ಶಿಬಿರ, ವಿಚಾರಸಂಕಿರಣ, ಬುದ್ಧ ಪೂರ್ಣಿಮೆ ದಿನದಂದ ವಿಶೇಷ ಪೂಜೆ, ಪುಸ್ತಕಗಳ ಬಿಡುಗಡೆ, ಧಮ್ಮದೇಸನ, ಸಂಘದಾನ, ಮಕ್ಕಳ ಚಿತ್ರಕಲಾ ಸ್ಪರ್ಧೆಗಳು ನಡೆಯಲಿದೆ’ ಎಂದು ತಿಳಿಸಿದರು.

‘ಬುದ್ಧ ಪೂರ್ಣಿಮೆ ದಿನದಂದು (ಮೇ 23) 100 ಬೌದ್ಧ ಬಿಕ್ಕುಗಳ ಮೆರವಣಿಗೆಯಲ್ಲಿ ಭಕ್ತರಿಂದ ಆಹಾರ ಸ್ವೀಕರಿಸಲಿದ್ದಾರೆ. ಧಮ್ಮ ಪ್ರವಚನ ನಡೆಯಲಿದೆ’ ಎಂದರು.



ಕೆಂಗೇರಿಯಲ್ಲಿ ಭೂಮಾಫಿಯಾದಿಂದ ನಕಲಿ ದಾಖಲೆ ಸೃಷ್ಟಿ; ಪ್ರಕರಣ ದಾಖಲು

₹600 ಕೋಟಿ ಮೌಲ್ಯದ ಭೂಕಬಳಿಕೆ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ದಕ್ಷಿಣ ಬೆಂಗಳೂರಿನ ಕೆಂಗೇರಿಯಲ್ಲಿ ಮರಣ ಹೊಂದಿದವರ ಹೆಸರಿನಲ್ಲಿ ದಾಖಲೆ ಸೃಷ್ಟಿಸಿರುವ ಭೂ ಮಾಫಿಯಾದವರು, ಸರ್ಕಾರದ ಸುಮಾರು ₹600 ಕೋಟಿ ಮೌಲ್ಯದ 40 ಎಕರೆ ಭೂಮಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ.

ಕೆಂಗೇರಿಯ ಸರ್ವೆ ನಂ.69ರಲ್ಲಿ 93 ಎಕರೆ ಮೂರು ಗುಂಟೆ ಭೂಮಿ ಇದ್ದು, ಗೋಮಾಳ ಎಂದು ದಾಖಲಾಗಿದೆ. ಇದರ ಒಂದು ಭಾಗವನ್ನು ಬಿಜಿಎಸ್ ಆಸ್ಪತ್ರೆಗೆ ಗುತ್ತಿಗೆಗೆ ನೀಡಲಾಗಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಅತಿಯಾಗಿವೆ. ಇದರಲ್ಲಿ ಭೂಮೌಲ್ಯ ಅಧಿಕವಾಗಿದೆ.

ಎರಡು ದಶಕಗಳಲ್ಲಿ ಭೂಮಾಫಿಯಾ ಭೂಮಿಯನ್ನು ವಶಪಡಿಸಿಕೊಳ್ಳುವಲ್ಲಿ ನಿರತವಾಗಿದೆ. ತಹಶೀಲ್ದಾರ್ ಅವರು ಐದು ಎಕರೆಗೆ ಹೊಸ ಸರ್ವೆ ನಂಬರ್ ಸೃಷ್ಟಿಸುವ ಆದೇಶವನ್ನು ಹೊರಡಿಸಿದ್ದು, ಅದನ್ನು 2022ರ ಮಾರ್ಚ್ 9ರಂದು ಕಂದಾಯ ಇಲಾಖೆಯ ಉಪ ನಿರ್ದೇಶಕರು ರದ್ದುಗೊಳಿಸುವ ಪ್ರಯತ್ನ ಮಾಡಿದ್ದರು.

ಭೂಮಿ ಕಬಳಿಸುವ ಬಗ್ಗೆ ಕಳೆದ ತಿಂಗಳು ದೂರು ಸ್ವೀಕರಿಸಿದ್ದ ಅಧಿಕಾರಿಗಳು, ಅದನ್ನು ಪರಿಶೀಲಸಲು ಹೋಗಿದ್ದಾಗ ಕೆಲವು ವ್ಯಕ್ತಿಗಳು ಭೂಮಿ ತಮ್ಮದೆಂದು ವಾದಿಸಿದ್ದರು. ಆದರೆ, ಅವರು ದಾಖಲೆಗಳನ್ನು ತೋರಿಸಿರಲಿಲ್ಲ. ಆ ಭೂಮಿ ಬೆಟ್ಟಗುಡ್ಡಗಳಿಂದ ಕೂಡಿದ ಗೋಮಾಳವಾಗಿದೆ. ಈ ಭೂಮಿಗೆ 2023ರಲ್ಲಿ 25 ಪೋಡಿಗಳನ್ನು ಮಾಡಲಾಗಿದ್ದು, ತಲಾ 1.5 ಎಕರೆ ಭೂಮಿಯನ್ನು 25 ವ್ಯಕ್ತಿಗಳಿಗೆ ಹಂಚಲಾಗಿತ್ತು. ಪ್ರತಿ ಪೋಡಿಗೂ ಹೊಸ ಸರ್ವೆ ನಂಬರ್ ನೀಡಲಾಗಿತ್ತು.

ತನಿಖೆಗೆ ಸಮಿತಿ ರಚನೆ

ಈ ಭೂ ಕಬಳಿಕೆಯ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ, 'ಸರ್ಕಾರಿ ಜಮೀನನ್ನು ಕಬಳಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಭೂಮಿಯನ್ನು ಮಂಜೂರು ಮಾಡಲಾಗಿದೆ ಎಂದು ಹೇಳಲಾಗುತ್ತಿದ್ದರೂ ಅದು ಕಾನೂನು ಪ್ರಕಾರ ಇಲ್ಲ. ಈ ಪ್ರಕರಣವನ್ನು ತನಿಖೆ ಮಾಡಲು ಸಮಿತಿಯನ್ನು ರಚಿಸಲಾಗಿದೆ. ಕಳೆದ ತಿಂಗಳು ವ್ಯಕ್ತಿಗಳಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಅವರು ಒಂದು ವಾರ ಸಮಯ ಕೇಳಿದ್ದರು. ಹೀಗಿದ್ದರೂ, ಮೇ 7ರಂದು ನಮ್ಮ ಅಧಿಕಾರಿಗಳು ಸರ್ವೆ ಮಾಡುವುದನ್ನು ಕೆಲವು ವ್ಯಕ್ತಿಗಳು ತಡೆದಿದ್ದಾರೆ. ಸರ್ಕಾರಿ ಭೂ ಕಬಳಿಕೆಯ ಪ್ರಕರಣವನ್ನು ನೋಂದಾಯಿಸಲಾಗಿದೆ' ಎಂದು ತಿಳಿಸಿದರು.

'ದಾಖಲೆಗಳು ಇಲ್ಲದ್ದನ್ನು ಅಧಿಕಾರಿಗಳು ಹಾಗೂ ಭೂಮಾಫಿಯಾ ತಮ್ಮ ಪ್ರಯೋಜನಕ್ಕಾಗಿ ಬಳಸಿಕೊಂಡಿದ್ದಾರೆ. ಪೌತಿ ಖಾತೆಗಳನ್ನು ಸೃಷ್ಟಿಸಲಾಗಿದೆ. 1980ರಲ್ಲಿ 25 ವ್ಯಕ್ತಿಗಳಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ ಎಂದು ದಾಖಲೆ ಸೃಷ್ಟಿಸಲಾಗಿದೆ. ಎರಡು ವಾರಗಳವರೆಗೂ ಈ ಯಾವ ವ್ಯಕ್ತಿಗಳೂ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರಲಿಲ್ಲ. ಇದೀಗ ಈ ಭೂಮಿಯನ್ನು ಬಿಲ್ಡರ್‌ಗೆ ಮಾರಾಟ ಮಾಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

'ಪೋಡಿ ಮಾಡಿಕೊಡುವ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಪರಿಶೀಲಿಸಬೇಕು ಎಂದು ಉಪ ವಿಭಾಗಾಧಿಕಾರಿ ಹೇಳಿದ್ದರು. ಇದನ್ನು ಸಮಿತಿ ಮುಂದೆ ಪ್ರಸ್ತುತಪಡಿಸಿ, ಎಲ್ಲ ದಾಖಲೆಗಳನ್ನು ಪರಿಶೀಲಿಸಬೇಕು ಎಂದು ಅವರು ಅಧಿಕಾರಿಗಳಿಗೆ ನಿರ್ದೇಶಿಸಿದ್ದರು. ಸಮಿತಿ ಮುಂದೆ ಪ್ರಕರಣ ಹೋಗದೆ, ನೇರವಾಗಿ ಪೋಡಿ ಮಾಡಿಕೊಡಲಾಗಿದೆ' ಎಂದು ಮಧ್ಯಂತರವರದಿಯಲ್ಲಿ ವಿವರಿಸಲಾಗಿದೆ.

'ಏಪ್ರಿಲ್ 23ರಂದು ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ಚಿತ್ರಗಳನ್ನು ತೆಗೆದುಕೊಂಡಿದ್ದಾರೆ. ಮುಂದಿನ ಭೇಟಿ ಮೇ 7ರಂದು ನಿಗದಿಯಾಗಿತ್ತು. ಅಂದು ಅಧಿಕಾರಿಗಳು ಅಲ್ಲಿಗೆ ಹೋದ ಸಂದರ್ಭದಲ್ಲಿ 15 ಎಕ್ಸಾವೇಟರ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಕೆಲಸ ನಿರ್ವಹಿಸದಂತೆ ಅಧಿಕಾರಿಗಳ ಮೇಲೆ ಒತ್ತಡ ತರಲಾಯಿತು. ಅಲ್ಲಿದ್ದ ತಂಡ, ಸರ್ವೆ ಮಾಡಲು ಅನುವು ಮಾಡಿಕೊಡಲಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು.



ಪ್ರಶಸ್ತಿ ಪ್ರದಾನ

ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಲಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿರುವ ರಾಮನವಮಿ ಸಂಗೀತೋತ್ಸವದಲ್ಲಿ ಲಾಲ್ಗುಡಿ ಜಿ.ಜೆ.ಆರ್. ಕೃಷ್ಣನ್ ಮತ್ತು ಲಾಲ್ಗುಡಿ ವಿಜಯಲಕ್ಷ್ಮಿ ಅವರಿಗೆ 'ಎಸ್‌ವಿಎನ್ ಗ್ಲೋಬಲ್ ಅವಾರ್ಡ್ ಫಾರ್ ಮ್ಯೂಸಿಕ್' ಪ್ರಶಸ್ತಿಯನ್ನು ಗುರುವಾರ ಪ್ರದಾನ ಮಾಡಲಾಯಿತು. ನಿವೃತ್ತ ಐಎಎಸ್ ಅಧಿಕಾರಿ ಎನ್. ಶಿವಶೈಲಂ, ಕುಮರೇಶ್ ರಾಜಗೋಪಾಲ್, ಸುಬ್ಬನರಸಿಂಹ, ಪಿ. ಸುಬ್ರಮಣ್ಯಂ, ಎಸ್.ಎನ್. ವರದರಾಜ್ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ಅಮೃತ ವಿಶ್ವ ವಿದ್ಯಾಪೀಠಂಗೆ 'ಟೈಮ್ಸ್ ಹೈಯರ್ ಎಜುಕೇಷನ್ ಏಷ್ಯಾ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತನಗರದಲ್ಲಿರುವ ಅಮೃತ ವಿಶ್ವ ವಿದ್ಯಾಪೀಠಂ ಪರಿಸರ ನಾಯಕತ್ವಕ್ಕೆ ನೀಡಿದ ಕೊಡುಗೆಗಾಗಿ 'ಟೈಮ್ಸ್ ಹೈಯರ್ ಎಜುಕೇಷನ್ ಏಷ್ಯಾ ಪ್ರಶಸ್ತಿ'ಗೆ ಆಯ್ಕೆಯಾಗಿದೆ.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್ (ಎನ್‌ಐಆರ್‌ಎಫ್)–2023ರಲ್ಲಿ ಭಾರತದ ಅತ್ಯುತ್ತಮ 10 ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆದಿರುವ ಅಮೃತ ವಿಶ್ವ ವಿದ್ಯಾಪೀಠಂ 'ಲೈವ್ ಇನ್ ಲ್ಯಾಬ್' ಮೂಲಕ ಗ್ರಾಮೀಣ ಭಾರತವನ್ನು ತಲುಪುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಮುದಾಯದೊಂದಿಗೆ ಬೆರೆಯುವ, ಅವರ ದೈನಂದಿನ ಜೀವನದಲ್ಲಿ ಎದುರಾಗುವ ಸವಾಲುಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಈ ಉಪಕ್ರಮ ಉಪಯೋಗವಾಗಿದ್ದು, ಹಳ್ಳಿಗಳಲ್ಲಿ ವಾಸ, ವಿದ್ಯಾರ್ಥಿಗಳಿಗೆ ನೆರವಾಗಿದೆ.

'ವಿಜ್ಞಾನ ಮತ್ತು ತಂತ್ರಜ್ಞಾನವು ವೇಗವಾಗಿ ಬೆಳೆಯುತ್ತಿದೆ. ಅದರಿಂದ ಅನೇಕ ಸುಧಾರಣೆಗಳಾಗಿವೆ. ಇವು ಬಡವರನ್ನು ತಲುಪುವುದು ಹೇಗೆ? ಎಲ್ಲರಿಗೂ ಭವಿಷ್ಯದಲ್ಲಿ ಸುಸ್ಥಿರ ಬದುಕು ಒದಗಿಸುವುದು ಹೇಗೆ? ಎಂಬ ಪ್ರಶ್ನೆ ಮೂಡಿದಾಗ 'ಅಮೃತಾ'ದ ಹಿರಿಯರು ಸೇರಿ ರೂಪಿಸಿದ ಕಾರ್ಯಕ್ರಮ 'ಲೈವ್ ಇನ್ ಲ್ಯಾಬ್'. ಅದರ ಮೂಲಕ ವಿದ್ಯಾರ್ಥಿಗಳನ್ನು ಮತ್ತು ಸಿಬ್ಬಂದಿಯನ್ನು ಕ್ಯಾಂಪಸ್, ತರಗತಿ ಮತ್ತು ಪ್ರಯೋಗಾಲಯಗಳಿಂದ ಹೊರಗೆ, ಭಾರತದ ಗ್ರಾಮೀಣ ಸಮುದಾಯಗಳಲ್ಲಿಗೆ ಕರೆದೊಯ್ಯಲು ಸಾಧ್ಯವಾಗಿದೆ. ಇದೇ ಕಾರಣಕ್ಕೆ ಏಷ್ಯಾ ಪ್ರಶಸ್ತಿಗೆ ಸಂಸ್ಥೆ ಭಾಜನವಾಗಿದೆ' ಎಂದು 'ಅಮೃತ ಸ್ಕೂಲ್ ಫಾರ್ ಸಸ್ಟೈನಬಲ್ ಫ್ಯೂಚರ್'ನ ಡೀನ್ ಮನೀಷಾ ವಿ. ರಮೇಶ್ ತಿಳಿಸಿದ್ದಾರೆ.

ಕುಲಪತಿ ಮಾತಾ ಅಮೃತಾನಂದಮಯಿ ದೇವಿ ಅವರು ದಶಕದ ಹಿಂದೆ 'ಲೈವ್ ಇನ್ ಲ್ಯಾಬ್ಸ್' ಆರಂಭಿಸಿದ್ದರು. ಇದರಿಂದ ವಿದ್ಯಾರ್ಥಿಗಳಿಗೆ ಹಳ್ಳಿಯ ಜೀವನ ಅನುಭವಿಸಲು ಮತ್ತು ಸಮುದಾಯದಲ್ಲಿನ ಸವಾಲುಗಳನ್ನು ಪರಿಹರಿಸಲು ಸುಸ್ಥಿರ ಪರಿಹಾರಗಳನ್ನು ನೀಡಲು ಅವಕಾಶ ಒದಗಿಸಿದ ವಿಶ್ವದ ಮೊದಲ ವಿಶ್ವವಿದ್ಯಾಲಯಗಳಲ್ಲಿಇದು ಒಂದಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಬೀದಿ ನಾಯಿಗಳಿಗೆ ಮೈಕ್ರೊಚಿಪ್ ಟೆಂಡರ್ ಪ್ರಶ್ನಿಸಿ ಪಿಐಎಲ್–ನೋಟಿಸ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಬೀದಿ ನಾಯಿಗಳಿಗೆ ಮೈಕ್ರೋಚಿಪ್ ಅಳವಡಿಸುವ ನಿಟ್ಟಿನಲ್ಲಿ ಕರೆಯಲಾಗಿರುವ ಟೆಂಡರ್ ಪ್ರಕ್ರಿಯೆ ರದ್ದುಗೊಳಿಸುವಂತೆ ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.



ಟೆಂಡರ್ ಅಧಿಸೂಚನೆ ರದ್ದುಗೊಳಿಸುವಂತೆ ಕೋರಿ ಹೆಬ್ಬಾಳದ ಎಸ್. ಪ್ರಿಯದರ್ಶಿನಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಮೊಹಮ್ಮದ್ ಮುಜಾಸಿಮ್, 'ಮೈಕ್ರೊಚಿಪ್ ಅಳವಡಿಸುವ ನಿಟ್ಟಿನಲ್ಲಿ ಬಿಬಿಎಂಪಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿಲ್ಲ. ಬೀದಿ ನಾಯಿಗಳ ಆರೋಗ್ಯ ಹಾಗೂ ಜೀವದೊಂದಿಗೆ ಚೆಲ್ಲಾಟವಾಡುತ್ತಿದೆ. ಆದ್ದರಿಂದ, ಟೆಂಡರ್ ಪ್ರಕ್ರಿಯೆ ರದ್ದುಗೊಳಿಸಬೇಕು' ಎಂದು ಕೋರಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜೂನ್ ಮೊದಲ ವಾರಕ್ಕೆ ಮುಂದೂಡಿದೆ.

ಸಿದ್ಧಾರೂಢ ಮಿಷನ್: ರಜತ ಸಂಭ್ರಮ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಆಶ್ರಮದ 25ನೇ ವರ್ಷದ ಸಂಭ್ರಮದ ಅಂಗವಾಗಿ ಇದೇ 10ರಿಂದ 12ರವರೆಗೆ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ' ಎಂದು ಆಶ್ರಮದ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆಂಗೇರಿ ಹೋಬಳಿ ರಾಮೋಹಳ್ಳಿಯ ಸಿದ್ಧಾರೂಢ ಆಶ್ರಮದಲ್ಲಿ ಮೂರು ದಿನಗಳು ನಡೆಯುವ ಕಾರ್ಯಕ್ರಮದಲ್ಲಿ 108 ಮಠಾಧೀಶರ ಸಮಾವೇಶ, ಜ್ಞಾನಯಜ್ಞ–ಜಪಯಜ್ಞ, ಭಜನಾ ಸಮ್ಮೇಳನ, ಪುಸ್ತಕ ಬಿಡುಗಡೆ, ಆರೂಢಶ್ರೀ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದು ತಿಳಿಸಿದರು.

ಮೇ 10ರಂದು ಬೆಳಿಗ್ಗೆ 6.45ಕ್ಕೆ ಹರಳಕಟ್ಟೆಯ ಶಿವಾನಂದ ಮಠದ ನಿಜಗುಣ ಸ್ವಾಮೀಜಿ ಅವರು ಪ್ರಣವ ಧ್ವಜಾರೋಹಣ ಮಾಡಲಿದ್ದಾರೆ. ಭಜನಾ ಸಮ್ಮೇಳನ, ಜಪಯಜ್ಞ, ಭಗವದ್ಗೀತೆ ವಚನ ಸಿದ್ಧಾರೂಢ ಕಥಾಮೃತಗಳ ಪಾರಾಯಣ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ಬಸವ ಜಯಂತಿ, ಸಿದ್ಧಸೂಕ್ತಿ–3 ಪುಸ್ತಕದ ಬಿಡುಗಡೆ ನಡೆಯಲಿದೆ. ಕಾರ್ಯಕ್ರಮದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿ, ಪುರುಷೋತ್ತಮಾನಂದಪುರಿ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ದಯಾನಂದ ಸರಸ್ವತೀ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಲಿದ್ದಾರೆ.

ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್, ಪಿ.ಜಿ.ಆರ್. ಸಿಂಧ್ಯ, ಬಿಜೆಪಿ ಮುಖಂಡ ವಿ. ಸೋಮಣ್ಣ, ಶಾಸಕ ಬೈರತಿ ಬಸವರಾಜ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಭಾಗವಹಿಸಲಿದ್ದಾರೆ ಎಂದರು.

ಮಧ್ಯಾಹ್ನ 12.30ರಿಂದ ಭಜನಾ ಸಮ್ಮೇಳನ ನಡೆಯಲಿದೆ. ಸಂಜೆ 5ರಿಂದ 'ಧರ್ಮ–ಅಧ್ಯಾತ್ಮ ನೆಲೆಯ ಮಾನವೀಯ ಮೌಲ್ಯಗಳು' ಕುರಿತು ಉಪನ್ಯಾಸ ನಡೆಯಲಿದೆ. ಸ್ವಯಂ ಪ್ರಕಾಶ ಸಚ್ಚಿದಾನಂದ ಸ್ವಾಮೀಜಿ, ಮಧುಸೂದನಾನಂದಪುರಿ ಸ್ವಾಮೀಜಿ, ವಚನಾನಂದ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ತಿಳಿಸಿದರು.

'ಮೇ 11ರಂದು ಬೆಳಿಗ್ಗೆ 11.15ಕ್ಕೆ ಸಾಂಸ್ಕೃತಿಕ ಭವನದ ಉದ್ಘಾಟನೆ ಹಾಗೂ 'ಆರೂಢ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸುತ್ತೂರು ವೀರ ಸಿಂಹಾಸನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮಿಜಿ, ಧರ್ಮಸ್ಥಳದ ಧರ್ಮಾಧಿಕಾರಿಗಳು ವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿ ಮಠದ ಸೌಮ್ಯನಾಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ' ಎಂದರು

'ಮೇ 12ರಂದು ಶಂಕರ ಜಯಂತಿ ಹಾಗೂ ಗುರುನಾಥ ರೂಢರ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಸಾವಯವ ಕೃಷಿ ಕುರಿತ ಚಿಂತನೆ ನಡೆಯಲಿದ್ದು, ಇದರಲ್ಲಿ 108 ಮಠಾಧೀಶರು ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಪ್ರಜ್ವಲ್ ವಿಡಿಯೊ ಮಾರ್ಫಿಂಗ್ ಮಾಡಿ ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿದ ಪ್ರಕರಣ

ಇಬ್ಬರಿಗೆ ಎಸ್‌ಐಟಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಪಟ್ಟ ವಿಡಿಯೊಗಳನ್ನು ಮಾರ್ಫಿಂಗ್ ಮಾಡಿ ಪೆನ್‌ಡ್ರೈವ್‌ನಲ್ಲಿ ಸಂಗ್ರಹಿಸಿ ಹಂಚಿಕೆ ಮಾಡಿದ್ದ ಆರೋಪದಡಿ ಹಾಸನ ಸೆನ್ (ಸೈಬರ್ ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಎಸ್‌ಐಟಿ ಅಧಿಕಾರಿಗಳು ಕೈಗೆತ್ತಿಕೊಂಡಿದ್ದು, ವಿಚಾರಣೆಗೆ ಹಾಜರಾಗುವಂತೆ ಇಬ್ಬರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್–ಬಿಜೆಪಿ ಪಕ್ಷದ ಮೈತ್ರಿ ಅಭ್ಯರ್ಥಿಯ ಚುನಾವಣೆ ಏಜೆಂಟ್ ಆಗಿರುವ ಎಂ.ಜಿ. ಪೂರ್ಣಚಂದ್ರ ತೇಜಸ್ವಿ ಅವರು ವಿಡಿಯೊ ಮಾರ್ಫಿಂಗ್ ಬಗ್ಗೆ ಏಪ್ರಿಲ್ 23ರಂದು ದೂರು ನೀಡಿದ್ದರು. ಪ್ರಜ್ವಲ್ ಕಾರಿನ ಚಾಲಕನಾಗಿದ್ದ ಹೊಳೆನರಸೀಪುರ ತಾಲ್ಲೂಕಿನ ಕಡವಿನ ಕೋಟೆಯ ಕಾರ್ತಿಕ್, ಪುಟ್ಟರಾಜು, ಕ್ವಾಲಿಟಿ ಬಾರ್ ಶರತ್, ನವೀನ್ ಗೌಡ ಹಾಗೂ ಚೇತನ್ ಗೌಡ ವಿರುದ್ಧ ಎಫ್‌ಐಆರ್ ಸಹ ದಾಖಲಾಗಿತ್ತು.

ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಆರೋಪದಡಿ ಪ್ರಜ್ವಲ್ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿದ್ದ ಎಸ್‌ಐಟಿ ಅಧಿಕಾರಿಗಳು, ಇದೀಗ ಹಾಸನ ಸೆನ್ ಠಾಣೆ ಪ್ರಕರಣದಲ್ಲೂ ಮಾಹಿತಿ ಕಲೆ ಹಾಕುತ್ತಿದ್ದಾರೆ. ಇದೇ ಕಾರಣಕ್ಕೆ, ಆರೋಪಿ ಕಾರ್ತಿಕ್ ಹಾಗೂ ವಿಡಿಯೊಗೆ ಸಂಬಂಧಪಟ್ಟಂತೆ ಹಲವೆಡೆ ಮಾಹಿತಿ ಹಂಚಿಕೊಳ್ಳುತ್ತಿರುವ ಬಿಜೆಪಿ ಮುಖಂಡ ದೇವರಾಜೇಗೌಡ ಅವರಿಗೆ ನೋಟಿಸ್ ನೀಡಿದ್ದಾರೆ.

'ಪ್ರಕರಣದ ಆರೋಪಿಗಳು, ಕಾಂಗ್ರೆಸ್ ಅಭ್ಯರ್ಥಿ ಹಾಗೂ ಕಾರ್ಯಕರ್ತರ ಜೊತೆ ಸೇರಿಕೊಂಡು ಸಂಚು ರೂಪಿಸಿ ವಿಡಿಯೊ ಹರಿಬಿಟ್ಟಿರುವ ಮಾಹಿತಿ ಇದೆ. ಹೀಗಾಗಿ, ಆರೋಪಿಗಳು ಹಾಗೂ ವಿಡಿಯೊಗೆ ಸಂಬಂಧಪಟ್ಟಂತೆ ಎಲ್ಲರ ವಿಚಾರಣೆ ಅಗತ್ಯವಿದೆ' ಎಂದು ಮೂಲಗಳು ಹೇಳಿವೆ.

'ನೋಟಿಸ್ ತಲುಪಿದ 24 ಗಂಟೆಯೊಳಗೆ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ. ವಿಚಾರಣೆ ನಡೆಸಿದ ಬಳಿಕ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿವೆ.

'ಪ್ರಜ್ವಲ್ ಅವರದ್ದು ಎನ್ನಲಾದ ವಿಡಿಯೊಗಳ ಅಸಲಿ ಪ್ರತಿ ಸಿಗಬೇಕಿದೆ. ಪ್ರಜ್ವಲ್ ಸಹ ತಲೆಮರೆಸಿಕೊಂಡಿದ್ದು, ಅವರು ಸಿಕ್ಕ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ಹೇಳಿವೆ.

ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲಿ: ಕೃಷ್ಣಬೈರೇಗೌಡ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಇದು ವಿಶ್ವದ ಅತಿ ದೊಡ್ಡ ಲೈಂಗಿಕ ದೌರ್ಜನ್ಯ ಪ್ರಕರಣ ಎಂಬುದರಲ್ಲಿ ಎರಡು ಮಾತಿಲ್ಲ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ದೂರವಾಣಿ ಕರೆ ಮಾಡಿ ವಿಡಿಯೊ ನೋಡಿದ ಬಳಿಕ ತಮಗೆ ವಿಪರೀತ ಮಾನಸಿಕ ಹಿಂಸೆ ಆಗಿದೆ ಎಂದು ಕಣ್ಣೀರು ಸುರಿಸಿದ್ದಾರೆ. ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವ ಪ್ರಕರಣವಿದು. ಇದರಲ್ಲಿ ಅನ್ಯಾಯವಾದವರಿಗೆ ಶಿಕ್ಷೆ ಆಗಲೇಬೇಕು. ತಪ್ಪಿತಸ್ಥರು ಯಾರೇ ಇರಲಿ, ಅದು ನಾನೇ ಆಗಿರಬಹುದು, ನನ್ನ ಸರ್ಕಾರವೇ ಆಗಿರಬಹುದು ಅಥವಾ ಬೇರೆ ಯಾರೇ ಆಗಿದ್ದರೂ ಸರಿ ಶಿಕ್ಷೆ ಆಗಲೇಬೇಕು. ಯಾವುದೇ ಕಾರಣಕ್ಕೂ ವಿಷಯಾಂತರ ಆಗಬಾರದು. ನನ್ನ ಗುರಿ ಮತ್ತು ಉದ್ದೇಶ ಇಷ್ಟೇ ಆಗಿದೆ' ಎಂದು ಅವರು ಹೇಳಿದರು.

'ಪೆನ್‌ಡ್ರೈವ್ ಹಂಚಿಕೆ: ಡಿಕೆಶಿ ಪಾತ್ರವಿಲ್ಲ'

ಡಿಸಿಎಂ 'ರಕ್ಷಣೆ'ಗೆ ನಿಂತ ಒಕ್ಕಲಿಗ ಸಚಿವರು • ಎಚ್‌ಡಿಕೆ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಜೆಡಿಎಸ್‌ನ ಕೆಂಗಣ್ಣಿಗೆ ಗುರಿಯಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ 'ರಕ್ಷಣೆ'ಗೆ ಒಕ್ಕಲಿಗ ಸಮುದಾಯ ಪ್ರತಿನಿಧಿಸುವ ನಾಲ್ವರು ಸಚಿವರು ಮುಂದಾಗಿದ್ದು, ಈ ಪ್ರಕರಣದಲ್ಲಿ ಶಿವಕುಮಾರ್ ಮಧ್ಯ ಪ್ರವೇಶಿಸಿಲ್ಲ ಎಂದು ಬಲವಾಗಿ ಸಮರ್ಥಿಸಿಕೊಂಡರು.

ಸಚಿವರಾದ ಎನ್. ಚಲುವರಾಯಸ್ವಾಮಿ, ಕೃಷ್ಣಬೈರೇಗೌಡ, ರಾಮಲಿಂಗಾರೆಡ್ಡಿ ಮತ್ತು ಎಂ.ಸಿ. ಸುಧಾಕರ್ ಅವರು ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು. ಪ್ರಜ್ವಲ್ ರೇವಣ್ಣ ಅವರದ್ದೆನ್ನಲಾದ ಅಶ್ಲೀಲ ವಿಡಿಯೊ ಹಂಚಿಕೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಾತ್ರವಿಲ್ಲ. ಅಲ್ಲದೇ, ಈ ಪ್ರಕರಣದಲ್ಲಿ ಅನಗತ್ಯವಾಗಿ ಒಕ್ಕಲಿಗ ಸಮುದಾಯವನ್ನು ಎಳೆದು ತರಬಾರದು ಎಂದು ಅವರು ಕುಮಾರಸ್ವಾಮಿಗೆ ಎಚ್ಚರಿಕೆ ನೀಡಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, 'ವಿಡಿಯೋ ಮಾಡಿಕೊಂಡವರ ಕೃತ್ಯದ ಬಗ್ಗೆ ಮಾತನಾಡುವುದನ್ನು ಬಿಟ್ಟು, ವಿಡಿಯೊ ಹಂಚಿಕೆ ಬಗ್ಗೆ ಮಾತನಾಡಲಾಗುತ್ತಿದೆ. ಈ ಅನಾಚಾರವನ್ನು ಬೇರೆ ಯಾರೋ ವಿಡಿಯೊ ಮಾಡಿದ್ದಲ್ಲ. ಸ್ವತಃ ಅವರೇ ಮಾಡಿಕೊಂಡಿರುವುದು. ಇದು ಹಾಸನದಲ್ಲಿಯೇ ಎಲ್ಲರಿಗೂ ಹಂಚಿಕೆ ಆಗಿದೆ. ಸಾಮಾಜಿಕ ಜಾಲತಾಣಗಳಿಗೆ ಸೋರಿಕೆ ಆದ ನಂತರ ಯಾವುದೂ ಯಾರ ಹಿಡಿತಕ್ಕೂ ಸಿಗುವುದಿಲ್ಲ. ವಿಚಾರ ಗಾಳಿಗೆ ಹೋದ ಮೇಲೆ ಯಾವ ದಿಕ್ಕಿಗೆ ಹೋಗುತ್ತದೆ ಎನ್ನುವುದು ಯಾರಿಗೂ ತಿಳಿಯುವುದಿಲ್ಲ' ಎಂದರು.

ಇಂತಹ ಸೂಕ್ಷ್ಮವಾದ ವಿಚಾರವನ್ನು ಜೆಡಿಎಸ್‌ನವರು ಬೀದಿ ರಂಪ ಮಾಡುತ್ತಿದ್ದಾರೆ. ಯಾವ ವಿಚಾರಕ್ಕೆ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ತಿಳಿಯುತ್ತಿಲ್ಲ. ಯಾವ ಸಾಧನೆ ಮಾಡಿದ್ದಾರೆ ಎಂದು ಪ್ರತಿಭಟನೆಗೆ ರಾಜ್ಯದಾದ್ಯಂತ ಕರೆ ಕೊಟ್ಟಿದ್ದಾರೆ? ಈ ವಿಚಾರ ರಾಜಕೀಯಗೊಳಿಸಲು ದಳದವರು ಹೊರಟಿದ್ದಾರೆ ಎಂದು ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

'ಡಿ.ಕೆ.ಶಿವಕುಮಾರ್ ಅವರನ್ನು ಸಂಪುಟದಿಂದ ವಜಾ ಮಾಡಲು, ತೆಗೆದು ಹಾಕಲು ಅವರೇನು ಕೋಳಿ ಮರಿಯೇ? ಸಿದ್ದರಾಮಯ್ಯ, ರಾಹುಲ್‌ಗಾಂಧಿ ಅವರನ್ನು ಏಕವಚನದಲ್ಲಿ ಸಂಬೋಧಿಸುತ್ತಿದ್ದಾರೆ. ಅವರು ತಾವೇ ಉನ್ನತ ಮಟ್ಟದ ವ್ಯಕ್ತಿ ಎಂದುಕೊಂಡಿದ್ದಾರೆ. ನಮಗೂ ಜೋರಾಗಿ ಏಕ ವಚನದಲ್ಲಿ ಮಾತನಾಡಲು ಬರುತ್ತದೆ' ಎಂದರು.

ಒಕ್ಕಲಿಗ ಸಮಾಜ ಎಳೆದು ತರಬೇಡಿ: 'ಈ ಪ್ರಕರಣದಲ್ಲಿ ಒಕ್ಕಲಿಗ ಸಮಾಜವನ್ನು ಎಳೆದು ತರುವುದು ಒಳ್ಳೆಯದಲ್ಲ. ನಾವು, ನೀವು ಈ ಸಮಾಜಕ್ಕೆ ಕಟ್ಟಾಳುಗಳಲ್ಲ. ಸಂದರ್ಭ ಬಂದಾಗ ಸಮಾಜ ನಮ್ಮನ್ನು, ನಿಮ್ಮನ್ನು ಬೆಂಬಲಿಸುತ್ತದೆ. ಸಮಾಜವು ಒಂದಷ್ಟು ಜನರಿಗೆ ಹೆಚ್ಚು, ಕಡಿಮೆ ಆಶೀರ್ವಾದ ಮಾಡಿರಬಹುದು. ಆದರೆ ಎಲ್ಲವೂ ನಮ್ಮದೇ ಹಿಡಿತದಲ್ಲಿದೆ ಎಂದು ಭಾವಿಸುವುದು ತಪ್ಪು. ನೀವು ಏನು ಮಾಡಿದರೂ ಒಕ್ಕಲಿಗರು ಬೆಂಬಲಿಗಕ್ಕೆ ನಿಲ್ಲುತ್ತಾರೆ ಎಂದುಕೊಂಡಿದ್ದರೆ ಅದು ತಪ್ಪು' ಎಂದು ಚಲುವರಾಯಸ್ವಾಮಿ ಕುಟುಕಿದರು.

> **ಇದು ಹೊಳೆನರಸೀಪುರಕ್ಕೆ ಸಂಬಂಧಿಸಿದ ವಿಚಾರ. ಕಾರ್ತಿಕ್, ದೇವರಾಜೇಗೌಡ ಮತ್ತು ಪ್ರಜ್ವಲ್ ಅವರ ನಡುವೆ ನಡೆದ ಜಗಳದಿಂದ ಆಚೆ ಬಂದ ವಿಚಾರ. ಬಂಧನಕ್ಕೆ ಒಳಗಾಗು ಎಂದು ರೇವಣ್ಣ, ಕುಮಾರಸ್ವಾಮಿ ಪ್ರಜ್ವಲ್‌ಗೆ ಹೇಳಬೇಕಿತ್ತು.**
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

> **ಪ್ರಪಂಚದ ಅತಿದೊಡ್ಡ ಲೈಂಗಿಕ ದೌರ್ಜನ್ಯ ಪ್ರಕರಣವಿದು. ನೂರಾರು ಹಿಂದೂ ಮಹಿಳೆಯರ ಮಾಂಗಲ್ಯ ಹರಣ ಮಾಡಿರುವ ಪ್ರಕರಣ. ಮಾನಹರಣ, ಶೀಲ ಹರಣ, ಮನೆ ಹಾಳು ಮಾಡಿರುವ ಪ್ರಕರಣ**
> **ಕೃಷ್ಣಬೈರೇಗೌಡ,** ಕಂದಾಯ ಸಚಿವ

> **ಸಿಬಿಐಗೆ ಈ ಪ್ರಕರಣ ಹೋದರೆ ಕೋಲ್ಡ್ ಸ್ಟೋರೇಜ್ ಸೇರುತ್ತದೆ ಎಂದು ಎಸ್‌ಐಟಿ ತನಿಖೆ ನಡೆಯುತ್ತಿದೆ. ಇಂತಹ ಹೀನ ಕೆಲಸ ನಮ್ಮ ಜಾತಿಯವರಿಂದ ಆಗಿದೆ ಎಂದು ಹೇಳಲು ನಾಚಿಕೆಯಾಗುತ್ತಿದೆ.**
> **ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

ನನ್ನ ವಿರುದ್ಧ ದಾಳಿಯಷ್ಟೇ ಗುರಿ: ಎಚ್‌ಡಿಕೆ

ಬೆಂಗಳೂರು: 'ಒಕ್ಕಲಿಗ ಸಮುದಾಯ ಪ್ರತಿನಿಧಿಸುವ ಸಚಿವರು, ಸಂಸದರಿಗೆ ನೊಂದವರಿಗೆ ನ್ಯಾಯ ಕೊಡಿಸುವ ಉದ್ದೇಶವಿಲ್ಲ. ನನ್ನ ವಿರುದ್ಧ ದಾಳಿ ಮಾಡುವುದಷ್ಟೇ ಅವರ ಗುರಿ' ಎಂದು ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸಚಿವರು ಬುಧವಾರ ಸುದ್ದಿಗೋಷ್ಠಿ ನಡೆಸಿದ್ದಕ್ಕೆ ಗುರುವಾರ ಸುದ್ದಿಗೋಷ್ಠಿ ನಡೆಸಿದ ಕುಮಾರಸ್ವಾಮಿ, ಪೆನ್‌ಡ್ರೈವ್‌ಗಳನ್ನು ಹಂಚಿಕೆ ಮಾಡಿದ ತಮ್ಮ ಪಕ್ಷದ ಖಳನಾಯಕನನ್ನು ರಕ್ಷಣೆ ಮಾಡಿಕೊಳ್ಳಲು ಜಾತಿ ಅಸ್ತ್ರ ಬಳಕೆ ಮಾಡಿದ್ದಾರೆ. ನಾನು ಜಾತಿಯನ್ನು ಎಳೆದು ತರುವುದಿಲ್ಲ. ಏಕಾಂಗಿಯಾಗಿಯೇ ಇದೆಲ್ಲವನ್ನೂ ಎದುರಿಸುತ್ತೇನೆ' ಎಂದು ಹೇಳಿದರು.

'ನೇರವಾಗಿ ನನ್ನನ್ನು ಗುರಿ ಮಾಡಿ ಮಾತನಾಡಿದ್ದಾರೆ. ಪೆನ್‌ಡ್ರೈವ್ ವಿಷಯ ಗೊತ್ತಿದ್ದರೂ ಹಾಸನ ಅಭ್ಯರ್ಥಿಯನ್ನು ನಾನು ಕಣಕ್ಕೆ ಇಳಿಸಿದ್ದೇನೆ ಎಂದು ಸುಳ್ಳು ಹೇಳಿದ್ದಾರೆ' ಎಂದರು.

'ಕಾಂಗ್ರೆಸ್ ಸರ್ಕಾರಕ್ಕೆ ಅನುಕೂಲ ಆಗುವ ರೀತಿಯಲ್ಲಿ ಹೇಳಿಕೆ ನೀಡದಿದ್ದರೆ ನಿಮ್ಮನ್ನು ವೇಶ್ಯಾವಾಟಿಕೆ ಪ್ರಕರಣದಲ್ಲಿ ಸಿಲುಕಿಸುತ್ತೇವೆ ಎಂದು ಎಸ್‌ಐಟಿ ಅಧಿಕಾರಿಗಳು ನೊಂದ ಮಹಿಳೆಯರಿಗೆ ಬೆದರಿಕೆ ಹಾಕುತ್ತಿದ್ದಾರೆ. ಸಚಿವ ಕೃಷ್ಣ ಬೈರೇಗೌಡರೇ, ಕಂಡ ಕಂಡವರ ಮನೆ ಬಾಗಿಲಿಗೆ ಹೋಗಿ ಬೆದರಿಕೆ ಹಾಕುತ್ತಿದ್ದೀರಿ. ನಿಮ್ಮ ತನಿಖಾ ತಂಡದ ಅಧಿಕಾರಿಗಳು ನೊಂದ ಮಹಿಳೆಯರಿಗೆ ಬೆದರಿಕೆ ಹಾಕುತ್ತಿರುವುದು ಸುಳ್ಳೇ' ಎಂದು ಅವರು ಪ್ರಶ್ನಿಸಿದರು.

ಪ್ರಚೋದನಾಕಾರಿ ವಿಡಿಯೊ ಪೋಸ್ಟ್ ಹಂಚಿದ ಆರೋಪ

ಬಿಜೆಪಿ ಸಂಚಾಲಕ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಚೋದನಕಾರಿ ವಿಡಿಯೊ ಪೋಸ್ಟ್ ಅಪ್‌ಲೋಡ್ ಮಾಡಿದ್ದ' ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ಬಿಜೆಪಿಯ ಸಾಮಾಜಿಕ ಮಾಧ್ಯಮಗಳ ಸಂಚಾಲಕ ಪ್ರಶಾಂತ್ ಮಾಚಕನೂರು ಅವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಿಟ್ಟು ಕಳುಹಿಸಿದ್ದಾರೆ.

'ವಿಡಿಯೊ ಪೋಸ್ಟ್ ಪ್ರಕಟಿಸಿದ್ದ ಆರೋಪದಡಿ ಪ್ರಶಾಂತ್ ಅವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಯಿತು. ಆದರೆ, ತಮಗೆ ನಿರೀಕ್ಷಣಾ ಜಾಮೀನು ಮಂಜೂರು ಆಗಿರುವುದಾಗಿ ಅವರು ಹೇಳಿದರು. ನ್ಯಾಯಾಲಯ ಆದೇಶ ಪರಿಶೀಲಿಸಿ, ಬಿಟ್ಟು ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಕ್ಸ್'ನಲ್ಲಿರುವ ಬಿಜೆಪಿಯ ಅಧಿಕೃತ ಖಾತೆಯಲ್ಲಿ (@ಬಿಜೆಪಿ4ಕರ್ನಾಟಕ) ವಿಡಿಯೊ ಪೋಸ್ಟ್ ಮಾಡಲಾಗಿತ್ತು. 'ಎಚ್ಚರ... ಎಚ್ಚರ... ಎಚ್ಚರ...' ಎಂದು ಬರೆದು ಹಲವರ ಬಗ್ಗೆ ತಪ್ಪು ಮಾಹಿತಿ ಹರಿಬಿಡಲಾಗಿತ್ತು. ಸಮಾಜದಲ್ಲಿ ಎರಡು ವರ್ಗಗಳ ನಡುವೆ ದ್ವೇಷವನ್ನುಂಟು ಮಾಡುವ ಹಾಗೂ ವೈಷಮ್ಯ ಮೂಡಿಸುವ ಉದ್ದೇಶದಿಂದ ವಿಡಿಯೊ ಅಪ್‌ಲೋಡ್ ಮಾಡಿರುವುದಾಗಿ ಆರೋಪಿಸಿ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿಯ ಸಾಮಾಜಿಕ ಮಾಧ್ಯಮ ಉಸ್ತುವಾರಿ ಅಮಿತ್ ಮಾಳವೀಯಾ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಈಗಾಗಲೇ ನೋಟಿಸ್ ನೀಡಲಾಗಿದೆ. ಜೊತೆಗೆ, ವಿಡಿಯೊ ಪೋಸ್ಟ್ ತಯಾರಿಸಿದ್ದು ಯಾರು ? ಎಂಬ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಹೇಳಿದರು.

ಪಲ್ಸರ್ ಎನ್‌ಎಸ್400ಝಡ್ ಬೈಕ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ದ್ವಿಚಕ್ರ ವಾಹನ ತಯಾರಿಕಾ ಕಂಪನಿಯಾದ ಬಜಾಜ್ ಆಟೊ, ಪಲ್ಸರ್ ಎನ್‌ಎಸ್ 400ಝಡ್ ಮೋಟಾರ್‌ಸೈಕಲ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇದು ಪಲ್ಸರ್ ಎನ್‌ಎಸ್‌ಡಿ ಎನ್‌ಎಯಿಂದ ಪ್ರೇರಿತವಾಗಿದೆ. 373 ಸಿಸಿ ಲಿಕ್ವಿಡ್ ಕೂಲ್ಡ್ ಎಂಜಿನ್, ಆರು ಸ್ಪೀಡ್ ಗೇರ್ ಬಾಕ್ಸ್ ಹೊಂದಿದೆ. ಎಲ್‌ಇಡಿ ಪ್ರಾಜೆಕ್ಟರ್ ಹೆಡ್‌ಲ್ಯಾಂಪ್ ಹಾಗೂ ಸಂಪೂರ್ಣ ಡಿಜಿಟಲ್ ಕಲರ್ ಎಲ್‌ಸಿಸಿ ಸ್ಪೀಡೊಮೀಟರ್ ವ್ಯವಸ್ಥೆ ಹೊಂದಿದೆ. ಬ್ಲೂಟೂಥ್ ಕನೆಕ್ಟಿವಿಟಿ, ನ್ಯಾವಿಗೇಷನ್, ಮ್ಯೂಸಿಕ್ ಕಂಟ್ರೋಲ್ ಸೌಲಭ್ಯವಿದೆ ಎಂದು ಕಂಪನಿಯು ತಿಳಿಸಿದೆ.

ಈ ಬೈಕ್‌ನಲ್ಲಿ ರೈಡ್ ಬೈ ವೈರ್ ತಂತ್ರಜ್ಞಾನ ಅಳವಡಿಸಲಾಗಿದ್ದು, ಸವಾರರು ನಿರೀಕ್ಷಿಸುವ ಸಾಮರ್ಥ್ಯ ಹೊಂದಿದೆ. ಹೊಸ ವೈಶಿಷ್ಟ್ಯ ಒಳಗೊಂಡಿದ್ದು, ಉತ್ತಮ ಸವಾರಿಯ ಅನುಭವ ನೀಡುತ್ತದೆ ಎಂದು ಅದು ಹೇಳಿದೆ.

ನವದೆಹಲಿಯಲ್ಲಿ ಪಲ್ಸರ್ ಎನ್‌ಎಸ್ 400ಝಡ್‌ನ ಎಕ್ಸ್ ಷೋರೂಂ ಬೆಲೆ ₹1.85 ಲಕ್ಷ ಆಗಿದೆ. ₹5 ಸಾವಿರ ಪಾವತಿಸಿ ಬುಕಿಂಗ್ ಮಾಡಬಹುದಾಗಿದೆ ಎಂದು ತಿಳಿಸಿದೆ.

ಎಂಜಿನಿಯರಿಂಗ್ ಪದವೀಧರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸಮೀಪದ ಅಂಬೇಡ್ಕರ್ ನಗರದಲ್ಲಿರುವ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರ 5ನೇ ಮಹಡಿಯಿಂದ ಜಿಗಿದು ಅರುಣ್‌ಕುಮಾರ್ ಪಾಟೀಲ (28) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಕಲಬುರಗಿಯ ಅರುಣ್‌ಕುಮಾರ್, ಎಂಜಿನಿಯರಿಂಗ್ ಪದವೀಧರ. ಕಂಪನಿಗಳಲ್ಲಿ ಕೆಲಸ ಹುಡುಕಿಕೊಂಡು ಮೇ 8ರಂದು ಬೆಂಗಳೂರಿಗೆ ಬಂದಿದ್ದರು. ಪಿ.ಜಿಯಲ್ಲಿ ಉಳಿದುಕೊಂಡಿದ್ದರು' ಎಂದು ವೈಟ್‌ಫೀಲ್ಡ್ ಠಾಣೆ ಪೊಲೀಸರು ಹೇಳಿದರು.

'ಗುರುವಾರ ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಐದನೇ ಮಹಡಿಗೆ ಹೋಗಿದ್ದ ಅರುಣ್‌ಕುಮಾರ್, ಅಲ್ಲಿಂದಲೇ ಜಿಗಿದಿದ್ದರು. ಜೋರು ಶಬ್ದ ಕೇಳಿದ್ದ ಸ್ಥಳೀಯರು, ಕಟ್ಟಡ ಬಳಿ ಸೇರಿದ್ದರು. ತೀವ್ರ ಗಾಯವಾಗಿ ಅರುಣ್‌ಕುಮಾರ್ ಸ್ಥಳದಲ್ಲೇ ಅಸುನೀಗಿದ್ದರು' ಎಂದು ತಿಳಿಸಿದರು.

'ಅರುಣ್‌ಕುಮಾರ್ ಅವರ ಮೊಬೈಲ್, ಬ್ಯಾಗ್ ಹಾಗೂ ಇತರೆ ಎಲ್ಲ ವಸ್ತುಗಳು ಕೊಠಡಿಯಲ್ಲಿದ್ದವು. ಆತ್ಮಹತ್ಯೆ ಸಂಬಂಧ ಪೇಯಿಂಗ್ ಗೆಸ್ಟ್ ಕಟ್ಟಡ ಮಾಲೀಕರು ಹಾಗೂ ಇತರರಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿದರು.

ನಿವೃತ್ತ ಎಂಜಿನಿಯರ್‌ಗೆ ₹ 1.60 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಹಡಗಿನಲ್ಲಿ ಎಂಜಿನಿಯರ್ ಆಗಿ ನಿವೃತ್ತರಾಗಿರುವ ನಗರದ ವ್ಯಕ್ತಿಯೊಬ್ಬರಿಗೆ ಸಿಬಿಐನ ಮುಂಬೈ ಕ್ರೈಂ ಬ್ರಾಂಚ್ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿ, 'ನಿಮ್ಮ ಹೆಸರಲ್ಲಿ ಥಾಯ್ಲೆಂಡಿಗೆ ಕಳುಹಿಸಲಾದ ಪಾರ್ಸೆಲ್ ನಲ್ಲಿ ಮಾದಕ ಪದಾರ್ಥ ಪತ್ತೆಯಾಗಿದೆ' ಎಂದು ಹೇಳಿ ಬೆದರಿಸಿ ₹ 1.60 ಕೋಟಿ ವಂಚಿಸಿದ ಬಗ್ಗೆ ಇಲ್ಲಿನ ಸೆನ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನಗರದ 72 ವರ್ಷದ ನಿವೃತ್ತ ಎಂಜಿನಿಯರ್‌ಗೆ ಈಚೆಗೆ ಕರೆ ಬಂದಿತ್ತು. ಮಾತನಾಡಿದ ವ್ಯಕ್ತಿಯು ತನ್ನ ಹೆಸರು ರಾಜೇಶ್ ಕುಮಾರ್, ಫೆಡೆಕ್ಸ್ ಕಂಪನಿಯಿಂದ ಕರೆ ಮಾಡುತ್ತಿದ್ದೇನೆ ಎಂದು ಹೇಳಿಕೊಂಡಿದ್ದ. ನೀವು ಮುಂಬೈನಿಂದ ಥಾಯ್ಲೆಂಡ್ ದೇಶಕ್ಕೆ ಒಂದು ಪಾರ್ಸೆಲ್ ಕಳಿಸಿದ್ದು, ಅದನ್ನು ಅಲ್ಲಿನ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಅದರಲ್ಲಿ ಅಫ್ಘಾನಿಸ್ತಾನ ಮತ್ತು ಕೆನ್ಯಾದ ಐದು ಪಾಸ್‌ಪೋರ್ಟ್‌ಗಳು ಮೂರು ಕ್ರೆಡಿಟ್ ಕಾರ್ಡ್‌ಗಳು, 140 ಗ್ರಾಂ ಎಂಡಿಎಂಎ, 4 ಕೆ.ಜಿ. ಬಟ್ಟೆ ಹಾಗೂ ಒಂದು ಲ್ಯಾಪ್‌ಟಾಪ್ ಇತ್ತು. ಈ ಬಗ್ಗೆ ಮುಂಬೈ ಅಪರಾಧ ವಿಭಾಗದವರು ತನಿಖೆ ನಡೆಸುತ್ತಿದ್ದಾರೆ ಎಂದು ಹೇಳಿದ್ದ.'

ಮುಂಬೈ ಕ್ರೈಮ್ ಬ್ರಾಂಚ್, ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿ 'ತನಿಖೆಗೆ ಸಹಕರಿಸದೇ ಹೋದರೆ ಇಂಟರ್‌ಪೋಲ್ ಮೂಲಕ ನಿಮ್ಮ ಮಗ ಮತ್ತು ಮಗಳನ್ನು ಬಂಧಿಸಬೇಕಾಗುತ್ತದೆ' ಎಂದು ಬೆದರಿಸಿ ಹಣ ಪಡೆದಿದ್ದಾರೆ ಎಂದು ದೂರಿನಲ್ಲಿ ಅವರು ಹೇಳಿದ್ದಾರೆ.

ಪತಿ ತೊರೆದು ಉದ್ಯೋಗ ಅರಸಿ ಬಂದಿದ್ದ ದಿವ್ಯಾ • ಪ್ರಿಯಕರನ ಬಂಧನ

ಬಾಡಿಗೆ ಮನೆಗೆ ನುಗ್ಗಿ ಮಹಿಳೆ ಹತ್ಯೆ

ಪ್ರಜಾವಾಣಿ ವಾರ್ತೆ


ಶಾಂತಕುಮಾರ್

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದಿವ್ಯಾ (30) ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಎರಡನೇ ಮದುವೆಯಾಗಿದ್ದ ಎನ್ನಲಾದ ಪ್ರಿಯಕರ ಶಾಂತಕುಮಾರ್‌ನನ್ನು (35) ಬಂಧಿಸಿದ್ದಾರೆ.

'ಹೊಯ್ಸಳ ನಗರದಲ್ಲಿರುವ ಮನೆಯೊಂದರಲ್ಲಿ ಮೇ 7ರಂದು ದಿವ್ಯಾ ಕೊಲೆ ನಡೆದಿತ್ತು. ಕೃತ್ಯದ ನಂತರ ಪರಾರಿಯಾಗಿದ್ದ ಶಾಂತಕುಮಾರ್‌ನನ್ನು ಇದೀಗ ಸೆರೆ ಹಿಡಿಯಲಾಗಿದೆ. ಬೇರೊಬ್ಬ ಯುವಕನ ಜೊತೆ ಸಲುಗೆ ಇಟ್ಟುಕೊಂಡಿದ್ದ ಕಾರಣಕ್ಕೆ ದಿವ್ಯಾ ಅವರನ್ನು ಕೊಂದಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾರೆ ' ಎಂದು ಪೊಲೀಸರು ಹೇಳಿದರು.

ಪತಿಯಿಂದ ದೂರ: 'ಬಿಡದಿ ಹೊಸ ದೊಡ್ಡಿಯ ದಿವ್ಯಾ ಅವರಿಗೆ ಹಲವು ವರ್ಷಗಳ ಹಿಂದೆಯೇ ಮದುವೆಯಾಗಿತ್ತು. ದಂಪತಿಗೆ ಇಬ್ಬರು ಮಕ್ಕಳು ಸಹ ಇದ್ದರು. ಕೌಟುಂಬಿಕ ಕಲಹದಿಂದಾಗಿ ದಿವ್ಯಾ ಪತಿಯಿಂದ ದೂರವಾಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಪಾಂಡವಪುರದ ಶಾಂತಕುಮಾರ್, ಜ್ಯೋತಿಷ ಹೇಳಿ ಜೀವನ ನಡೆಸುತ್ತಿದ್ದ. ದಿವ್ಯಾ ಅವರನ್ನು ಪರಿಚಯ ಮಾಡಿಕೊಂಡಿದ್ದ. ಪ್ರೀತಿಸುವುದಾಗಿ ಹೇಳಿ ಸಲುಗೆ ಬೆಳೆಸಿದ್ದ. ನಂತರ, ಅವರಿಬ್ಬರು 2018ರಲ್ಲಿ ಚಿಕ್ಕಮಗಳೂರಿನಲ್ಲಿ ಮದುವೆಯಾಗಿದ್ದರೆಂದು ಗೊತ್ತಾಗಿದೆ. ಇದರ ನಂತರ, ಇಬ್ಬರೂ ಪ್ರತ್ಯೇಕವಾಗಿಯೇ ವಾಸವಿದ್ದರು' ಎಂದರು.

'ದಿವ್ಯಾ ಅವರು ಇಬ್ಬರು ಮಕ್ಕಳ ಸಮೇತವಾಗಿ ಮೊದಲ ಪತಿಯ ಮನೆಯನ್ನು ಬಿಟ್ಟು ಬಂದಿದ್ದರು. ಒಂದು ಮಗುವನ್ನು ಶಾಂತಕುಮಾರ್ ತನ್ನ ಹಳ್ಳಿಯ ಮನೆಯಲ್ಲಿ ಇರಿಸಿಕೊಂಡಿದ್ದ. ಇನ್ನೊಂದು ಮಗುವನ್ನು ದಿವ್ಯಾ ಅವರು ಸಾಕುತ್ತಿದ್ದರು. ಸಣ್ಣ–ಪುಟ್ಟ ಕೆಲಸ ಮಾಡುತ್ತಿದ್ದ ದಿವ್ಯಾ, ಜೀವನ ಸಾಗಿಸಲು ಕಷ್ಟಪಡುತ್ತಿದ್ದರು. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದರು' ಎಂದು ಪೊಲೀಸರು ಹೇಳಿದರು.

'ಹೆಚ್ಚು ಹಣ ಸಂಪಾದಿಸುವ ಉದ್ದೇಶದಿಂದ ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದಿದ್ದ ದಿವ್ಯಾ, ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡದಲ್ಲಿ ವಾಸವಿದ್ದರು. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ಕಾಮಾಕ್ಷಿಪಾಳ್ಯದಲ್ಲಿರುವ ಬಾಡಿಗೆ ಮನೆಗೆ ಸ್ಥಳಾಂತರಗೊಂಡಿದ್ದರು. ಪೀಠೋಪಕರಣ ಹಾಗೂ ಅಗತ್ಯವಸ್ತುಗಳನ್ನು ಸ್ಥಳಾಂತರಿಸಿದ್ದ ಆಟೊ ಚಾಲಕನಿಗೆ ಶಾಂತಕುಮಾರ್‌ನೇ ಹಣ ನೀಡಿದ್ದ' ಎಂದು ತಿಳಿಸಿದರು.

ಮೊಬೈಲ್ ಕರೆ, ಶೀಲದ ಬಗ್ಗೆ ಶಂಕೆ: 'ದಿವ್ಯಾ ಅವರ ಮೊಬೈಲ್ ಇತ್ತೀಚೆಗೆ ಕಳ್ಳತನವಾಗಿತ್ತು. ಆರೋಪಿ ಶಾಂತಕುಮಾರ್‌ನೇ ಹೊಸ ಮೊಬೈಲ್ ಹಾಗೂ ಸಿಮ್‌ಕಾರ್ಡ್ ಕೊಡಿಸಿದ್ದ. ಮೊಬೈಲ್ ಸೇವಾ ಕಂಪನಿಯನ್ನು ಸಂಪರ್ಕಿಸಿ ಶಾಂತಕುಮಾರ್, ದಿವ್ಯಾ ಅವರ ಹಳೇ ನಂಬರ್ ಪಡೆದುಕೊಂಡಿದ್ದ. ಅದೇ ನಂಬರ್‌ಗೆ ಯುವಕನೊಬ್ಬ ಕರೆ ಮಾಡಿದ್ದ. ತಾನು ದಿವ್ಯಾ ಪ್ರಿಯಕರನೆಂದು ಹೇಳಿದ್ದ' ಎಂದು ಪೊಲೀಸರು ಮಾಹಿತಿ ನೀಡಿದರು.

'ದಿವ್ಯಾ ಬೇರೊಬ್ಬ ಯುವಕನ ಜೊತೆ ಸಲುಗೆ ಇಟ್ಟುಕೊಂಡಿರುವ ವಿಷಯ ಗೊತ್ತಾಗುತ್ತಿದ್ದಂತೆ ಶಾಂತಕುಮಾರ್ ಸಿಟ್ಟಾಗಿದ್ದ. ದಿವ್ಯಾ ಅವರನ್ನು ಕೊಲ್ಲಲು ಸಂಚು ರೂಪಿಸಿದ್ದ' ಎಂದು ಹೇಳಿದರು.

ವಿಳಾಸ ನೀಡಿದ್ದ ಆಟೊ ಚಾಲಕ: 'ದಿವ್ಯಾ ಬಾಡಿಗೆ ಮನೆಯ ವಿಳಾಸ ಶಾಂತಕುಮಾರ್‌ಗೆ ಗೊತ್ತಿರಲಿಲ್ಲ. ಆದರೆ, ಮನೆ ಸ್ಥಳಾಂತರ ಸಂದರ್ಭದಲ್ಲಿ ಆಟೊ ಚಾಲಕನಿಗೆ ಶಾಂತಕುಮಾರ್ ಹಣ ಕಳುಹಿಸಿದ್ದ. ಅದೇ ಚಾಲಕನಿಗೆ ಕರೆ ಮಾಡಿ ವಿಳಾಸ ತಿಳಿದುಕೊಂಡಿದ್ದ. ಕೊಲೆ ಮಾಡಲೆಂದು ಪಾಂಡವಪುರದ ಅಂಗಡಿಯಲ್ಲಿಯೇ ಚಾಕು ಖರೀದಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ಮೇ 7ರಂದು ಮನೆಗೆ ನುಗ್ಗಿದ್ದ ಶಾಂತಕುಮಾರ್, ದಿವ್ಯಾ ಜೊತೆ ಜಗಳ ತೆಗೆದಿದ್ದ. ಕೈ ಹಾಗೂ ಹೊಟ್ಟೆ ಭಾಗದಲ್ಲಿ ಚಾಕುವಿನಿಂದ ಇರಿದಿದ್ದ. ತೀವ್ರ ಗಾಯಗೊಂಡು ದಿವ್ಯಾ ಮೃತಪಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ'ದ ಜಾಲತಾಣ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಬ್ರಹ್ಮ ಆಯೋಜಿಸುತ್ತಿರುವ 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ–2024' ಜಾಲತಾಣವನ್ನು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಹಳ್ಳಿ ಹಾಗೂ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ ಅನಾವರಣಗೊಳಿಸಿದರು.

ಎರಡೂವರೆ ಸಾವಿರ ವರ್ಷಗಳ ಶ್ರೀಮಂತ ಸಾಹಿತ್ಯ ಪರಂಪರೆ ಹೊಂದಿರುವ ದಕ್ಷಿಣ ಭಾರತದ ಭಾಷೆಗಳ (ತಮಿಳು, ಕನ್ನಡ, ಮಲಯಾಳಂ, ತೆಲುಗು) ನಡುವಿನ ಪರಸ್ಪರ ಸಂಬಂಧವು ಐತಿಹಾಸಿಕ ಮಹತ್ವದಾಗಿದೆ. ಈ ಸಂಬಂಧವನ್ನು ಸಂಭ್ರಮಿಸುವುದಕ್ಕೆ 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ' ಆಯೋಜಿಸಲಾಗುತ್ತಿದೆ.

ಭಾರತದಲ್ಲಿ ಒಟ್ಟು ಏಳು ನೂರಕ್ಕೂ ಹೆಚ್ಚು ಮಾತನಾಡುವ ಭಾಷೆಗಳಿವೆ. ಆ ಪೈಕಿ ದಕ್ಷಿಣ ಭಾರತದ ಸಾಹಿತ್ಯವು 'ಸಿಲಪ್ಪದಿಗಾರಂ', 'ಆದಿಪುರಾಣ', 'ರಾಮಚರಿತಂ', 'ಆಂಧ್ರ ಮಹಾಭಾರತಂ' 'ತಿರುನಿಝುಲ್ಮಲಾ' ಕಾವ್ಯಗಳ ಮೂಲಕ ಶ್ರೀಮಂತ ಪರಂಪರೆಗೆ ನಾಂದಿ ಹಾಡಿತು. ಹಾಗೆಯೇ ಹಲವಾರು ಆಧುನಿಕ ಕೃತಿಗಳು ಕೂಡ ಆಯಾ ಭಾಷೆಯ ಶ್ರೀಮಂತಿಕೆ ಹೆಚ್ಚಿಸಲು ಕಾರಣವಾಗಿವೆ. 56 ಜನ ಜ್ಞಾನಪೀಠ ಪುರಸ್ಕೃತರ ಪೈಕಿ ಈ ಭಾಗದ 19 ಜನ ಕವಿ-ಲೇಖಕರಿದ್ದಾರೆ. ದಕ್ಷಿಣ ಭಾರತದ ಸಾಹಿತ್ಯಾಸಕ್ತರು ಮತ್ತು ಲೇಖಕರು ಒಂದೇ ವೇದಿಕೆಯಲ್ಲಿ ಸೇರಿಸುವ ಉದ್ದೇಶದಿಂದ 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ' ನಡೆಯಲಿದೆ. ಇದರಲ್ಲಿ ಪ್ರಕಾಶಕರು, ಓದುಗರು, ಲೇಖಕರು ಮತ್ತು ಪುಸ್ತಕ ಮಾರಾಟಗಾರರು ಸಕ್ರಿಯವಾಗಿ ಭಾಗವಹಿಸಲಿದ್ದಾರೆ ಎಂದು ಉತ್ಸವ ಆಯೋಜಕರು ತಿಳಿಸಿದರು.

ಜಾಲತಾಣ ಅನಾವರಣ ಸಂದರ್ಭದಲ್ಲಿ ನವಕರ್ನಾಟಕ ಪ್ರಕಾಶನದ ರಮೇಶ್ ಉಡುಪ, ಆಕೃತಿಯ ಗುರುಪ್ರಸಾದ್ ಹೆಜ್ಜಾಜಿ, ಲೇಖಕಿ ಡಾ. ವಸುಂಧರಾ ಭೂಪತಿ, ಹೇಮಾ ಪಟ್ಟಣಶೆಟ್ಟಿ, ಜಮೀಲ ಸಾವಣ್ಣ, ಅಭಿನವ ರವಿಕುಮಾರ್, ಜಯಲಕ್ಷ್ಮಿ ಪಾಟೀಲ್, ಅಯೋಧ್ಯ ಪ್ರಕಾಶನದ ಶಂಕರ್, ಭಾವನ ಬೆಳಗೆರೆ, ಪದ ಪ್ರಕಾಶನದ ಧಾಮಿನ, ಕಾವ್ಯ ಪ್ರಕಾಶನದ ರಾಜಲಕ್ಷ್ಮಿ, ಲೇಖಕ ಕಗ್ಗೆರೆ ಪ್ರಕಾಶ್, ಸ್ನೇಹ ಬುಕ್ ಹೌಸ್‌ನ ಪರಶಿವಯ್ಯ, ಕದಂಬ ಪ್ರಕಾಶನದ ನಾಗೇಶ್, ಹರಿವು ಬುಕ್ಸ್‌ನ ರತೀಶ್, ಪ್ರೀಸಂನ ಪ್ರಾಣೇಶ್, ವಸಂತ ಪ್ರಕಾಶನದ ಮುರಳಿ ಭಾಗವಹಿಸಿದ್ದರು.


'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ–2024' ಜಾಲತಾಣವನ್ನು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಹಳ್ಳಿ ಹಾಗೂ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ ಅನಾವರಣಗೊಳಿಸಿದರು

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಮುಂಡರಗಿ (ಗದಗ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ 14 ವರ್ಷದ ಬಾಲಕಿಯನ್ನು ಪುಸಲಾಯಿಸಿ ಆಕೆಯ ಮೇಲೆ ನಿರಂತರ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಕೃಷ್ಣಪ್ಪ ಮುದುಕಪ್ಪ ಮಲಿಯಮ್ಮನವರ ಎಂಬಾತನ ವಿರುದ್ಧ ಮುಂಡರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆರೋಪಿಯು ಜನವರಿ 27ರಂದು ಸಾರ್ವಜನಿಕ ಬಯಲು ಜಾಗದಲ್ಲಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ. ನಂತರದ ದಿನಗಳಲ್ಲಿ ಹಲವು ಬಾರಿ ಕೃತ್ಯವೆಸಗಿದ. ಬಾಲಕಿಯು 4 ತಿಂಗಳ ಗರ್ಭಿಣಿಯಾಗಿದ್ದು, ಆಕೆಯ ಪೋಷಕರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಂಗೇರ ಅಂತ್ಯಕ್ರಿಯೆ: ಪುತ್ರಿಯಿಂದ ಅಗ್ನಿಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಬುಧವಾರ ನಿಧನರಾಗಿದ್ದ ಇಲ್ಲಿನ ಮಾಜಿ ಶಾಸಕ ಕೆ.ವಸಂತ ಬಂಗೇರ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಕುವೆಟ್ಟು ಗ್ರಾಮದ ಕೇದೆ ಮನೆತನದ ಜಾಗದಲ್ಲಿ ಗುರುವಾರ ಸಂಜೆ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ವಸಂತ ಬಂಗೇರ ಅವರ ಕಿರಿಯ ಮಗಳು ಬಿನುತಾ ಬಂಗೇರ ಅವರು ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು.

ಇದಕ್ಕೂ ಮುನ್ನ ಇಲ್ಲಿನ ತಾಲ್ಲೂಕು ಕ್ರೀಡಾಂಗಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಈ ಮೂರೂ ಪಕ್ಷಗಳಿಂದ ಶಾಸಕರಾಗಿ, ಎಲ್ಲಾ ಪಕ್ಷಗಳಲ್ಲೂ ಅಭಿಮಾನಿಗಳನ್ನು ಹೊಂದಿದ್ದ ಅವರ ಅಂತಿಮ ದರ್ಶನ ಪಡೆಯಲು ಭಾರಿ ಜನಸ್ತೋಮ ಸೇರಿತ್ತು.

ಬೆಂಗಳೂರಿನಿಂದ ಅವರ ಪಾರ್ಥಿವ ಶರೀರವನ್ನು ಗುರುವಾರ ಮುಂಜಾನೆ ಊರಿಗೆ ತರಲಾಯಿತು.


ಬೆಳ್ತಂಗಡಿ ತಾಲ್ಲೂಕಿನ ಕುವೆಟ್ಟು ಗ್ರಾಮದಲ್ಲಿ ವಸಂತ ಬಂಗೇರ ಅಂತ್ಯಕ್ರಿಯೆ ವೇಳೆ ಅವರ ಕಿರಿಯ ಮಗಳು ಬಿನುತಾ ಬಂಗೇರ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು

ಟ್ಯಾಂಕರ್ ನೀರಿಗೆ ಲಕ್ಷ, ಲಕ್ಷ ಕಳೆದುಕೊಂಡ ರೈತರು

'ಕೋಮಾ'ದಲ್ಲಿ ಅಡಿಕೆ ತೋಟ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಎಲ್ಲಿ ನೋಡಿದರೂ ಕೆಂಬಣ್ಣಕ್ಕೆ ತಿರುಗಿದ ಅಡಿಕೆ ಗಿಡಗಳು, 'ಕೋಮಾ' ಸ್ಥಿತಿಗೆ ತಲುಪಿದ ತೋಟಗಳು, ಒಣಗುತ್ತಿರುವ ಬೆಳೆ ಉಳಿಸಲು ಜೀವಜಲ ಹುಡುಕಾಟದಲ್ಲಿ ಬಳಲಿ ಬೆಂಡಾಗಿರುವ ರೈತರು...

ಇದು ಅಜ್ಜಂಪುರ ತಾಲ್ಲೂಕಿನ ಶಿವನಿ ಹೋಬಳಿಯ ರೈತರ ಸ್ಥಿತಿ. ಬಿರು ಬಿಸಿಲಿನಿಂದ ಬಳಲಿರುವ ಶಿವನಿ, ಚೀರನಹಳ್ಳಿ, ಹರಳಹಳ್ಳಿ, ತಡಗ, ಗಡೀಹಳ್ಳಿ, ಮುಗುಳಿ, ದಂದೂರು, ನಾರಾಯಣಪುರ ಸೇರಿ ಹಲವು ಹಳ್ಳಿಗಳಲ್ಲಿ ಮೌನ ಆವರಿಸಿದೆ. ಯಾವ ರೈತರ ಮುಖದಲ್ಲೂ ಕಳೆ ಇಲ್ಲ. ಬಾಡಿದ ಮುಖದೊಂದಿಗೆ ತಲೆಯ ಮೇಲೆ ಟವೆಲ್ ಸುತ್ತಿಕೊಂಡು ಎದುರಾಗುವ ಯಾವ ರೈತರನ್ನು ಮಾತಿಗೆ ಎಳೆದರೂ ಮುಗಿಲಿನತ್ತ ಮುಖ ಮಾಡುತ್ತಾರೆ. ಎಲ್ಲರ ಮುಖದಲ್ಲೂ ಸಂಕಟದ ಛಾಯೆ ಎದ್ದು ಕಾಣುತ್ತದೆ.

ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಮೂರ್ನಾಲ್ಕು ತಿಂಗಳುಗಳೇ ಆಗಿವೆ. ನಾಲ್ಕೈದು ಕೊಳವೆ ಬಾವಿಗಳನ್ನು ಕೊರೆದು ಕೈಸುಟ್ಟುಕೊಂಡಿರುವ ರೈತರು ಬೇರೆ ದಾರಿ ಇಲ್ಲದೆ ಕೈಚೆಲ್ಲಿದ್ದಾರೆ. ಕೆಲವರು ಕೊನೆಯ ಪ್ರಯತ್ನವಾಗಿ ದೂರದ ಊರುಗಳಿಂದ ಟ್ಯಾಂಕರ್ ಮೂಲಕ ತಂದು ಅಡಿಕೆ ಗಿಡಗಳ ಬುಡಕ್ಕೆ ನೀರು ಕೊಡುತ್ತಿದ್ದಾರೆ.

ಸುತ್ತಮುತ್ತ ಇದ್ದ ಎಲ್ಲಾ ಕೆರೆಗಳು ಖಾಲಿಯಾಗಿವೆ. ಐತಿಹಾಸಿಕ ಬುಕ್ಕಾಂಬುಧಿ ಕೆರೆ ಕೂಡ ತಳ ಸೇರಿದೆ. ನೀರು ಲಭ್ಯ ಇರುವ ಕೊಳವೆ ಬಾವಿಗಳನ್ನು ಹುಡುಕುವುದೇ ರೈತರಿಗೆ ದೊಡ್ಡ ಸವಾಲಾಗಿದೆ. ಬುಕ್ಕಾಂಬುಧಿ ಬಳಿ ಒಂದೆರಡು ಕೊಳವೆ ಬಾವಿಗಳಲ್ಲಿ ನೀರು ಲಭ್ಯವಾಗುತ್ತಿದ್ದು, ಟ್ಯಾಂಕರ್ ಲಾರಿ ಮತ್ತು ಟ್ರ್ಯಾಕ್ಟರ್‌ಗಳು ಈ ಕೊಳವೆ ಬಾವಿಗಳ ಮುಂದೆ ಸಾಲುಗಟ್ಟಿ ನಿಲ್ಲುವ ದೃಶ್ಯ ಸಾಮಾನ್ಯವಾಗಿದೆ.

ಕೊಳವೆ ಬಾವಿ ಮಾಲೀಕರಿಗೆ, ಟ್ರ್ಯಾಕ್ಟರ್ ಬಾಡಿಗೆ ಸೇರಿ ಒಂದು ಟ್ಯಾಂಕರ್ ನೀರು ತಂದು ಜಮೀನಿಗೆ ಹರಿಸಲು ಕನಿಷ್ಠ ₹1500 ವೆಚ್ಚವಾಗುತ್ತಿದೆ. ಟ್ಯಾಂಕರ್‌ಗಳಲ್ಲಿ ನೀರು ತಂದು ತೋಟಗಳಿಗೆ ಹರಿಸಲು ರೈತರು ಲಕ್ಷಗಟ್ಟಲೆ ಖರ್ಚು ಮಾಡಿದ್ದಾರೆ. ₹6 ಲಕ್ಷ ತನಕ ಖರ್ಚು ಮಾಡಿರುವ ರೈತರು ಇಲ್ಲಿ ಸಿಗುತ್ತಾರೆ.

ಮಳೆರಾಯ ಇನ್ನೊಂದು ವಾರ ಕೈಕೊಟ್ಟರೆ ಈಗ ಲಭ್ಯ ಇರುವ ಕೊಳವೆ ಬಾವಿಗಳು ಬತ್ತುವ ಸಾಧ್ಯತೆ ಇದೆ ಎಂದು ಗಡೀಹಳ್ಳಿಯ ಮಂಜುನಾಥ್ ಆತಂಕ ವ್ಯಕ್ತಪಡಿಸುತ್ತಾರೆ.


ಶಿವನಿ ಬಳಿ ಅಡಿಕೆ ತೋಟಕ್ಕೆ ಟ್ಯಾಂಕರ್‌ನಿಂದ ನೀರುಣಿಸುತ್ತಿರುವ ರೈತ

> **ಟ್ಯಾಂಕರ್ ನೀರಿನಲ್ಲಿ ಜೀವ ಉಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ಈ ಗಿಡಗಳಲ್ಲಿ ಈ ವರ್ಷ ಫಸಲು ನಿರೀಕ್ಷೆ ಮಾಡುವಂತಿಲ್ಲ. ಇನ್ನೊಂದು ವಾರ ಮಳೆ ಬಾರದಿದ್ದರೆ ತೋಟಗಳು ಒಣಗುವುದು ಖಚಿತ**
> **ಶಂಕರ್,** ಹರಳಹಳ್ಳಿ ರೈತ.

ಹವಾನಿಯಂತ್ರಿತ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 10ರಷ್ಟು ಹೆಚ್ಚಳ

ಬಿಸಿಲಿನಿಂದ ರಕ್ಷಿಸಿಕೊಳ್ಳಲು ಎಸಿ ಬಸ್‌ಗಳಿಗೆ ಮೊರೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಸಿಲು ಏರಿದಂತೆ, ಬಿಎಂಟಿಸಿಯ ಹವಾನಿಯಂತ್ರಿತ (ಎಸಿ) ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆಯಲ್ಲೂ ಗಣನೀಯವಾಗಿ ಏರಿಕೆಯಾಗಿದ್ದು, ಕಳೆದ ಮೂರು ತಿಂಗಳಲ್ಲಿ ಎಸಿ ಬಸ್‌ಗಳಲ್ಲಿ ಸಂಚರಿಸುತ್ತಿರುವವರ ಪ್ರಯಾಣಿಕರ ಸಂಖ್ಯೆ ಶೇ 10ರಷ್ಟು ಹೆಚ್ಚಳವಾಗಿದೆ.

ಈ ವರ್ಷ ಫೆಬ್ರುವರಿ ತಿಂಗಳಿಂದಲೇ ಬಿಸಿಲಿನ ಪ್ರಮಾಣ ಹೆಚ್ಚಾಗಿತ್ತು. ಹೀಗಾಗಿ ಜನರು ಆಗಿನಿಂದಲೇ ಹವಾನಿಯಂತ್ರಿತ ಬಸ್‌ಗಳಲ್ಲಿ ಪ್ರಯಾಣಿಸಲು ಆರಂಭಿಸಿದ್ದರು.

'ಹವಾನಿಯಂತ್ರಿತ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಮೂರು ತಿಂಗಳ ಹಿಂದೆಯೇ ಹೆಚ್ಚಾಗತೊಡಗಿತ್ತು. ಮಾರ್ಚ್‌ನಲ್ಲಿ ದಿನಕ್ಕೆ 10 ಸಾವಿರದಷ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದರೆ, ಏಪ್ರಿಲ್‌ನಲ್ಲಿ 30 ಸಾವಿರದಷ್ಟು ಅಧಿಕವಾಗಿದೆ' ಎಂದು ಬಿಎಂಟಿಸಿ ಅಧಿಕಾರಿಗಳು ಅಂಕಿ ಅಂಶ ನೀಡಿದರು.

'ನಾನು ಸಿಕ್ಕಿದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದೆ. ಸಾಮಾನ್ಯ ಬಸ್‌ಗಳಲ್ಲಿ ಜನಸಂದಣಿ ಹೆಚ್ಚು. ಬೇರೆ ಸಮಯದಲ್ಲಿ ಇದೇನು ಸಮಸ್ಯೆ ಎಂದನ್ನಿಸಿರಲಿಲ್ಲ. ಬಿಸಿಲು ಹೆಚ್ಚಾದ ಬಳಿಕ ಜನಸಂದಣಿಯೂ ಹೆಚ್ಚಿರುವ ಸಾಮಾನ್ಯ ಬಸ್‌ಗಳಲ್ಲಿ ಪ್ರಯಾಣಿಸುವುದೇ ಕಷ್ಟವಾಗಿತ್ತು. ಬೆವತು ಹೋಗುತ್ತಿದ್ದೆ. ಅದಕ್ಕಾಗಿ ಎಸಿ ಇರುವ ಓಲ್ವೊ ಬಸ್‌ಗಳನ್ನೇ ಆಯ್ಕೆ ಮಾಡಿಕೊಂಡು ಹೋಗುತ್ತಿದ್ದೇನೆ. ಈ ಬಸ್‌ಗಳಲ್ಲಿ ನೂಕುನುಗ್ಗಲು ಇರುವುದಿಲ್ಲ. ಕೆಲವು ಸಮಯದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರೂ ಎಸಿ ಇರುವುದರಿಂದ ಪ್ರಯಾಣಿಸುವುದೇ ಗೊತ್ತಾಗುವುದಿಲ್ಲ' ಎಂದು ಖಾಸಗಿ ಕಂಪನಿ ಉದ್ಯೋಗಿ ಮಾರತ್‌ಹಳ್ಳಿಯ ಸೃಜನ್ ಅನುಭವ ಹಂಚಿಕೊಂಡರು.

'ನಾನು ಸಿಟಿಯಲ್ಲಿ, ಹೊರಜಿಲ್ಲೆ, ಹೊರರಾಜ್ಯಗಳಿಗೆ ಹೋಗುವಾಗಲೂ ಹವಾನಿಯಂತ್ರಿತ ಬಸ್‌ಗಳಲ್ಲಿಯೇ ಹೋಗುವುದು. ಹೊರಗೆ ಸಿಕ್ಕಾಪಟ್ಟೆ ಬಿಸಿಲಿದೆ. ಇಂಥ ಸಂದರ್ಭದಲ್ಲಿ ಎಸಿ ಇಲ್ಲದ ಬಸ್‌ಗಳಲ್ಲಿ ಹೋದರೆ ಮೈಯೆಲ್ಲ ಒದ್ದೆಯಾಗಿ ಬಿಡುತ್ತದೆ. ಎಸಿ ಬಸ್‌ಗಳಲ್ಲಿ 'ಕಂಫರ್ಟೆಬಲ್' ಅನಿಸುತ್ತದೆ' ಎಂದು ಎಂಜಿನಿಯರ್ ವಿನಯ್ ಕುಮಾರ್ ಎಸ್. ತಿಳಿಸಿದರು.

ಎಸಿ ಬಸ್ ಪ್ರಯಾಣಿಕರು: 'ಬಿಎಂಟಿಸಿ ಬಸ್‌ಗಳಲ್ಲಿ ದಿನಕ್ಕೆ ಸುಮಾರು 25 ಲಕ್ಷ ಪ್ರಯಾಣಿಕರು ಸಂಚರಿಸುತ್ತಾರೆ. ಅದರಲ್ಲಿ ಜನವರಿವರೆಗೆ ದಿನಕ್ಕೆ ಸರಾಸರಿ 3 ಲಕ್ಷ ಪ್ರಯಾಣಿಕರು ಹವಾನಿಯಂತ್ರಿತ ಬಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಬಿಸಿಲು ಹೆಚ್ಚಾಗುತ್ತಿದ್ದಂತೆ ಹವಾನಿಯಂತ್ರಿತ ಬಸ್‌ಗಳಾದ 'ವಾಯು' ಮತ್ತು 'ವಜ್ರ'ಗಳಲ್ಲಿ ಸಂಚರಿಸುವವರು ಹೆಚ್ಚಾಗಿದ್ದಾರೆ' ಎಂದು ಬಿಎಂಟಿಸಿ ಅಧಿಕಾರಿ ಮಾಹಿತಿ ನೀಡಿದರು.

ಬಿಎಂಟಿಸಿ ಕೇಂದ್ರ ವಲಯದಲ್ಲಿ ಕಳೆದ ವರ್ಷದ ನವೆಂಬರ್‌ನಿಂದ ಈ ವರ್ಷದ ಜನವರಿವರೆಗೆ ದಿನಕ್ಕೆ ಸರಾಸರಿ 1.15 ಲಕ್ಷ ಪ್ರಯಾಣಿಕರು ಹವಾನಿಯಂತ್ರಿತ ಬಸ್‌ಗಳಲ್ಲಿ ಸಂಚರಿಸಿದ್ದರೆ, ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ದಿನಕ್ಕೆ 1.27 ಲಕ್ಷ ಜನ ಸಂಚರಿಸಿದ್ದಾರೆ. ಇದೇ ಪ್ರಮಾಣದಲ್ಲಿ ಉಳಿದ ವಲಯಗಳಲ್ಲಿಯೂ ಹೆಚ್ಚಾಗಿದೆ ಎಂದು ಅವರು ವಿವರ ನೀಡಿದರು.

ಅಂಕಿ ಅಂಶಗಳು

755 ಹವಾನಿಯಂತ್ರಿತ ಓಲ್ವೊ ಬಸ್‌ಗಳು

6,202 ಹವಾನಿಯಂತ್ರಿತ ರಹಿತ ಸಾಮಾನ್ಯ ಬಸ್‌ಗಳು



25 ಲಕ್ಷ ಬಿಎಂಟಿಸಿಯಲ್ಲಿ ನಿತ್ಯ ಪ್ರಯಾಣಿಸುವವರು

3.30 ಲಕ್ಷ ಪ್ರಸ್ತುತ ಹವಾನಿಯಂತ್ರಿತ ಬಸ್‌ಗಳಲ್ಲಿ ಪ್ರಯಾಣಿಸುತ್ತಿರುವವರು

ಹಲವು ಜಿಲ್ಲೆಗಳ ಫಲಿತಾಂಶ ಜಿಗಿತ, ಕುಸಿತ

ದ್ವಿತೀಯ ಸ್ಥಾನ ಪಡೆದ ಸಾಧಕರು



ಪೋಷಕರು ಹಾಗೂ ಶಿಕ್ಷಕರ ಸಹಕಾರದಿಂದ ಉತ್ತಮ ಸಾಧನೆ ಮಾಡಲು ಸಾಧ್ಯವಾಯಿತು. ಅಂದಿನ ಪಾಠವನ್ನು ಅಂದೇ ಓದಿ ಮುಗಿಸುತ್ತಿದ್ದೆ. ಮನೆಯಲ್ಲಿ ನಿತ್ಯ ನಾಲ್ಕು ತಾಸು ಅಭ್ಯಾಸ ನಡೆಸುತ್ತಿದ್ದೆ. ಮುಂದೆ ವೈದ್ಯೆಯಾಗುವ ಕನಸು ಇದೆ

ಡಿ.ಎಂ.ಹರ್ಷಿತ, ವಾಸವಿ ಶಾಲೆ ಶಿರಾ



ದಿನವೂ 6 ತಾಸು ಓದುವುದು ನನ್ನ ರೂಢಿ. ಸಂಜೆ 6 ರಿಂದ ರಾತ್ರಿ 12ರವರೆಗೆ ಓದುತ್ತಿದ್ದೆ. ರಾತ್ರಿ ಓದಿದ್ದೆಲ್ಲ ಬೆಳಿಗ್ಗೆ ಪುನರ್ ಮನನ ಮಾಡಿಕೊಳ್ಳುತ್ತಿದ್ದೆ. ಪ್ರಶ್ನೆಪತ್ರಿಕೆಗಳನ್ನು ಪ್ರಾಯೋಗಿಕವಾಗಿ ಬಿಡಿಸಿದೆ ಮತ್ತು ಸರಣಿ ಪರೀಕ್ಷೆಗಳನ್ನು ಗಂಭೀರವಾಗಿ ತೆಗೆದುಕೊಂಡೆ.

ಸಿದ್ಧಾಂತ ನಾಯಿಕಬಾ ಗಡಗೆ, ಆಚಾರ್ಯ ಸುಬಲಸಾಗರ, ಪ್ರೌಢ ವಿದ್ಯಾಮಂದಿರ, ಶೇಡಬಾಳ, ಬೆಳಗಾವಿ



ಪ್ರತಿದಿನ ತರಗತಿಯಲ್ಲಿ ಕಲಿಸಿದ ಪಾಠವನ್ನು ಅದೇ ದಿನ ಮನನ ಮಾಡುತ್ತಿದ್ದೆ. ಶಿಕ್ಷಕರು ಕೊಡುತ್ತಿದ್ದ ಅಸೈನ್‌ಮೆಂಟ್ ಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದೆ. ಜೊತೆಗೆ ನನ್ನಲ್ಲಿರುವ ಆತ್ಮವಿಶ್ವಾಸ, ಉತ್ತಮ ಫಲಿತಾಂಶಕ್ಕೆ ಸಹಕಾರಿಯಾಯಿತು

ಚಿನ್ಮಯ್ ಜಿ.ಕೆ., ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ, ಬೆಳ್ತಂಗಡಿ, ದಕ್ಷಿಣ ಕನ್ನಡ




ನಸುಕಿನ 5 ಗಂಟೆಯಿಂದ 4 ತಾಸು ಓದುತ್ತಿದ್ದೆ. ಶಾಲೆಯಲ್ಲಿ ಕಲಿಸಿದ ಪಾಠ ಹಾಗೂ ಮನೆ ಪಾಠ ಅದೇ ದಿನ ತಪ್ಪದೇ ಪೂರ್ಣಗೊಳಿಸುತ್ತಿದ್ದೆ. ಇದರಿಂದ 624 ಅಂಕ ಪಡೆಯಲು ತುಂಬ ಸಹಕಾರಿಯಾಯಿತು. ಎಂಜಿನಿಯರಿಂಗ್ ಮಾಡುವುದು ಮುಂದಿನ ಗುರಿ

ದರ್ಶನ್ ಭಟ್, ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆ, ಶಿರಸಿ



ತಪ್ಪುಗಳು ಪುನರಾವರ್ತನೆ ಆಗದಂತೆ ಎಚ್ಚರಿಕೆ ವಹಿಸಿದೆ. ನಿಶ್ಚಿತ ಗುರಿಯ ಜೊತೆಗೆ ಪ್ರತಿ ದಿನ ಓದಿದೆ. ಶಿಕ್ಷಕರು ಹೇಳಿಕೊಡುವುದನ್ನು ಪ್ರಾಮಾಣಿಕವಾಗಿ ಪಾಲಿಸಿದೆ. ಎಂಜಿನಿಯರಿಂಗ್ ಮಾಡುವ ಆಸೆಯಿದೆ.

ಶ್ರೀರಾಮ ಕೆ.ಎಂ., ಶ್ರೀಶಾರದಾಂಬಾ ಶಿಕ್ಷಣ ಸಂಸ್ಥೆ, ಭೈರುಂಬೆ, ಶಿರಸಿ



ಬೇಗ ಮಲಗಿ, ಬೇಗ ಏಳು' ನಿಯಮ ಅನುಸರಿಸಿದೆ. ನಸುಕಿನಲ್ಲಿ 3 ಗಂಟೆಗೆ ಓದುತ್ತಿದ್ದೆ. ಪೂರಕ ಪರೀಕ್ಷೆಯನ್ನು ಸ್ಪರ್ಧಾ ಮನೋಭಾವದಿಂದ ಸ್ವೀಕರಿಸಿದ್ದರಿಂದ ಮುಖ್ಯ ಪರೀಕ್ಷೆಗೆ ಸಮಸ್ಯೆಯಾಗಲಿಲ್ಲ.

ಚಿನ್ಮಯಿ ಹೆಗಡೆ, ಸಿದ್ಧಿವಿನಾಯಕ ಪ್ರೌಢಶಾಲೆ, ಗೋಳಿ, ಶಿರಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹಲವು ಜಿಲ್ಲೆಗಳು ಸುಧಾರಣೆ ಕಂಡರೆ, ಕೆಲ ಜಿಲ್ಲೆಗಳು ಕೆಳಕ್ಕೆ ಕುಸಿದಿವೆ. ಉಡುಪಿ ಜಿಲ್ಲೆ ಶೇ 94ರಷ್ಟು ಫಲಿತಾಂಶ ಪಡೆದು ಪ್ರಥಮ ಸ್ಥಾನ ಪಡೆದಿದೆ. ಕಳೆದ ವರ್ಷ 14ನೇ ಸ್ಥಾನದಲ್ಲಿತ್ತು.

ಹಿಂದಿನ ವರ್ಷ 17ನೇ ಸ್ಥಾನದಲ್ಲಿದ್ದ ದಕ್ಷಿಣ ಕನ್ನಡ ಈ ವರ್ಷ 2 ಸ್ಥಾನಕ್ಕೆ (ಶೇ 92.12) ಜಿಗಿದಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪ್ರತಿನಿಧಿಸುವ ಶಿವಮೊಗ್ಗ ಜಿಲ್ಲೆ 28ನೇ ಸ್ಥಾನದಿಂದ 3ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

2023ರ ಫಲಿತಾಂಶದಲ್ಲಿ ಅಗ್ರಸ್ಥಾನದಲ್ಲಿದ್ದ ಜಿಲ್ಲೆಗಳು ಈ ಬಾರಿ ಕುಸಿತ ಕಂಡಿವೆ. ಮೊದಲ ಸ್ಥಾನದಲ್ಲಿದ್ದ ಚಿತ್ರದುರ್ಗ 21ನೇ ಸ್ಥಾನಕ್ಕೆ ಕುಸಿದಿದೆ. ದ್ವಿತೀಯ ಸ್ಥಾನದಲ್ಲಿದ್ದ ಮಂಡ್ಯ 19ಕ್ಕೆ, 3ನೇ ಸ್ಥಾನದಲ್ಲಿದ್ದ ಹಾಸನ 6ನೇ ಸ್ಥಾನಕ್ಕೆ, 6ನೇ ಸ್ಥಾನದಲ್ಲಿದ್ದ ಕೋಲಾರ 19ಕ್ಕೆ, 10ರಲ್ಲಿದ್ದ ವಿಜಯನಗರ 27ಕ್ಕೆ, 7ರಲ್ಲಿದ್ದ ಚಾಮರಾಜನಗರ 24ನೇ ಸ್ಥಾನಕ್ಕೆ ಕುಸಿದಿವೆ. ಕಳೆದ ಬಾರಿ ಕೊನೆಯ ಸ್ಥಾನದಲ್ಲಿದ್ದ ಯಾದಗಿರಿ ಈ ಬಾರಿಯೂ ಅದೇ ಸ್ಥಾನದಲ್ಲಿದೆ.

ಯಾವುದಕ್ಕೆ, ಯಾವಾಗ ಕೊನೆಯ ದಿನ?: ಉತ್ತರ ಪತ್ರಿಕೆಗಳ ಮರು ಎಣಿಕೆ, ಮರು ಮೌಲ್ಯಮಾಪನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 13ರಿಂದ 22ರವರೆಗೆ ಅವಕಾಶ ನೀಡಲಾಗಿದೆ. ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು ಮೇ 9ರಿಂದ 16ರವರೆಗೆ, ಚಲನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಭರಿಸುವ ವಿದ್ಯಾರ್ಥಿಗಳು ಮೇ 17ರ ಒಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ 080-23310075, 23310076 ಸಂಪರ್ಕಿಸಬಹುದು.

ನೂತನ ವ್ಯವಸ್ಥೆಗೆ ಶಿಕ್ಷಕರು, ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಹೊಂದಿಕೊಳ್ಳಲಿದ್ದು, ಕೃಪಾಂಕ ನೀಡುವಿಕೆ ಹಿಂದೆ ಇದ್ದಂತೆ ಶೇ 10ಕ್ಕೆ ಸೀಮಿತವಾಗಲಿದೆ

ರಿತೇಶ್‌ಕುಮಾರ್ ಸಿಂಗ್, ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ವೇಳಾಪಟ್ಟಿ

ಜೂನ್ 7–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 8–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 10–ಗಣಿತ, 11–ಅರ್ಥಶಾಸ್ತ್ರ, ಎಂಜನಿಯರಿಂಗ್ ವಿಷಯಗಳು, 12–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 13–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 14–ಸಮಾಜ ವಿಜ್ಞಾನ

ಮತ್ತೆ ಬಾಲಕಿಯರದೇ ಪಾರಮ್ಯ

ಒಂದನೇ ಪುಟದಿಂದ

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕು ಮೆಳ್ಳಿಗೇರಿಯ ಸರ್ಕಾರಿ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಕೊಣ್ಣೂರ 625ಕ್ಕೆ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಏಳು ವಿದ್ಯಾರ್ಥಿಗಳು 624 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. 14 ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದಿದ್ದಾರೆ. 785 ಸರ್ಕಾರಿ ಶಾಲೆಗಳು ಸೇರಿದಂತೆ 2,288 ಶಾಲೆಗಳು ಶೇ 100ರಷ್ಟು ಫಲಿತಾಂಶ ಪಡೆದಿವೆ. 62 ಖಾಸಗಿ ಶಾಲೆಗಳು ಸೇರಿದಂತೆ 78 ಶಾಲೆಗಳಿಗೆ ಶೂನ್ಯ ಫಲಿತಾಂಶ ಬಂದಿದೆ.

ಫಲಿತಾಂಶದಲ್ಲಿ ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳು ಕ್ರಮವಾಗಿ ಒಂದು, ಎರಡು ಮತ್ತು ಮೂರನೇ ಸ್ಥಾನ ಪಡೆದರೆ, ಯಾದಗಿರಿ ಕೊನೆಯ ಸ್ಥಾನದಲ್ಲಿದೆ. ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳು ಮೊದಲ 10ರ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ.

ಬಾಲಕಿಯರಿಗೆ ಮೆರುಗು: ಒಟ್ಟಾರೆ ಫಲಿತಾಂಶದ ಪ್ರಮಾಣಕ್ಕಿಂತ ಬಾಲಕಿಯರು ಶೇ 7.71ರಷ್ಟು ಹೆಚ್ಚು ತೇರ್ಗಡೆಯಾಗಿದ್ದಾರೆ. ಬಾಲಕರ ತೇರ್ಗಡೆ ಪ್ರಮಾಣ ಶೇ 65.90 ಇದ್ದರೆ, ಬಾಲಕಿಯರು ಶೇ 81.11 ಫಲಿತಾಂಶ ಪಡೆದಿದ್ದಾರೆ. ಈ ಬಾರಿಯೂ ಗ್ರಾಮೀಣ ವಿದ್ಯಾರ್ಥಿಗಳೇ ಮುಂದಿದ್ದರೂ, ಕಳೆದ ಬಾರಿಗೆ ಹೋಲಿಸಿದರೆ ಅಂತರ ಕಡಿಮೆಯಾಗಿದೆ. ಶೇ 72.83 ನಗರ ಪ್ರದೇಶದ, ಶೇ 74.17 ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ದೃಷ್ಟಿ, ಶ್ರವಣ ದೋಷ, ಮಂದಗತಿಯ ಕಲಿಕೆಯ ಸಾಮರ್ಥ್ಯ ಸೇರಿದಂತೆ ವಿವಿಧ ನ್ಯೂನತೆ ಇರುವ 4,660 ಮಕ್ಕಳು ಪರೀಕ್ಷೆ ಬರೆದಿದ್ದು, 2,960 ಮಕ್ಕಳು ಉತ್ತೀರ್ಣರಾಗಿದ್ದಾರೆ.

ಜೂನ್ 7ರಿಂದ 14ರವರೆಗೆ ಎಸ್‌ಎಸ್‌ಎಲ್‌ಸಿ ಎರಡನೇ ಪರೀಕ್ಷೆ ನಡೆಯಲಿದೆ. ನೋಂದಣಿಗೆ ಮೇ 16 ಕೊನೆಯ ದಿನ. ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಒಂದು ತಿಂಗಳು ಪರಿಹಾರ ಬೋಧನೆಯ ವ್ಯವಸ್ಥೆ ಮಾಡಲಾಗಿದೆ.

ಅಂಕಿ ಅಂಶಗಳು

8,59,967 ಪರೀಕ್ಷೆಗೆ ಹಾಜರಾದವರು	6,31,204 ಉತ್ತೀರ್ಣರಾದವರು
4,36,138 ಪರೀಕ್ಷೆ ಬರೆದ ಬಾಲಕರು	2,87,416 ತೇರ್ಗಡೆಯಾದ ಬಾಲಕರು
4,23,829 ಪರೀಕ್ಷೆ ಬರೆದ ಬಾಲಕಿಯರು	3,43,788 ತೇರ್ಗಡೆಯಾದ ಬಾಲಕಿಯರು

ಮೊದಲ 10 ಶೈಕ್ಷಣಿಕ ಜಿಲ್ಲೆಗಳು	ಫಲಿತಾಂಶ (ಶೇಕಡವಾರು)
ಉಡುಪಿ	94
ದಕ್ಷಿಣಕನ್ನಡ	92.12
ಶಿವಮೊಗ್ಗ	88.67
ಕೊಡಗು	88.67
ಉತ್ತರ ಕನ್ನಡ	86.54
ಹಾಸನ	86.28
ಮೈಸೂರು	85.5
ಶಿರಸಿ	84.64
ಬೆಂಗಳೂರು ಗ್ರಾಮಾಂತರ	83.67
ಚಿಕ್ಕಮಗಳೂರು	83.39

'ಒತ್ತಡರಹಿತ ಓದಿನಿಂದ ಯಶಸ್ಸು ಗಳಿಸಿದೆ'

• ಬಸವರಾಜ ಹವಾಲ್ದಾರ

ಬಾಗಲಕೋಟೆ: 'ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಜೀವನದ ಪ್ರಮುಖ ಪರೀಕ್ಷೆಯಾಗಿದ್ದರೂ ನಾನು ಒತ್ತಡ ಮಾಡಿಕೊಳ್ಳಲಿಲ್ಲ. ಎಷ್ಟೇ ಸವಾಲುಗಳಿದ್ದರೂ ಎಲ್ಲವನ್ನೂ ಸಮಾಧಾನವಾಗಿ ನಿಭಾಯಿಸುತ್ತ ಓದಿಕೊಂಡೆ. ಹೀಗಾಗಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು' ಎಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸಾಧಕಿ ಅಂಕಿತಾ ಬಸಪ್ಪ ಕೊಣ್ಣೂರ ಹೇಳಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 625 ಅಂಕ ಗಳಿಸಿ ರಾಜ್ಯಕ್ಕೆ ಮೊದಲ ಸ್ಥಾನ ಗಳಿಸಿರುವ ಅವರು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ವಜ್ಜರಮಟ್ಟಿ ಗ್ರಾಮದವರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡಿದ್ದು ಮತ್ತು ಯಶಸ್ಸು ಗಳಿಸಿದ್ದು ಹೇಗೆ ಎಂಬುದರ ಬಗ್ಗೆ ಪ್ರಜಾವಾಣಿ ಜೊತೆ ಮಾತನಾಡಿದ ಅವರು, 'ಶಾಲೆಯಲ್ಲಿನ ಸೌಲಭ್ಯ ಗಳನ್ನು ಸದ್ಬಳಕೆ ಮಾಡಿಕೊಂಡೆ. ಶಿಕ್ಷಕರು, ತಂದೆ-ತಾಯಿಯ ಮಾರ್ಗದರ್ಶನದಿಂದ ಪ್ರೇರಣೆ ಸಿಕ್ಕಿತು' ಎಂದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ ಅಂಕಿತಾ ಕೊಣ್ಣೂರ ಅವರಿಗೆ ಸಿಹಿ ತಿನ್ನಿಸಿದ ತಾಯಿ ಗೀತಾ ಕೊಣ್ಣೂರ, ತಂದೆ ಬಸಪ್ಪ ಕೊಣ್ಣೂರ

ಪ್ರಜಾವಾಣಿ ಸಂದರ್ಶನ

• **ಹೇಗೆ ಅಧ್ಯಯನ ಮಾಡುತ್ತಿದ್ದೀರಿ?**

–ನಿತ್ಯ ಮೂರುವರೆಯಿಂದ ನಾಲ್ಕು ಗಂಟೆ ಮಾತ್ರ ಅಧ್ಯಯನ ಮಾಡುತ್ತಿದ್ದೆ. ಅಂದಿನ ಪಾಠವನ್ನು ಅಂದೇ ಪೂರ್ಣಗೊಳಿಸುತ್ತಿದ್ದೆ. ಸಮಯ ಪಾಲನೆ ಜೊತೆಗೆ ಶ್ರದ್ಧೆ ಮತ್ತು ಬದ್ಧತೆಯಿಂದ ತೊಡಗಿಸಿಕೊಂಡೆ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಬೇಕು ಎಂಬ ಗುರಿ ಇಟ್ಟುಕೊಂಡೆ ಓದಿದೆ.

• **ರಾಜ್ಯಕ್ಕೆ ಮೊದಲ ಸ್ಥಾನ ಗಳಿಸುವೆ ಎಂಬ ನಿರೀಕ್ಷೆ ಇತ್ತೇ?**

–ಖಂಡಿತ ಇತ್ತು. ನನ್ನ ಕಠಿಣ ಪರಿಶ್ರಮದ ಮೇಲೆ ನಂಬಿಕೆ ಇತ್ತು. ಪರೀಕ್ಷೆ ಮುಗಿದ ನಂತರ ಆತ್ಮವಿಶ್ವಾಸ ಹೆಚ್ಚಾಗಿತ್ತು.

• **ತಂದೆ–ತಾಯಿಯವರ ನಿರೀಕ್ಷೆ ಏನಾಗಿತ್ತು?**

–ತಂದೆ ಶಾಲೆ ಓದಿಲ್ಲ. ಒಕ್ಕಲುತನ ಮಾಡಿಕೊಂಡಿದ್ದಾರೆ. ತಾಯಿ ಪಿಯುಸಿಯವರೆಗೆ ಓದಿದ್ದಾರೆ. ತಾವು ಮಾಡದ ಸಾಧನೆಯನ್ನು ಮಗಳು ಮಾಡಲಿ ಎಂಬುದು ಅವರ ನಿರೀಕ್ಷೆಯಾಗಿತ್ತು. ಅದನ್ನು ಮಾಡಿದ್ದೇನೆ.

• **ಮುಂದೆ ಏನಾಗಬೇಕು ಎಂಬ ಗುರಿ ಇದೆ?**

–ಪಿಯುಸಿ ವಿಜ್ಞಾನದ ನಂತರ ಐಐಟಿಯಲ್ಲಿ ಎಂಜಿನಿಯರಿಂಗ್ ಪೂರ್ಣಗೊಳಿಸಿ ಯುಪಿಎಸ್‌ಸಿ ಪರೀಕ್ಷೆ ಪಾಸಾಗಿ, ಐಎಎಸ್ ಅಧಿಕಾರಿಯಾಗಿ ಜನರ ಸೇವೆ ಮಾಡುವ ಗುರಿಯಿದೆ.

• **ಗ್ರಾಮೀಣ ಪ್ರದೇಶದಲ್ಲಿ ಇದ್ದುಕೊಂಡು ಇಂತಹ ಸಾಧನೆ ಹೇಗೆ ಸಾಧ್ಯವಾಯಿತು?**

–ಸಾಧನೆಗೆ ಪ್ರದೇಶ ಮುಖ್ಯವಲ್ಲ. ಸಾಧನೆ ಮಾಡಲು ಮನಸ್ಸು ಮುಖ್ಯ. ಅದಕ್ಕೆ ತಕ್ಕದಾದ ಪರಿಶ್ರಮವೂ ಅಷ್ಟೇ ಅಗತ್ಯ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೇರ್ಗಡೆಯಾದ ತಾಯಿ–ಮಗ

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ): ತಾಲ್ಲೂಕಿನ ಚಿನ್ನಳ್ಳಿಯ ತಾಯಿ ಟಿ.ಆರ್. ಜ್ಯೋತಿ ಮತ್ತು ಮಗ ಸಿ.ಬಿ. ನಿತಿನ್ ಒಟ್ಟಿಗೇ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾಗಿದ್ದಾರೆ.

ಸಕಲೇಶಪುರ ತಾಲ್ಲೂಕು ಬಾಳ್ಳುಪೇಟೆ ಸಿದ್ದಣ್ಣಯ್ಯ ಹೈಸ್ಕೂಲ್‌ನಲ್ಲಿ ಪುನರಾವರ್ತಿತ ಅಭ್ಯರ್ಥಿಯಾಗಿ ಪರೀಕ್ಷೆ ಬರೆದಿದ್ದ ಟಿ.ಆರ್. ಜ್ಯೋತಿ ಅವರು 625ಕ್ಕೆ 250 ಅಂಕ ಗಳಿಸಿ ತೇರ್ಗಡೆಯಾಗಿದ್ದಾರೆ. ಬಾಳ್ಳುಪೇಟೆ ವಿವೇಕ ವಿದ್ಯಾಸಂಸ್ಥೆ ಶಾಲೆಯಲ್ಲಿ ಓದುತ್ತಿದ್ದ ಸಿ.ಬಿ. ನಿತಿನ್ 582 ಅಂಕ ಗಳಿಸಿ ತೇರ್ಗಡೆಯಾಗಿದ್ದಾರೆ. ಇಬ್ಬರೂ ತೇರ್ಗಡೆಯಾಗಿರುವುದು ಮನೆಯ ಸಂಭ್ರಮವನ್ನು ಇಮ್ಮಡಿಸಿದೆ.



ಟಿ.ಆರ್. ಜ್ಯೋತಿ



ಸಿ.ಬಿ. ನಿತಿನ್

'ಪ್ರಜಾವಾಣಿ' ಜೊತೆ ಮಾತನಾಡಿದ ಜ್ಯೋತಿ, 'ಗ್ರಾಮದಲ್ಲಿ ಹಾಲಿನ ಡೇರಿ ತೆರೆಯಬೇಕೆಂಬ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದೆ. ಎರಡನೇ ಪ್ರಯತ್ನದಲ್ಲಿ ತೇರ್ಗಡೆಯಾಗಿದ್ದೇನೆ. ಪಿಯುಸಿ ಪರೀಕ್ಷೆ ಬರೆಯಲು ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಪತಿ ಭುವನೇಶ್ ಬೇಕರಿ ಇಟ್ಟುಕೊಂಡಿದ್ದಾರೆ. ನಾನು ಉತ್ತೀರ್ಣಳಾಗಿರುವುದು ಜೀವನದ ಸಾಧನೆಗೆ ಮೈಲಿಗಲ್ಲಾಗಿದೆ' ಎಂದರು.

ಅನಾಥ, ಮನೆಗೆಲಸದ ಬಾಲಕಿಯರ ಸಾಧನೆ

ಬೆಂಗಳೂರು: ಪೋಷಕರಿಂದ ದೂರವಾಗಿ ಸ್ಪರ್ಶ ಟ್ರಸ್ಟ್‌ನಲ್ಲಿ ಆಶ್ರಯ ಪಡೆದು, ಸರ್ಕಾರಿ ಶಾಲೆಯಲ್ಲಿ ಓದಿದ ಇಬ್ಬರು ಬಾಲಕಿಯರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.



ಸ್ವಪ್ನಾಲಿ



ರೇಣುಕಾ

ರಾಯಚೂರಿನ ರೇಣುಕಾ ಅವರು ತಂದೆಯ ಮರಣಾನಂತರ ಐದು ವರ್ಷದವರಿದ್ದಾಗ ಸ್ಪರ್ಶ ಟ್ರಸ್ಟ್‌ಗೆ ಸೇರ್ಪಡೆಯಾದರು. ಟ್ರಸ್ಟ್ ಆಶ್ರಯದಲ್ಲೇ ದೇವನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಓದಿದ ಅವರು 625ಕ್ಕೆ 511 ಅಂಕ ಗಳಿಸಿದ್ದಾರೆ. ಮಹಾರಾಷ್ಟ್ರದ ಸ್ವಪ್ನಾಲಿ ಮಹಾದೇವ್ ವಾಗ್ಮೋರ್ ಅವರು ತಂದೆ ತೊರೆದಿದ್ದರಿಂದಾಗಿ ತಾಯಿಯ ಜತೆ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಮನೆಕೆಲಸ ಮಾಡುತ್ತಿದ್ದರು. 8ನೇ ತರಗತಿ ಓದಿದ್ದ ಅವರನ್ನು ಟ್ರಸ್ಟ್ ನೇರವಾಗಿ 10ನೇ ತರಗತಿಗೆ ದಾಖಲು ಮಾಡಿತ್ತು. ದೇವನಹಳ್ಳಿ ಸರ್ಕಾರಿ ಶಾಲೆಯಲ್ಲಿ ಓದಿ 482 ಅಂಕ ಗಳಿಸಿದ್ದಾರೆ. ಕನ್ನಡ ಕಲಿತಿದ್ದಾರೆ.

ಕಲ್ಯಾಣ ಕರ್ನಾಟಕ: ಸೊನ್ನೆ ಸುತ್ತಿದ 44 ಶಾಲೆಗಳು

ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕಲಬುರಗಿ ವಿಭಾಗದ ಏಳು ಜಿಲ್ಲೆಗಳ 44 ಶಾಲೆಗಳು 'ಶೂನ್ಯ' ಫಲಿತಾಂಶ ದಾಖಲಿಸಿವೆ.

ರಾಜ್ಯದಾದ್ಯಂತ ಒಟ್ಟು 78 ಶಾಲೆಗಳು 'ಸೊನ್ನೆ' ಸುತ್ತಿದ್ದು, ಅವುಗಳಲ್ಲಿ ಕಲಬುರಗಿ ವಿಭಾಗದ್ದೇ 44 ಶಾಲೆಗಳಿವೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಕೆಆರ್‌ಡಿಬಿ) 'ಅಕ್ಷರ ಮಿತ್ರ'ದಡಿ ಅತಿಥಿ ಶಿಕ್ಷಕರ ನೇಮಕ ಹಾಗೂ ಪರೀಕ್ಷೆಗೆ ನೆರವಾಗಲು ಮಕ್ಕಳಿಗೆ 'ಕಲಿಕಾ ಆಸರೆ' ಪುಸ್ತಕಗಳ ವಿತರಣೆಯಂತಹ ಉಪಕ್ರಮಗಳನ್ನು ಕೈಗೊಂಡಿದ್ದರೂ ಫಲಿತಾಂಶದಲ್ಲಿ ಸುಧಾರಣೆ ಕಂಡಿಲ್ಲ.

ಕಲಬುರಗಿ ಜಿಲ್ಲೆಯಲ್ಲಿ 18 ಶಾಲೆಗಳು 'ಶೂನ್ಯ' ಸುತ್ತಿದ್ದು, ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ಉಳಿದಂತೆ ಬೀದರ್‌ನಲ್ಲಿ 9, ಯಾದಗಿರಿಯಲ್ಲಿ 7, ರಾಯಚೂರಿನಲ್ಲಿ 5, ಕೊಪ್ಪಳ ಮತ್ತು ವಿಜಯನಗರದಲ್ಲಿ ತಲಾ ಎರಡು ಹಾಗೂ ಬಳ್ಳಾರಿಯಲ್ಲಿ ಒಂದು ಶಾಲೆ 'ಶೂನ್ಯ' ಫಲಿತಾಂಶ ಪಡೆದಿವೆ. ಜಿಲ್ಲಾವಾರು ಶ್ರೇಣಿಯಲ್ಲಿ ಕೊನೆಯ ಆರು ಸ್ಥಾನಗಳೂ 'ಕಲ್ಯಾಣ ಕರ್ನಾಟಕ'ದ ಜಿಲ್ಲೆಗಳ ಪಾಲಾಗಿವೆ.

'ಶೂನ್ಯ' ಫಲಿತಾಂಶಕ್ಕೆ ಕಾರಣವೇನು?: ಸಾಮೂಹಿಕ ನಕಲು ತಡೆ ಹಾಗೂ ಪಾರದರ್ಶಕ ಪರೀಕ್ಷೆಗಾಗಿ ಇದೇ ಮೊದಲ ಬಾರಿಗೆ ಪರೀಕ್ಷಾ ಕೊಠಡಿಗಳಲ್ಲಿನ ವಿದ್ಯಮಾನಗಳ ಮೇಲೆ ಸಿಸಿಟಿವಿ ಕ್ಯಾಮೆರಾ ಹಾಗೂ ಸಿಸಿಟಿವಿ ವೆಬ್‌ಕಾಸ್ಟಿಂಗ್ ಕಣ್ಗಾವಲು ಇರಿಸಲಾಗಿತ್ತು. ಇದು ಸಾಮೂಹಿಕ ನಕಲು ತಡೆಯುವಲ್ಲಿ ಯಶಸ್ವಿಯಾಯಿತು. ಕಲಬುರಗಿ ಭಾಗದಲ್ಲಿ ಕನಿಷ್ಠ 10 ವರ್ಷ ನಿರಂತರವಾಗಿ ಸೇವೆ ಸಲ್ಲಿಸಿದ 2,504 ಅನುಭವಿ ಶಿಕ್ಷಕರು ಬೇರೆ ಬೇರೆ ವಿಭಾಗಗಳಿಗೆ ವರ್ಗಾವಣೆಯಾಗಿ ಹೋದರು. ಆದರೆ, ಅನ್ಯ ವಿಭಾಗಗಳಿಂದ ಕಲಬುರಗಿ ವಿಭಾಗಕ್ಕೆ ಮೂರಂಕಿಯಷ್ಟು ಶಿಕ್ಷಕರು ಮಾತ್ರ ಬಂದರು. ಹೀಗಾಗಿ, ಮಕ್ಕಳಿಗೆ ನುರಿತ ಶಿಕ್ಷಕರಿಂದ ಪಾಠ ಸಿಗಲಿಲ್ಲ. ಮೂಲಸೌಕರ್ಯ ಕೊರತೆಯೂ ಫಲಿತಾಂಶದ ಹಿನ್ನಡೆಗೆ ಕಾರಣ' ಎನ್ನುತ್ತಾರೆ ಶಿಕ್ಷಕರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕಲಬುರಗಿ ವಿಭಾಗದ ಹೆಚ್ಚುವರಿ ಆಯುಕ್ತ ಆಕಾಶ್ ಶಂಕರ್, 'ಫಲಿತಾಂಶ ಕುಸಿತಕ್ಕೆ ವೆಬ್‌ಕಾಸ್ಟಿಂಗ್ ಮುಖ್ಯ ಕಾರಣ; ಉತ್ತಮ ಫಲಿತಾಂಶ ಬಾರದ ಶಾಲೆಗಳು ಮತ್ತು ವಲಯಗಳನ್ನು ಗುರುತಿಸಿ, ಅಲ್ಲಿ ಬೋಧನಾ ಕ್ರಮಗಳನ್ನು ಚುರುಕುಗೊಳಿಸುತ್ತೇವೆ' ಎಂದು ತಿಳಿಸಿದರು.

ಸುಧಾ, ಮಯೂರ ಓದಿರಿ

ಅಂಧ ವಿದ್ಯಾರ್ಥಿನಿಗೆ ಶೇ 94.88

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರದ ಸಿದ್ಧಗಂಗಾ ಪ್ರೌಢಶಾಲೆಯ ಅಂಧ ವಿದ್ಯಾರ್ಥಿನಿ ಯುಕ್ತಿ ಪಿ., ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 593 ಅಂಕಗಳನ್ನು (ಶೇ 94.88) ಪಡೆಯುವ ಮೂಲಕ ಸಾಧನೆ ಮಾಡಿದ್ದಾಳೆ.

ಹುಟ್ಟಿನಿಂದಲೇ ಪೂರ್ಣ ಅಂಧೆಯಾಗಿರುವ ಯುಕ್ತಿ, ಬೆಂಗಳೂರಿನ ಜ್ಯೋತಿ ಸೇವಾ ಅಂಧರ ಶಾಲೆಯಲ್ಲಿ 7ನೇ ತರಗತಿವರೆಗೆ ಓದಿದ್ದಾಳೆ. 8ನೇ ತರಗತಿಯಿಂದ ಸಿದ್ಧಗಂಗಾ ಪ್ರೌಢಶಾಲೆಯಲ್ಲಿ ಅಭ್ಯಾಸ ನಡೆಸುತ್ತಿದ್ದಳು.



ಯುಕ್ತಿ ಪಿ.

'ಅಂಧರ ಶಾಲೆಗೆ ಸೀಮಿತವಾಗದೇ, ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಬೆರೆಯಬೇಕೆಂಬ ಉದ್ದೇಶದಿಂದ ಸಿದ್ಧಗಂಗಾ ಶಾಲೆಗೆ ಸೇರಿದ್ದೆ. ಶಾಲೆಯಿಂದ ಲ್ಯಾಪ್‌ಟಾಪ್ ನೀಡಲಾಗಿತ್ತು' ಎಂದು ಯುಕ್ತಿ ತಿಳಿಸಿದರು.

ಎನ್.ವಿ.ಡಿ.ಎ. ಸ್ಕ್ರೀನ್ ರೀಡರ್ ಸಾಫ್ಟ್‌ವೇರ್ ಮೂಲಕ ಅಧ್ಯಯನ ನಡೆಸಿದ್ದೆ. ಸ್ಕ್ರೈಬ್ ನೆರವಿನೊಂದಿಗೆ ಪರೀಕ್ಷೆ ಎದುರಿಸಿದ್ದೆ. ಫಲಿತಾಂಶ ಖುಷಿ ನೀಡಿದೆ. ಇಂಗ್ಲಿಷ್ ಪ್ರಾಧ್ಯಾಪಕಿ ಆಗುವ ಕನಸಿದೆ' ಎಂದು ಯುಕ್ತಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬಿಸಿಲು: ಖಾತ್ರಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ಕಿಟ್ಟಾ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿದ್ದ ಮಲ್ಲಪ್ಪ ತೊಗರಖೇಡೆ (58) ಗುರುವಾರ ಬಿಸಿಲಿನ ತಾಪ ತಾಳಲಾರದೆ ಮೃತಪಟ್ಟಿದ್ದಾರೆ.

ಗ್ರಾಮದ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದಾಗ ಪ್ರಜ್ಞೆತಪ್ಪಿ ಬಿದ್ದಿದ್ದ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದ್ದರೂ ಸ್ಪಂದಿಸಲಿಲ್ಲ. ತಾಲ್ಲೂಕು ಪಂಚಾಯಿತಿ ಇಒ ರಮೇಶ ಸುಲ್ಫೆ ಮತ್ತು ಸಹಾಯಕ ನಿರ್ದೇಶಕ ಸಂತೋಷಕುಮಾರ ಚವಾಣ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಒಂದು ವಾರ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಇನ್ನೂ ಒಂದು ವಾರ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ವರದಿ ಮಾಡಿದೆ.

ಮೇ 10ರಂದು ಚಾಮರಾಜನಗರ, ಮೈಸೂರು, ಮಂಡ್ಯ, ಕೋಲಾರ, ಹಾಸನ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಿರುಗಾಳಿಯೊಂದಿಗೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ.

ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಚಿಕ್ಕಮಗಳೂರು, ಹಾಸನ, ಕೊಡಗು, ತುಮಕೂರು ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆ ಬೀಳಲಿದೆ. ಬಳ್ಳಾರಿ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ದಾವಣಗೆರೆ, ರಾಮನಗರ, ಶಿವಮೊಗ್ಗ, ವಿಜಯನಗರ, ರಾಯಚೂರು, ಕೊಪ್ಪಳ, ಬಾಗಲಕೋಟೆ, ವಿಜಯಪುರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಲವೆಡೆ ಸ್ವಲ್ಪ ಮಳೆ ಬರಲಿದೆ.

ಮೇ 11ರಂದು ಈ ಜಿಲ್ಲೆಗಳಲ್ಲದೇ ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ಉಡುಪಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಮುಂದಿನ ಒಂದು ವಾರ ಪ್ರತಿದಿನ ಸಂಜೆಯ ಹೊತ್ತಿಗೆ ಮಳೆ ಬರುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಮುಂದಿನ 24 ಗಂಟೆಗಳಲ್ಲಿ ತಾಪಮಾನದಲ್ಲಿ ಹೆಚ್ಚಿನ ಬದಲಾವಣೆ ಇರುವುದಿಲ್ಲ. ಬಳಿಕ ತಾಪಮಾನ 2ರಿಂದ 4 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆಯಿದೆ. ತಾಪಮಾನ ಗರಿಷ್ಠ 34 ಡಿಗ್ರಿ ಸೆಲ್ಸಿಯಸ್, ಕನಿಷ್ಠ 22 ಡಿಗ್ರಿ ಸೆಲ್ಸಿಯಸ್ ಇರಲಿದೆ.

ಮಳೆ ಪ್ರಮಾಣ: ಕಲಬುರಗಿ ಜಿಲ್ಲೆಯ ಸೇಡಂನಲ್ಲಿ 6 ಸೆಂ.ಮೀ., ಬೀದರ್, ಚಾಮರಾಜನಗರ ಜಿಲ್ಲೆಯ ಬೇಗೂರು, ಕೊಡಗು ಜಿಲ್ಲೆಯ ನಾಪೊಕ್ಲುಗಳಲ್ಲಿ 4.ಸೆಂ.ಮೀ., ಮಂಡ್ಯ ಜಿಲ್ಲೆಯ ಮದ್ದೂರು, ಕೃಷ್ಣರಾಜಸಾಗರದಲ್ಲಿ 3 ಸೆಂ.ಮೀ. ಮಳೆಯಾಗಿದೆ. ರಾಮನಗರ, ಮಂಡ್ಯ, ಕೊಡಗು ಜಿಲ್ಲೆಯ ಭಾಗಮಂಡಲ, ಬೆಂಗಳೂರು ನಗರ, ಮೈಸೂರು, ನಂಜನಗೂಡು, ಯಾದಗಿರಿ ಜಿಲ್ಲೆಯ ಸುರಪುರಗಳಲ್ಲಿ 2 ಸೆಂ.ಮೀ. ಮಳೆಯಾಗಿರುವುದು ದಾಖಲಾಗಿದೆ.

ಕೊಡಗಿನಲ್ಲಿ ವರ್ಷಧಾರೆ

ಮಡಿಕೇರಿ: ಕೊಡಗು ಜಿಲ್ಲೆಯ ಅಲ್ಲಲ್ಲಿ ಗುರುವಾರವೂ ಬಿರುಸಿನಿಂದ ಮಳೆ ಸುರಿದಿದೆ. ಮಡಿಕೇರಿ, ಸುಂಟಿಕೊಪ್ಪ, ನಾಪೋಕ್ಲು ಭಾಗದಲ್ಲಿ ಧಾರಾಕಾರ ಮಳೆಯಾಗಿದೆ. ಗೋಣಿಕೊಪ್ಪಲು ಭಾಗದಲ್ಲಿ ಸಾಧಾರಣ ಮಳೆ ಸುರಿದಿದೆ.

ಗುಡುಗು ಸಿಡಿಲು, ಬಿರುಗಾಳಿಯೊಂದಿಗೆ ಸುರಿದ ಮಳೆಯು ಬಿಸಿಲ ಬೇಗೆಯನ್ನು ಕಡಿಮೆ ಮಾಡಿತು. ಏಳನೇ ಹೊಸಕೋಟೆ, ಕೆದಕಲ್, ಗದ್ದೆಹಳ್ಳ ಭಾಗದಲ್ಲಿ ಹೆಚ್ಚು ಮಳೆ ಸುರಿದಿದೆ.

ನಾಪೋಕ್ಲು ವ್ಯಾಪ್ತಿಯಲ್ಲಿ ಸುರಿದ ಭಾರಿ ಗಾಳಿ ಮಳೆಗೆ ಹಲವೆಡೆ ಹಾನಿ ಸಂಭವಿಸಿದೆ. ಪಟ್ಟಣದಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿದೆ. ಗ್ರಾಮೀಣ ಪ್ರದೇಶದಲ್ಲಿ ಗಾಳಿಗೆ ಮರದ ರೆಂಬೆಗಳು ಮುರಿದುಬಿದ್ದಿವೆ. ಕೆಲವು ಭಾಗಗಳಲ್ಲಿ ವಿದ್ಯುತ್ ಕಂಬಗಳು ತುಂಡಾಗಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

(ರಾಯಚೂರು ವರದಿ): ಜಿಲ್ಲೆಯ ರಾಯಚೂರು ಗ್ರಾಮೀಣ, ಕವಿತಾಳ ಸೇರಿದಂತೆ ವಿವಿಧೆಡೆ ಗುರುವಾರ ಸಾಧಾರಣ ಮಳೆಯಾಗಿದೆ.

ಕವಿತಾಳದಲ್ಲಿ ಬಿರುಗಾಳಿ, ಗುಡುಗು ಸಹಿತ ಸುಮಾರು 20 ನಿಮಿಷ ಮಳೆಯಾಗಿದೆ. ಮಾನ್ವಿಯಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಮಳೆಯಿಂದಾಗಿ ವಾತಾವರಣ ತುಸು ತಂಪಾಗಿದೆ.

(ಬಳ್ಳಾರಿ ವರದಿ): ಬಳ್ಳಾರಿ ನಗರದಲ್ಲಿ ಗುರುವಾರ ಸಂಜೆ ಸಿಡಿಲು, ಗುಡುಗು, ಗಾಳಿ ಸಹಿತ ಮಳೆಯಾಯಿತು.

ಕಂಪ್ಲಿ ತಾಲ್ಲೂಕಿನ ಮೆಟ್ರಿ, ಚಿನ್ನಾಪುರ ಸೇರಿ ವಿವಿಧ ಗ್ರಾಮಗಳಲ್ಲಿ ಬುಧವಾರ ತಡರಾತ್ರಿ ಗುಡುಗು, ಮಿಂಚು, ಬಿರುಗಾಳಿ ಸಹಿತ ಮಳೆಯಾಯಿತು. ಚಿನ್ನಾಪುರ ಗ್ರಾಮದಲ್ಲಿ ಬೇವಿನ ಮರ ನೆಲಕ್ಕುರುಳಿದರೆ, ಮೆಟ್ರಿ ಗ್ರಾಮದಲ್ಲಿ ತೋಟಗಳಿಗೆ ಅಳವಡಿಸಿದ್ದ ರಕ್ಷಣಾ ಕಂಬಗಳು ತುಂಡಾದವು. ಇಡೀ ರಾತ್ರಿ ವಿದ್ಯುತ್ ಕಡಿತಗೊಂಡಿತ್ತು.

ಗುಳೇದಗುಡ್ಡ (ಬಾಗಲಕೋಟೆ ಜಿಲ್ಲೆ): ಗುಳೇದಗುಡ್ಡ ಪಟ್ಟಣ ಹಾಗೂ ಪಟ್ಟಣದ ಸುತ್ತಮುತ್ತ ಅರ್ಧಗಂಟೆ ಮಳೆ ಸುರಿಯಿತು. ಮಳೆಯಿಂದ ವಾತಾವರಣ ತಂಪಾಯಿತು.


32.12 ಲಕ್ಷ ರೈತರಿಗೆ ಪರಿಹಾರ ಪಾವತಿ: ಕೃಷ್ಣಬೈರೇಗೌಡ

'16 ಲಕ್ಷ ಸಣ್ಣ, ಅತಿ ಸಣ್ಣ ರೈತರಿಗೆ ತಲಾ ₹3 ಸಾವಿರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಣ್ಣ ಮತ್ತು ಅತಿ ಸಣ್ಣ ಒಣ ಬೇಸಾಯ ಮಾಡುವ ಸುಮಾರು 16 ಲಕ್ಷ ಕುಟುಂಬಗಳಿಗೆ ಬರಗಾಲದಿಂದ ಆಗಿರುವ ಜೀವನೋಪಾಯ ನಷ್ಟಕ್ಕೆ ಪರಿಹಾರವಾಗಿ ತಲಾ ₹3,000 ಪರಿಹಾರ ನೀಡಲೂ ತೀರ್ಮಾನಿಸಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಿಂದ ಎನ್‌ಡಿಆರ್‌ಎಫ್ ಹಣ ಬಿಡುಗಡೆ ಆದ ಬಳಿಕ ರೈತರಿಗೆ ಅರ್ಹತೆಯ ಆಧಾರದಲ್ಲಿ ಪರಿಹಾರವನ್ನು ಪಾವತಿಸಲಾಗುತ್ತಿದ್ದು, ಈವರೆಗೆ ಒಟ್ಟು 32.12 ಲಕ್ಷ ರೈತರಿಗೆ ಸಂಪೂರ್ಣ ಬೆಳೆ ಪರಿಹಾರ ಮೊತ್ತವನ್ನು ಜಮೆ ಮಾಡಲಾಗಿದೆ ಎಂದು ವಿವರಿಸಿದರು.



ಕೃಷ್ಣ ಬೈರೇಗೌಡ

ಇನ್ನೂ ಸುಮಾರು ಎರಡು ಲಕ್ಷ ರೈತರಿಗೆ ಪರಿಹಾರ ನೀಡುವ ಪ್ರಕ್ರಿಯೆ ದಾಖಲೆ ಪರಿಶೀಲನೆ ಹಂತದಲ್ಲಿದೆ ಎಂದರು.

ಇದಲ್ಲದೇ, ಸಾಕಷ್ಟು ತಾಲ್ಲೂಕುಗಳಲ್ಲಿ ಬರ ಪರಿಹಾರ ಪಟ್ಟಿಯಲ್ಲಿ ಸೇರದೆ ಇದ್ದ ಮಳೆ ಆಧಾರಿತ ಬೆಳೆಗಳಿಗೂ ಪರಿಹಾರ ಧನ ವಿತರಿಸಲು ಮತ್ತು ಎರಡು ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶವನ್ನು ಒಳಗೊಳ್ಳುವ ಸುಮಾರು 1.63 ಲಕ್ಷ ಅರ್ಹ ರೈತರಿಗೂ ಪರಿಹಾರ ವಿತರಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ನೀರು ಮತ್ತು ಮೇವಿನ ನಿರ್ವಹಣೆಗಾಗಿ ಇಲ್ಲಿಯವರೆಗೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ 202 ಸಭೆಗಳನ್ನು ನಡೆಸಿದೆ. 462 ತಾಲ್ಲೂಕು ಮಟ್ಟದ ಕಾರ್ಯಪಡೆ ಸಭೆಗಳನ್ನೂ ನಡೆಸಲಾಗಿದೆ. ನೀರಿನ ಸಮಸ್ಯೆಯಿಂದ 270 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಮತ್ತು 594 ಗ್ರಾಮಗಳಿಗೆ ಖಾಸಗಿ ಬೋರ್‌ವೆಲ್ ಬಾಡಿಗೆಗೆ ಪಡೆದು ನೀರು ಸರಬರಾಜು ಮಾಡಲಾಗುತ್ತದೆ. ನಗರ ಪ್ರದೇಶದ 153 ವಾರ್ಡ್‌ಗಳಿಗೆ ಟ್ಯಾಂಕರ್ ಮೂಲಕ ಮತ್ತು 35 ವಾರ್ಡ್‌ಗಳಿಗೆ ಖಾಸಗಿ ಬೋರ್‌ವೆಲ್ ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಅವಶ್ಯ ಇರುವ ವಿವಿಧ ಭಾಗಗಳಲ್ಲಿ 47 ಮೇವಿನ ಬ್ಯಾಂಕ್‌ಗಳನ್ನು ಮತ್ತು 28 ಕಡೆಗಳಲ್ಲಿ ಗೋಶಾಲೆಗಳನ್ನು ತೆರೆದು ಮೇವಿನ ಕೊರತೆ ನೀಗಿಸಲಾಗುತ್ತಿದೆ. ಈ ವೆಚ್ಚವನ್ನು ಭರಿಸಲು ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರ ಖಾತೆಯಲ್ಲಿ ₹836 ಕೋಟಿ ಅನುದಾನ ಲಭ್ಯವಿದೆ ಎಂದು ಕೃಷ್ಣಬೈರೇಗೌಡ ಹೇಳಿದರು.

ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ: ಎಚ್‌. ಡಿ. ರೇವಣ್ಣ ಜಾಮೀನು ಅರ್ಜಿಗೆ ಪ್ರಾಸಿಕ್ಯೂಷನ್ ವಿರೋಧ

‘ಪ್ರಭಾವಿ ಕುಟುಂಬ, ಬೆದರಿಕೆ ಸಾಧ್ಯತೆ...’

ಪ್ರಜಾವಾಣಿ ವಾರ್ತೆ


ಎಚ್‌.ಡಿ. ರೇವಣ್ಣ

ಬೆಂಗಳೂರು: ‘ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅಪಹರಣದ ಆರೋಪ ಹೊತ್ತಿರುವ ಶಾಸಕ ರೇವಣ್ಣನವರ ಕುಟುಂಬ ತುಂಬಾ ಪ್ರಭಾವಿಯಾದದ್ದು. ಜೈಲಿನಲ್ಲಿರುವ ಈ ಆರೋಪಿಗೆ ಜಾಮೀನು ದೊರೆತರೆ ಪ್ರಕರಣದಲ್ಲಿನ ಸಂತ್ರಸ್ತೆಯರನ್ನು ಬೆದರಿಸುವ ಸಾಧ್ಯತೆ ಇದೆ. ಇಂತಹುದೇ ಅಪರಾಧ ಪುನರಾವರ್ತನೆಯೂ ಆಗಬಹುದು’ ಎಂದು ಪ್ರಾಸಿಕ್ಯೂಷನ್ ಪರ ಹಿರಿಯ ವಕೀಲೆ ಜೈನಾ ಕೊಠಾರಿ ಆತಂಕ ವ್ಯಕ್ತಪಡಿಸಿದರು.

ನಿಯಮಿತ (ರೆಗ್ಯುಲರ್) ಜಾಮೀನು ಕೋರಿ ಶಾಸಕ ಎಚ್‌.ಡಿ.ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ (ಸಿಸಿಎಚ್‌–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ಜೈನಾ ಕೊಠಾರಿ, ‘ಆರೋಪಿ ರೇವಣ್ಣ ನೀಡಿದ್ದ ಸೂಚನೆಯ ಅನುಸಾರವೇ ಮಹಿಳೆಯನ್ನು ಒತ್ತಾಯಪೂರ್ವಕವಾಗಿ ಒತ್ತೆಯಾಳಾಗಿ ಇರಿಸಿಕೊಳ್ಳಲಾಗಿತ್ತು. ಸಾಕ್ಷಿಗಳ ಹೇಳಿಕೆಯಲ್ಲಿಯೂ ರೇವಣ್ಣ ಹೆಸರು ಉಲ್ಲೇಖವಾಗಿದೆ. ಇದು ಸ್ಪಷ್ಟವಾಗಿ ಅಪಹರಣದ ಪ್ರಕರಣವಾಗಿದ್ದು, ಭಾರತೀಯ ದಂಡ ಸಂಹಿತೆ–1860ರ ಕಲಂ 364ಎ ಅನ್ವಯ ಆಗುತ್ತದೆ’ ಎಂದರು.

‘ಅಂತೆಯೇ, ರೇವಣ್ಣನವರ ಮಗ ಪ್ರಜ್ವಲ್ ಹಲವು ಪ್ರಕರಣಗಳಲ್ಲಿ ಆರೋಪಿ ಆಗಿದ್ದಾನೆ. ಈಗಾಗಲೇ ಆತ ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಈ ಹಿನ್ನೆಲೆಯಲ್ಲಿ 196 ದೇಶಗಳಿಗೆ ಬ್ಲೂ ಕಾರ್ನರ್ ನೋಟಿಸ್ ನೀಡಲಾಗಿದೆ. ಪ್ರಕರಣದಲ್ಲಿ ಇನ್ನೂ ಸಾಕಷ್ಟು ಸಂತ್ರಸ್ತ ಮಹಿಳೆಯರಿದ್ದು, ರೇವಣ್ಣಗೆ ಜಾಮೀನು ನೀಡಿದರೆ ಇವರ ಮೇಲೆ ಪ್ರಭಾವ ಬೀರುವ ಸಾಧ್ಯತೆಯೂ ಇದೆ. ಇದರಿಂದ ಅವರೆಲ್ಲಾ ನಿರ್ಭಯವಾಗಿ ಸಾಕ್ಷ್ಯ ನುಡಿಯಲು ಸಾಧ್ಯವಿಲ್ಲ. ಹಾಗಾಗಿ, ಈ ಪ್ರಕರಣದಿಂದ ಲೈಂಗಿಕ ದೌರ್ಜನ್ಯ ಎಸಗುವವರಿಗೆ ಒಂದು ಸ್ಪಷ್ಟ ಸಂದೇಶ ಹೋಗುವಂತಾಗಬೇಕು’ ಪ್ರತಿಪಾದಿಸಿದರು.

ಇದಕ್ಕೆ ಪ್ರತಿಯಾಗಿ ರೇವಣ್ಣ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ‘ರೇವಣ್ಣ ವಿರುದ್ಧ ದಾಖಲಿಸಿರುವ ಪ್ರಕರಣ ಸಂಪೂರ್ಣ ರಾಜಕೀಯ ದುರುದ್ದೇಶದಿಂದ ಕೂಡಿದೆ. ಅವರ ವಿರುದ್ಧ ಈತನಕ ಒಂದೇ ಒಂದು ಸಾಕ್ಷಿಯೂ ದೊರೆತಿಲ್ಲ. ಚುನಾವಣೆ ವೇಳೆ ಎಫ್‌ಐಆರ್ ದಾಖಲಿಸಲಾಗಿದೆ. ಎಫ್‌ಐಆರ್ ಕೂಡಾ ಸರಿಯಾದ ಕ್ರಮದಲ್ಲಿ ಇಲ್ಲ. ಅಷ್ಟಕ್ಕೂ ಎಸ್‌ಐಟಿ ತನಿಖೆಯಲ್ಲಿ ಯಾವ ಪ್ರಗತಿ ಸಾಧಿಸಲಾಗಿದೆ’ ಎಂದು ಪ್ರಶ್ನಿಸಿದರು.

‘ಈ ಮೊದಲು ರೇವಣ್ಣ ಕೋರಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಅಪಹರಣಕ್ಕೆ ಒಳಗಾಗಿದ್ದಾಳೆ ಎನ್ನಲಾದ ಮಹಿಳೆಯ ಸುರಕ್ಷತೆ ಬಗ್ಗೆ ಪ್ರಸ್ತಾಪಿಸಿ ನಿರಾಕರಿಸಲಾಗಿತ್ತು. ಆದರೆ, ಸಂತ್ರಸ್ತ ಮಹಿಳೆ ಅಂದೇ ಪತ್ತೆಯಾಗಿದ್ದಾರೆ. ಈ ಪ್ರಕರಣದಲ್ಲಿ ಮಹಿಳೆಯನ್ನು ಸುಳ್ಳು ಹೇಳಿ ಕರೆದೊಯ್ದಿದ್ದಾರೆ ಎನ್ನಲಾಗದು. ಅಪಹರಣ ಎಂದರೆ, ಬಲವಂತದಿಂದ ಮೋಸ ಮಾಡಿ ಕರೆದೊಯ್ಯುವುದು’ ಎಂದು ವಿವರಿಸಿದರು.

‘ಇನ್ನಷ್ಟು ವಾದ ಮಂಡಿಸಬೇಕಿದ್ದು ಸಮಯ ನೀಡಬೇಕು’ ಎಂಬ ಪ್ರಾಸಿಕ್ಯೂಷನ್ ಕೋರಿಕೆಯನ್ನು ಮನ್ನಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಿದ್ದಾರೆ.

ಬ್ಲ್ಯಾಕ್‌ಮೇಲ್ ಮಾಡಿದರೆ ಕ್ರಮ: ಪರಮೇಶ್ವರ ಎಚ್ಚರಿಕೆ


ಜಿ.ಪರಮೇಶ್ವರ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆಯರನ್ನು ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ, ಅಂತಹವರ ವಿರುದ್ಧ ಎಸ್‌ಐಟಿ ಕ್ರಮ ತೆಗೆದುಕೊಳ್ಳಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎಚ್‌.ಡಿ.ಕುಮಾರಸ್ವಾಮಿ ಮಾಡಿದ ಆರೋಪಗಳಿಗೆಲ್ಲಾ ಉತ್ತರ ಕೊಡಲು ಸಾಧ್ಯವಿಲ್ಲ. ಎಸ್‌ಐಟಿ ಸಮರ್ಥವಾಗಿ ತನಿಖೆ ನಡೆಸುತ್ತಿದೆ. ಕುಮಾರಸ್ವಾಮಿ ರಾಜಕೀಯ ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದರು.

‘ಪ್ರಕರಣವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಮೊದಲು ವರದಿ ಬರಲಿ. ವರದಿ ಬರುವವರೆಗೆ ಅದರಲ್ಲಿ ಏನಿರುತ್ತದೆ ಎಂಬುದು ನಮಗೂ ಗೊತ್ತಿರುವುದಿಲ್ಲ. ಟೀಕೆ– ಟಿಪ್ಪಣಿಗಳಿಗೆಲ್ಲಾ ಉತ್ತರ ಕೊಡಲು ಆಗುವುದಿಲ್ಲ. ಸುಮ್ಮನೆ ಹೇಳಿಕೆಗಳನ್ನು ಕೊಡುವುದೂ ಸರಿಯಲ್ಲ’ ಎಂದು ಅವರು ಹೇಳಿದರು.

‘ಡಿ.ಕೆ.ಶಿವಕುಮಾರ್ ಸಂತ್ರಸ್ತೆಯರನ್ನು ಕುಮಾರಕೃಪಾ ಅತಿಥಿ ಗೃಹದಲ್ಲಿ ಇರಿಸಿದ್ದಾರೆ’ ಎಂದು ಕುಮಾರಸ್ವಾಮಿ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಅವರು ಹೇಳಿದ್ದಕ್ಕೆ ಉತ್ತರ ಕೊಡಲು ಆಗುತ್ತಾ, ತನಿಖೆ ನಡೆಸಲು ಎಸ್‌ಐಟಿಗೆ ಸ್ವಾತಂತ್ರ್ಯ ಕೊಡೋಣ’ ಎಂದರು.

ಹೋರಾಡದಂತೆ ಕಟ್ಟಿ ಹಾಕಿದ್ಯಾರು : ಡಿಕೆಶಿ ಪ್ರಶ್ನೆ


ಶಿವಕುಮಾರ್

ಬೆಂಗಳೂರು: ‘ಪ್ರಜ್ವಲ್ ಪೆನ್‌ಡ್ರೈವ್ ವಿಚಾರದಲ್ಲಿ ಹೋರಾಟ ಮಾಡದಂತೆ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಕಟ್ಟಿ ಹಾಕಿರುವವರು ಯಾರು? ಅವರನ್ನು ಯಾರು ಹಿಡಿದು ನಿಲ್ಲಿಸಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪೆನ್‌ಡ್ರೈವ್ ವಿಚಾರದಲ್ಲಿ ನಾನು ಹೇಳುವುದನ್ನೆಲ್ಲಾ ಹೇಳಿದ್ದೇನೆ. ಇನ್ನು ಏನಿದ್ದರೂ ವಿಧಾನಮಂಡಲ ಅಧಿವೇಶನದಲ್ಲಿ ಚರ್ಚೆ ಮಾಡೋಣ’ ಎಂದು ಹೇಳಿದರು.

ಕುಮಾರಸ್ವಾಮಿ ರಾಜಭವನಕ್ಕೆ ಭೇಟಿ ನೀಡಿ ಪ್ರಜ್ವಲ್ ಪ್ರಕರಣ ಸಿಬಿಐಗೆ ನೀಡುವಂತೆ ಮನವಿ ಮಾಡಿದ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ‘ಈಗ ಆಂಧ್ರಪ್ರದೇಶ ಚುನಾವಣಾ ಪ್ರಚಾರಕ್ಕೆ ಹೊರಟಿದ್ದೇನೆ. ಬಂದ ಮೇಲೆ ಈ ಕುರಿತು ಮಾತನಾಡುತ್ತೇನೆ’ ಎಂದರು.

‘ಎಚ್‌ಡಿಕೆ– ದೇವರಾಜೇಗೌಡ ಭೇಟಿಯಾಗಿದ್ದೇಕೆ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಎಚ್‌.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ಮುಖಂಡ ಜಿ.ದೇವರಾಜೇಗೌಡ ಈಚೆಗೆ ಭೇಟಿಯಾಗಿದ್ದಾರೆ ಎಂಬ ಮಾಹಿತಿ ಇದೆ. ಅವರು ಯಾಕೆ ಭೇಟಿಯಾಗಿದ್ದರು? ಪೆನ್‌ಡ್ರೈವ್ ಪ್ರಕರಣಕ್ಕೂ ಅವರ ಭೇಟಿಗೂ ಸಂಬಂಧವಿದೆಯಾ ಎಂಬ ಬಗ್ಗೆ ತನಿಖೆಯಾಗಬೇಕು’ ಎಂದು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಗುರುವಾರ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ದೇವರಾಜೇಗೌಡರು ವರ್ಷದ ಹಿಂದೆ ವ್ಯಕ್ತಿಯೊಬ್ಬರಿಗೆ 5 ಜಿ.ಬಿಯಷ್ಟು ವಿಡಿಯೊಗಳುಳ್ಳ ಪೆನ್‌ಡ್ರೈವ್ ಕೊಟ್ಟಿದ್ದು, ಅದಷ್ಟೇ ಬಿಡುಗಡೆಯಾಗಿದೆ. ತಾನೇನಾದರೂ ಬಿಡುಗಡೆ ಮಾಡಿದ್ದರೆ ಇನ್ನೂ ಹೆಚ್ಚು ಬಿಡುಗಡೆ ಮಾಡುತ್ತಿದ್ದುದಾಗಿ ಪ್ರಜ್ವಲ್ ರೇವಣ್ಣ ಕಾರು ಚಾಲಕ ಕಾರ್ತಿಕ್ ತಿಳಿಸಿದ್ದಾರೆ. ಇದೇ ವೇಳೆ, ಕುಮಾರಸ್ವಾಮಿ ಅವರೂ ದೇವರಾಜೇಗೌಡರನ್ನು ಭೇಟಿಯಾಗಿರುವುದು ಅನುಮಾನ ಮೂಡಿಸಿದೆ’ ಎಂದರು.

‘ರೇವಣ್ಣ ಕುಟುಂಬ ಬೇರೆ, ತಮ್ಮದೇ ಬೇರೆ ಎನ್ನುವ ಕುಮಾರಸ್ವಾಮಿ ಯಾರ ಪರ ನಿಂತಿದ್ದಾರೆ? ಮಹಿಳೆಯರ ಮಾನ ತೆಗೆದವರು ಯಾರು? ಘಟನೆಗೆ ಯಾರ ಕುಟುಂಬ ಕಾರಣ? ಈಗ ಯಾರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ? ಅವರ ಮನೆಯ ಹುಡುಗ ಮಾಡಿದ್ದು ಸರಿ ಎನ್ನುವ ಸಂತೋಷಕ್ಕೆ ಪ್ರತಿಭಟನೆ ಮಾಡುತ್ತಿದ್ದಾರಾ’ ಎಂಬ ಪ್ರಶ್ನೆಗಳನ್ನು ಮುಂದಿಟ್ಟರು.

‘ಪೆನ್‌ಡ್ರೈವ್ ಪ್ರಕರಣದಿಂದ ರಾಜ್ಯವೇ ತಲೆತಗ್ಗಿಸುವಂತಾಗಿದೆ. ಆದರೆ, ಮಾಜಿ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಹಾದಿಬೀದಿಯಲ್ಲಿ ರಂಪಾಟ ಮಾಡುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರನ್ನು ಸಂತ್ರಸ್ತರು, ಸಂತ್ರಸ್ತರ ಸಂಬಂಧಿಕರು ಭೇಟಿಯಾಗಿ ನ್ಯಾಯ ಕೇಳಿದರೆ ತಪ್ಪೇನು’ ಎಂದರು.

‘ಹೆಣ್ಣುಮಕ್ಕಳ ಮಾನ ಹಾಳು ಮಾಡಿದರೂ ಕ್ಷಮೆ ಕೇಳಲಿಲ್ಲ, ಅನುಕಂಪ ತೋರಲಿಲ್ಲ. ತಪ್ಪೆಸಗಿದ ಸಂಸದ ಪ್ರಜ್ವಲ್‌ನನ್ನು ವಿದೇಶದಿಂದ ಕರೆಸಲು ಸಾಧ್ಯವಾಗಲಿಲ್ಲ. ಆರೋಪಿ ಸಾಮಾನ್ಯರಾಗಿದ್ದರೆ ಅವರ ಅಣ್ಣ, ತಮ್ಮ, ಸಂಬಂಧಿಕರನ್ನು ಬಂಧಿಸುತ್ತಿದ್ದರು. ಅದರಂತೆ ಈ ವಿಚಾರದಲ್ಲೂ ಕುಮಾರಸ್ವಾಮಿ ಅವರೇ ಜವಾಬ್ದಾರಿ ಹೊರಬೇಕು. ಅಣ್ಣನ ಮಗನನ್ನು ವಿದೇಶದಿಂದ ಕರೆಸಬೇಕು’ ಎಂದರು.

‘ಸಿಬಿಐನ ಬಹುತೇಕ ತನಿಖೆಗಳೆಲ್ಲವೂ ಮೂಲೆಗೆ ಸೇರಿವೆ. ಆರೋಪಿಗಳಿಗೆ ಕ್ಲೀನ್ ಚಿಟ್ ಕೊಡಲಾಗಿದೆ. ಈ ಹಿಂದೆ ಕುಮಾರಸ್ವಾಮಿಯವರೇ ರಾಜ್ಯದ ಪೊಲೀಸರನ್ನು ದಕ್ಷರು, ಸಮರ್ಥರು ಎಂದಿದ್ದರು. ರಾಜ್ಯದ ಪೊಲೀಸರು ಸಮರ್ಥವಾಗಿಯೇ ಪ್ರಕರಣದ ತನಿಖೆ ನಡೆಸುತ್ತಿದ್ದಾರೆ’ ಎಂದು ಪ್ರತಿಪಾದಿಸಿದರು.

ರಾಷ್ಟ್ರೀಯ ಮಹಿಳಾ ಆಯೋಗ ಹೇಳಿಕೆ

ಯಾವ ಸಂತ್ರಸ್ತೆಯೂ ದೂರು ನೀಡಿಲ್ಲ

ನವದೆಹಲಿ(ಪಿಟಿಐ): ‘ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಆಯೋಗಕ್ಕೆ ದೂರು ನೀಡಲು ಯಾವ ಸಂತ್ರಸ್ತೆಯೂ ಮುಂದೆ ಬಂದಿಲ್ಲ. ಪ್ರಜ್ವಲ್ ವಿರುದ್ಧ ಸುಳ್ಳು ದೂರು ನೀಡುವಂತೆ ನನ್ನನ್ನು ಬಲವಂತ ಮಾಡಲಾಗಿದೆ ಎಂದು ಒಬ್ಬ ದೂರುದಾರ ಮಹಿಳೆ ಆರೋಪಿಸಿದ್ದಾರೆ’ ಎಂದು ರಾಷ್ಟ್ರೀಯ ಮಹಿಳಾ ಆಯೋಗ ಗುರುವಾರ ಹೇಳಿದೆ.

‘ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪಗಳ ಕುರಿತು ಕೈಗೊಂಡ ಕ್ರಮಗಳಿಗೆ ಸಂಬಂಧಿಸಿ ಸಕಾಲದಲ್ಲಿ ವರದಿ (ಎಟಿಆರ್) ಸಲ್ಲಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಪತ್ತೆ ಮಾಡಲಾಗಿರುವ ಕೆಲ ಮಹತ್ವದ ಸಂಗತಿಗಳನ್ನು ವರದಿ ಒಳಗೊಂಡಿದೆ’ ಎಂದು ಆಯೋಗ ಹೇಳಿದೆ.

‘ಲೈಂಗಿಕ ಕಿರುಕುಳ ಕುರಿತು ಸಂತ್ರಸ್ತೆಯರು ನೀಡಿರುವ ದೂರುಗಳ ಆಧಾರದಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ. ಸಂಬಂಧಿಯೊಬ್ಬರು ಅಪಹರಣ ಮಾಡಿದ್ದಾರೆ ಎಂಬ ಬಗ್ಗೆ ಹೆಚ್ಚುವರಿಯಾಗಿ ಮತ್ತೊಂದು ದೂರು ಸಹ ದಾಖಲಾಗಿದೆ. ಆದರೆ, ಯಾವೊಬ್ಬ ಸಂತ್ರಸ್ತೆಯೂ ಆಯೋಗಕ್ಕೆ ದೂರು ನೀಡಲು ಮುಂದೆ ಬಂದಿಲ್ಲ ಎಂಬುದು ಎಟಿಆರ್‌ನಿಂದ ತಿಳಿದುಬಂದಿದೆ’ ಎಂದು ಆಯೋಗ ಹೇಳಿದೆ.

‘ಸಾಮಾನ್ಯ ಜನರಂತೆ ವೇಷ ಧರಿಸಿ ಬಂದಿದ್ದ ಮೂವರು ತಾವು ಕರ್ನಾಟಕ ಪೊಲೀಸ್ ಅಧಿಕಾರಿಗಳು ಎಂಬುದಾಗಿ ಪರಿಚಯಿಸಿಕೊಂಡಿದ್ದರು. ಈ ಪ್ರಕರಣದಲ್ಲಿ ಸುಳ್ಳು ದೂರು ನೀಡುವಂತೆ ನನಗೆ ಒತ್ತಾಯಿಸಿದ್ದರು ಎಂಬುದಾಗಿ ದೂರು ದಾಖಲಿಸಲು ಬಂದಿದ್ದ ಮಹಿಳೆಯೊಬ್ಬರು ತಿಳಿಸಿದ್ದಾರೆ’ ಎಂದು ಆಯೋಗ ಹೇಳಿದೆ.

‘ಗೊತ್ತೇ ಇಲ್ಲದ ಕೆಲ ಮೊಬೈಲ್ ಸಂಖ್ಯೆಗಳಿಂದ ನನಗೆ ಕರೆಗಳು ಬಂದಿದ್ದವು. ಪ್ರಕರಣ ಕುರಿತು ದೂರು ನೀಡುವಂತೆ ಕರೆ ಮಾಡಿದವರು ಬೆದರಿಕೆ ಒಡ್ಡಿದ್ದರು ಎಂಬುದಾಗಿ ಮಹಿಳೆ ಹೇಳಿದ್ದಾರೆ. ಸುಳ್ಳು ದೂರು ನೀಡದಿದ್ದಲ್ಲಿ ಕಿರುಕುಳ ಹಾಗೂ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂಬುದಾಗಿ ಕೆಲ ವ್ಯಕ್ತಿಗಳಿದ್ದ ಗುಂಪು ಆಕೆಗೆ ಬೆದರಿಕೆ ಒಡ್ಡಿತ್ತು ಎಂಬುದು ತಿಳಿದುಬಂದಿದೆ’ ಎಂದಿರುವ ಆಯೋಗ, ‘ಪರಿಸ್ಥಿತಿಯ ಗಂಭೀರತೆ ಹಿನ್ನೆಲೆಯಲ್ಲಿ ಸಂತ್ರಸ್ತ ಮಹಿಳೆ ತನ್ನ ಕುಟುಂಬಕ್ಕೆ ರಕ್ಷಣೆ ನೀಡುವಂತೆ ಕೋರಿದ್ದಾಳೆ’ ಎಂದಿದೆ.

‘700 ಮಹಿಳೆಯರು ಆನ್‌ಲೈನ್ ಮೂಲಕ ದೂರು ದಾಖಲಿಸಿರುವುದು ಗಮನಕ್ಕೆ ಬಂದಿದೆ. ಈ ದೂರುದಾರರು ಸಾಮಾಜಿಕ ಹೋರಾಟಗಳನ್ನು ನಡೆಸುವ ಗುಂಪಿನೊಂದಿಗೆ ನಂಟು ಹೊಂದಿದ್ದಾರೆ. ಅವರು, ಈ ಪ್ರಕರಣದ ಮೂಲ ದೂರುದಾರ ವ್ಯಕ್ತಿಯೊಂದಿಗೆ ಯಾವುದೇ ನೇರ ಸಂಬಂಧ ಹೊಂದಿಲ್ಲ ಇಲ್ಲವೇ ಈ ಪ್ರಕರಣದಲ್ಲಿ ಅವರ ಪಾತ್ರವೂ ಇಲ್ಲ’ ಎಂದೂ ಆಯೋಗ ತಿಳಿಸಿದೆ.

‘ದೇವರಾಜೇಗೌಡ ಪೆನ್‌ಡ್ರೈವ್ ಇಟ್ಟುಕೊಂಡಿದ್ದೇಕೆ?’

ಪ್ರಜಾವಾಣಿ ವಾರ್ತೆ

ಹಾಸನ: ‘ನ್ಯಾಯ ಒದಗಿಸುವಂತೆ ಕೋರಿ, ವಿಡಿಯೊಗಳಿರುವ ಪೆನ್‌ಡ್ರೈವ್ ಅನ್ನು ನೀಡಿದ ಕಾರ್ತಿಕ್‌ಗೆ ನ್ಯಾಯ ಕೊಡಿಸಲು ಆಗದಿದ್ದ ಮೇಲೆ, ಜಿ.ದೇವರಾಜೇಗೌಡ ಪೆನ್‌ಡ್ರೈವ್ ಅನ್ನು ತಮ್ಮ ಬಳಿಯೇ ಇರಿಸಿಕೊಂಡಿದ್ದೇಕೆ’ ಎಂದು ಗೃಹಮಂಡಳಿ ಅಧ್ಯಕ್ಷ, ಶಾಸಕ ಕೆ.ಎಂ.ಶಿವಲಿಂಗೇಗೌಡ ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾರ್ತಿಕ್ ಹಾಗೂ ದೇವರಾಜೇಗೌಡರೇ ಪೆನ್‌ಡ್ರೈವ್ ಹೊರಗೆ ಬಿಟ್ಟವರು. ದೇವರಾಜೇಗೌಡ ಅವರಿಗೆ ಮಾತ್ರ ಪೆನ್‌ಡ್ರೈವ್ ಕೊಟ್ಟಿದ್ದಾಗಿ ಕಾರ್ತಿಕ್ ಹೇಳಿಕೆ ನೀಡಿದ್ದಾರೆ. ಅವರೊಬ್ಬ ವಕೀಲರಾಗಿ, ನ್ಯಾಯಾಧೀಶರು ಅಥವಾ ಪೊಲೀಸರಿಗೆ ಪೆನ್‌ಡ್ರೈವ್ ಕೊಟ್ಟಿದ್ದರೆ, ಮಹಿಳೆಯರ ಮಾನಹರಣ ಆಗುತ್ತಿರಲಿಲ್ಲ’ ಎಂದು ಪ್ರತಿಪಾದಿಸಿದರು.

ನ್ಯಾಯಾಲಯಗಳ ಸ್ಥಳಾಂತರಕ್ಕೆ ಒಪ್ಪಿಗೆ: ಪಾಟೀಲ

ಗದಗ: ‘ಹಾಸನದ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಪಟ್ಟ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯಗಳನ್ನು ವಿಚಾರಣೆ ದಿನದಂದು ಮಾತ್ರ ತಾತ್ಕಾಲಿಕವಾಗಿ ಸ್ಥಳಾಂತರಿಸಲು ಕಾನೂನು ಇಲಾಖೆ ಒಪ್ಪಿದ್ದು, ಈ ಸಂಬಂಧ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಪತ್ರ ಬರೆಯಲಾಗಿದೆ’ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

‘ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕೆಲ ಪ್ರಕರಣಗಳು ದಾಖಲಾಗಿದ್ದು, 42 ಎಸಿಎಂಎಂ ಹಾಗೂ ಸಿಟಿ ಸಿವಿಲ್ ಆ್ಯಂಡ್ ಸೆಷನ್ಸ್ ಜಡ್ಜ್ 81 (82) ನ್ಯಾಯಾಲಯಗಳಲ್ಲಿ ವಿಚಾರಣೆ ನಡೆದಿವೆ. ದೂರುದಾರರು, ಸಂತ್ರಸ್ತೆಯರು ಮತ್ತು ಸಾಕ್ಷಿದಾರರಿಗೆ ರಕ್ಷಣೆ ಒದಗಿಸುವುದು ಮತ್ತು ಅವರ ಗೋಪ್ಯತೆ ಕಾಪಾಡುವುದು ಸರ್ಕಾರದ ಜವಾಬ್ದಾರಿ. ಹೀಗಾಗಿ ಎಸ್‌ಐಟಿ ತನಿಖೆಗಳ ಪ್ರಕರಣ ವಿಚಾರಣೆಗಳ ದಿನಗಳಂದು ಮಾತ್ರ ಈ ನ್ಯಾಯಾಲಯಗಳನ್ನು ಗುರುನಾನಕ್ ಭವನಕ್ಕೆ ತಾತ್ಕಾಲಿಕವಾಗಿ ಸ್ಥಳಾಂತರಿಸುವ ಬಗ್ಗೆ ನಮ್ಮ ಇಲಾಖೆ ಅನುಮೋದನೆ ನೀಡಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಈ ಎರಡೂ ನ್ಯಾಯಾಲಯಗಳು ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಆರೋಪಿಗಳ ಪರ ಬಾತ್ಮೀದಾರರು, ಮಾಧ್ಯಮದವರು ಹಾಗೂ ಸಾರ್ವಜನಿಕರು ಸಹ ನ್ಯಾಯಾಲಯಗಳಲ್ಲಿ ನಿರಾತಂಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುವುದರಿಂದ ಮೇಲ್ಕಂಡ ಪ್ರಕರಣಗಳ ವಿಚಾರಣೆ ಸಮಯದೊಳಗೆ ಗೋಪ್ಯತೆ ಕಾಪಾಡಲು ಕಷ್ಟವಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದರು. ಹಾಗಾಗಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ’ ಎಂದು ತಿಳಿಸಿದರು.

‘ಪೆನ್‌ಡ್ರೈವ್ ಯಾರು ಹಂಚಿದ್ದಾರೆಂಬುದು ಬೆಳಕಿಗೆ ಬರಲೇಬೇಕು. ಪ್ರಕರಣದಲ್ಲಿ ದೇವರಾಜೇಗೌಡ ಸಿಕ್ಕಿಕೊಳ್ಳುತ್ತಾರೆ. ಅವರು ಪೆನ್‌ಡ್ರೈವ್ ಅನ್ನು ಉನ್ನತ ಅಧಿಕಾರಿಗೆ ಕೊಡಬೇಕಿತ್ತು. ಈ ವಿಷಯದಲ್ಲಿ ದೇವರಾಜೇಗೌಡ ಕೂಡ ಅಪರಾಧಿಯೇ. ಡಿ.ಕೆ.ಶಿವಕುಮಾರ್, ಶ್ರೇಯಸ್ ಪಟೇಲ್ ಅವರ ಯಶಸ್ಸು ತಡೆಯಲಾರದೇ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ’ ಎಂದರು.

‘ಪ್ರಕರಣದಲ್ಲಿ ಹೊಡೆದಾಡುತ್ತಿರುವವರು ಒಕ್ಕಲಿಗರೇ. ಇಬ್ಬರು ಒಕ್ಕಲಿಗ ನಾಯಕರ ನಡುವೆ ಕಾಳಗ ನಡೆಯುತ್ತಿದೆ. ಕೃತ್ಯ ಎಸಗಿರುವವನೂ ಒಕ್ಕಲಿಗನೇ. ತನಿಖೆಯಲ್ಲಿ ಡಿ.ಕೆ.ಶಿವಕುಮಾರ್ ಹೆಸರು ಬಂದರೆ ಅವರೂ ಅನುಭವಿಸುತ್ತಾರೆ. ಅದನ್ನು ಬಿಟ್ಟು ಜೆಡಿಎಸ್‌ನವರು ದಿಕ್ಕು ತಪ್ಪಿಸಲು ಪ್ರತಿಭಟನೆ ಮಾಡುತ್ತಿದ್ದಾರೆ’ ಎಂದು ದೂರಿದರು.

‘ಪ್ರಜ್ವಲ್‌ಗೆ ಉಗ್ರ ಶಿಕ್ಷೆಯಾಗಲಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ಕೊಟ್ಟರಷ್ಟೇ ಸಾಲದು. ವಿದೇಶದಲ್ಲಿ ತಲೆಮರೆಸಿಕೊಂಡಿರುವ ಆತನನ್ನು ಬಂಧಿಸಿ ಕರೆತರಲು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಜಿಲ್ಲೆಯಲ್ಲಿ ಸಾರ್ವಭೌಮತ್ವ ಹೊಂದಿರುವ ಕುಟುಂಬದಿಂದ ಇಂಥ ಕೃತ್ಯ ನಡೆದಿರುವುದು ಬೇಸರ ತಂದಿದೆ. ಪ್ರಕರಣ ಪ್ರಪಂಚದಾದ್ಯಂತ ಸುದ್ದಿಯಾಗಿದೆ. ಆರೋಪ ಹೊತ್ತಿರುವವರು ವಿದೇಶಕ್ಕೆ ಹೋಗಿದ್ದಾರೆ. ಇದು ಹಾಸನ ಜಿಲ್ಲೆಗೆ ಕಳಂಕ ತಂದಿದೆ’ ಎಂದರು.



ನವದೆಹಲಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಡ್ಯದ ಕೆ.ಎಸ್‌. ರಾಜಣ್ಣ ಮತ್ತು ಬೆಂಗಳೂರಿನ ಶಿಕ್ಷಣತಜ್ಞ ಎಂ.ಕೆ. ಶ್ರೀಧರ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು –ಪಿಟಿಐ ಚಿತ್ರಗಳು

ಐಎಫ್‌ಎಸ್ ಸಾಧಕರು

ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ರಾಜ್ಯದ ಕೆಲವರು ರ‍್ಯಾಂಕ್ ಪಡೆದಿದ್ದು ವಿವರ ಇಂತಿದೆ.

ವೈ.ಎಸ್‌.ಕಾವ್ಯಾಗೆ 7ನೇ ರ‍್ಯಾಂಕ್



ಸಿರಿಗೆರೆ (ಚಿತ್ರದುರ್ಗ ಜಿಲ್ಲೆ): ಐಎಫ್‌ಎಸ್ ಪರೀಕ್ಷೆಯಲ್ಲಿ ವೈ.ಎಸ್‌.ಕಾವ್ಯಾ, ರಾಷ್ಟ್ರ ಮಟ್ಟದಲ್ಲಿ 7ನೇ ರ‍್ಯಾಂಕ್ ಗಳಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಯರದಕೆರೆಯ ಸೋಮಶೇಖರಪ್ಪ– ರತ್ನಮ್ಮ ದಂಪತಿ ಪುತ್ರಿಯಾಗಿರುವ ಕಾವ್ಯಾ, ಬೆಂಗಳೂರಿನ ಮೈಂಡ್‌ಟ್ರೀ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲ ಕಾಲ ಕಾರ್ಯನಿರ್ವಹಿಸಿದ್ದರು. ಯುಪಿಎಸ್‌ಸಿ ಪರೀಕ್ಷೆಗಾಗಿ ದೆಹಲಿಯ ಖಾಸಗಿ ಸಂಸ್ಥೆಯಲ್ಲಿ ತರಬೇತಿ ಪಡೆಯಲು ತೆರಳಿದ್ದರು. ಹಣಕಾಸಿನ ಸಮಸ್ಯೆಯಿಂದ ವಾಪಸ್ ಬೆಂಗಳೂರಿಗೆ ಬಂದು ಮತ್ತೆ ಕೆಲಸಕ್ಕೆ ಸೇರಿದ್ದರು. ಕನಸು ನನಸಾಗಿಸಿಕೊಳ್ಳಲು ಅವರು ಮತ್ತೆ ವೃತ್ತಿಗೆ ವಿದಾಯ ಹೇಳಿ ಛಲ ಬಿಡದೆ ಓದಿದ್ದರು.

‘ರ‍್ಯಾಂಕ್ ಸಂತೋಷ ತಂದಿದೆ. ಯುಪಿಎಸ್‌ಸಿ ಪರೀಕ್ಷೆಗಾಗಿ 2018ರಿಂದಲೂ ಪ್ರಯತ್ನ ಮಾಡಿದ್ದೆ. ಹಿಂದೆ ಸಂದರ್ಶನದ ಹಂತದವರೆಗೂ ತಲುಪಿದ್ದೆ. ಅಂತಿಮ ಪಟ್ಟಿಯಲ್ಲಿ ಅರ್ಹತೆ ಸಿಗಲಿಲ್ಲ. ಛಲ ಬಿಡಲಿಲ್ಲ ಎಂದು ಕಾವ್ಯಾ ಹೇಳಿದರು.

ಸಾಫ್ಟ್‌ವೇರ್‌ನಿಂದ ಐಎಫ್‌ಎಸ್‌ಗೆ


ಆರ್‌.ಎ.ಸೌಮ್ಯಾ

ಮೈಸೂರು: ‘ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳಿದ್ದರೂ, ಅದನ್ನು ಬಿಟ್ಟು, ಆರು ಬಾರಿ ಯುಪಿಎಸ್‌ಸಿ ಪರೀಕ್ಷೆ ಬರೆದೆ, ಐಎಫ್‌ಎಸ್‌ಗಾಗಿ ಎರಡು ಬಾರಿ ಪರೀಕ್ಷೆ ಎದುರಿಸಿದೆ. ಈಗ ಕನಸು ನನಸಾಗಿದೆ’ ಎಂಬುದು ಐಎಫ್‌ಎಸ್‌ನಲ್ಲಿ 33ನೇ ರ‍್ಯಾಂಕ್ ಪಡೆದ ಆರ್‌.ಎ. ಸೌಮ್ಯಾ ಅವರ ಸಂತಸದ ನುಡಿ.


ಇವರು, ಬೋಗಾದಿ ಎರಡನೇ ಹಂತದ ನಿವಾಸಿ ನಿವೃತ್ತ ರೈಲ್ವೆ ಉದ್ಯೋಗಿ ಅಶೋಕ್ ಕುಮಾರ್– ಮಂಜುಳಾ ದಂಪತಿಯ ಪುತ್ರಿ. ‘ಕೆಲಸ ಬಿಟ್ಟ ನಂತರ ಮನೆಯಲ್ಲಿದ್ದುಕೊಂಡೇ ಪರೀಕ್ಷೆಗೆ ತಯಾರಿ ನಡೆಸಿದೆ. ಕುಟುಂಬದವರ ಪ್ರೋತ್ಸಾಹದಿಂದ ಸಾಧನೆ ಸಾಧ್ಯವಾಗಿದೆ’ ಎನ್ನುತ್ತಾರೆ.

120ನೇ ರ‍್ಯಾಂಕ್


ಚಿದಾನಂದ

ಮೈಸೂರು: ‘ಎಚ್‌.ಡಿ ಕೋಟೆಯಲ್ಲಿ ಹುಟ್ಟಿದ್ದರಿಂದ ಬಾಲ್ಯ ದಿಂದಲೇ ಕಾಡಿನ ಬಗ್ಗೆ ಆಸಕ್ತಿಯಿತ್ತು. 2021ರಿಂದ ಎರಡು ಬಾರಿ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದೇನೆ. ಐಎಫ್‌ಎಸ್‌ನಲ್ಲಿ ಉತ್ತಮ ರ‍್ಯಾಂಕ್ ಬಂದಿರುವುದು ಖುಷಿಯಾಗಿದೆ.’ ಎನ್ನುತ್ತಾರೆ 120ನೇ ರ‍್ಯಾಂಕ್ ಗಳಿಸಿರುವ ಚಿದಾನಂದ. ಎಚ್‌.ವಿ. ಇವರು ಶಿಕ್ಷಕ ವೆಂಕಟಸುಬ್ಬ ನಾಯಕ –ಮಂಜುಳಾ ಎಚ್‌.ಎಸ್ ದಂಪತಿ ಮಗ.

ಚಕ್ರಧರ್‌ಗೆ 117ನೇ ರ‍್ಯಾಂಕ್



ಚಿಂತಾಮಣಿ (ಚಿಕ್ಕಬಳ್ಳಾಪುರ): ಅನಕಲ್ ಶೆಟ್ಟಿಹಳ್ಳಿಯ ಚಕ್ರಧರ್ 117ನೇ ರ‍್ಯಾಂಕ್ ಪಡೆದಿದ್ದಾರೆ. ಮೊದಲ ಪ್ರಯತ್ನದಲ್ಲಿಯೇ ಯಶ ಕಂಡಿದ್ದಾರೆ. ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ತಂದೆ ಬಿ. ಶ್ರೀನಿವಾಸರೆಡ್ಡಿ ರೈತರಾಗಿದ್ದು, ತಾಯಿ ಬೈಯ್ಯಮ್ಮ ಗೃಹಿಣಿ.

ಪರಿಷತ್: 11ಕ್ಕೆ ಬಿಜೆಪಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ನ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳ ಒಟ್ಟು ಆರು ಸ್ಥಾನಗಳಿಗೆ ಜೂನ್ 3ರಂದು ನಡೆಯುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಗುರುವಾರ ಆರಂಭವಾಗಿದೆ.

ಯಾವುದೇ ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿಲ್ಲ. ಆದರೆ, ಮೊದಲ ದಿನ ಈಶಾನ್ಯ ಪದವೀಧರರ ಕ್ಷೇತ್ರದಿಂದ ಪಕ್ಷೇತರರೊಬ್ಬರು ನಾಮಪತ್ರ ಸಲ್ಲಿಸಿದ್ದಾರೆ. ಮೇ 16 ನಾಮಪತ್ರ ಸಲ್ಲಿಸಲು ಕೊನೆಯ ದಿನ.


ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಬಹುತೇಕ ಅಂತಿಮಗೊಳಿಸಿದೆ. ಆದರೆ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಇನ್ನೂ ಅಭ್ಯರ್ಥಿಗಳ ಆಯ್ಕೆ ನಡೆಸಿಲ್ಲ. ಬಿಜೆಪಿ ಇದೇ 11ರಂದು ಸಭೆ ನಡೆಸಿ ಅದೇ ದಿನಗಳ ಅಭ್ಯರ್ಥಿಗಳನ್ನು ಪಟ್ಟಿಯನ್ನು ಪ್ರಕಟಿಸುವ ಸಾಧ್ಯತೆ ಇದೆ.

ಈ ಚುನಾವಣೆಯಲ್ಲೂ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮುಂದುವರಿಯುವ ಸಾಧ್ಯತೆಗಳು ಇವೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದರು. 11ರಂದು ಬಿಜೆಪಿ ನಾಯಕರ ಸಭೆಯ ಬಳಿಕ ಮೈತ್ರಿ ಸಂಬಂಧ ಜೆಡಿಎಸ್ ನಾಯಕರ ಜತೆಗೂ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ವರಿಷ್ಠರು ಲೋಕಸಭಾ ಚುನಾವಣೆ ಪ್ರಚಾರದಲ್ಲಿ ಮಗ್ನರಾಗಿರುವಾಗ ಅವರಿಂದ ಪಟ್ಟಿಗೆ ಒಪ್ಪಿಗೆ ಪಡೆದುಕೊಂಡು ಬರಬೇಕಾಗಿದೆ. ಈಗಾಗಲೇ ಸಂಭಾವ್ಯರ ಪಟ್ಟಿಯೊಂದನ್ನು ದೆಹಲಿಗೆ ಕಳುಹಿಸಲಾಗಿದೆ. ಔಪಚಾರಿಕವಾಗಿ ಒಪ್ಪಿಗೆ ಪಡೆಯಬೇಕಾಗಿದೆ. ಈ ಮಧ್ಯೆ ಪ್ರತಿಯೊಂದು ಕ್ಷೇತ್ರಕ್ಕೂ ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

‘ಶಾಂತಿಯ ತೋಟ ಕದಡಿದ ಪಿತ್ರೋಡಾ’

ಪ್ರಜಾವಾಣಿ ವಾರ್ತೆ


ಆರ್‌. ಅಶೋಕ

ಬೆಂಗಳೂರು: ‘ಕಾಂಗ್ರೆಸ್ ನಾಯಕ ಸ್ಯಾಮ್ ಪಿತ್ರೋಡಾ ಅವರ ಜನಾಂಗೀಯ ನಿಂದನೆ ಹೇಳಿಕೆ ಖಂಡನೀಯ. ದಕ್ಷಿಣ ಭಾರತದ ಜನರಿಗೆ ಐದು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಇದನ್ನು ತಿಳಿಯದೇ ನಮ್ಮನ್ನು ಆಫ್ರಿಕನ್ನರು ಎನ್ನುವ ಮೂಲಕ ಶಾಂತಿಯ ತೋಟವನ್ನು ಕದಡಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

‘ಪಿತ್ರೋಡಾ ಅವರ ಹೇಳಿಕೆ ಕಾಂಗ್ರೆಸ್‌ನ ಮನಃಸ್ಥಿತಿಯನ್ನು ತೋರಿಸಿದೆ. ವರ್ಣಭೇದ ನೀತಿ ಹಾಗೂ ಬಣ್ಣದ ಕುರಿತು ಮಾತನಾಡುವುದು ಕಾಂಗ್ರೆಸ್‌ನ ಡಿಎನ್‌ಎಯಲ್ಲೇ ಇದೆ’ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಹಿಂದೆ ವರ್ಣಭೇದ ನೀತಿಯಿಂದ ವಿಶ್ವದ ವಿವಿಧೆಡೆ ಸಾವು–ನೋವುಗಳಾಗಿತ್ತು. ನೆಲ್ಸನ್ ಮಂಡೇಲ, ಮಹಾತ್ಮಾ ಗಾಂಧೀಜಿ ಅವರಿಂದ ವರ್ಣಭೇದ ನೀತಿಯ ವಿರುದ್ಧ ಹೋರಾಟವೂ ನಡೆದಿತ್ತು. ಆದರೆ, ಕಾಂಗ್ರೆಸ್ ಬಣ್ಣದ ಆಧಾರದಲ್ಲಿ ಜನರ ಮನಸ್ಸನ್ನು ಒಡೆದಿದೆ. ಒಕ್ಕಲಿಗರು, ಲಿಂಗಾಯತರು, ದಲಿತರಿಗೆ ಕಾಂಗ್ರೆಸ್ ಯಾವ ಬಣ್ಣ ಹಚ್ಚುತ್ತದೆ’ ಎಂದು ಹೇಳಿದರು.

‘ಸೋನಿಯಾಗಾಂಧಿ ಇಟಲಿಯಿಂದ ಬಂದಿದ್ದರೂ ಅವರನ್ನು ಭಾರತೀಯರೆಂದು ಒಪ್ಪಿಕೊಳ್ಳುವಂತೆ ಕಾಂಗ್ರೆಸ್ ನಾಯಕರು ಒತ್ತಾಯಿಸುತ್ತಾರೆ. ಸೋನಿಯಾ ಈ ದೇಶದ ಸೊಸೆ ಎಂದು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಸೋನಿಯಾ, ರಾಹುಲ್‌ಗಾಂಧಿ, ಪ್ರಿಯಾಂಕ ಗಾಂಧಿ ವಾದ್ರಾ ಯಾವ ದೇಶದಿಂದ ಬಂದಿದ್ದಾರೆ ಎಂದು ಮೊದಲು ತಿಳಿಸಲಿ. ನುಡಿದಂತೆ ನಡೆಯುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ಗ್ಯಾರಂಟಿಗಳ ಮಾತನಾಡುತ್ತಾರೆ. ಈಗ ಬಿಳಿ ಗ್ಯಾರಂಟಿ, ಕಪ್ಪು ಗ್ಯಾರಂಟಿ, ಚೈನೀಸ್ ಗ್ಯಾರಂಟಿ, ಅರಬ್ಬಿ ಗ್ಯಾರಂಟಿ, ಆಫ್ರಿಕಾ ಗ್ಯಾರಂಟಿಯನ್ನು ನೀಡಿದ್ದಾರೆ’ ಎಂದು ಅಶೋಕ ಲೇವಡಿ ಮಾಡಿದರು.

ಮಲೆನಾಡು: ಅರಣ್ಯನಾಶ ಅವ್ಯಾಹತ

ಒಂದನೇ ಪುಟದಿಂದ...

ಕಂದಾಯ ಗೋಮಾಳದಲ್ಲಿನ ಮರಗಳ ಕಡಿದು ಆ ಜಾಗಕ್ಕೆ ಕೆಲವರು ಬೇಲಿ ಹಾಕಿದ್ದಾರೆ. ಇದಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ. ತಿಂಗಳ ಹಿಂದಷ್ಟೇ ಹೊಳೆಮರೂರಿನಲ್ಲಿ 25 ಎಕರೆ ಅರಣ್ಯ ನಾಶ ಮಾಡಿದ್ದನ್ನು ಗ್ರಾಮಸ್ಥರು ವಿರೋಧಿಸಿದ್ದರು.

ತೊರಗೊಂಡನಕೊಪ್ಪದ ಗೋಮಾಳದಲ್ಲಿ ಜಂಬೆ, ಹೊನ್ನೆ, ಮತ್ತಿ, ಹುಣಾಲು, ನಂದಿ ಮರಗಳ ಕಡಿದುರುಳಿಸಿ ಬೆಂಕಿ ಹಚ್ಚಲಾಗಿದೆ. ಈ ಬಗ್ಗೆ ಸ್ಥಳೀಯರು ಅರಣ್ಯ ಇಲಾಖೆಗೂ ದೂರು ನೀಡಿದ್ದಾರೆ. ‘ಆ ಭೂಮಿ ಕಂದಾಯ ಇಲಾಖೆಗೆ ಸೇರುತ್ತದೆ. ನಾವು ಹಲವು ಬಾರಿ ದೂರು ಕೊಟ್ಟರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ’ ಎಂದು ಗ್ರಾಮದ ನಿವಾಸಿ ರಾಕೇಶ್ ಆರೋಪಿಸುತ್ತಾರೆ.

‘ಸಾಗರ ತಾಲ್ಲೂಕಿನ ಮಂಚಾಲೆ ಬೊಮ್ಮತ್ತಿ, ಕರ್ಕಿಕೊಪ್ಪ ಗ್ರಾಮದಲ್ಲೂ ಅರಣ್ಯ ನಾಶ ನಡೆದಿದೆ. ಸಾಗರ–ವರದಹಳ್ಳಿ ಮಧ್ಯೆ ಇರುವ ಮಂಕಳಲೆ ಗ್ರಾಮದ ಕಾನು, ಬೆಟ್ಟ, ಭೂಮಿಯ ಅತಿಕ್ರಮಣವನ್ನು ಕಂದಾಯ, ಅರಣ್ಯ ಇಲಾಖೆ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಚುನಾವಣಾ ಕೆಲಸದ ನೆಪ ಹೇಳುತ್ತಾ ಅಧಿಕಾರಿಗಳು ಪುರುಸೊತ್ತು ಇಲ್ಲ ಎನ್ನುತ್ತಾರೆ’ ಎಂದು ಸೊರಬದ ಪರಿಸರ ಜಾಗೃತಿ ಟ್ರಸ್ಟ್‌ನ ಸಂಚಾಲಕ ಶ್ರೀಪಾದ ಬಿಚ್ಚುಗತ್ತಿ ಬೇಸರ ವ್ಯಕ್ತಪಡಿಸುತ್ತಾರೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳ ನಗರ ಹೋಬಳಿ, ಬಾಣಿಗಾ– ಮಾರುತಿಪುರ, ಬಟ್ಟೆ ಮಲ್ಲಪ್ಪ, ಕಟ್ಟೆಕೊಪ್ಪ ಸುತ್ತಲಿನ ಅರಣ್ಯ ಪ್ರದೇಶ ಜೆಸಿಬಿ ಕಾರ್ಯಾಚರಣೆಗೆ ನಲುಗಿದೆ. ಬೆಂಕಿ ಹಚ್ಚಿ ಮರ ಕಡಿದು ಭೂ ಒತ್ತುವರಿ ಮಾಡುವವರು ಬಡವರಲ್ಲ. ಅವರೊಂದಿಗೆ ಕೆಳಹಂತದ ಸಿಬ್ಬಂದಿ ಶಾಮೀಲಾಗದಿದ್ದರೆ ಇಷ್ಟೊಂದು ವ್ಯಾಪಕವಾಗಿ ಅರಣ್ಯ ನಾಶ ಆಗುತ್ತಿರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಹಿಂದೆಯೂ ಹೀಗೆಯೇ ಆಗಿತ್ತು: ಅಶೀಸರ

‘2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಇಂತಹದ್ದೇ ಅರಣ್ಯನಾಶ–ಒತ್ತುವರಿ ಪ್ರಕರಣಗಳು ನಡೆದಿದ್ದನ್ನು ರಾಜ್ಯ ಸರ್ಕಾರದ ಗಮನಕ್ಕೆ ತರಲಾಗಿತ್ತು. ಈ ಒತ್ತುವರಿ ಪ್ರಕರಣಗಳು ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿ ಬರುತ್ತವೆ. ಆದರೆ, ಪಶ್ಚಿಮ ಘಟ್ಟದ ಡೀಮ್ಡ್ ಅರಣ್ಯಗಳು ಅನಾಥವಾಗಿವೆ. ಅರಣ್ಯ ಇಲಾಖೆ ಅವುಗಳ ರಕ್ಷಣೆಗೆ ಮುಂದಾಗುತ್ತಿಲ್ಲ. ಕಂದಾಯ ಇಲಾಖೆಗೆ ಡೀಮ್ಡ್ ಅರಣ್ಯಗಳು ಕಾಣುವುದೇ ಇಲ್ಲ’ ಎಂದು ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ, ಶಿರಸಿಯ ಅನಂತ ಹೆಗಡೆ ಅಶೀಸರ ಹೇಳುತ್ತಾರೆ.

ಗೋಮಾಳದ ಒತ್ತುವರಿಯ ಬಗ್ಗೆ ತಹಶೀಲ್ದಾರ್ ಕಚೇರಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದೇವೆ. ಮನವಿ ತೆಗೆದುಕೊಂಡ ಮೇಲೆ ಇತ್ತ ತಲೆ ಹಾಕುವುದಿಲ್ಲ
ರಾಕೇಶ್, ತೊರಗೊಂಡನಕೊಪ್ಪ ಗ್ರಾಮಸ್ಥ

ಸಾಗರ, ತೀರ್ಥಹಳ್ಳಿಯಲ್ಲಿ ಕಂದಾಯ ಭೂಮಿ ಒತ್ತುವರಿ ಬಗ್ಗೆ ಎರಡು ದೂರುಗಳು ಬಂದಿದ್ದವು. ಕ್ರಮ ಕೈಗೊಂಡಿದ್ದೇವೆ. ಅಂದವಳ್ಳಿ ಸಂಗತಿ ಗಮನಕ್ಕೆ ಬಂದಿರಲಿಲ್ಲ.
ಗುರುದತ್ತ ಹೆಗಡೆ, ಶಿವಮೊಗ್ಗ ಜಿಲ್ಲಾಧಿಕಾರಿ

ಸಾರ್ವಜನಿಕ ಕಾರ್ಯಕ್ಕಾಗಿ ಜಾಗ ಮಂಜೂರಿಗೆ ಕೇಳಿದರೆ ಮಂಜೂರು ಮಾಡದ ಕಂದಾಯ ಇಲಾಖೆ ಈಗ ಖಾಸಗಿಯವರ ಒತ್ತುವರಿಗೆ ಅವಕಾಶ ಮಾಡಿಕೊಟ್ಟಿದೆ
ಜಗದೀಶ್, ತೊರಗೊಂಡನಕೊಪ್ಪ ಗ್ರಾಮಸ್ಥ

ಅರಣ್ಯ ಒತ್ತುವರಿಯ ಪ್ರಕರಣ ಜಿಲ್ಲೆಯಲ್ಲಿ ಕಂಡುಬಂದಿಲ್ಲ. ಸಣ್ಣ ಒತ್ತುವರಿ ಆದರೂ ಇಲಾಖೆಯ ಗಮನಕ್ಕೆ ಬರುತ್ತದೆ.
ಕೆ.ಟಿ.ಹನುಮಂತಪ್ಪ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ

ಚುನಾವಣೆ ಚರ್ಚೆಯಲ್ಲಿ ಚರ್ಮದ ಬಣ್ಣ ಎಳೆದು ತಂದದ್ದೇಕೆ; ಕಾಂಗ್ರೆಸ್ ನಾಯಕ ಚಿದಂಬರಂ ಪ್ರಶ್ನೆ

'ಪ್ರಧಾನಿಯಿಂದ 'ಜನಾಂಗೀಯ ದ್ವೇಷ'ದ ಮಾತು'

ನವದೆಹಲಿ (ಪಿಟಿಐ): ಸ್ಯಾಮ್ ಪಿತ್ರೋಡಾ ಅವರ ಹೇಳಿಕೆಗಳನ್ನು ಖಂಡಿಸುವ ಭರದಲ್ಲಿ ಚರ್ಮದ ಬಣ್ಣದ ವಿಷಯವನ್ನು ಚುನಾವಣಾ ಭಾಷಣಗಳಲ್ಲಿ ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ ನಡೆಯು 'ಜನಾಂಗೀಯ ದ್ವೇಷ'ವನ್ನು ತೋರಿಸುತ್ತದೆ ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಗುರುವಾರ ಟೀಕಿಸಿದ್ದಾರೆ.

ಈ ಹಿಂದೆ, ರಾಷ್ಟ್ರಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಯಶವಂತ ಸಿನ್ಹಾ ಅವರಿಗೆ ಚರ್ಮದ ಬಣ್ಣದ ಕಾರಣಕ್ಕಾಗಿ ವಿರೋಧ ಪಕ್ಷಗಳು ಅವರಿಗೆ ಬೆಂಬಲ ಸೂಚಿಸಿದ್ದವು ಎಂದು ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಕಳೆದ ಬಾರಿ, ರಾಷ್ಟ್ರಪತಿ ಆಯ್ಕೆಗಾಗಿ ನಡೆದಿದ್ದ ಚುನಾವಣೆಯಲ್ಲಿ ದ್ರೌಪದಿ ಮುರ್ಮು ಮತ್ತು ಸಿನ್ಹಾ ಅವರಿಬ್ಬರೇ ಅಭ್ಯರ್ಥಿಗಳಾಗಿದ್ದರು ಎಂದು ಹೇಳಿದ್ದಾರೆ.

'ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳು ಮುರ್ಮು ಅವರನ್ನು ಬೆಂಬಲಿಸಿದ್ದರೆ, ಕಾಂಗ್ರೆಸ್ ಸೇರಿದಂತೆ 17 ವಿರೋಧ ಪಕ್ಷಗಳು ಸಿನ್ಹಾ ಅವರನ್ನು ಬೆಂಬಲಿಸಿದ್ದವು ಎಂದೂ ಅವರು ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

'ರಾಷ್ಟ್ರಪತಿ ಆಯ್ಕೆಗೆ ನಡೆದ ಚುನಾವಣೆಯಲ್ಲಿ, ಚರ್ಮದ ಬಣ್ಣದ ಆಧಾರದಲ್ಲಿ ಅಭ್ಯರ್ಥಿಯೊಬ್ಬರಿಗೆ ಬೆಂಬಲಿಸಿರಲಿಲ್ಲ. ಇನ್ನೊಂದೆಡೆ, ಅಭ್ಯರ್ಥಿಯೊಬ್ಬರ ವಿರುದ್ಧ ನಿಲುವು ತೆಗೆದುಕೊಳ್ಳುವುದಕ್ಕೂ ಚರ್ಮದ ಬಣ್ಣವೇ ಕಾರಣವಾಗಿರಲಿಲ್ಲ. ಒಬ್ಬ ಅಭ್ಯರ್ಥಿಗೆ ಬೆಂಬಲಿಸುವುದು ಇಲ್ಲವೇ ವಿರೋಧ ವ್ಯಕ್ತಪಡಿಸುವುದು ರಾಜಕೀಯ ನಿರ್ಧಾರ. ಮತದಾನ ಮಾಡುವವರು ತಮ್ಮ ಪಕ್ಷದ ನಿರ್ಧಾರಕ್ಕೆ ಬದ್ಧರಾಗಿಯೇ ಇರುತ್ತಾರೆ' ಎಂದು ಚಿದಂಬರಂ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಬಿಜೆಪಿ ಪ್ರತಿಭಟನೆ

ನವದೆಹಲಿ (ಪಿಟಿಐ): ಸ್ಯಾಮ್ ಪಿತ್ರೋಡಾ ಅವರ ವಿವಾದಾತ್ಮಕ ಹೇಳಿಕೆಗೆ ಸಂಬಂಧಿಸಿ ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ನಾಯಕರು ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಇಲ್ಲಿನ ಅಕ್ಬರ್ ರಸ್ತೆಯಲ್ಲಿರುವ ಕಾಂಗ್ರೆಸ್ ಕೇಂದ್ರ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ್, 'ವಿವಿಧತೆ ಎಂಬುದು ಭಾರತದ ದೊಡ್ಡ ಶಕ್ತಿಯಾಗಿದ್ದು, ದೇಶದ ಒಗ್ಗಟ್ಟಿಗೂ ಇದೇ ಕಾರಣವಾಗಿದೆ' ಎಂದರು.

'ಪಿತ್ರೋಡಾ ನೀಡಿರುವ ಜನಾಂಗೀಯ ದ್ವೇಷದ ಹೇಳಿಕೆಗಳು ದೇಶದ ಏಕತೆಯನ್ನು ಅವಮಾನಿಸಿವೆ. ಇದು ಏಕಾಏಕಿ ಹೊರಹೊಮ್ಮಿರುವ ಹೇಳಿಕೆಯಲ್ಲ. ಲೋಕಸಭಾ ಚುನಾವಣೆಯ ಮೂರು ಹಂತಗಳ ಮತದಾನದ ನಂತರ ಪಕ್ಷ ಪರಾಭವಗೊಳ್ಳುವುದು ಖಚಿತಗೊಂಡ ಮೇಲೆ ಪಕ್ಷದ ನಾಯಕರು ಇಂತಹ ಜನಾಂಗೀಯ ದ್ವೇಷದ ಹೇಳಿಕೆಗಳನ್ನು ನೀಡಿದ್ದಾರೆ' ಎಂದೂ ಟೀಕಿಸಿದರು.

ಹೇಳಿಕೆ ಸಮರ್ಥಿಸಿದ ಅಧೀರ್

ಬಹರಾಂಪುರ (ಪಶ್ಚಿಮ ಬಂಗಾಳ) (ಪಿಟಿಐ): ಪಕ್ಷದ ಮುಖಂಡ ಸ್ಯಾಮ್ ಪಿತ್ರೋಡಾ ನೀಡಿರುವ 'ಜನಾಂಗೀಯ ಭೇದಭಾವ'ದ ಹೇಳಿಕೆಗಳನ್ನು ಕಾಂಗ್ರೆಸ್‌ನ ಪಶ್ಚಿಮ ಬಂಗಾಳ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಗುರುವಾರ ಸಮರ್ಥಿಸಿಕೊಂಡಿದ್ದಾರೆ.

'ಆಫ್ರಿಕಾದಂತೆ ಭಾರತವೂ ಕೂಡ ಕಪ್ಪು ಚರ್ಮದ ಜನರನ್ನು ಹೊಂದಿದೆ' ಎಂದು ಹೇಳಿದ್ದಾರೆ.

'ನಮ್ಮ ದೇಶದ ವಿವಿಧ ಭೌಗೋಳಿಕ ಗುಣಲಕ್ಷಣ ಗಮನಿಸಿದಾಗ, ಪ್ರಾದೇಶಿಕ ಗುಣಲಕ್ಷಣಗಳಲ್ಲಿಯೂ ವ್ಯತ್ಯಾಸ ಇರುವುದು ಕಂಡು ಬರುತ್ತದೆ. ಪ್ರೊಟೊ ಅಸ್ಟ್ರೊ ಅಲಿಯಸ್ ವರ್ಗ, ಮಂಗೋಲಾಯ್ಡ್ ವರ್ಗ ಹಾಗೂ ಕಪ್ಪು ವರ್ಣದ ಜನರನ್ನು ಭಾರತ ಹೊಂದಿದೆ. ಇದನ್ನೇ ಅಲ್ಲವೇ ಶಾಲೆಗಳಲ್ಲಿ ನಮಗೆ ಕಲಿಸಿದ್ದು, ಪ್ರತಿಯೊಬ್ಬರು ಒಂದೇ ರೀತಿ ಕಾಣುವುದಿಲ್ಲ. ಕೆಲವರು ಕಪ್ಪಗೆ, ಇನ್ನೂ ಕೆಲವರು ಬೆಳ್ಳಗಿರುತ್ತಾರೆ' ಎಂದೂ ಹೇಳಿದ್ದಾರೆ.

'ವೈಯಕ್ತಿಕ ಅಭಿಪ್ರಾಯಗಳ ಕುರಿತಾಗಿ ನಾನು ಹೆಚ್ಚಿಗೆ ಮಾತನಾಡುವುದಿಲ್ಲ' ಎಂದು ಅವರು ಇಲ್ಲಿನ ಪಕ್ಷದ ಕಚೇರಿಯಲ್ಲಿ ಹೇಳಿದ್ದಾರೆ.

ಅಧೀರ್ ರಂಜನ್ ಚೌಧರಿ ಬಹರಾಂಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ.

ರಾಹುಲ್ ಸಲಹೆಗಾರನಿಂದ ದೇಶ ವಿಭಜನೆ ಮಾತು: ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಟೀಕೆ

ಚಿತ್ರಕೂಟ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ ಅವರ ಹೇಳಿಕೆಗಳನ್ನು ಖಂಡಿಸಿರುವ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, 'ರಾಹುಲ್ ಗಾಂಧಿ ಅವರ ಸಲಹೆಗಾರ ಭಾರತವನ್ನು ಚರ್ಮದ ಬಣ್ಣದ ಆಧಾರದ ಮೇಲೆ ವಿಭಜನೆ ಮಾಡುವ ಬಗ್ಗೆ ಮಾತನಾಡಿದ್ದಾರೆ' ಎಂದು ಟೀಕಿಸಿದರು.

ಬಾಂದಾ ಲೋಕಸಭಾ ವ್ಯಾಪ್ತಿಯ ಚಿತ್ರಕೂಟದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕರು ದೇಶದ ಸಂಸ್ಕೃತಿ ಜೊತೆ ಚೆಲ್ಲಾಟವಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಧರ್ಮ ಆಧಾರಿತ ಮೀಸಲಾತಿಯನ್ನು ನೀಡುವ ಮೂಲಕ ದಲಿತರು, ಹಿಂದುಳಿದವರು ಹಾಗೂ ಬುಡಕಟ್ಟು ಜನರ ಹಕ್ಕುಗಳನ್ನು ಕಸಿದುಕೊಳ್ಳಲು ಕಾಂಗ್ರೆಸ್ ಹವಣಿಸುತ್ತಿದೆ' ಎಂದೂ ನಡ್ಡಾ ಆರೋಪಿಸಿದರು.

ಕಾಂಗ್ರೆಸ್ ಕ್ಷಮೆ ಯಾಚಿಸಲಿ–ಯೋಗಿ

ಲಖನೌ (ಪಿಟಿಐ): ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ ನೀಡಿರುವ 'ಜನಾಂಗೀಯ ದ್ವೇಷ'ದ ಹೇಳಿಕೆಗಳನ್ನು ಕಟುವಾಗಿ ಟೀಕಿಸಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ಈ ವಿಚಾರವಾಗಿ ಕಾಂಗ್ರೆಸ್ ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಗುರುವಾರ ಆಗ್ರಹಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೈಬಣ್ಣ ಹಾಗೂ ಜನಾಂಗದ ಗುಣಲಕ್ಷಣಗಳ ಆಧಾರದ ಮೇಲೆ ಜನರನ್ನು ವಿಭಜನೆ ಮಾಡುವ ಯತ್ನಗಳನ್ನು ಕಾಂಗ್ರೆಸ್ ಮುಂದುವರಿಸಿದೆ. 1947ರಲ್ಲಿ ದೇಶ ವಿಭಜನೆಯಾಗಲು ಕಾಂಗ್ರೆಸ್ ಪಕ್ಷವೇ ಕಾರಣ' ಎಂದು ಆರೋಪಿಸಿದರು.

ಸುದ್ದಿ 2 ನಿಮಿಷ

ಛತ್ತೀಸಗಢ: ಆರು ನಕ್ಸಲರು ಶರಣು

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಆರು ನಕ್ಸಲೀಯರು ಗುರುವಾರ ಶರಣಾಗಿದ್ದಾರೆ. ಅವರ ಬಗ್ಗೆ ಮಾಹಿತಿ ನೀಡಿದವರಿಗೆ ಈ ಮೊದಲು ₹36 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಡಿ ಪೊಜ್ಜ ಮತ್ತು ಅವರ ಪತ್ನಿ ಮಡಿ ಪೊಜ್ಜೆ ಅವರು ಶರಣಾದವರಲ್ಲಿ ಪ್ರಮುಖರಾಗಿದ್ದು, ಅವರ ತಲೆಗೆ ತಲಾ ₹8 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಅವರಲ್ಲದೆ ಆಯತೆ ಕೊರ್ಸಾ ಅಲಿಯಾಸ್ ಜಯಕ್ಕ, ಕವಾಸಿ ಮುಡಾ, ಕರಮ್ ನಾರಣ್ಣ ಅಲಿಯಾಸ್ ಭೀಮಾ ಮತ್ತು ಮಡ್ಕಮ್ ಸುಕ್ಕ ಅಲಿಯಾಸ್ ರೈನು ಶರಣಾದ ಇತರ ನಕ್ಸಲರಾಗಿದ್ದಾರೆ ಎಂದು ಸುಕ್ಮಾದ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ಹೇಳಿದ್ದಾರೆ.

ಶಿವಕಾಶಿ: ಅಗ್ನಿ ಅವಘಡ ಎಂಟು ಮಂದಿ ಸಾವು



ವಿರುಧುನಗರ (ತಮಿಳುನಾಡು) (ಪಿಟಿಐ): ಶಿವಕಾಶಿಯ ಪಟಾಕಿ ತಯಾರಿಕಾ ಘಟಕದಲ್ಲಿ ಗುರುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಐವರು ಮಹಿಳೆಯರು ಸೇರಿದಂತೆ 8 ಜನರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಿದ್ದಾರೆ.

ಏಳು ಕೋಣೆಗಳಲ್ಲಿ ಸಂಗ್ರಹಿಸಿಟ್ಟಿದ್ದ ಪಟಾಕಿಗಳಿಗೆ ಬೆಂಕಿ ಆಹುತಿಯಾಗಿವೆ ಎಂದು ತಿಳಿಸಿದ್ದಾರೆ.

ಘಟನೆ ವೇಳೆ ಖಾಸಗಿ ಪಟಾಕಿ ತಯಾರಿಕಾ ಘಟಕದಲ್ಲಿ ಸುಮಾರು 10 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದರು. ಅಗ್ನಿ ಅವಘಡಕ್ಕೆ ಕಾರಣವೇನೆಂದು ಸದ್ಯಕ್ಕೆ ತಿಳಿದುಬಂದಿಲ್ಲ. ಘಟಕವು ಪರವಾನಗಿಯನ್ನು ಪಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು, 'ದುರಂತದ ಬಗ್ಗೆ ತಿಳಿದು ತೀವ್ರ ದುಃಖವಾಯಿತು. ಗಾಯಾಳುಗಳು ಶೀಘ್ರ ಗುಣಮುಖರಾಗಲಿ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ನೀಟ್ ಆಕಾಂಕ್ಷಿ ನಾಪತ್ತೆ

ಕೋಟಾ (ರಾಜಸ್ಥಾನ, ಪಿಟಿಐ): ಇಲ್ಲಿ ನೀಟ್ ಕೋಚಿಂಗ್ ಪಡೆದ ವಿದ್ಯಾರ್ಥಿ ಒಬ್ಬರು ಪರೀಕ್ಷೆಯ ಬಳಿಕ, ತಾನು ಮುಂದೆ ಓದಲು ಬಯಸುವುದಿಲ್ಲ ಎಂದು ಪೋಷಕರಿಗೆ ಸಂದೇಶ ಕಳುಹಿಸಿ ನಾಪತ್ತೆಯಾಗಿದ್ದಾರೆ.

'ನಾನು ಯಾವುದೇ ಆಘಾತಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ ಮತ್ತು ಐದು ವರ್ಷ ಮನೆಯಿಂದ ದೂರ ಉಳಿಯುತ್ತೇನೆ' ಎಂದೂ ವಿದ್ಯಾರ್ಥಿ ಸಂದೇಶದಲ್ಲಿ ತಿಳಿಸಿದ್ದಾರೆ ಎಂದು ಪೊಲೀಸರು ಗುರುವಾರ ಹೇಳಿದ್ದಾರೆ.

ನಾಪತ್ತೆಯಾಗಿರುವ ವಿದ್ಯಾರ್ಥಿಯನ್ನು ರಾಜಸ್ಥಾನದ ಗಂಗಾಪುರ ನಗರದ ನಿವಾಸಿ ರಾಜೇಂದ್ರ ಪ್ರಸಾದ್ ಮೀನಾ ಎಂದು ಗುರುತಿಸಲಾಗಿದ್ದು, ಅವರು ಮೂರು ವರ್ಷಗಳಿಂದ ಕೋಟಾದ ಕೋಚಿಂಗ್ ಕೇಂದ್ರವೊಂದರಲ್ಲಿ ತರಬೇತಿ ಪಡೆಯುತ್ತಿದ್ದರು ಎಂದು ಡಿಎಸ್‌ಪಿ ಯೋಗೇಶ್ ಶರ್ಮಾ ತಿಳಿಸಿದ್ದಾರೆ. ವಿದ್ಯಾರ್ಥಿಯ ಪೋಷಕರು ನಾಪತ್ತೆ ಪ್ರಕರಣ ದಾಖಲಿಸಿದ್ದಾರೆ.

ಸಂದೇಶ್‌ಖಾಲಿ: ಬಿಜೆಪಿ ವಿರುದ್ಧ ಟಿಎಂಸಿ ವಾಗ್ದಾಳಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ನಡೆದ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಬಿಜೆಪಿಯು ಸುಳ್ಳುಗಳನ್ನು ಹರಡುವ ಕೆಲಸ ಮಾಡುತ್ತಿದೆ ಎಂದು ಟಿಎಂಸಿ ಪಕ್ಷವು ಗುರುವಾರ ಆರೋಪಿಸಿದೆ.

ಸ್ಥಳೀಯ ಬಿಜೆಪಿ ನಾಯಕರೊಬ್ಬರು ಹಲವಾರು ಮಹಿಳೆಯರಿಂದ ಖಾಲಿ ಹಾಳೆಯ ಮೇಲೆ ಸಹಿ ತೆಗೆದುಕೊಂಡಿದ್ದರು; ನಂತರ, ಟಿಎಂಸಿ ಮುಖಂಡರಿಂದ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ದೂರುಗಳನ್ನು ಅದೇ ಹಾಳೆಗಳ ಮೇಲೆ ಬರೆಯಲಾಯಿತು ಎಂದು ಹೇಳುವ ವಿಡಿಯೊಗಳು ಬಹಿರಂಗವಾದ ನಂತರದಲ್ಲಿ ಟಿಎಂಸಿ ಈ ರೀತಿ ಆರೋಪಿಸಿದೆ.

ಆದರೆ, ಯಾವುದೇ ವಿಡಿಯೊಗಳ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಸುದ್ದಿಸಂಸ್ಥೆಗೆ ಸಾಧ್ಯವಾಗಿಲ್ಲ. 'ಬಿಜೆಪಿಯು ಸುಳ್ಳುಗಳನ್ನು ಹರಡುತ್ತಿದೆ ಎಂಬುದನ್ನು ಇದು ಮತ್ತೆ ಸಾಬೀತುಪಡಿಸುತ್ತಿದೆ. ನಾವು ಚುನಾವಣಾ ಆಯೋಗಕ್ಕೂ ದೂರು ನೀಡಿದ್ದೇವೆ. ಸತ್ಯವನ್ನು ತಿರುಚುವ ಹಾಗೂ ಬೆದರಿಕೆ ಒಡ್ಡುವ ಈ ಹೇಯ ಕೃತ್ಯಕ್ಕೆ ಶಿಕ್ಷೆ ಕಾದಿದೆ' ಎಂದು ಟಿಎಂಸಿ ಪಕ್ಷದ ಹಿರಿಯ ಮುಖಂಡ ಹಾಗೂ ರಾಜ್ಯದ ಸಚಿವ ಶಶಿ ಪಾಂಜಾ ಹೇಳಿದ್ದಾರೆ.

ವಿಡಿಯೊ ಒಂದರಲ್ಲಿ ಮಹಿಳೆಯೊಬ್ಬರು, 'ಮೋಸ ಮಾಡಿ ನಮ್ಮಿಂದ ಖಾಲಿ ಹಾಳೆಯ ಮೇಲೆ ಸಹಿ ತೆಗೆದುಕೊಳ್ಳಲಾಯಿತು. ನನ್ನ ಹೆಸರಿನಲ್ಲಿ ಅತ್ಯಾಚಾರದ ದೂರುಗಳನ್ನು ದಾಖಲಿಸಲಾಗಿದೆ ಎಂಬುದು ನಂತರ ಗೊತ್ತಾಯಿತು. ಇದು ಬರೀ ಸುಳ್ಳು' ಎಂದು ಹೇಳಿದ್ದಾರೆ. ಖಾಲಿ ಹಾಳೆಯ ಮೇಲೆ ಸಹಿ ಹಾಕುವಂತೆ ಮಾಡಿದ ಬಿಜೆಪಿಯ ಮಹಿಳಾ ನಾಯಕರೊಬ್ಬರ ಮೇಲೆ ಅಧಿಕಾರಿಗಳು ಕ್ರಮ ಜರುಗಿಸಬೇಕು ಎಂದು ಆ ಮಹಿಳೆ ಒತ್ತಾಯಿಸಿದ್ದಾರೆ.

ಇನ್ನೊಂದು ವಿಡಿಯೊದಲ್ಲಿ, ಸಂದೇಶ್‌ಖಾಲಿಯ ನಿವಾಸಿ ಎನ್ನಲಾದ ಮಹಿಳೆಯೊಬ್ಬರು ಇದೇ ಬಗೆಯ ಮಾತುಗಳನ್ನು ಆಡಿದ್ದಾರೆ. ಬಿಜೆಪಿ ನಾಯಕಿ ಪಿಯಾಲಿ ದಾಸ್ ಅವರು ಬೀಸಿದ ಬಲೆಗೆ ತಾವು ಬಿದ್ದಿರುವುದಾಗಿ ಅವರು ಹೇಳಿದ್ದಾರೆ. ಪಿಯಾಲಿ ಅವರು 'ನಮ್ಮ ಹೆಸರು ಹಾಳು ಮಾಡಿದ್ದಾರೆ ಮತ್ತು ನಮಗೆ ಬಹಳ ನೋವು ಕೊಟ್ಟಿದ್ದಾರೆ' ಎಂದು ಇನ್ನೊಬ್ಬರು ಮಹಿಳೆ ದೂರಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಬಿಜೆಪಿ ನಾಯಕ ಸುವೇಂದು ಅಧಿಕಾರಿ, ಇವೆಲ್ಲವೂ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರ ಕೆಲಸ, ಈ ಬಗ್ಗೆ ನ್ಯಾಯಾಲಯದ ಮೆಟ್ಟಿಲೇರಲಾಗುವುದು ಎಂದು ಬ್ಯಾನರ್ಜಿ ಅವರ ಹೆಸರು ಉಲ್ಲೇಖಿಸದೆ ಹೇಳಿದ್ದಾರೆ. ಈ ವಿಡಿಯೊಗಳ ಹಿಂದೆ ಚುನಾವಣಾ ಕಾರ್ಯತಂತ್ರ ಸಂಸ್ಥೆಯಾದ ಐ–ಪ್ಯಾಕ್ ಕೈವಾಡವೂ ಇದೆ ಎಂದು ಅಧಿಕಾರಿ ಆರೋಪಿಸಿದ್ದಾರೆ.

ದೂರು ನೀಡಿದ ತೃಣಮೂಲ ಕಾಂಗ್ರೆಸ್

ನವದೆಹಲಿ (ಪಿಟಿಐ): ಸಂದೇಶ್‌ಖಾಲಿ ಘಟನೆಗೆ ಸಂಬಂಧಿಸಿದ ಅತ್ಯಾಚಾರ ಆರೋಪಗಳು 'ಸೃಷ್ಟಿಸಿದವು' ಎಂಬುದನ್ನು ಬಿಜೆಪಿಯ ಮುಖಂಡರೊಬ್ಬರು ಒಪ್ಪಿಕೊಂಡಿದ್ದಾರೆ, ಹೀಗಾಗಿ ಸಂಬಂಧಪಟ್ಟ ಮುಖಂಡರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವಂತೆ ಪೊಲೀಸರಿಗೆ ಸೂಚಿಸಬೇಕು ಎಂಬ ಮನವಿಯನ್ನು ಟಿಎಂಸಿ ನಾಯಕರು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.


ಟಿಎಂಸಿಯ ರಾಜ್ಯಸಭಾ ಸದಸ್ಯೆ ಸಾಗರಿಕಾ ಘೋಷ್ ಅವರು ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ಬಿಜೆಪಿಯ ಸುವೇಂದು ಅಧಿಕಾರಿ ಮತ್ತು ಇತರ ಕೆಲವು ಮುಖಂಡರು ಶೇಖ್ ಶಹಜಹಾನ್, ಶಿಬು ಹಜ್ರಾ ಮತ್ತು ಉತ್ತಮ್ ಸರ್ದಾರ್ ಅವರ ವಿರುದ್ಧ ಅತ್ಯಾಚಾರದ ಸುಳ್ಳು ದೂರುಗಳು ದಾಖಲಾಗುವಂತೆ ಮಾಡಿ ಗಂಭೀರ ಅಪರಾಧ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ವಿಡಿಯೊ ಒಂದರಲ್ಲಿ, ಸಂದೇಶ್‌ಖಾಲಿಯಲ್ಲಿ ಬಿಜೆಪಿಯ ಮಂಡಲ ಅಧ್ಯಕ್ಷ ಆಗಿರುವ ಗಂಗಾಧರ ಕಯಾಲ್ ಎಂಬುವವರು ಅಧಿಕಾರಿ ಅವರು ಪಿತೂರಿಯ ಹಿಂದೆ ಇದ್ದಾರೆ ಎಂದು ಹೇಳಿರುವ ಆಧಾರದಲ್ಲಿ ದೂರು ನೀಡಲಾಗಿದೆ.

ಟಿಎಂಸಿಯು ತನ್ನ ಎಕ್ಸ್ ಖಾತೆಯ ಮೂಲಕ ಹಂಚಿಕೊಂಡಿರುವ ವಿಡಿಯೊದಲ್ಲಿ, ಗಂಗಾಧರ್ ಅವರು ಲೈಂಗಿಕ ಕಿರುಕುಳದ ದೂರುಗಳನ್ನು ಅಧಿಕಾರಿ ಅವರ ಚಿತಾವಣೆಯ ಕಾರಣದಿಂದಾಗಿ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಆದರೆ ಈ ವಿಡಿಯೊ ನಕಲಿ, ಇದನ್ನು ಕೃತಕ ಬುದ್ಧಿಮತ್ತೆಯನ್ನು ಬಳಸಿ ಸಿದ್ಧಪಡಿಸಲಾಗಿದೆ ಎಂದು ಬಿಜೆಪಿಯ ಪಶ್ಚಿಮ ಬಂಗಾಳ ಅಧ್ಯಕ್ಷ ಸುಕಾಂತ ಮಜುಂದಾರ್ ಆರೋಪಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಆರೋಪ: ಸಿ.ಸಿ.ಟಿವಿ ದೃಶ್ಯ ಬಹಿರಂಗಪಡಿಸಿದ ಬೋಸ್



ಆನಂದ ಬೋಸ್

ಕೋಲ್ಕತ್ತಾ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ರಾಜಭವನ ಆವರಣದ ಮೇ 2ರ ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಸಾರ್ವಜನಿಕರ ಎದುರು ಗುರುವಾರ ಬಹಿರಂಗಪಡಿಸಿದರು.

ರಾಜಭವನದ ಮುಖ್ಯದ್ವಾರದ (ಉತ್ತರ) ಎರಡು ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಕೆಲವು ಜನರ ಮುಂದೆ, ನೆಲ ಮಹಡಿಯಲ್ಲಿ ಪ್ರಸಾರ ಮಾಡಲಾಯಿತು.

ಒಂದು ಗಂಟೆ ಪ್ರಸಾರ ಮಾಡಲಾದ ವಿಡಿಯೊದಲ್ಲಿ, ನೀಲಿ ಬಣ್ಣದ ಜೀನ್ಸ್ ಮತ್ತು ಟಾಪ್ ಧರಿಸಿದ್ದ ಮಹಿಳೆ ಪೊಲೀಸ್ ಔಟ್‌ಪೋಸ್ಟ್‌ನತ್ತ ತೆರಳುವ ದೃಶ್ಯವಿದೆ.

'ಕನಿಷ್ಠ 92 ಜನರು ಸಿ.ಸಿ.ಟಿ.ವಿ ದೃಶ್ಯಗಳನ್ನು ನೋಡುವ ಇಂಗಿತ ವ್ಯಕ್ತಪಡಿಸಿ ಇ–ಮೇಲ್ ಮತ್ತು ಕರೆ ಮಾಡಿದ್ದರು. ಆದರೆ ಕೆಲವರು ಮಾತ್ರ ಗುರುವಾರ ಭಾಗಿಯಾಗಿದ್ದರು. ಘಟನೆ ಬಗ್ಗೆ ಜನರೇ ತೀರ್ಮಾನ ಕೈಗೊಳ್ಳಲಿ ಎಂಬುದು ಇದರ ಉದ್ದೇಶ' ಎಂದು ರಾಜಭವನದ ಅಧಿಕಾರಿಗಳು ಹೇಳಿದ್ದಾರೆ.

ಬೋಸ್ ಅವರು ಏ. 24 ಮತ್ತು ಮೇ 2ರಂದು ತಮ್ಮ ನಿವಾಸದಲ್ಲಿ ಲೈಂಗಿಕ ದೌರ್ಜನ್ಯ ನಡೆಸಿರುವುದಾಗಿ ರಾಜಭವನದ ಮಹಿಳಾ ಉದ್ಯೋಗಿ ಒಬ್ಬರು ದೂರು ನೀಡಿದ್ದಾರೆ.

ರಾಜ್ಯಪಾಲರಿಗೆ ದುಷ್ಯಂತ್ ಚೌಟಾಲ ಪತ್ರ

ಬಹುಮತ ಸಾಬೀತಿಗೆ ಜೆಜೆಪಿ ಆಗ್ರಹ



ದುಷ್ಯಂತ್ ಚೌಟಾಲ

ಚಂಡೀಗಢ (ಪಿಟಿಐ): ಮೂವರು ಪಕ್ಷೇತರ ಶಾಸಕರು ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಂಡಿರುವ ಬೆನ್ನಲ್ಲೇ, ಮುಖ್ಯಮಂತ್ರಿಗೆ ಬಹುಮತ ಸಾಬೀತುಪಡಿಸುವಂತೆ ಸೂಚಿಸಬೇಕು ಎಂದು ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರನ್ನು ಜೆಜೆಪಿ ನಾಯಕ ದುಷ್ಯಂತ್ ಚೌಟಾಲ ಒತ್ತಾಯಿಸಿದ್ದಾರೆ.

ಮೂವರು ಪಕ್ಷೇತರ ಶಾಸಕರು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂಪಡೆದಿದ್ದಾಗಿ ಮಂಗಳವಾರ ಘೋಷಿಸಿದ ನಂತರ, ಮುಖ್ಯಮಂತ್ರಿ ಸೈನಿ ನೇತೃತ್ವದ ಸರ್ಕಾರ ಅಲ್ಪ ಮತಕ್ಕೆ ಕುಸಿದಿದೆ.

ಈ ಕುರಿತು ರಾಜ್ಯಪಾಲರಿಗೆ ಬುಧವಾರ ಪತ್ರ ಬರೆದಿರುವ ದುಷ್ಯಂತ್ ಅವರು, 'ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಈಗ ಬಹುಮತ ಇಲ್ಲ. ಹೀಗಾಗಿ, ಕೂಡಲೇ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ಸೂಚಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಇನ್ನೊಂದೆಡೆ, ಮೂವರು ಪಕ್ಷೇತರರು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸು ಪಡೆದ ನಂತರ, ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕಾಗಿ ಕಾಂಗ್ರೆಸ್‌ಗೆ ಬೆಂಬಲ ನೀಡಲು ಸಿದ್ಧ ಎಂಬುದಾಗಿ ಜನನಾಯಕ ಜನತಾ ಪಾರ್ಟಿ (ಜೆಜೆಪಿ) ಬುಧವಾರ ಹೇಳಿತ್ತು.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಸೈನಿ, ತಮ್ಮ ಸರ್ಕಾರಕ್ಕೆ ಯಾವುದೇ ತೊಂದರೆ ಇಲ್ಲ ಎಂದು ಹೇಳಿದ್ದರು. ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಕೂಡ ಇದೇ ಮಾತನ್ನು ಹೇಳಿದ್ದಾರಲ್ಲದೇ, 'ಹಲವು ಶಾಸಕರು ಬಿಜೆಪಿ ಜೊತೆ ಸಂಪರ್ಕದಲ್ಲಿದ್ದು, ಯಾವುದೇ ಚಿಂತಿಸುವ ಅಗತ್ಯ ಇಲ್ಲ' ಎಂದಿದ್ದರು.



ಸೇತುವೆ–ಸಂಕಷ್ಟ

ಮೇಘಾಲಯದ ಪಿನುರಸ್ಲಾ ಪಟ್ಟಣ ಸಮೀಪದ ಮಾವಕಿರ್ನೋಟ್ ಗ್ರಾಮಕ್ಕೆ ಸಂಪರ್ಕಿಸುವ ಬಂಬೂಗಳಿಂದ ನಿರ್ಮಿಸಲಾದ ಸೇತುವೆಯನ್ನು ಮಹಿಳೆಯರು ದಾಟುತ್ತಿದ್ದುದು ಗುರುವಾರ ಕಂಡುಬಂತು –ಪಿಟಿಐ ಚಿತ್ರ

ಸಂತ್ರಸ್ತೆ ಪ್ರತಿಕೂಲ ಸಾಕ್ಷ್ಯ ನುಡಿದರೂ ಶಿಕ್ಷೆ: ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ರಿಮಿನಲ್ ಪ್ರಕರಣದ ವಿಚಾರಣೆಯಲ್ಲಿ, ಪಾಟೀಸವಾಲಿನ ಸಂದರ್ಭದಲ್ಲಿ ಸಾಕ್ಷಿಯು ತನ್ನ ಮಾತು ಬದಲಿಸಿದರೂ, ಆ ವ್ಯಕ್ತಿಯು ಮೊದಲು ಹೇಳಿದ್ದ ಮಾತುಗಳನ್ನು ಸಂಪೂರ್ಣವಾಗಿ ಕಡೆಗಣಿಸಬೇಕಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಸಂದೀಪ್ ಮೆಹ್ತಾ ಅವರಿದ್ದ ವಿಭಾಗೀಯ ಪೀಠವು, ವ್ಯಕ್ತಿಯೊಬ್ಬನಿಗೆ ಸಾಮೂಹಿಕ ಅತ್ಯಾಚಾರದ ಅಪರಾಧಕ್ಕೆ ವಿಧಿಸಿದ್ದ 10 ವರ್ಷಗಳ ಜೈಲುಶಿಕ್ಷೆಯನ್ನು ಎತ್ತಿಹಿಡಿದಿದೆ.

'ಸಾಕ್ಷಿಗಳನ್ನು ಪಾಟೀಸವಾಲಿಗೆ ಒಳಪಡಿಸಿದ ದಿನಕ್ಕೂ ಮೊದಲ ಬಾರಿಗೆ ಅವರನ್ನು ಪ್ರಶ್ನೆಗೆ ಗುರಿಪಡಿಸಿದ ದಿನಕ್ಕೂ ದೀರ್ಘ ಅಂತರ ಇರುವ ಕಾರಣಕ್ಕೆ, ಆರೋಪಿಗಳು ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ್ದಾರೆ ಅನಿಸುತ್ತದೆ. ಹೀಗಾಗಿ ಸಾಕ್ಷಿಗಳು ತಮ್ಮ ಮಾತಿನಿಂದ ಹಿಂದೆ ಸರಿದಿದ್ದಾರೆ. ಮೊದಲ ಬಾರಿಗೆ ನೀಡಿದ ಮಾಹಿತಿಯಲ್ಲಿ ಅವರು ಆರೋಪಿಗಳ ವಿರುದ್ಧ ಆರೋಪ ಹೊರಿಸುವ ಕೆಲಸ ಮಾಡಿದ್ದಾರೆ' ಎಂದು ಪೀಠ ಹೇಳಿದೆ.

ಮದ್ರಾಸ್ ಹೈಕೋರ್ಟ್ ಹಾಗೂ ವೆಲ್ಲೋರ್‌ನ ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶಗಳನ್ನು ಪ್ರಶ್ನಿಸಿ ಸೆಲ್ವಮಣಿ ಎನ್ನುವ ವ್ಯಕ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠವು ವಜಾಗೊಳಿಸಿದೆ. ಹೈಕೋರ್ಟ್ ಹಾಗೂ ವಿಚಾರಣಾ ನ್ಯಾಯಾಲಯವು ಸೆಲ್ವಮಣಿಗೆ ಶಿಕ್ಷೆ ವಿಧಿಸಿದ್ದವು.

'ಸಂತ್ರಸ್ತೆ, ಆಕೆಯ ತಾಯಿ ಮತ್ತು ಸಂಬಂಧಿಯು ಪಾಟೀಸವಾಲಿನ ವೇಳೆ ಪ್ರಾಸಿಕ್ಯೂಷನ್ ಪರ ವಾಗಿ ಮಾತನಾಡಿಲ್ಲ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ಸಂತ್ರಸ್ತೆ, ಆಕೆಯ ತಾಯಿ ನೀಡಿದ ಪುರಾವೆಯನ್ನು ಎಫ್‌ಐಆರ್ ಜೊತೆ ಪರೀಕ್ಷಿಸಿದಾಗ, ಸಿಆರ್‌ಪಿಸಿಯ ಸೆಕ್ಷನ್ 164 ಅಡಿ ದಾಖಲಿಸಿದ ಹೇಳಿಕೆ ಜೊತೆ ಹೋಲಿಸಿದಾಗ, ವೈದ್ಯಕೀಯ ತಜ್ಞರ ಪುರಾವೆ ಜೊತೆ ಪರಿಶೀಲಿಸಿದಾಗ ಮಹಿಳೆಯು ಮೊದಲ ಬಾರಿಗೆ ಹೇಳಿಕೆ ನೀಡಿದಾಗ ಇದ್ದ ವಿವರಣೆಗೆ ಹೊಂದಿಕೆ ಆಗುತ್ತದೆ' ಎಂದು ಪೀಠ ಹೇಳಿದೆ.

'ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿ'

ನವದೆಹಲಿ (ಪಿಟಿಐ): ಸಹಮತ ಹೊಂದಿಲ್ಲದಿದ್ದಾಗಲೂ ಕ್ಲಿಕ್ಕಿಸಿದ, ಖಾಸಗಿ ಕ್ಷಣಗಳ ಚಿತ್ರಗಳು ಇಂಟರ್ನೆಟ್ ಶೋಧದ ಸಂದರ್ಭದಲ್ಲಿ ಬಳಕೆದಾರರಿಗೆ ಸಿಗದಂತೆ ಮಾಡಬೇಕು ಎಂದು ಏಕಸದಸ್ಯ ಪೀಠವೊಂದು ನೀಡಿದ್ದ ಆದೇಶದ ಪುನರ್ ಪರಿಶೀಲನೆಗೆ ಅರ್ಜಿ ಸಲ್ಲಿಸುವಂತೆ ದೆಹಲಿ ಹೈಕೋರ್ಟ್, ಮೈಕ್ರೊಸಾಫ್ಟ್ ಮತ್ತು ಗೂಗಲ್ ಕಂಪನಿಗಳಿಗೆ ಸೂಚಿಸಿದೆ.

ಮಕ್ಕಳನ್ನು ಲೈಂಗಿಕ ಶೋಷಣೆಗೆ ಗುರಿಪಡಿಸಿದ ಚಿತ್ರ ಹಾಗೂ ವಿಡಿಯೊಗಳನ್ನು ಪತ್ತೆ ಮಾಡಿದಂತೆ, ಸಹಮತ ಹೊಂದಿಲ್ಲದಿದ್ದಾಗಲೂ ಕ್ಲಿಕ್ಕಿಸಿದ ಖಾಸಗಿ ಕ್ಷಣಗಳ ಚಿತ್ರಗಳನ್ನು ಗುರುತಿಸಲು ಈಗಿರುವ ತಂತ್ರಜ್ಞಾನದಿಂದ ಸಾಧ್ಯವಿಲ್ಲ. ಹೀಗಾಗಿ, 2023ರ ಏಪ್ರಿಲ್‌ನಲ್ಲಿ ಏಕಸದಸ್ಯ ಪೀಠ ನೀಡಿದ ಆದೇಶ ಪಾಲಿಸಲು ತಮ್ಮಿಂದ ಸಾಧ್ಯವಿಲ್ಲ ಎಂದು ಮೈಕ್ರೊಸಾಫ್ಟ್, ಗೂಗಲ್ ಪರ ವಕೀಲರು ತಿಳಿಸಿದರು.

ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗುತ್ತಿದೆಯಾದರೂ, ಅದು ಸಹಮತ ಇಲ್ಲದ ಖಾಸಗಿ ಕ್ಷಣಗಳ ಚಿತ್ರಗಳನ್ನು ತಾನಾಗಿಯೇ ಗುರುತಿಸುವ ಹಂತವನ್ನು ತಲುಪಿಲ್ಲ ಎಂದು ವಕೀಲರು ವಿವರಿಸಿದರು. ಇಂಟರ್ನೆಟ್ ಶೋಧ ಪರಿಕರಗಳು ಯಾವುದೇ ವಸ್ತು–ವಿಷಯಕ್ಕೆ ತಾವು ಜಾಗ ಕಲ್ಪಿಸಿರುವುದಿಲ್ಲ; ಆಕ್ಷೇಪಾರ್ಹ ವಸ್ತು–ವಿಷಯಗಳನ್ನು ಅವು ಇರುವ ವೆಬ್‌ಸೈಟ್‌ನಿಂದ ತೆಗೆದ ನಂತರ ಅವು ಶೋಧ ಪರಿಕರಗಳ ಕಣ್ಣಿಗೆ ಕಾಣುವುದಿಲ್ಲ ಎಂದರು.

'ನಿಮ್ಮಿಂದ ಮಾಡಲು ಸಾಧ್ಯವೇ ಇಲ್ಲದ ಕೆಲಸವನ್ನು ಮಾಡಿ ಎಂದು ಯಾರೂ ಹೇಳುವುದಿಲ್ಲ' ಎಂದು ಹೇಳಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ನೇತೃತ್ವದ ವಿಭಾಗೀಯ ಪೀಠವು, ಆದೇಶವನ್ನು ಪುನರ್ ಪರಿಶೀಲಿಸುವಂತೆ ಕೋರಿ ಏಕಸದಸ್ಯ ಪೀಠದ ಮೊರೆಹೋಗುವಂತೆ ಸೂಚಿಸಿತು.

ಸಹಮತ ಇಲ್ಲದಿದ್ದಾಗಲೂ ಕ್ಲಿಕ್ಕಿಸಿದ ಖಾಸಗಿ ಕ್ಷಣಗಳ ಚಿತ್ರಗಳು ಸಂತ್ರಸ್ತ ವ್ಯಕ್ತಿಯ ಖಾಸಗಿತನದ ಹಕ್ಕನ್ನು ಉಲ್ಲಂಘಿಸುತ್ತವೆ, ಅವರಿಗೆ ಮಾನಸಿಕವಾಗಿ ನೋವು ಉಂಟುಮಾಡುತ್ತವೆ ಎಂದು ಏಕಸದಸ್ಯ ಪೀಠವು ಹೇಳಿತ್ತು.

ಕೇಜ್ರಿವಾಲ್‌ಗೆ ಜಾಮೀನು: ಇ.ಡಿ ವಿರೋಧ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದಲ್ಲಿ ಮಧ್ಯಂತರ ಜಾಮೀನು ನೀಡುವುದಕ್ಕೆ ಇ.ಡಿ ಗುರುವಾರ ವಿರೋಧ ವ್ಯಕ್ತಪಡಿಸಿದೆ.

ಚುನಾವಣೆಯಲ್ಲಿ ಪ್ರಚಾರ ನಡೆಸುವುದು ಮೂಲಭೂತ ಹಕ್ಕೂ ಅಲ್ಲ, ಸಾಂವಿಧಾನಿಕ ಹಕ್ಕೂ ಅಲ್ಲ ಎಂದು ಇ.ಡಿ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ಹೇಳಿದ್ದಾರೆ. 'ಚುನಾವಣೆಯಲ್ಲಿ ಪ್ರಚಾರ ನಡೆಸುವುದು ಕಾನೂನುಬದ್ಧ ಹಕ್ಕು ಕೂಡ ಅಲ್ಲ' ಎಂದು ಇ.ಡಿ ತಿಳಿಸಿದೆ. ವ್ಯಕ್ತಿಯು ಚುನಾವಣಾ ಕಣದಲ್ಲಿ ಇದ್ದರೂ, ಅವರ ಪರವಾಗಿಯೇ ಪ್ರಚಾರ ಕೈಗೊಳ್ಳಲು ಮಧ್ಯಂತರ ಜಾಮೀನು ನೀಡಿದ ಉದಾಹರಣೆ ಇಲ್ಲ ಎಂದು ಅದು ಹೇಳಿದೆ. ಮಧ್ಯಂತರ ಜಾಮೀನಿಗೆ ಸಂಬಂಧಿಸಿದ ಆದೇಶವನ್ನು ಶುಕ್ರವಾರ ನೀಡುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಮುಕ್ತ ಜೈಲು ವ್ಯವಸ್ಥೆಗೆ ಕೋರ್ಟ್ ಒಲವು

ನವದೆಹಲಿ (ಪಿಟಿಐ): ಜೈಲುಗಳಲ್ಲಿ ಕೈದಿಗಳ ಸಂಖ್ಯೆಯು ಅತಿಯಾಗುತ್ತಿರುವ ಸಮಸ್ಯೆಗೆ ಪರಿಹಾರವಾಗಿ ಹಾಗೂ ಕೈದಿಗಳ ಪುನರ್ವಸತಿಯ ದೃಷ್ಟಿಯಿಂದ ಮುಕ್ತ ಜೈಲುಗಳನ್ನು ಸ್ಥಾಪಿಸುವುದು ಸೂಕ್ತವಾಗಬಹುದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಅರೆ ಮುಕ್ತ ಅಥವಾ ಮುಕ್ತ ಜೈಲು ವ್ಯವಸ್ಥೆಗಳು, ಶಿಕ್ಷೆಗೆ ಗುರಿಯಾದವರಿಗೆ ಜೈಲಿನ ಆವರಣದಿಂದ ಹೊರಗಡೆ ಹಗಲು ಹೊತ್ತಿನಲ್ಲಿ ಕೆಲಸ ಮಾಡುವುದಕ್ಕೆ ಕೂಡ ಅವಕಾಶ ಕಲ್ಪಿಸುತ್ತವೆ. ಆ ಮೂಲಕ ಅವರಿಗೆ ಹಣ ಸಂಪಾದಿಸಲು ಅವಕಾಶ ಮಾಡಿಕೊಡುತ್ತವೆ. ಸಂಜೆ ಅವರು ಜೈಲಿಗೆ ಮರಳಬೇಕಾಗುತ್ತದೆ.

ಕೈದಿಗಳು ಸಮಾಜದಲ್ಲಿ ಬೆರೆಯುವಂತೆ ಆಗಲು ಹಾಗೂ ಅವರ ಮೇಲಿನ ಮಾನಸಿಕ ಒತ್ತಡವನ್ನು ತಗ್ಗಿಸಲು ಈ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಜೈಲುಗಳು ಹಾಗೂ ಕೈದಿಗಳಿಗೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ವಿಭಾಗೀಯ ಪೀಠವು, ಮುಕ್ತ ಜೈಲುಗಳ ಅಸ್ತಿತ್ವವನ್ನು ದೇಶದಾದ್ಯಂತ ಹೆಚ್ಚಿಸುವ ಬಯಕೆ ತನಗೆ ಇರುವುದಾಗಿ ಹೇಳಿತು.

'ಜೈಲುಗಳಲ್ಲಿ ಕೈದಿಗಳ ಸಂಖ್ಯೆಯು ವಿಪರೀತ ಆಗುತ್ತಿರುವ ಸಮಸ್ಯೆಗೆ ಒಂದು ಪರಿಹಾರ ಮುಕ್ತ ಜೈಲುಗಳನ್ನು ಸ್ಥಾಪಿಸುವುದು. ಈ ವ್ಯವಸ್ಥೆಯು ರಾಜಸ್ಥಾನದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ' ಎಂದು ಪೀಠವು ಹೇಳಿದೆ. ಆದರೆ, ಜೈಲುಗಳ ಸುಧಾರಣೆಗೆ ಸಂಬಂಧಿಸಿದ ವಿಚಾರವನ್ನು ತಾನು ಆಲಿಸಲು ಮುಂದಾಗುವುದಿಲ್ಲ, ಅದಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಬೇರೆ ಪೀಠಗಳು ಈಗಾಗಲೇ ವಿಚಾರಣೆಗೆ ಎತ್ತಿಕೊಂಡಿವೆ ಎಂಬುದನ್ನು ಪೀಠವು ಸ್ಪಷ್ಟಪಡಿಸಿತು.

ಮುಕ್ತ ಜೈಲು ವ್ಯವಸ್ಥೆಯ ಬಗ್ಗೆ ಎಲ್ಲ ರಾಜ್ಯಗಳಿಂದ ಪ್ರತಿಕ್ರಿಯೆ ಕೋರಲಾಗಿದೆ, 24 ರಾಜ್ಯಗಳು ಪ್ರತಿಕ್ರಿಯೆ ಸಲ್ಲಿಸಿವೆ ಎಂದು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಪರ ವಕೀಲರು ತಿಳಿಸಿದರು.

ಮೋದಿ–ರಾಹುಲ್ ಚರ್ಚೆಗೆ ಆಹ್ವಾನ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಸಾರ್ವಜನಿಕ ಚರ್ಚೆಯಲ್ಲಿ ಭಾಗವಹಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಿ ಹಿರಿಯ ಪತ್ರಕರ್ತ ಮತ್ತು ಇಬ್ಬರು ಮಾಜಿ ನ್ಯಾಯಮೂರ್ತಿಗಳು ಪತ್ರ ಬರೆದಿದ್ದಾರೆ.

'ದಿ ಹಿಂದೂ' ಪತ್ರಿಕೆಯ ಮಾಜಿ ಸಂಪಾದಕ ಎನ್. ರಾಮ್, ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಮದನ್ ಲೋಕೂರ್ ಮತ್ತು ದೆಹಲಿ ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಎ.ಪಿ.ಶಾ ಅವರು ಈ ಕುರಿತು ಪತ್ರ ಬರೆದಿದ್ದಾರೆ.

ವಾಣಿಜ್ಯೇತರ ಮತ್ತು ಪಕ್ಷಾತೀತ ವೇದಿಕೆಯಲ್ಲಿ ಸಾರ್ವಜನಿಕ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಅವರು ಉಭಯ ನಾಯಕರನ್ನು ಅವರು ಒತ್ತಾಯಿಸಿದ್ದಾರೆ. ಒಂದು ವೇಳೆ ಭಾಗವಹಿಸಲು ಸಾಧ್ಯವಾಗದಿದ್ದರೆ, ಚರ್ಚೆಗೆ ತಮ್ಮ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡುವಂತೆ ಅವರು ಆಗ್ರಹಿಸಿದ್ದಾರೆ.

ದ್ವೇಷ ಭಾಷಣ ಮಾಡುವವರ ವಿರುದ್ಧ ಕ್ರಮ: ನಿರ್ದೇಶನ ನೀಡುವಂತೆ ಮನವಿ

ಮೋದಿ, ಠಾಕೂರ್ ವಿರುದ್ಧ ತನಿಖೆ ಕೋರಿ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸಕ್ತ ಲೋಕಸಭಾ ಚುನಾವಣೆ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಅನುರಾಗ್ ಠಾಕೂರ್ ದ್ವೇಷ ಭಾಷಣ ಮಾಡಿದ್ದಾರೆ ಎಂಬ ಆರೋಪಗಳಿದ್ದು, ಈ ಕುರಿತು ತನಿಖೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಅದೇ ರೀತಿ, ಪ್ರಚಾರ ಭಾಷಣ ಮಾಡಿರುವವರ ಪೈಕಿ ಕೆಲ ರಾಜಕೀಯ ನಾಯಕರು ವಿಶೇಷವಾಗಿ ಬಿಜೆಪಿ ಪರವಾಗಿ ಮತ ಯಾಚನೆ ಸಂದರ್ಭದಲ್ಲಿ ದ್ವೇಷ ಭಾಷಣ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಯೋಗಕ್ಕೆ ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಕೋರಲಾಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಇ.ಎ.ಎಸ್.ಶರ್ಮಾ ಹಾಗೂ ಐಐಎಂನ ನಿವೃತ್ತ ಡೀನ್ ತ್ರಿಲೋಚನ ಶಾಸ್ತ್ರಿ ಎಂಬುವವರು ಈ ಕುರಿತು ಅರ್ಜಿ ಸಲ್ಲಿಸಿದ್ದಾರೆ ಎಂದು ಆನ್‌ಲೈನ್ ಸುದ್ದಿ ಪೋರ್ಟಲ್ 'ಲೈವ್ ಲಾ ಡಾಟ್ ಇನ್' ವರದಿ ಮಾಡಿದೆ.

ಏ.21ರಂದು ಮೋದಿ, 27ರಂದು ಕೇಂದ್ರ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮಾಡಿರುವ ಭಾಷಣಗಳನ್ನು ಅವರು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

'ತೆಲಂಗಾಣದ ನಿಜಾಮಾಬಾದ್ ಲೋಕಸಭಾ ಕ್ಷೇತ್ರದ ಸಂಸದ ಬಿಜೆಪಿಯ ಅರವಿಂದ ಧರ್ಮಪುರಿ ಅವರ ಅಧಿಕೃತ ಖಾತೆಯಿಂದ, ಇನ್‌ಸ್ಟಾಗ್ರಾಮ್ ಹಾಗೂ 'ಎಕ್ಸ್' ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಇವರಿಬ್ಬರ ಭಾಷಣಗಳನ್ನು ಪದೇಪದೇ ಹಂಚಿಕೊಳ್ಳಲಾಗಿದೆ' ಎಂದೂ ಅರ್ಜಿದಾರರು ವಿವರಿಸಿದ್ದಾರೆ.

'ಪ್ರಧಾನಿ ಮೋದಿ ಹಾಗೂ ಸಚಿವ ಠಾಕೂರ್ ಅವರು ಮುಸ್ಲಿಂ ಸಮುದಾಯದ ವಿರುದ್ಧ ರೂಢಿಗತವಾದ ಮಾದರಿಯ ಹಾಗೂ ಸಮುದಾಯವನ್ನು ಕೆಟ್ಟದಾಗಿ ಚಿತ್ರಿಸುವಂತಹ ಭಾಷಣಗಳನ್ನು ಮಾಡಿದ್ದಾರೆ. ಇವರ ಭಾಷಣಗಳು ವಿವಿಧ ಮಾಧ್ಯಮಗಳ ಮೂಲಕ ದೇಶದಾದ್ಯಂತ ಪ್ರಸಾರಗೊಂಡಿವೆ' ಎಂದು ಅರ್ಜಿಯಲ್ಲಿ ಹೇಳಿದ್ದಾರೆ.

'ದ್ವೇಷ ಭಾಷಣಗಳ ಮೂಲಕ ಈ ಇಬ್ಬರು ಮಾದರಿ ನೀತಿ ಸಂಹಿತೆ, ಪ್ರಜಾ ಪ್ರತಿನಿಧಿ ಕಾಯ್ದೆ ಉಲ್ಲಂಘಿಸಿದ್ದಾರೆ. ಐಪಿಸಿ ಅಡಿ ಶಿಕ್ಷಿಸಬಹುದಾದಂತಹ ಉಲ್ಲಂಘನೆ ಮಾಡಿದ್ದರೂ, ಇವರ ಬಗ್ಗೆ ಚುನಾವಣಾ ಆಯೋಗ ಮಾತ್ರ ಜಾಣಕುರುಡು ಪ್ರದರ್ಶಿಸುತ್ತಿದೆ' ಎಂದು ವಿವರಿಸಿದ್ದಾರೆ.

ಮಾದರಿ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ, ಆಮ್ ಆದ್ಮಿ ಪಕ್ಷ, ಬಿಆರ್‌ಎಸ್ ಸೇರಿದಂತೆ ಇತರ ರಾಜಕೀಯ ಪಕ್ಷಗಳ ನಾಯಕರ ವಿರುದ್ಧ ಸ್ವಯಂಪ್ರೇರಿತ ಕ್ರಮ ತೆಗೆದುಕೊಂಡಿರುವ ಆಯೋಗವು ಪ್ರಧಾನಿ ಮೋದಿ ಮತ್ತು ಸಚಿವ ಠಾಕೂರ್ ವಿರುದ್ಧ ಮಾತ್ರ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಅರ್ಜಿದಾರರು ಮನವಿಯಲ್ಲಿ ವಿವರಿಸಿದ್ದಾರೆ.

ಸಿಆರ್‌ಪಿಎಫ್ ಯೋಧನ ಕಡ್ಡಾಯ ನಿವೃತ್ತಿ ಎತ್ತಿಹಿಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ



ನವದೆಹಲಿ: ಸಹೋದ್ಯೋಗಿ ಮೇಲೆ ಹಲ್ಲೆ ಮಾಡಿದ್ದಕ್ಕಾಗಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಸಿಬ್ಬಂದಿಗೆ ಕಡ್ಡಾಯ ನಿವೃತ್ತಿ ನೀಡಿರುವ ಕ್ರಮವನ್ನು ಸುಪ್ರೀಂ ಕೋರ್ಟ್ ಬುಧವಾರ ಎತ್ತಿಹಿಡಿದಿದೆ.

'ಕಡ್ಡಾಯ ನಿವೃತ್ತಿಯು ಉದ್ಯೋಗಿಯನ್ನು ಕೆಲಸದಿಂದ ತೆಗೆಯುವ ಮತ್ತೊಂದು ವಿಧಾನವಾಗಿದೆ. ನಿವೃತ್ತಿ ನಂತರ ಸಿಗುವ ಸೌಲಭ್ಯಗಳಿಗೆ ತೊಂದರೆಯಾಗದಂತೆ ಅಯೋಗ್ಯ ಸಿಬ್ಬಂದಿಯನ್ನು ನೌಕರಿಯಿಂದ ತೆಗೆಯಲು ವ್ಯಾಪಕವಾಗಿ ಬಳಕೆಯಲ್ಲಿರುವ ವಿಧಾನವೂ ಇದಾಗಿದೆ' ಎಂದು ಹೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

'ಸಾಮಾನ್ಯವಾಗಿ ಕಡ್ಡಾಯ ನಿವೃತ್ತಿಯನ್ನು ಶಿಕ್ಷೆ ಎಂಬುದಾಗಿ ಪರಿಗಣಿಸಲಾಗುವುದಿಲ್ಲ. ಆದರೆ, ತನಿಖೆ ಒಳಪಡಿಸಿದ ನಂತರ ಶಿಕ್ಷೆ ರೂಪದಲ್ಲಿ ಈ ಕ್ರಮ ಕೈಗೊಳ್ಳಲು ಸೇವಾ ನಿಯಮಗಳಲ್ಲಿ ಅವಕಾಶ ಇದ್ದಲ್ಲಿ, ಹಾಗೆ ಮಾಡಬೇಕಾಗು ತ್ತದೆ' ಎಂದೂ ಪೀಠ ಹೇಳಿದೆ.

ಸಿಆರ್‌ಪಿಎಫ್‌ನಲ್ಲಿ ಹೆಡ್‌ಕಾನ್‌ಸ್ಟೆಬಲ್ ಆಗಿದ್ದ ಸಂತೋಷಕುಮಾರ್ ತಿವಾರಿ ಎಂಬುವವರು 2005ರಲ್ಲಿ ತನ್ನ ಸಹೋದ್ಯೋಗಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದರು. ಇದಕ್ಕಾಗಿ, ಸಿಆರ್‌ಪಿಎಫ್ ಕಾಯ್ದೆಯ ನಿಯಮ 27ರಡಿ ತಿವಾರಿ ಅವರಿಗೆ ಕಡ್ಡಾಯ ನಿವೃತ್ತಿ ನೀಡಲಾಗಿತ್ತು. ಇದನ್ನು ಎತ್ತಿ ಹಿಡಿದು ಒಡಿಶಾ ಹೈಕೋರ್ಟ್ ತೀರ್ಪು ನೀಡಿತ್ತು. ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ತಿವಾರಿ ಮೇಲ್ಮನವಿ ಸಲ್ಲಿಸಿದ್ದರು.



ರಾಷ್ಟ್ರ ರಾಜಧಾನಿಯಲ್ಲಿ ಈ ಬಾರಿ ಬಿಜೆಪಿಗೆ ಆಮ್ ಆದ್ಮಿ ಪಕ್ಷ–ಕಾಂಗ್ರೆಸ್ ಮೈತ್ರಿಕೂಟದ ಸವಾಲು

‘ಏಳು’ ಸುತ್ತಿನ ಕೋಟೆಯಲ್ಲಿ ನೇರ ಸೆಣಸು

• ಮಂಜುನಾಥ ಹೆಬ್ಬಾರ್

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ 2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ತ್ರಿಕೋನ ಸ್ಪರ್ಧೆ ನಡೆದಿತ್ತು. ಎಲ್ಲ ಏಳು ಕ್ಷೇತ್ರಗಳನ್ನೂ ಬಿಜೆಪಿ ಗೆದ್ದುಕೊಂಡಿತ್ತು. ಈ ಸಲ ಬಿಜೆಪಿ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ)–ಕಾಂಗ್ರೆಸ್ ಮೈತ್ರಿಕೂಟದ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಪರ್ಯಾಯ ರಾಜಕಾರಣದ ಪ್ರಯೋಗವನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡ ರಾಜ್ಯ ದೆಹಲಿ. 2020ರಲ್ಲಿ ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 70 ಕ್ಷೇತ್ರಗಳ ಪೈಕಿ 62ರಲ್ಲಿ ಎಎಪಿ ಗೆದ್ದಿತ್ತು. ಅದಕ್ಕೆ ಕೆಲ ತಿಂಗಳು ಮೊದಲು ನಡೆದ ಲೋಕಸಭಾ ಚುನಾವಣೆಯಲ್ಲಿ ದೆಹಲಿಯ ಎಲ್ಲ ಏಳು ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು.

ನಾಲ್ಕು ವರ್ಷಗಳ ಬಳಿಕ ಬಂದಿರುವ ಲೋಕಸಭಾ ಚುನಾವಣೆಯಲ್ಲಿ ಎಎಪಿಯ ಸ್ಥಿತಿ ಅಷ್ಟು ಸುಭದ್ರವಾಗಿಲ್ಲ. ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿ ಸಿಲುಕಿಕೊಂಡು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಜೈಲು ಪಾಲಾಗಿದ್ದಾರೆ. ಉಪಮುಖ್ಯಮಂತ್ರಿಯಾಗಿದ್ದ ಮನೀಷ್ ಸಿಸೋಡಿಯಾ ಹಾಗೂ ಸಚಿವರಾಗಿದ್ದ ಸತ್ಯೇಂದ್ರ ಜೈನ್ ಅವರೂ ವರ್ಷದ ಹಿಂದೆಯೇ ಜೈಲು ಸೇರಿದ್ದಾರೆ. ಲೋಕಸಭಾ ಚುನಾವಣೆಗೆ ಪಕ್ಷಕ್ಕೆ ತಾರಾ ಪ್ರಚಾರಕರೇ ಇಲ್ಲದಂತಾಗಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿಯೇ ದೆಹಲಿಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಪಕ್ಷ ಎಎಪಿ. ಆದರೆ, ಅಬಕಾರಿ ನೀತಿ ಹಗರಣದಿಂದಾಗಿ ಪಕ್ಷಕ್ಕೆ ಕಳಂಕ ಅಂಟಿಕೊಂಡಿದೆ. ಇದನ್ನೇ ಬಿಜೆಪಿ ಚುನಾವಣಾ ಪ್ರಚಾರ ಅಸ್ತ್ರವನ್ನಾಗಿ ಮಾಡಿಕೊಂಡಿದೆ.

ಬಿಜೆಪಿಯನ್ನು ಸೋಲಿಸಲೇಬೇಕು ಎಂದು ಪಣ ತೊಟ್ಟಿರುವ ಎಎಪಿ ಹಾಗೂ ಕಾಂಗ್ರೆಸ್ ಈ ಸಲ ಮೈತ್ರಿ ಮಾಡಿಕೊಂಡು ಅಖಾಡಕ್ಕೆ ಧುಮುಕಿವೆ. ಅಲ್ಪಸಂಖ್ಯಾತರು, ಕೊಳೆಗೇರಿ ನಿವಾಸಿಗಳು, ಅಸಂಘಟಿತ ವಲಯದ ಕಾರ್ಮಿಕರು ಮತ್ತು ಮಧ್ಯಮ ವರ್ಗದ ಮತಗಳು ಕೈ ಹಿಡಿದರೆ ಬಿಜೆಪಿಯ ಗೆಲುವಿನ ಓಟಕ್ಕೆ ತಡೆ ಒಡ್ಡಬಹುದು ಎಂಬ ವಿಶ್ವಾಸದಲ್ಲಿ ಈ ಪಕ್ಷಗಳಿವೆ. ಎಎಪಿ ಸರ್ಕಾರದ ಅವಧಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕಣ್ಣಿಗೆ ಕಾಣಿಸುವ ರೀತಿ ಆಗಿರುವ ಕೆಲಸಗಳು ಕೈಬಿಡಲಿಕ್ಕಿಲ್ಲ ಎಂಬ ಲೆಕ್ಕಾಚಾರ ಮೈತ್ರಿಕೂಟದ ನಾಯಕರದ್ದು. ಉಚಿತ ಕೊಡುಗೆಗಳು ಸಹ ಮತ ತಂದುಕೊಡಲಿವೆ ಎಂಬುದು ಅವರ ನಂಬಿಕೆ.

ಎಎಪಿ ಮತ್ತು ಕಾಂಗ್ರೆಸ್ ನಡುವಿನ ಮತ ವಿಭಜನೆಯಿಂದ 2014 ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗಿತ್ತು. 2019ರಲ್ಲೂ ಎಎಪಿ ಹಾಗೂ ಕಾಂಗ್ರೆಸ್ ಮೈತ್ರಿಗೆ ಪ್ರಯತ್ನಗಳು ನಡೆದಿದ್ದವು. ಆದರೆ, ರಾಜ್ಯಮಟ್ಟದ ನಾಯಕರ ವಿರೋಧದಿಂದಾಗಿ ಮೈತ್ರಿ ಏರ್ಪಟ್ಟಿರಲಿಲ್ಲ. ಈ ಸಲ ಮೈತ್ರಿ ಆಗಿರುವುದರಿಂದ ಬಿಜೆಪಿಯಿಂದ ಕೆಲವು ಸ್ಥಾನಗಳನ್ನು ಕಿತ್ತುಕೊಳ್ಳಬಹುದು ಎಂಬುದು ಎಎಪಿ–ಕಾಂಗ್ರೆಸ್ ನಾಯಕರ ವಿಶ್ವಾಸ. ಎಎಪಿ ನಾಲ್ಕರಲ್ಲಿ ಹಾಗೂ ಕಾಂಗ್ರೆಸ್ ಮೂರರಲ್ಲಿ ಸ್ಪರ್ಧಿಸುತ್ತಿವೆ. ಮೈತ್ರಿ ವಿರೋಧಿಸಿ ಕಾಂಗ್ರೆಸ್‌ನ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಅರವಿಂದರ್ ಸಿಂಗ್ ಲವ್ಲಿ ಸೇರಿದಂತೆ ನಾಲ್ಕೈದು ನಾಯಕರು ಪಕ್ಷದಿಂದ ಹೊರ ನಡೆದಿದ್ದಾರೆ.

ಕೇಂದ್ರ ಸರ್ಕಾರದ ಸಾಧನೆಗಳು ಮತ್ತು ಮೋದಿ ಅವರ ವರ್ಚಸ್ಸನ್ನೇ ಬಿಜೆಪಿ ನಂಬಿಕೊಂಡಿದೆ. ಆಡಳಿತ ವಿರೋಧಿ ಅಲೆಯ ಕಾರಣಕ್ಕೆ ಆರು ಸಂಸದರಿಗೆ ಬಿಜೆಪಿ ಈ ಸಲ ಟಿಕೆಟ್ ನಿರಾಕರಿಸಿದೆ. ಹೊಸ ಮುಖಗಳಿಗೆ ಮಣೆ ಹಾಕಿದೆ. ಜಾತಿ ಸಮೀಕರಣದ ಆಧಾರದಲ್ಲಿ ಕಮಲ ಪಾಳಯ ಟಿಕೆಟ್ ಹಂಚಿಕೆ ಮಾಡಿದೆ. ಕಳೆದೆರಡು ಚುನಾವಣೆಗಳಲ್ಲಿ ಮೋದಿ ಅಲೆ ತೀವ್ರವಾಗಿತ್ತು. ಈ ಸಲ ಅಂತಹ ಅಲೆ ಇಲ್ಲ. ದಶಕದಿಂದ ಹಲವು ಪ್ರಯೋಗ ನಡೆಸಿದರೂ ರಾಜ್ಯಮಟ್ಟದಲ್ಲಿ ಪ್ರಭಾವಿ ನಾಯಕರನ್ನು ಬೆಳೆಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಕಳೆದೊಂದು ದಶಕದಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಎಎಪಿಯನ್ನು ದೆಹಲಿಯ ಜನರು ಗೆಲ್ಲಿಸಿಕೊಂಡು ಬರುತ್ತಿದ್ದಾರೆ. ಈ ಸಲವೂ ಹಾಗೆಯೇ ಆಗಲಿದೆ ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರ.

ಅಖಾಡದ ಸುತ್ತ

ಉದಿತ್ ರಾಜ್–ಚಂದೋಲಿಯಾ

ವಾಯವ್ಯ ದೆಹಲಿ ಕ್ಷೇತ್ರದಲ್ಲಿ ಮಾಜಿ ಮೇಯರ್ ಯೋಗೇಂದ್ರ ಚಂದೋಲಿಯಾ ಅವರು ಬಿಜೆಪಿಯ ಅಭ್ಯರ್ಥಿ. ದಲಿತ ಮುಖಂಡರಾಗಿರುವ ಅವರು ದೆಹಲಿ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ. ಮಾಜಿ ಸಂಸದ ಉದಿತ್ ರಾಜ್ ಅವರು ಕಾಂಗ್ರೆಸ್ ಹುರಿಯಾಳು. ಮಾಜಿ ಐಆರ್‌ಎಸ್ ಅಧಿಕಾರಿಯಾಗಿರುವ ಅವರು 2014ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಇದೇ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದಿದ್ದರು.

ಬಾನ್ಸುರಿ– ಭಾರ್ತಿ





ಬಿಜೆಪಿಯ ಭದ್ರಕೋಟೆ ಎಂದೇ ಪರಿಗಣಿತವಾಗಿರುವ ನವದೆಹಲಿ ಕ್ಷೇತ್ರದಲ್ಲಿ ಬಾನ್ಸುರಿ ಸ್ವರಾಜ್ ಕಮಲ ಪಡೆಯ ಹುರಿಯಾಳು. ಕೇಂದ್ರದ ಮಾಜಿ ಸಚಿವೆ ಸುಷ್ಮಾ ಸ್ವರಾಜ್ ಪುತ್ರಿಯಾಗಿರುವ ಅವರು ಸುಪ್ರೀಂ ಕೋರ್ಟ್‌ನ ವಕೀಲೆ. ಬಿಜೆಪಿಗೆ ಪ್ರಬಲ ಸವಾಲು ಒಡ್ಡಲು ಹಿರಿಯ ಶಾಸಕ ಸೋಮನಾಥ ಭಾರ್ತಿ ಅವರನ್ನು ಎಎಪಿ ಕಣಕ್ಕಿಳಿಸಿದೆ. ಎಎಪಿಯ ಮೊದಲ ಸರ್ಕಾರದಲ್ಲಿ ಭಾರ್ತಿ ಅವರು ಕಾನೂನು ಹಾಗೂ ಪ್ರವಾಸೋದ್ಯಮ ಸಚಿವರಾಗಿದ್ದರು.

ಬಿಧೂರಿ–ಸಹಿರಾಮ್

ದಕ್ಷಿಣ ದೆಹಲಿ ಕ್ಷೇತ್ರದಲ್ಲಿ ದೆಹಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ರಾಮ್‌ವೀರ್ ಸಿಂಗ್ ಬಿಧೂರಿ ಕೇಸರಿ ಪಾಳಯದಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಗುಜ್ಜರ್ ಮುಖಂಡರಾಗಿರುವ ಅವರು 1993ರಲ್ಲಿ ಮೊದಲ ಬಾರಿಗೆ ದೆಹಲಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಎಎಪಿಯು ಎರಡು ಬಾರಿಯ ಶಾಸಕ ಸಹಿರಾಮ್ ಪೆಹಲ್ವಾನ್ ಅವರನ್ನು ಕಣಕ್ಕಿಳಿಸಿದೆ. ಅವರು ಎರಡು ಅವಧಿಗೆ ಪಾಲಿಕೆ ಸದಸ್ಯರಾಗಿದ್ದರು.

ಅಗರವಾಲ್–ಖಂಡೇಲ್‌ವಾಲ್

ಚಾಂದಿನಿ ಚೌಕ್ ಕ್ಷೇತ್ರದಲ್ಲಿ ಹಿರಿಯ ಮುಖಂಡ ಜೆ.ಪಿ.ಅಗರವಾಲ್ ‘ಕೈ’ ಹುರಿಯಾಳು. ಈ ಕ್ಷೇತ್ರದಿಂದ 1984, 1989 ಹಾಗೂ 1996ರಲ್ಲಿ ಗೆದ್ದಿರುವ ಅವರ ಅನುಭವದ ಬಲ ಪಕ್ಷಕ್ಕೆ ಅನುಕೂಲ ಮಾಡಿಕೊಡಲಿದೆ ಎಂದು ಕಾಂಗ್ರೆಸ್ ನಾಯಕರು ಭಾವಿಸಿದ್ದಾರೆ. ಬಿಜೆಪಿಯು ಕಾರ್ಮಿಕ ಮುಖಂಡ ಪ್ರವೀಣ್ ಖಂಡೇಲ್‌ವಾಲ್ ಅವರಿಗೆ ಮಣೆ ಹಾಕಿದೆ.


ಸೆಹ್ರಾವತ್–ಮಿಶ್ರಾ

ಪಶ್ಚಿಮ ದೆಹಲಿ ಕ್ಷೇತ್ರದಲ್ಲಿ ಮಾಜಿ ಮೇಯರ್ ಕಮಲಜಿತ್ ಸೆಹ್ರಾವತ್ ಕೇಸರಿ ಪಾಳಯದ ಅಭ್ಯರ್ಥಿ. ಮಾಜಿ ಸಂಸದ ಮಹಾಬಲ ಮಿಶ್ರಾ ಅವರನ್ನು ಎಎಪಿ ಕಣಕ್ಕಿಳಿಸಿದೆ. ಕಾಂಗ್ರೆಸ್‌ನಿಂದ ಈ ಹಿಂದೆ ಸಂಸದರಾಗಿ ಆಯ್ಕೆಯಾಗಿದ್ದ ಮಿಶ್ರಾ 2022ರಲ್ಲಿ ಎಎಪಿಗೆ ಸೇರ್ಪಡೆಯಾಗಿದ್ದರು.

ಹರ್ಷ್–ಕುಲದೀಪ್


ಪೂರ್ವ ದೆಹಲಿಯ ಸಾಮಾನ್ಯ ಕ್ಷೇತ್ರದಲ್ಲಿ ಎಎಪಿಯು ದಲಿತ ಶಾಸಕ ಕುಲದೀಪ್ ಕುಮಾರ್ ಅವರನ್ನು ಕಣಕ್ಕಿಳಿಸಿದೆ. ಸ್ವಚ್ಛತಾ ಕಾರ್ಮಿಕನ ಪುತ್ರರಾಗಿರುವ ಕುಲದೀಪ್ ಅವರು 2017ರಲ್ಲಿ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದರು. 2020ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿದ್ದರು. ಬಿಜೆಪಿಯು ಹರ್ಷ್ ಮಲ್ಹೋತ್ರಾ ಅವರಿಗೆ ಮಣೆ ಹಾಕಿದೆ.

ತಿವಾರಿ–ಕನ್ಹಯ್ಯ





ಈಶಾನ್ಯ ದೆಹಲಿ ಕ್ಷೇತ್ರದಲ್ಲಿ ಬಿಹಾರ ಮೂಲದ ಇಬ್ಬರು ಅಭ್ಯರ್ಥಿಗಳ ಹಣಾಹಣಿಗೆ ವೇದಿಕೆ ಸೃಷ್ಟಿಯಾಗಿದೆ. ಎರಡು ಬಾರಿ ಗೆಲುವಿನ ನಗೆ ಬೀರಿರುವ ಭೋಜ್‌ಪುರಿ ನಟ ಹಾಗೂ ಗಾಯಕ ಮನೋಜ್ ತಿವಾರಿ ಅವರು ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದ ಏಳು ಸಂಸದರ ಪೈಕಿ ತಿವಾರಿ ಅವರಿಗೆ ಮಾತ್ರ ಬಿಜೆಪಿ ಈ ಸಲ ಟಿಕೆಟ್ ಕೊಟ್ಟಿದೆ. ದಲಿತ ಮುಖಂಡ ಕನ್ಹಯ್ಯ ಕುಮಾರ್ ಅವರು ‘ಕೈ’ ಅಭ್ಯರ್ಥಿ.



ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ರಾಹುಲ್ ಗಾಂಧಿ ತಿರುಗೇಟು

‘ಹಲವು ಯೋಜನೆ ಅದಾನಿಗೆ’

ಹೈದರಾಬಾದ್ (ಪಿಟಿಐ): ಮೋದಿ ಸರ್ಕಾರವು ಕಳೆದ 10 ವರ್ಷಗಳಲ್ಲಿ ಬಂದರು, ವಿಮಾನ ನಿಲ್ದಾಣ ಮತ್ತು ರಕ್ಷಣಾ ಒಪ್ಪಂದಗಳಂತಹ ಹಲವಾರು ಯೋಜನೆಗಳನ್ನು ‘ಅದಾನಿಗೆ ನೀಡಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಆರೋಪಿಸಿದ್ದಾರೆ.



ರಾಹುಲ್ ಅವರು ಅದಾನಿ ಮತ್ತು ಅಂಬಾನಿ ಬಗ್ಗೆ ಈಗ ಮಾತನಾಡುತ್ತಿಲ್ಲ ಎಂಬ ಪ್ರಧಾನಿ ಹೇಳಿಕೆಗೆ ತೆಲಂಗಾಣದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಅವರು ತಿರುಗೇಟು ನೀಡಿದರು.

‘ಪ್ರಧಾನಿ ಮೋದಿ ಅವರು ಇಡೀ ದೇಶದಲ್ಲಿ 20 ರಿಂದ 22 ಶ್ರೀಮಂತರ ಪರವಾಗಿ ಕೆಲಸ ಮಾಡಿ ಅವರನ್ನು ಶತಕೋಟ್ಯಧಿಪತಿಗಳನ್ನಾಗಿ ಮಾಡಿದ್ದಾರೆ. ಮೀಸಲಾತಿ ರದ್ದುಗೊಳಿಸಲು ಹಲವು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿದರು’ ಎಂದು ದೂರಿದರು.

‘ಬಿಜೆಪಿಯು ಮೀಸಲಾತಿ ರದ್ದುಗೊಳಿಸಲು ಪ್ರಯತ್ನಿಸುತ್ತಿದ್ದರೆ, ಕಾಂಗ್ರೆಸ್ ಪಕ್ಷವು ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳ ಮೀಸಲಾತಿಯ ಶೇ 50ರ ಮಿತಿಯನ್ನು ಹೆಚ್ಚಿಸಲು ಬಯಸುತ್ತದೆ’ ಎಂದರು.

ಬಿಜೆಪಿಗೆ ಆತಂಕ ಶುರುವಾಗಿದೆ– ಅಖಿಲೇಶ್: ‘ಅದಾನಿ–ಅಂಬಾನಿ’ ಹೇಳಿಕೆ ವಿಚಾರದಲ್ಲಿ ಪ್ರಧಾನಿಗೆ ತಿರುಗೇಟು ನೀಡಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ‘ಚುನಾವಣೆಯಲ್ಲಿ ಬಿಜೆಪಿಗೆ ಸೋಲಿನ ಆತಂಕ ಶುರುವಾಗಿದೆ’ ಎಂದಿದ್ದಾರೆ.

ಉತ್ತರ ಪ್ರದೇಶದ ಬಹ್ರಾಯಿಚ್‌ನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಪ್ರಧಾನಿ ಅವರು ಕಳೆದ ದಿನ ಮಾಡಿದ ಭಾಷಣವನ್ನು ನೀವು ಕೇಳಿರಬಹುದು. ಇಷ್ಟು ದಿನ ಅವರು ಎಲ್ಲರ ಬಗ್ಗೆಯೂ ಕೆಟ್ಟ ಮಾತುಗಳನ್ನು ಆಡುತ್ತಿದ್ದರು. ಆದರೆ ಈಗ ತಮ್ಮದೇ ಮಂದಿಯ (ಅದಾನಿ ಮತ್ತು ಅಂಬಾನಿ) ವಿರುದ್ಧ ಟೀಕೆ ಮಾಡಲು ಆರಂಭಿಸಿದ್ದಾರೆ. ಬಿಜೆಪಿಗೆ ಸೋಲಿನ ಆತಂಕ ಎದುರಾಗಿರುವುದು ಇದಕ್ಕೆ ಕಾರಣ’ ಎಂದು ಹೇಳಿದ್ದಾರೆ.

‘ಬಾಬ್ರಿ ಲಾಕ್’ ಹೇಳಿಕೆ ಸುಳ್ಳು: ಪ್ರಿಯಾಂಕಾ



ರಾಯ್‌ಬರೇಲಿ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಯೋಧ್ಯೆ ರಾಮಮಂದಿರಕ್ಕೆ ‘ಬಾಬ್ರಿ ಲಾಕ್’ ಹಾಕಲಿದೆ ಎಂಬ ಪ್ರಧಾನಿ ಹೇಳಿಕೆ ‘ಸಂಪೂರ್ಣ ಸುಳ್ಳು’ ಎಂದು ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಗುರುವಾರ ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷವು ಕಾಶ್ಮೀರದಲ್ಲಿ 370ನೇ ವಿಧಿ ಮತ್ತೆ ಜಾರಿಗೆ ತರದಿರಲು ಹಾಗೂ ಅಯೋಧ್ಯೆ ರಾಮಮಂದಿರಕ್ಕೆ ‘ಬಾಬ್ರಿ ಬೀಗ’ ಹಾಕದಿರಲು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟಕ್ಕೆ 400 ಸ್ಥಾನಗಳು ಬೇಕು’ ಎಂದು ಮೋದಿ ಅವರು ಮಧ್ಯಪ್ರದೇಶದ ಧಾರ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಈಚೆಗೆ ಹೇಳಿದ್ದರು.

‘ಇದು ಸಂಪೂರ್ಣ ಸುಳ್ಳು. ರಾಮಮಂದಿರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪನ್ನು ಗೌರವಿಸುವುದಾಗಿ ಕಾಂಗ್ರೆಸ್ ಪಕ್ಷವು ಹಲವು ಸಲ ಹೇಳಿದೆ. ನ್ಯಾಯಾಲಯದ ತೀರ್ಪನ್ನು ಈ ಹಿಂದೆಯೂ ಗೌರವಿಸಿದ್ದೇವು, ಮುಂದೆಯೂ ಗೌರವಿಸುವೆವು’ ಎಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.


ಪ್ರಣಾಳಿಕೆ ಓದಲಿ: ‘ಪ್ರಧಾನಿ ಮೋದಿ ಅವರು ನನಗಿಂತ ಹಿರಿಯರಾಗಿದ್ದರೂ, ಕಾಂಗ್ರೆಸ್ ಪ್ರಣಾಳಿಕೆ ಓದುವಂತೆ ಅವರಿಗೆ ಸಲಹೆ ನೀಡುತ್ತೇನೆ. ಆ ಬಳಿಕ ಪ್ರಣಾಳಿಕೆ ಬಗ್ಗೆ ಪ್ರತಿಕ್ರಿಯಿಸಲಿ. ಆದರೆ ಅವರು ಪ್ರಣಾಳಿಕೆ ಓದಿಲ್ಲ. ಅವರ ಮನಸ್ಸಿಗೆ ಬಂದದ್ದೆಲ್ಲಾ ಪ್ರಣಾಳಿಕೆಯಲ್ಲಿ ಇದೆ ಎನ್ನುತ್ತಿದ್ದಾರೆ. ಅವರು ಪ್ರಣಾಳಿಕೆಯಲ್ಲಿ ಇದೆ ಎಂದು ಹೇಳುತ್ತಿರುವ ಎಲ್ಲವೂ ವಾಸ್ತವವಾಗಿ ಪ್ರಣಾಳಿಕೆಯಲ್ಲಿ ಇಲ್ಲ’ ಎಂದರು.

‘ಮೋದಿ ಸರ್ಕಾರದ ಎಲ್ಲ ನೀತಿಗಳು ಶ್ರೀಮಂತರಿಗೆ ನೆರವಾಗಲು ರೂಪಿಸಲಾಗಿದೆ. ಬಡವರ ಬದುಕಿನ ಸಂಕಷ್ಟವನ್ನರಿತು ರೂಪಿಸಿರುವ ಒಂದೇ ಒಂದು ನೀತಿ ಇಂದು ದೇಶದಲ್ಲಿಲ್ಲ’ ಎಂದು ಟೀಕಿಸಿದರು.

‘15 ನಿಮಿಷವಲ್ಲ, 15 ಸೆಕೆಂಡು ಸಾಕು’

ಹೈದರಾಬಾದ್ (ಪಿಟಿಐ): ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಮತ್ತು ಅವರ ಸಹೋದರ ಅಕ್ಬರುದ್ದೀನ್ ವಿರುದ್ಧ ವಾಗ್ದಾಳಿ ನಡೆಸಿದ ಬಿಜೆಪಿ ನಾಯಕಿ ನವನೀತ್ ರಾಣಾ, ‘ಒವೈಸಿ ಸಹೋದರರು ಎಲ್ಲಿಂದ ಬಂದರು, ಎಲ್ಲಿಗೆ ಹೋದರು ಎಂಬುದನ್ನು ತಿಳಿಯದ ಹಾಗೆ ಮಾಡಲು ನಮಗೆ 15 ಸೆಕೆಂಡುಗಳು ಸಾಕು’ ಎಂದಿದ್ದಾರೆ.

ಮಹಾರಾಷ್ಟ್ರದ ಅಮರಾವತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆಗಿರುವ ನವನೀತ್ ಅವರು ಹೈದರಾಬಾದ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಾಧವಿ ಲತಾ ಪರ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡು ಈ ಹೇಳಿಕೆ ನೀಡಿದ್ದಾರೆ.



ನವನೀತ್ ರಾಣಾ

ಅಕ್ಬರುದ್ದೀನ್ ಅವರು 2013ರಲ್ಲಿ ನೀಡಿದ್ದ ಹೇಳಿಕೆಗೆ ತಿರುಗೇಟು ಕೊಟ್ಟ ಅವರು, ‘ಪೊಲೀಸರನ್ನು 15 ನಿಮಿಷಗಳ ಕಾಲ ತೆರವುಗೊಳಿಸಿದರೆ, ನಮ್ಮಿಂದ ಏನು ಮಾಡಲು ಸಾಧ್ಯ ಎಂಬುದನ್ನು ತೋರಿಸುವುದಾಗಿ ಅಕ್ಬರುದ್ದೀನ್ ಹೇಳಿದ್ದರು. ನಾನು ಅವರಿಗೆ ಹೇಳಲು ಬಯಸುತ್ತೇನೆ. ಪೊಲೀಸರನ್ನು 15 ನಿಮಿಷವಲ್ಲ, 15 ಸೆಕೆಂಡುಗಳ ಕಾಲ ತೆರವುಗೊಳಿಸಿದರೆ ಸಾಕು, ನೀವಿಬ್ಬರು (ಅಸಾದುದ್ದೀನ್ ಹಾಗೂ ಅಕ್ಬರುದ್ದೀನ್) ಎಲ್ಲಿಂದ ಬಂದಿದ್ದೀರಿ ಮತ್ತು ಎಲ್ಲಿಗೆ ಹೋದಿರಿ ಎಂಬುದನ್ನು ತಿಳಿಯದ ಹಾಗೆ ಮಾಡುತ್ತೇವೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

ದೇಶದಲ್ಲಿ ‘ಹಿಂದೂ– ಮುಸ್ಲಿಂ ಅನುಪಾತ’ವನ್ನು ಸಮತೋಲನಗೊಳಿಸಲು ಪೊಲೀಸರನ್ನು 15 ನಿಮಿಷ ತೆರವುಗೊಳಿಸಿದರೆ ಸಾಕು ಎಂದು ಅಕ್ಬರುದ್ದೀನ್ ವಿವಾದಿತ ಹೇಳಿಕೆ ನೀಡಿದ್ದರು.

ನವನೀತ್ ರಾಣಾ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅಸಾದುದ್ದೀನ್ ಒವೈಸಿ, ‘ಮೋದಿ ಅವರ ಕೈಯಲ್ಲಿ ಅಧಿಕಾರವಿದೆ. 15 ಸೆಕೆಂಡು ಅಲ್ಲ, ಒಂದು ಗಂಟೆಯನ್ನೇ ತೆಗೆದುಕೊಳ್ಳಿ. ಮಾನವೀಯತೆ ಉಳಿದಿದೆಯೋ, ಇಲ್ಲವೋ ಎಂಬುದನ್ನು ನೋಡಲು ಬಯಸುತ್ತೇವೆ. ನಿಮ್ಮ ಬೆದರಿಕೆಗೆ ಯಾರು ಹೆದರುತ್ತಾರೆ? ನಿಮ್ಮನ್ನು ತಡೆಯುವವರು ಯಾರು? ಪ್ರಧಾನಿ ನಿಮ್ಮವರೇ ಆಗಿದ್ದಾರೆ. ಆರ್‌ಎಸ್‌ಎಸ್ ಸೇರಿದಂತೆ ಎಲ್ಲವೂ ನಿಮ್ಮದೇ. ಎಲ್ಲಿಗೆ ಬರಬೇಕೆಂದು ತಿಳಿಸಿ, ನಾವು ಅಲ್ಲಿಗೆ ಬರುತ್ತೇವೆ’ ಎಂದು ಹೇಳಿದ್ದಾರೆ.

ಪುತ್ರನಿಂದ ಮತ: ಬಿಜೆಪಿ ನಾಯಕನ ವಿರುದ್ಧ ಪ್ರಕರಣ



ಭೋಪಾಲ್ (ಪಿಟಿಐ): ಅಪ್ರಾಪ್ತ ವಯಸ್ಸಿನ ಪುತ್ರನನ್ನು ಮತಗಟ್ಟೆಗೆ ಕರೆದುಕೊಂಡು ಹೋಗಿ ಇವಿಎಂನಲ್ಲಿ ಬಟನ್ ಒತ್ತಲು ಅವಕಾಶ ನೀಡಿ, ಅದನ್ನು ವಿಡಿಯೊ ಮಾಡಿದ ಆರೋಪದ ಮೇಲೆ ಭೋಪಾಲ್‌ನ ಬಿಜೆಪಿ ನಾಯಕ, ಜಿಲ್ಲಾ ಪಂಚಾಯತ್ ಸದಸ್ಯ ವಿಜಯ್ ಮೇಹರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆ ಬೆನ್ನಲ್ಲೇ ಖಿತ್ವಾಸ್ ಗ್ರಾಮದ ಮತಗಟ್ಟೆಯ ಚುನಾವಣಾ ಅಧಿಕಾರಿ ಸಂದೀಪ್ ಸೈನಿ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಕುಶಾಲೇಂದ್ರ ವಿಕ್ರಮ್ ಸಿಂಗ್ ಆದೇಶಿಸಿದ್ದಾರೆ. ಮೇಹರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ‘ಮೇ 7ರಂದು ನಡೆದ ಚುನಾವಣೆಯಲ್ಲಿ ಘಟನೆ ನಡೆದಿದೆ. ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ. ಸಂಬಂಧಿಸಿದ ಅಧಿಕಾರಿ ವಿರುದ್ಧ ಕ್ರಮ ಜರುಗಿಸಲಾಗಿದೆ’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಇಂಡಿಯಾ’ ನಾಯಕರ ಭೇಟಿ ಇಂದು



ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಯ ಪ್ರತಿ ಹಂತ ಮುಕ್ತಾಯವಾದ ನಂತರ ನಿಖರ, ಪ್ರಾಮಾಣಿಕ ಮತದಾನ ಪ್ರಮಾಣವನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಲು ‘ಇಂಡಿಯಾ’ ಮೈತ್ರಿಕೂಟದ ನಾಯಕರು ಚುನಾವಣಾ ಆಯೋಗವನ್ನು ಶುಕ್ರವಾರ ಭೇಟಿಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಭೆಯು ಗುರುವಾರ ನಿಗದಿಯಾಗಿತ್ತು, ಬಳಿಕ ಅದನ್ನು ಬದಲಾಯಿಸಲಾಯಿತು ಎಂದು ಮೂಲಗಳು ಹೇಳಿವೆ. ಇದೇ ಸಂದರ್ಭದಲ್ಲಿ, ಬಿಜೆಪಿಯು ಪ್ರಚಾರದ ಸಂದರ್ಭದಲ್ಲಿ ಧರ್ಮದ ಚಿಹ್ನೆಗಳನ್ನು ಬಳಸುತ್ತಿದೆ ಎಂದೂ ವಿಪಕ್ಷಗಳ ನಾಯಕರು ಆರೋಪಿಸಲಿದ್ದಾರೆ ಎಂದಿವೆ. ಮತದಾನ ಪ್ರಮಾಣ ದತ್ತಾಂಶ ನೀಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಕಾಂಗ್ರೆಸ್, ಟಿಎಂಸಿ ಮತ್ತು ಸಿಪಿಎಂ ಈಗಾಗಲೇ ಕಳವಳ ವ್ಯಕ್ತಪಡಿಸಿ ಆಯೋಗಕ್ಕೆ ದೂರು ಸಲ್ಲಿಸಿವೆ.

‘ಮಾನಸಿಕ ಸ್ಥಿಮಿತ ಕಳೆದುಕೊಂಡ ಉದ್ಧವ್’


ದೇವೇಂದ್ರ ಫಡಣವೀಸ್

ಮುಂಬೈ (ಪಿಟಿಐ): ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ ಎಂದು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಗುರುವಾರ ಹೇಳಿದರು. ‘ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಫಡಣವೀಸ್ ಅವರು ಅಮಲೇರಿದ ಕೋತಿಗಳಂತೆ, ಅವರು ದೆಹಲಿಯಲ್ಲಿ ಕುಳಿತವರ ಅಣತಿಯಂತೆ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಉದ್ಧವ್ ಅವರು ಬುಧವಾರ ಲೇವಡಿ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಫಡಣವೀಸ್, ಉದ್ಧವ್ ಅವರಿಗೆ ಮನೋವೈದ್ಯರಿಂದ ಚಿಕಿತ್ಸೆ ಕೊಡಿಸುವ ಅಗತ್ಯವಿದೆ. ಚುನಾವಣೆಯಲ್ಲಿ ಸೋಲುವ ಭೀತಿ ಕಾಡಿರುವುದರಿಂದ ಅವರು ಈ ರೀತಿ ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು. ಜನರು ಶಿವಸೇನಾ ಉದ್ಧವ್ ಠಾಕ್ರೆ ಬಣವನ್ನು ತಿರಸ್ಕರಿಸಿದ್ದಾರೆ. ಈ ಕಾರಣಕ್ಕೆ ಅವರು ಕೆಟ್ಟ ಭಾಷೆಯನ್ನು ಬಳಸುತ್ತಿದ್ದಾರೆ ಎಂದರು.



ಮಾಜಿ ಕ್ರಿಕೆಟಿಗ ಇರ್ಫಾನ್ ಪಠಾಣ್ ಅವರು ಸಹೋದರ, ಟಿಎಂಸಿ ಅಭ್ಯರ್ಥಿ ಯೂಸುಫ್ ಪಠಾಣ್ ಜತೆ ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಕೈಗೊಂಡರು –ಪಿಟಿಐ ಚಿತ್ರ

ಷರಿಯಾ ಆಡಳಿತಕ್ಕೆ ಯತ್ನ: ಶಾ ಆರೋಪ

ಹೈದರಾಬಾದ್ (ಪಿಟಿಐ): ‘ಕಾಂಗ್ರೆಸ್, ಬಿಆರ್‌ಎಸ್ ಮತ್ತು ಎಐಎಂಐಎಂ ಪಕ್ಷಗಳು ತುಷ್ಟೀಕರಣ ರಾಜಕಾರಣದಲ್ಲಿ ತೊಡಗಿದ್ದು, ಷರಿಯಾ (ಇಸ್ಲಾಮಿಕ್ ಕಾನೂನು) ಮತ್ತು ಕುರಾನ್ ಆಧಾರದ ಮೇಲೆ ತೆಲಂಗಾಣದಲ್ಲಿ ಆಡಳಿತ ನಡೆಸಲು ಬಯಸುತ್ತಿವೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದರು.



ತೆಲಂಗಾಣದಲ್ಲಿ ಗುರುವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಓಲೈಕೆ ರಾಜಕಾರಣದಲ್ಲಿ ತೊಡಗಿರುವವರು ಹೈದರಾಬಾದ್ ವಿಮೋಚನಾ ದಿನ (ಸೆಪ್ಟೆಂಬರ್ 17) ಆಚರಿಸಲು ಅವಕಾಶ ನೀಡುವುದಿಲ್ಲ. ರಾಮನವಮಿ ಮೆರವಣಿಗೆಗೂ ಅವಕಾಶ ಕೊಡುವುದಿಲ್ಲ. ಸಿಎಎಯನ್ನು ವಿರೋಧಿಸುವವರು’ ಎಂದು ವಾಗ್ದಾಳಿ ನಡೆಸಿದರು.

ಈ ಬಾರಿಯ ಲೋಕಸಭಾ ಚುನಾವಣೆಯು ಪ್ರಧಾನಿ ನರೇಂದ್ರ ಅವರ ‘ಭಾರತೀಯ ಗ್ಯಾರಂಟಿ’ ಹಾಗೂ ರಾಹುಲ್ ಗಾಂಧಿ ಅವರ ‘ಚೀನಾ ಗ್ಯಾರಂಟಿ’ ನಡುವಣ ಹೋರಾಟ ಎಂದು ಬಣ್ಣಿಸಿದರು.

‘2019ರ ಚುನಾವಣೆಯಲ್ಲಿ ಬಿಜೆಪಿಯು ತೆಲಂಗಾಣದ 17 ಸ್ಥಾನಗಳಲ್ಲಿ ನಾಲ್ಕನ್ನು ಗೆದ್ದುಕೊಂಡಿತ್ತು. ಈ ಬಾರಿ 10ಕ್ಕೂ ಅಧಿಕ ಸ್ಥಾನಗಳನ್ನು ತನ್ನದಾಗಿಸಿಕೊಳ್ಳಲಿದೆ. ಬಿಜೆಪಿಯು 400 ಸ್ಥಾನಗಳ ಗುರಿ ತಲುಪಲು ತೆಲಂಗಾಣದ ಜನರೂ ಕೊಡುಗೆ ನೀಡಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಮೋದಿ ಅವರು ಮೀಸಲಾತಿ ರದ್ದುಪಡಿಸುವರು ಎಂದು ಕಾಂಗ್ರೆಸ್ ಸುಳ್ಳು ಹರಡುತ್ತಿದೆ. ನಮ್ಮ ಸರ್ಕಾರ 10 ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಅಂತಹ ಕೆಲಸ ಮಾಡಿಲ್ಲ’ ಎಂದರು.

ಚುಟುಕು

‘ನೋಟಾ ಆಯ್ಕೆಗೆ ಪ್ರಚೋದನೆ ಪ್ರಜಾಪ್ರಭುತ್ವದ ಮೇಲಿನ ದಾಳಿ’

ಇಂದೋರ್ (ಪಿಟಿಐ): ನೋಟಾ ಆಯ್ಕೆ ಮಾಡಿ ಎಂದು ಇಂದೋರ್ ಲೋಕಸಭಾ ಕ್ಷೇತ್ರದ ಮತದಾರರಿಗೆ ಕಾಂಗ್ರೆಸ್ ಕರೆ ನೀಡಿರುವುದು ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದು ಮಧ್ಯಪ್ರದೇಶದ ಬಿಜೆಪಿ ಆರೋಪಿಸಿದೆ.



ನೋಟಾ ಆಯ್ಕೆ ಮಾಡಿ ಎಂಬ ಬರಹವಿದ್ದ ಪೋಸ್ಟರ್‌ಅನ್ನು ಪಾಲಿಕೆಯ ಬಿಜೆಪಿ ಸದಸ್ಯೆ ಸಂಧ್ಯಾ ಯಾದವ್ ಅವರು ಆಟೊವೊಂದರಿಂದ ತೆರವುಗೊಳಿಸಿದ್ದರು. ಈ ದೃಶ್ಯವಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಸಂಧ್ಯಾ ಯಾದವ್ ಅವರ ವಿರುದ್ಧ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ.

ನೋಟಾ ಆಯ್ಕೆ ಮಾಡುವಂತೆ ಜನರಿಗೆ ಪ್ರಚೋದನೆ ನೀಡುವುದು ಪ್ರಜಾಪ್ರಭುತ್ವದಲ್ಲಿ ಅಪರಾಧ ಎಂದು ಬಿಜೆಪಿ ಮಧ್ಯಪ್ರದೇಶ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ.ಶರ್ಮಾ ಅವರು ಹೇಳಿದರು.

ಇಂದೋರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಕಾಂತಿ ಬಮ್ ಅವರು ಏಪ್ರಿಲ್ 29 ರಂದು ನಾಮಪತ್ರವನ್ನು ವಾಪಸ್ ಪಡೆದುಕೊಂಡಿದ್ದರು. ಬಳಿಕ ಅವರು ಬಿಜೆಪಿಗೆ ಸೇರ್ಪಡೆಗೊಂಡಿದ್ದರು.

‘ನೋಟಾ ಆಯ್ಕೆ ಮಾಡಿ, ಬಿಜೆಪಿಗೆ ಪಾಠ ಕಲಿಸಿ’ ಎಂದು ಕಾಂಗ್ರೆಸ್ ಮುಖಂಡರು ಕ್ಷೇತ್ರದ ಜನರಿಗೆ ಕರೆ ನೀಡಿದ್ದರು.


ಹರ್‌ದೀಪ್ ಸಿಂಗ್ ಎಎಪಿ ಸೇರ್ಪಡೆ

ಚಂಡೀಗಢ (ಪಿಟಿಐ): ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ತೊರೆದಿದ್ದ ಹರ್‌ದೀಪ್ ಸಿಂಗ್ ಅವರು ಗುರುವಾರ ಎಎಪಿಗೆ ಸೇರ್ಪಡೆಗೊಂಡರು.

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ಹರ್‌ದೀಪ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಹರ್‌ದೀಪ್ ಅವರನ್ನು ಎಸ್‌ಎಡಿಯು ಚಂಡೀಗಢ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸಿತ್ತು. ಚುನಾವಣಾ ಕಣದಿಂದ ಈಚೆಗೆ ಹಿಂದೆ ಸರಿದಿದ್ದ ಅವರು, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡಿದ್ದರು.

ಎಂಥಾ ಮಾತು!



ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯದ ಐದು ಲಕ್ಷ ಮಂದಿಯನ್ನು ಅಯೋಧ್ಯೆಯ ರಾಮ ಮಂದಿರಕ್ಕೆ ಉಚಿತವಾಗಿ ಕರೆದೊಯ್ಯಲು ವ್ಯವಸ್ಥೆ ಮಾಡಲಾಗುವುದು. ಅಸ್ಸಾಂನಿಂದ ಒಂದು ಲಕ್ಷ ಜನರನ್ನು ಉಚಿತವಾಗಿ ಅಯೋಧ್ಯೆಗೆ ಕರೆದೊಯ್ಯಲು ನಿರ್ಧರಿಸಲಾಗಿದೆ. ರಾಜ್ಯದ ಯುವಜನರಿಗೆ ಉದ್ಯೋಗ ನೀಡಲು ಬಿಜೆಡಿ ಸರ್ಕಾರ ವಿಫಲವಾಗಿದೆ


ಹಿಮಂತ ಬಿಸ್ವ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ
(ಒಡಿಶಾದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡುತ್ತಾ)



ಲೋಕಸಭಾ ಚುನಾವಣೆಯ ಮೂರು ಹಂತಗಳ ಮತದಾನ ನಡೆದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಆತಂಕಗೊಂಡಿದ್ದಾರೆ. ಈ ಕಾರಣಕ್ಕೆ ಅವರು ತಮ್ಮ ಭಾಷಣದಲ್ಲಿ ಮುಸ್ಲಿಮರನ್ನು ಬಹಿರಂಗವಾಗಿ ಪ್ರಸ್ತಾಪಿಸುತ್ತಿದ್ದಾರೆ. ಇದರಿಂದ ಪರಿಸ್ಥಿತಿ ಬದಲಾಗಬಹುದು ಎಂದು ಅವರು ಭಾವಿಸಿರುವಂತಿದೆ

ಶರದ್ ಪವಾರ್, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ

ಕ್ಷೇತ್ರ ಮಹಾತ್ಮೆ



ಆಂಧ್ರಪ್ರದೇಶದ ರಾಜಂಪೇಟ ಲೋಕಸಭಾ ಕ್ಷೇತ್ರವು ಘಟಾನುಘಟಿಗಳ ಹಣಾಹಣಿಗೆ ಸಜ್ಜಾಗಿದೆ. ವೈಎಸ್‌ಆರ್‌ಸಿಪಿಯಿಂದ ಪಿ.ವಿ. ಮಿಥುನ್ ರೆಡ್ಡಿ ಕಣಕ್ಕಿಳಿದರೆ, ಬಿಜೆಪಿಯು ಎನ್. ಕಿರಣ್ ಕುಮಾರ್ ರೆಡ್ಡಿ ಅವರನ್ನು ಅಖಾಡಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷವು ಎಸ್.ಕೆ. ಬಷೀದ್ ಅವರನ್ನು ಸ್ಪರ್ಧಿಯಾಗಿಸಿದೆ. 2019ರ ಚುನಾವಣೆಯಲ್ಲಿ ವೈಎಸ್‌ಆರ್‌ಸಿಪಿ ಅಭ್ಯರ್ಥಿ ಮಿಥುನ್ ರೆಡ್ಡಿ ಅವರು 2,68,284 ಮತಗಳ ಅಂತರದಿಂದ ಟಿಡಿಪಿಯ ಡಿ.ಎ. ಸತ್ಯಪ್ರಭಾ ಅವರನ್ನು ಪರಾಭವಗೊಳಿಸಿದ್ದರು. ಬರಪೀಡಿತ ಪ್ರದೇಶವಾದ ರಾಜಂಪೇಟ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ, ನೀರಾವರಿ ಯೋಜನೆಗಳೇ ಪ್ರಮುಖ ಚುನಾವಣಾ ವಿಚಾರಗಳಾಗಿವೆ. ಎನ್. ಕಿರಣ್ ಕುಮಾರ್ ರೆಡ್ಡಿ ಅವರು ಅವಿಭಜಿತ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿಯಾಗಿದ್ದು, ರಾಜ್ಯದಲ್ಲಿ ಪ್ರಭಾವಿ ಮುಖಂಡರಾಗಿದ್ದಾರೆ. ಇದೇ ಕಾರಣಕ್ಕೆ ಅವರನ್ನು ಬಿಜೆಪಿಯು ಕಣಕ್ಕಿಳಿಸಿದೆ. ಆಂಧ್ರಪ್ರದೇಶ ವಿಭಜನೆಯಾಗುವುದನ್ನು ವಿರೋಧಿಸಿ 2014ರಲ್ಲಿ ಕಿರಣ್ ಕುಮಾರ್ ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದರು. ಬಳಿಕ ತಮ್ಮದೇ ಆದ ಪಕ್ಷವನ್ನು ಸ್ಥಾಪಿಸಿದರೂ ಯಶಸ್ವಿಯಾಗಲಿಲ್ಲ. 2018ರಲ್ಲಿ ಅವರು ಮತ್ತೆ ಕಾಂಗ್ರೆಸ್‌ಗೆ ಸೇರಿದ್ದರು. 2023ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರಿದ್ದರು. ಆಡಳಿತಾರೂಢ ವೈಎಸ್‌ಆರ್‌ಸಿಪಿ ಸರ್ಕಾರವು ಕ್ಷೇತ್ರದ ಅಭಿವೃದ್ಧಿಯನ್ನು ನಿರ್ಲಕ್ಷಿಸಿದೆ ಎಂಬುದನ್ನೇ ಪ್ರಮುಖ ಚುನಾವಣಾ ವಿಷಯವಾಗಿಸಿ ಕಿರಣ್ ಕುಮಾರ್ ಅವರು ಮತಯಾಚಿಸುತ್ತಿದ್ದಾರೆ. ಎನ್. ಚಂದ್ರಬಾಬು ನಾಯ್ಡು ಅವರ ಟಿಡಿಪಿ ಮತ್ತು ಪವನ್ ಕಲ್ಯಾಣ್ ಅವರ ಜನಸೇನಾವು ಎನ್‌ಡಿಎ ಒಕ್ಕೂಟದ ಜೊತೆಗೆ ಕೈಜೋಡಿಸಿರುವುದು ಕಿರಣ್ ಕುಮಾರ್ ಅವರ ಗೆಲ್ಲುವ ವಿಶ್ವಾಸವನ್ನು ಹೆಚ್ಚಿಸಿದೆ.

ಮುಖಾಮುಖಿ

ಶಿರಡಿ (ಮಹಾರಾಷ್ಟ್ರ)



ಸದಾಶಿವ ಲೋಕಂಡೆ
(ಶಿವಸೇನಾ ಏಕನಾಥ ಶಿಂದೆ ಬಣ)

ಮಹಾರಾಷ್ಟ್ರದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಶಿರಡಿ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಶಿವಸೇನಾದ ಎರಡು ಬಣಗಳ ಅಭ್ಯರ್ಥಿಗಳು ನೇರ ಹಣಾಹಣಿಗೆ ಸಿದ್ಧರಾಗಿದ್ದಾರೆ. ‘ಮಹಾಯುತಿ’ ಮೈತ್ರಿಕೂಟವು ಶಿವಸೇನಾ ಏಕನಾಥ ಶಿಂದೆ ಬಣದ ಸದಾಶಿವ ಲೋಕಂಡೆ ಅವರನ್ನು ಕಣಕ್ಕಿಳಿಸಿದೆ. 2019ರಲ್ಲಿ ಶಿವಸೇನಾದಿಂದ ಸ್ಪರ್ಧಿಸಿದ್ದ ಸದಾಶಿವ ಅವರು 1,20,195 ಮತಗಳ ಅಂತರದಿಂದ ಕಾಂಗ್ರೆಸ್‌ನ ಬಾವು ಸಾಹೇಬ್ ಕಾಂಬಳೆ ಅವರನ್ನು ಸೋಲಿಸಿದ್ದರು. ಸದಾಶಿವ ಅವರು ಈ ಹಿಂದೆ ಮೂರು ಬಾರಿ ಶಾಸಕರಾಗಿಯೂ ಆಯ್ಕೆಯಾಗಿದ್ದರು. ಶಿವಸೇನಾವು ಇಬ್ಭಾಗವಾದಾಗ ಅವರು ಶಿಂದೆ ಬಣಕ್ಕೆ ಸೇರ್ಪಡೆಗೊಂಡಿದ್ದರು. ಬಿಜೆಪಿಗೆ ಸೇರುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದ್ದ ಸದಾಶಿವ ಅವರು 2014ರಲ್ಲಿ ಶಿವಸೇನಾಕ್ಕೆ ಸೇರ್ಪಡೆಗೊಂಡಿದ್ದರು. ಎನ್‌ಸಿಪಿಯ ಅಜಿತ್ ಪವಾರ್ ಬಣವು ಜೊತೆಗಿರುವುದು ಸದಾಶಿವ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ.

v/s



ಬಾವು ಸಾಹೇಬ್ ವಾಕ್ಚೌರೆ
(ಶಿವಸೇನಾ ಉದ್ಧವ್ ಠಾಕ್ರೆ ಬಣ)

ಸದಾಶಿವ ಲೋಕಂಡೆ ಅವರ ವಿರುದ್ಧ ಸೆಣಸಲು ಶಿವಸೇನಾ ಉದ್ಧವ್ ಠಾಕ್ರೆ ಬಣವು ಬಾವು ಸಾಹೇಬ್ ವಾಕ್ಚೌರೆ ಅವರನ್ನು ಅಖಾಡಕ್ಕಿಳಿಸಿದೆ. ಅವರು 2009ರ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಗೆದ್ದಿದ್ದರು. ಶಿವಸೇನಾ ಉದ್ಧವ್ ಠಾಕ್ರೆ ಬಣವು ‘ಇಂಡಿಯಾ’ ಒಕ್ಕೂಟದ ಜೊತೆಗಿರುವುದರಿಂದ ಬಾವು ಸಾಹೇಬ್ ಅವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸ ಪಕ್ಷದ ಮುಖಂಡರದ್ದಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ್ ಬಹುಜನ ಆಘಾಡಿ (ವಿಬಿಎ) ಪಕ್ಷವು ಉತ್ಕರ್ಷ ರೂಪವತೆ ಅವರನ್ನು ಈ ಕ್ಷೇತ್ರದಿಂದ ಕಣಕ್ಕಿಳಿಸಿರುವುದರಿಂದ ಎನ್‌ಡಿಎ ವಿರೋಧಿ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಶಿವಸೇನಾವು ಇಬ್ಭಾಗವಾಗಿರುವುದರಿಂದ ಈ ಬಾರಿ ಮತದಾರರು ಯಾರನ್ನು ಬೆಂಬಲಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.



❦ ಸುಭಾಷಿತ ❦

ನಮ್ಮ ಆಚಾರ ವಿಚಾರಗಳಿಂದ ಮಾತ್ರ ನಾವು ಉತ್ತಮರು ಅಥವಾ ಅಧಮರು ಎನಿಸಿಕೊಳ್ಳುತ್ತೇವೆಯೇ ವಿನಾ ಜಾತಿಯಿಂದಲ್ಲ. -ಬಸವಣ್ಣ

'ಗ್ರೀನ್ ಕ್ರೆಡಿಟ್' ಯೋಜನೆ ಕಳವಳಕ್ಕೆ ಕಿವಿಗೊಡುವುದು ಒಳಿತು

ಕೇಂದ್ರ ಸರ್ಕಾರವು ಈಚೆಗೆ 'ಗ್ರೀನ್ ಕ್ರೆಡಿಟ್' ಯೋಜನೆಯನ್ನು ಆರಂಭಿಸಿದೆ. ಇದು, ಪರಿಸರಕ್ಕೆ ಪೂರಕವಾದ ಕ್ರಮಗಳಾದ ಅರಣ್ಯೀಕರಣ, ನೀರಿನ ಸಂರಕ್ಷಣೆ, ಬರಡಾಗಿರುವ ಜಮೀನಿನ ಸ್ಥಿತಿಯನ್ನು ಸುಧಾರಿಸುವುದು, ವಾಯುಮಾಲಿನ್ಯ ತಗ್ಗಿಸುವಂತಹ ಕಾರ್ಯಗಳನ್ನು ಕೈಗೊಳ್ಳುವವರಿಗೆ ಉತ್ತೇಜನ ನೀಡುವ ಯೋಜನೆ. ಆದರೆ ಈ ಯೋಜನೆಯ ವಿಚಾರವಾಗಿ ಹಲವು ವಲಯಗಳಿಂದ ಟೀಕೆಗಳು ವ್ಯಕ್ತವಾಗಿವೆ. ಪರಿಸರವಾದಿಗಳು ಹಾಗೂ ವಿಷಯ ತಜ್ಞರು ಕೂಡ ಈ ಯೋಜನೆಯ ಬಗ್ಗೆ ತಕರಾರುಗಳನ್ನು ದಾಖಲಿಸಿದ್ದಾರೆ. ವಿವಿಧ ವಲಯಗಳು ಸ್ವಯಂಪ್ರೇರಣೆಯಿಂದ ಪರಿಸರಕ್ಕೆ ಪೂರಕವಾಗುವ ಕ್ರಮಗಳನ್ನು ಕೈಗೊಳ್ಳುವುದನ್ನು ಉತ್ತೇಜಿಸುವ ಉದ್ದೇಶದ, ಮಾರುಕಟ್ಟೆ ಆಧಾರಿತ ಹೊಸ ಬಗೆಯ ಕ್ರಮ ಇದು ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ. ಈ ಯೋಜನೆಯ ಅಡಿಯಲ್ಲಿ ಕೈಗಾರಿಕೆಗಳು, ಸಮುದಾಯಗಳು ಹಾಗೂ ವ್ಯಕ್ತಿಗಳು ಅರಣ್ಯೀಕರಣ, ಅರಣ್ಯ ಸಂರಕ್ಷಣೆಯಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರೆ ಅವರಿಗೆ 'ಗ್ರೀನ್ ಕ್ರೆಡಿಟ್' ಸಿಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇದು 'ಕಾರ್ಬನ್ ಕ್ರೆಡಿಟ್' ಯೋಜನೆಯ ಮಾದರಿಯಲ್ಲಿಯೇ ಇದೆ. ಆದರೆ ಇದು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳನ್ನು ದುರ್ಬಲಗೊಳಿಸುವಂತೆ ಇದೆ ಎಂದು ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಯೋಜನೆಯು ಪರಿಸರ ಸಂರಕ್ಷಣೆಗಿಂತಲೂ ಕಾರ್ಪೊರೇಟ್ ಕಂಪನಿಗಳ ಅನುಕೂಲಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತದೆಯಾದ ಕಾರಣ, ಈ ಯೋಜನೆಯನ್ನು ರದ್ದುಪಡಿಸಬೇಕು ಎಂಬ ಆಗ್ರಹದೊಂದಿಗೆ 91 ಮಂದಿ ನಿವೃತ್ತ ನಾಗರಿಕ ಸೇವಾ ಅಧಿಕಾರಿಗಳು ಈಚೆಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಪರಿಸರಪರ ಹಲವಾರು ಸಂಘಟನೆಗಳು ಹಾಗೂ ಮಾನವ ಹಕ್ಕುಗಳ ಪರ ಸಂಘಟನೆಗಳು ಕೂಡ ಇದೇ ಬಗೆಯ ಆಗ್ರಹವನ್ನು ಸರ್ಕಾರದ ಮುಂದೆ ಇರಿಸಿವೆ.



ಈ ಯೋಜನೆಯು ಅರಣ್ಯವನ್ನು ಹಾಳು ಮಾಡುವುದಕ್ಕೆ, ಪರಿಸರ ಸಂರಕ್ಷಣೆಗೆ ಅಡ್ಡಿ ಉಂಟುಮಾಡುವುದಕ್ಕೆ ಇನ್ನೊಂದು ಕಾನೂನುಬದ್ಧ ಮಾರ್ಗ ಆಗದಿರಲಿ

ಈ ಯೋಜನೆಯಲ್ಲಿ ಹಲವು ನಕಾರಾತ್ಮಕ ಅಂಶಗಳು ಇವೆ ಎಂದು ಟೀಕಾಕಾರರು ಹೇಳಿದ್ದಾರೆ. ಈ ಯೋಜನೆಯ ಅಡಿಯಲ್ಲಿ ಸಸಿ ನೆಡುವ ಕಾರ್ಯಕ್ರಮದ ಭಾಗವಾಗಿ, ಏಕಜಾತಿಯ ಸಸಿಗಳನ್ನೇ ಹೆಚ್ಚಾಗಿ ನೆಡಲಾಗುತ್ತದೆ; ಅದು, ಕಂಪನಿಗಳಿಗೆ ತಮ್ಮ ಯೋಜನೆಗಳಿಗೆ ದಟ್ಟ ಅಡವಿಯನ್ನು ಕಡಿದು, ಅಲ್ಲಿನ ಜೀವವೈವಿಧ್ಯವನ್ನು ನಾಶ ಮಾಡಲು ಅವಕಾಶ ಕಲ್ಪಿಸಿ ಕೊಡಲಿದೆ ಎಂಬ ಟೀಕೆ ಇದೆ. 'ಬರಡಾಗಿರುವ ಜಮೀನು' ಎಂಬ ಪದಗಳಿಗೆ ನಿರ್ದಿಷ್ಟವಾದ ವ್ಯಾಖ್ಯಾನ ಇಲ್ಲ. ಹೀಗಾಗಿ, ಈ ಯೋಜನೆಯು ಬುಡಕಟ್ಟು ಸಮುದಾಯಗಳ ಕೈಯಲ್ಲಿರುವ ಮತ್ತು ಸಮುದಾಯಗಳು ಒಟ್ಟಾಗಿ ಮೇವಿಗೆ, ಪಶುಪಾಲನೆಗೆ ಬಳಸುತ್ತಿರುವ ಜಮೀನಿನ ಕಬಳಿಕೆಗೆ ದಾರಿ ಮಾಡಿಕೊಡಬಹುದು. ಈ ಯೋಜನೆಯ ಕಾರಣದಿಂದಾಗಿ, ಕಂಪನಿಗಳು ತಮ್ಮ ಪಾಲಿನ ಹೊಣೆಯನ್ನು ಸರಿಯಾಗಿ ಪೂರ್ಣಗೊಳಿಸದೇ ಇದ್ದಾಗಲೂ ಪರಿಸರ ಅನುಮತಿ ಪಡೆದುಕೊಳ್ಳಲು ಸಾಧ್ಯವಾಗ ಬಹುದು. ಈ ಯೋಜನೆಯು ಅವೈಜ್ಞಾನಿಕ ಎಂದು ಕೂಡ ಹೇಳಲಾಗಿದೆ. ಇಂಗಾಲವನ್ನು ಪ್ರತ್ಯೇಕಿಸಲು ಅರಣ್ಯೀಕರಣವೇ ಎಲ್ಲ ಸಂದರ್ಭಗಳಲ್ಲಿಯೂ ಅತ್ಯುತ್ತಮ ಮಾರ್ಗ ಅಲ್ಲ ಎಂದು ತಜ್ಞರು ಹೇಳಿದ್ದಾರೆ. ಬೇರೆ ಬೇರೆ ಸ್ಥಳಗಳಿಗೆ ಬೇರೆ ಬೇರೆ ಬಗೆಯ ಜೀವವೈವಿಧ್ಯದ ಅಗತ್ಯ ಇರುತ್ತದೆ ಎಂದು ಕೂಡ ಅವರು ಹೇಳಿದ್ದಾರೆ. ಏಕಜಾತಿಯ ಅರಣ್ಯೀಕರಣವು ಅರಣ್ಯದಲ್ಲಿ ವಾಸಿಸುವ ಹಲವು ಬಗೆಯ ಜೀವಿಗಳ ಅಂತ್ಯಕ್ಕೆ ಕಾರಣವಾಗಬಹುದು ಎಂಬ ಭೀತಿಯೂ ವ್ಯಕ್ತವಾಗಿದೆ. ಸರ್ಕಾರವು ಉದ್ಯಮಿಗಳಿಗೆ ಅರಣ್ಯ ಜಮೀನನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಸುಲಭವಾಗಿಸುತ್ತಿದೆ ಎಂದು ನಾಗರಿಕ ಸೇವೆಗಳ ನಿವೃತ್ತ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ನೆಡಬೇಕಿರುವ ಸಸಿಗಳ ಸಂಖ್ಯೆ, ಅರಣ್ಯಪ್ರದೇಶದ ವಿಸ್ತೀರ್ಣ ಮತ್ತು ತೋಟಗಾರಿಕಾ ಪ್ರಭೇದಗಳ ಬಗ್ಗೆ ಯೋಜನೆಯ ಕರಡು ಪ್ರತಿಯಲ್ಲಿ ಉಲ್ಲೇಖ ಇತ್ತು. ಆದರೆ ಅಂತಿಮಗೊಂಡಿರುವ ಯೋಜನೆಯಲ್ಲಿ ಆ ಉಲ್ಲೇಖ ಇಲ್ಲ. ಯಾವ ಬಗೆಯ ಸಸಿಗಳನ್ನು ನೆಡಲಾಗಿದೆ ಎಂಬುದನ್ನು ಪರಿಗಣಿಸಿ 'ಕ್ರೆಡಿಟ್' ನೀಡುವ ಬದಲು, ಎಷ್ಟು ಸಸಿಗಳನ್ನು ನೆಡಲಾಗಿದೆ ಎನ್ನುವುದನ್ನು ಪರಿಗಣಿಸಿ 'ಕ್ರೆಡಿಟ್' ಕೊಡಲಾಗುತ್ತದೆ. ಅರಣ್ಯ ಎಂದರೆ ಅದೊಂದು ಜೀವಪರಿಸರ ವ್ಯವಸ್ಥೆ. ಕೆಲವು ಸಸಿಗಳು ಅಥವಾ ಮರಗಳು ಅರಣ್ಯಕ್ಕೆ ಪರ್ಯಾಯ ಆಗಲಾರವು. ಸಸಿಗಳು ಉಳಿಯುವ ಪ್ರಮಾಣವನ್ನು ಆಧರಿಸಿ 10 ವರ್ಷಗಳ ಅವಧಿಯಲ್ಲಿ 'ಕ್ರೆಡಿಟ್' ಕೊಡಬೇಕು ಎಂದು ಮೂಲ ಯೋಜನೆಯಲ್ಲಿ ಹೇಳಲಾಗಿತ್ತು. ಆದರೆ ಈ ಉಲ್ಲೇಖ ಹಾಗೂ ಇನ್ನೂ ಹಲವು ವಿವರಗಳನ್ನು ನಂತರದಲ್ಲಿ ಕೈಬಿಡಲಾಗಿದೆ. ಯೋಜನೆಯು ಈಗಿನ ಸ್ವರೂಪದಲ್ಲೇ ಉಳಿದರೆ ದುರ್ಬಳಕೆ ಆಗುವ ಸಾಧ್ಯತೆ ಹೆಚ್ಚು. ಅಲ್ಲದೆ, ಅರಣ್ಯವನ್ನು ಹಾಳು ಮಾಡುವುದಕ್ಕೆ, ಪರಿಸರ ಸಂರಕ್ಷಣೆಗೆ ಅಡ್ಡಿ ಉಂಟುಮಾಡುವುದಕ್ಕೆ ಇದು ಇನ್ನೊಂದು ಕಾನೂನುಬದ್ಧ ಮಾರ್ಗವಾಗಿ ಪರಿಣಮಿಸಬಹುದು.

ದಿನದ ಟ್ವೀಟ್

ಮಾತೃಭಾಷೆಯ ಮಹತ್ವ



ಕನ್ನಡಪರ ಹೋರಾಟ ಮಾಡುತ್ತ ತಾಯ್ನುಡಿ ಕಲಿಕೆಯಲ್ಲಿ ನಂಬಿಕೆ ಇಟ್ಟು ಮಗಳನ್ನು ಕನ್ನಡ ಮಾಧ್ಯಮದಲ್ಲಿ ಏಳನೇ ತರಗತಿಯವರೆಗೆ ಓದಿಸಿದ್ದೆ. ಈಗ ಹತ್ತನೇ ತರಗತಿಯಲ್ಲಿ ಒಳ್ಳೆಯ ಅಂಕ ಪಡೆದಿದ್ದಾಳೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 97ರಷ್ಟು ಅಂಕ ಗಳಿಸಿದ್ದಾಳೆ ಎಂಬ ಸಮಾಧಾನ. ಇದು, ತಾಯ್ನುಡಿ ಕಲಿಕೆಯಲ್ಲಿ ನಂಬಿಕೆಯಿಟ್ಟ ನಮ್ಮಂತಹವರಿಗೆ ಸಂದ ಜಯ.

ಗಣೇಶ್ ಚೇತನ್

ಕಿಡಿನುಡಿ



ಅತಿ ಸಂಸ್ಕರಿತ ಆಹಾರಗಳು ಹೃದ್ರೋಗ- ಅದಕ್ಕೆ ಸಂಬಂಧಿಸಿದ ಸಾವುಗಳು, ಟೈಪ್- 2 ಮಧುಮೇಹ, ಆತಂಕ ಹಾಗೂ ಖಿನ್ನತೆಯಂತಹ ಸಾಮಾನ್ಯ ಮಾನಸಿಕ ಕಾಯಿಲೆಗಳನ್ನು ಒಳಗೊಂಡಂತೆ 32 ಬಗೆಯ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತವೆ ಎಂಬುದನ್ನು 2024ರ ಅಧ್ಯಯನವೊಂದು ಎತ್ತಿಹಿಡಿದಿದೆ. ಇದು, ಸಂಸ್ಕರಿತ ಆಹಾರವನ್ನು ಪ್ರೋತ್ಸಾಹಿಸುವ ಅಗತ್ಯ ಇದೆಯೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

ದೇವಿಂದರ್ ಶರ್ಮಾ, ಆಹಾರ ನೀತಿ ವಿಶ್ಲೇಷಕ, ಸಂಶೋಧಕ

25 ವರ್ಷಗಳ ಹಿಂದೆ

ಸೋಮವಾರ, 10-5-1999

• ಶಾಸಕ ಸ್ಥಾನಕ್ಕೆ ದೇಶಪಾಂಡೆ ಮತ್ತಿತರರ ರಾಜೀನಾಮೆ

ಬೆಂಗಳೂರು, ಮೇ 9- ಇತ್ತೀಚೆಗೆ ಜನತಾದಳ ತ್ಯಜಿಸಿ ಕಾಂಗ್ರೆಸ್ ಸೇರಿದ ಮಾಜಿ ಸಚಿವರಾದ ಆರ್.ವಿ. ದೇಶಪಾಂಡೆ, ಗುರುಪಾದಪ್ಪ ನಾಗಮಾರಪಲ್ಲಿ, ಪಿ.ಸಿ.ಸಿದ್ದನಗೌಡರ್ ಹಾಗೂ ಬಿ.ಆರ್. ಯಾವಗಲ್ ಅವರು ವಿಧಾನಸಭಾ ಸದಸ್ಯತ್ವಕ್ಕೆ ಇಂದು ರಾಜೀನಾಮೆ ಸಲ್ಲಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಪತ್ರಿಕಾ-ಗೋಷ್ಠಿಯಲ್ಲಿ ಅವರು ತಮ್ಮ ರಾಜೀನಾಮೆ ಪತ್ರಗಳನ್ನು ಕಾಂಗ್ರೆಸ್ ಅಧ್ಯಕ್ಷ ಎಸ್.ಎಂ. ಕೃಷ್ಣ ಅವರಿಗೆ ಸಲ್ಲಿಸಿದರು.

ಇಂದು ಭಾನುವಾರವಾದ್ದರಿಂದ ಅವರ ರಾಜೀನಾಮೆ ಪತ್ರಗಳನ್ನು ನಾಳೆ ವಿಧಾನಸಭೆಯ ಅಧ್ಯಕ್ಷರಿಗೆ ಕಳಿಸಿ ತಕ್ಷಣ ಅಂಗೀಕರಿಸುವಂತೆ ಕೇಳಿಕೊಳ್ಳಲಾಗುವುದು ಎಂದರು.

• ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ಎಲ್ಲ ನಿರ್ಧಾರಗಳ ಹಕ್ಕಿದೆ: ಜಿವಿಜಿ

ನವದೆಹಲಿ, ಮೇ 9 (ಯುಎನ್‌ಐ)- ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಸೇರಿದಂತೆ ವಾಜಪೇಯಿ ನೇತೃತ್ವದ ಸರ್ಕಾರ ಎಲ್ಲಾ ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಹೊಂದಿದೆ ಎಂದು ಚುನಾವಣಾ ಆಯುಕ್ತ ಜಿವಿಜಿ ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

ಮಧ್ಯಂತರ ಚುನಾವಣೆ ನಡೆಯುವವರೆಗೆ ಸಿಟಿಬಿಟಿಯಂತಹ ಪ್ರಮುಖ ರಾಷ್ಟ್ರೀಯ ವಿಷಯಗಳ ಬಗ್ಗೆಯೂ ಸರ್ಕಾರ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ ಎಂದಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 10-5-1974

• ನಾಲ್ವರ ಮತಾಂತರ, ಮೇಲ್ಮನೆಗೆ ಎರಡೂ ಕಾಂಗ್ರೆಸ್ಸಿಗರ ಆಯ್ಕೆ

ಬೆಂಗಳೂರು, ಮೇ 9- ಅತ್ಯಧಿಕ ಮತ ಗಳಿಸಿದ ಸಂಸ್ಥಾ ಕಾಂಗ್ರೆಸ್ಸಿನ ಶ್ರೀಮತಿ ಸರೋಜಿನಿ ತಿಮ್ಮೇಗೌಡ ಹಾಗೂ ಉಳಿದ ಎಲ್ಲ ಆರು ಮಂದಿ ಕಾಂಗ್ರೆಸ್ ಅಭ್ಯರ್ಥಿಗಳು ವಿಧಾನಸಭಾ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಯಾಗಿದ್ದಾರೆ.

ಕಾಂಗ್ರೆಸ್ ಪಕ್ಷದ ನಾಲ್ಕು ಮತಗಳು ಹೊರಕ್ಕೆ ಹೋಗಿರುವುದೇ ಅಲ್ಲದೆ, ಪಕ್ಷದ ಅಭ್ಯರ್ಥಿಗಳ ನಡುವೆಯೂ ಸ್ವಲ್ಪ ಮಟ್ಟಿಗೆ ಮತಾಂತರ ನಡೆದಿದೆ.

ಸಂಸ್ಥಾ ಕಾಂಗ್ರೆಸ್ಸಿನ ಶ್ರೀಮತಿ ಸರೋಜಿನಿ ತಿಮ್ಮೇಗೌಡ 33, ಕಾಂಗ್ರೆಸ್ಸಿನ ಎಫ್.ಎಂ. ಖಾನ್ 30, ಕಲ್ಯಾಣರಾವ್ ಮರುಗುತ್ತಿ 28, ರಾಘವೇಂದ್ರರಾವ್ ಜಾಗೀರ್‌ದಾರ್ 27 ಹಾಗೂ ಎಸ್. ಶಿವಪ್ಪ 27 ಪ್ರಥಮ ಮತಗಳನ್ನು ಗಳಿಸಿ ಮೊದಲಿನ ಸುತ್ತಿನಲ್ಲೇ ಆಯ್ಕೆಯಾದರು.

• ಅಕ್ಕಿ-ಭತ್ತದ ಅಂತರಜಿಲ್ಲಾ ಸಾಗಾಣಿಕೆ ನಿರ್ಬಂಧ ರದ್ದಾಗದು

ಬೆಂಗಳೂರು, ಮೇ 9 - ರಾಜ್ಯದ ಹಿತದೃಷ್ಟಿಯಿಂದ ಅಂತರ ಜಿಲ್ಲಾ ಅಕ್ಕಿ- ಭತ್ತ ಸಾಗಾಣಿಕೆ ಪ್ರತಿಬಂಧಿಸುವ ಪರಿಸ್ಥಿತಿ ಮುಂದುವರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಶ್ರೀ ಬಿ.ವಿ. ಕಕ್ಕಿಲ್ಲಾಯ ಅವರು ಕಳುಹಿಸಿದ್ದ ಗಮನ ಸೆಳೆಯುವ ನೋಟಿಸಿಗೆ ಉತ್ತರಿಸಿದ ಆಹಾರ ಸಚಿವ ಶ್ರೀ ಕೆ.ಎಚ್. ಪಾಟೀಲರು, ಅಂತರ್ ಜಿಲ್ಲಾ ಅಕ್ಕಿ- ಭತ್ತ ಸಾಗಾಣಿಕೆ ನಿರ್ಬಂಧ ತೆಗೆದುಹಾಕಬಹುದೇ ಎಂಬ ಪ್ರಶ್ನೆಯನ್ನು ಸರ್ವದೃಷ್ಟಿಯಿಂದ ಆಲೋಚಿಸಿ ಈ ತೀರ್ಮಾನಕ್ಕೆ ಬರಲಾಗಿದೆ ಎಂದರು.

ಸಮಾಜಕಂಟಕರಾಗದಂತೆ ಮನುಷ್ಯರು ತಮ್ಮನ್ನು ಕಟೆದುಕೊಳ್ಳುವುದು ಹೇಗೆ?

ಒಮ್ಮೆ ಆಳವಾಗಿ ಆಲೋಚಿಸಿದ್ದರೆ...



ವಿಶ್ಲೇಷಣೆ

ಡಾ. ಎಚ್.ಎಸ್.ಅನುಪಮಾ

'ನಮ್ಮಿಂದ ಯಾರೂ ತೊಂದ್ರೆಯಾಗಬಾರ್ದು' ಎಂದು ಮಾತುಮಾತಿಗೆ ಹಾರೈಸುವ ಸಮಾಜ ನಮ್ಮದು. ಆದರೆ ಮನುಷ್ಯಮಾತ್ರರು ಈ ಪರಿ ಕೇಡಿಗರಾಗಲು ಹೇಗೆ ಸಾಧ್ಯ ಎಂದು ದಿಗ್ಭ್ರಮೆಗೊಳ್ಳುವಂತೆ ಸಾಲುಸಾಲು ದುರ್ಘಟನೆಗಳು ಸಂಭವಿಸುತ್ತಿವೆ. ಕೆಲವು ಅಮಲುಕಾರಕ ವಸ್ತುಗಳ ನಶೆಯು ಹಿಂಸಾಪ್ರವೃತ್ತಿ ಮೇಲುಗೈ ಸಾಧಿಸುವಂತೆ ಮಾಡುತ್ತಿದೆ ಎಂಬ ಅಭಿಪ್ರಾಯ ಇದೆಯಾದರೂ ದುರ್ಗುಣಗಳ ಹೊರಗೆಳೆಯಲು ಅಮಲುಕಾರಕ ವಸ್ತುಗಳೇ ಬೇಕೆಂದಿಲ್ಲ.

ಅಧಿಕಾರ ಎನ್ನುವುದೊಂದು ನಶೆ. ಗಂಡಸುತನ ಎನ್ನುವುದೊಂದು ನಶೆ. ಯೌವನ, ಜಾತಿ, ಮತ, ಪಕ್ಷ, ದೇಶ, ಭಾಷೆಗಳ ಅಂಧಾಭಿಮಾನವೊಂದು ನಶೆ. ಮುತ್ಸದ್ದಿತನ, ತಾಯ್ತನ, ಸಾವಿನಂತಹ ಸಹಜ ಪ್ರಕ್ರಿಯೆಗಳು ಮೆರೆದಾಟವಾದರೆ ಅವೂ ನಶೆಗಳೇ. ಇಂಥ ಒಂದಲ್ಲ ಒಂದು ನಶೆಯೆಂಬ ಎ.ಸಿ. ಕೋಣೆಯಲ್ಲಿ ಕಿಟಕಿ ಬಾಗಿಲುಗಳ ಮುಚ್ಚಿ ಕೂತರೆ, ಹೊರಗಣವು ಉರಿದರೂ ಮುಳುಗಿದರೂ ನಾವು ಹಾಯಾಗಿ ತಂಪಾಗಿರಬಹುದು ಎಂಬ ಭ್ರಮೆಯ ಆಮಿಷವನ್ನು ಕಾಲ ಒಡ್ಡುತ್ತಿದೆ.

ಮನುಷ್ಯರು ಸಮಾಜಕಂಟಕರಾಗದಂತೆ ತಮ್ಮನ್ನು ಕಟೆದುಕೊಳ್ಳುವುದು ಹೇಗೆ? ವಿಯೆಟ್ನಾಮಿನ ಬೌದ್ಧ ಭಿಕ್ಕು ತಿಚ್ ನ್ಹಾತ್ ಹನ್ ಹೇಳುವಂತೆ, ಅದಕ್ಕಿರುವುದು ಒಂದೇ ಸರಳ ಮಾರ್ಗ: ಆಳವಾಗಿ ಯೋಚಿಸುವುದು. ಅಂದರೆ, ನಮ್ಮ ಬಗೆಗೆ ನಾವೇ ಯೋಚಿಸುತ್ತ, ನಮ್ಮ ಕ್ರಿಯೆಗಳಿಗೆ ಸಮಜಾಯಿಷಿ ಕೊಟ್ಟುಕೊಳ್ಳುತ್ತ ಇರುವುದಲ್ಲ. ಬದಲಾಗಿ, ಯಾವುದೇ ಕ್ರಿಯೆಯಲ್ಲಿ ತೊಡಗುವ ಮುನ್ನ ನಮ್ಮನ್ನು, ಸುತ್ತಮುತ್ತಲವರನ್ನು, ವ್ಯವಸ್ಥೆಯನ್ನು, ಕಾರಣ-ಪರಿಣಾಮಗಳನ್ನು ಎಲ್ಲ ದಿಕ್ಕಿನಿಂದ ಪರಿಶೀಲಿಸುವುದು.

ಎರಡು ಪ್ರಕರಣಗಳ ಬಗೆಗೆ ಹೀಗೇ ಯೋಚಿಸಿ:

1. ಒಂದುವೇಳೆ, ನೂರಾರು ಹೆಣ್ಣುಗಳ ಮೇಲೆ ನಡೆಸಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯವನ್ನು ಸಾವಿರಾರು ವಿಡಿಯೊಗಳಾಗಿ ಚಿತ್ರೀಕರಿಸುವ ಮುನ್ನ, ಹಾಸನ ಪ್ರಕರಣದ ಆರೋಪಿ ಸ್ಥಾನದಲ್ಲಿ ಇರುವ ವ್ಯಕ್ತಿ ಆಳವಾಗಿ ಯೋಚಿಸಿದ್ದರೆ? ತಾನೇಕೆ ಹೀಗೆ ಮಾಡುತ್ತಿದ್ದೇನೆ, ತಾನು ಮಾಡುತ್ತಿರುವುದು ಸರಿಯೇ, ರಾಜಕಾರಣಿಗಳ ಕುಟುಂಬದಿಂದ ಬಂದಿರುವ ತಾನು ಈ ರೀತಿ ನಡೆದುಕೊಂಡರೆ ಭವಿಷ್ಯದ ಮೇಲೆ, ಕುಟುಂಬದ ಮೇಲೆ ಆಗುವ ಪರಿಣಾಮಗಳೇನು, ತನ್ನ ಪಕ್ಷಕ್ಕೊದಗುವ ಗತಿಯೇನು, ಭರವಸೆಯ ನಾಯಕನೆಂಬಂತೆ ತಾನಾಡಿದ ಮಾತುಗಳ ಗತಿಯೇನು, ತನಗೆ ಮತ ನೀಡಿದ ಲಕ್ಷಾಂತರ ಜನರಿಗೆ ಯಾವ ಸಂದೇಶ ಹೋದೀತು?

ಆತ ಕನಿಷ್ಠ ಇಷ್ಟಾದರೂ ಯೋಚಿಸಿದ್ದರೆ, ಇಂದು ಆತನಿಗೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ಯಜ್ಞಯಾಗ, ಜ್ಯೋತಿಷಿಗಳ ಮಾತಿನ ಬದಲು ಎದೆಯ ದನಿಯನ್ನು ಕೇಳಿಸಿಕೊಂಡಿದ್ದರೆ, ಜನಪ್ರತಿನಿಧಿಯಾಗಿ ಮಾಡಲು ಸಾಧ್ಯವಿದ್ದ ನೂರಾರು ಕೆಲಸಗಳ ಮರೆತು, ಈಗ ಕೇಳಿಬಂದಿರುವ ಆರೋಪಗಳಿಗೆ ಪೂರಕವಾದ ಕೃತ್ಯಗಳಲ್ಲಿ ಮೈಮರೆಯುತ್ತಿರಲಿಲ್ಲ.

2. ಒಂದುವೇಳೆ, ಬೇರೆ ಧರ್ಮದ ಯುವತಿಯನ್ನು ಪ್ರೇಮಿಸಿ, ದೂರವಾದಳೆಂದು ಇರಿದು ಕೊಂದ ಹುಬ್ಬಳ್ಳಿಯ ಹುಡುಗ ಆಳವಾಗಿ ಯೋಚಿಸಿದ್ದರೆ? ತಾಯ್ತಂದೆ ಬೇರ್ಪಟ್ಟಿರುವ ಮುರಿದ ಕುಟುಂಬದಲ್ಲಿ ತನ್ನ ಜವಾಬ್ದಾರಿಯೇನು, ಶಿಕ್ಷಕಿಯಾಗಿರುವ ತಾಯಿ ತನ್ನ ಮೇಲಿಟ್ಟ ಕನಸುಗಳೇನು, ಪ್ರೀತಿಸಿದವಳೇಕೆ ಒಲ್ಲೆ ನೆನ್ನುತ್ತಿದ್ದಾಳೆ, ತನ್ನವರ ಬಿಟ್ಟು ಬರಲೊಲ್ಲದವಳ ಜೊತೆ ಮುಂದಾದರೂ ಬದುಕು ಸಾಧ್ಯವೇ, ಪ್ರೇಮ ನಿರಾಕರಣೆ ತಂದೊಡ್ಡಿದ ಆಘಾತವು ಕೊಲೆ ಮಾಡುವುದರಿಂದ ಶಮನವಾಗುವುದೇ, ಕೊಲೆಯಂತಹ ಹೀನ ಕೃತ್ಯವೆಸಗಿದರೆ ಕುಟುಂಬ, ಊರು, ಸಮಾಜ ತನ್ನನ್ನು, ತನ್ನ ಸಮುದಾಯವನ್ನು ಹೇಗೆ ಸ್ವೀಕರಿಸಬಹುದು?

ಆ ಹುಡುಗ ಕನಿಷ್ಠ ಇಷ್ಟಾದರೂ ಯೋಚಿಸಿದ್ದರೆ, ಪ್ರೀತಿ ಹುಟ್ಟುವುದು ಬದುಕಿಸಲೆಂದೇ ವಿನಾ ಕೊಲ್ಲುವುದಕ್ಕಲ್ಲ ಎನ್ನುವುದು ತಿಳಿಯುತ್ತಿತ್ತು. ತನಗಾಗಿ ಅಳುವವರಿಲ್ಲದೆ ಶಿಕ್ಷೆಯನ್ನು ಎದುರು ನೋಡುತ್ತಾ ಜೈಲಿನಲ್ಲಿ ಕೊಳೆಯುವುದು ತಪ್ಪುತ್ತಿತ್ತು.

ಹೌದು, ಫಯಾಜ್ ಇರಲಿ, ಪ್ರಜ್ವಲ್ ರೇವಣ್ಣ ಇರಲಿ- ಆಳವಾಗಿ ಎಲ್ಲ ದಿಕ್ಕುಗಳಿಂದ ಯೋಚಿಸಿದ್ದರೆ ಇಂತಹ ಪ್ರಮಾದಗಳು ಸಂಭವಿಸುತ್ತಿರಲಿಲ್ಲ. ಇದನ್ನು ವ್ಯಕ್ತಿಗತವಾಗಿಯಷ್ಟೇ ಅಲ್ಲ, ಸಮೂಹಪ್ರಜ್ಞೆಗೂ ಅನ್ವಯಿಸಿಕೊಳ್ಳಬಹುದು. ಒಂದುವೇಳೆ ಖೈರ್ಲಾಂಜಿಯೆಂಬ ಊರು ಆಳವಾಗಿ ಯೋಚಿಸಿದ್ದರೆ, ಭೋತಮಾಂಗೆ ಕುಟುಂಬ ಅನ್ಯಾಯವಾಗಿ, ಭೀಕರವಾಗಿ ಕೊಲೆಯಾಗುತ್ತಿರಲಿಲ್ಲ. ಇಂತಹ ಪ್ರಜ್ಞೆ ಇದ್ದಿದ್ದರೆ ನಿರ್ಭಯಾ, ಸೌಜನ್ಯಾಳಂತಹ ಅಸಂಖ್ಯ ಸೋದರಿಯರ ಹತ್ಯೆ ಆಗುತ್ತಿರಲಿಲ್ಲ. ಮಣಿಪುರದ ಸೋದರಿಯರು ಬೆತ್ತಲೆ ನಡೆದು ಗುಂಪು ಅತ್ಯಾಚಾರಕ್ಕೆ ಒಳಗಾಗುತ್ತಿರಲಿಲ್ಲ. ಆದರೆ ಒಂದು ತಪ್ಪು ಸಂಭವಿಸಿದ ನಂತರವಾದರೂ ವ್ಯಕ್ತಿಗಳು, ಸಮಾಜ ಎಚ್ಚೆತ್ತುಕೊಳ್ಳಬೇಕಲ್ಲವೇ? ದೇವರು, ಧರ್ಮ, ಗುರುಸಂತರು ನೈತಿಕಪ್ರಜ್ಞೆಯನ್ನು ಜಾಗೃತಗೊಳಿಸಬೇಕಲ್ಲವೇ? ಹಾಗೇಕೆ ಆಗುತ್ತಿಲ್ಲ? ಇದು ಪ್ರಜ್ಞಾವಂತರನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ.

ಪ್ರೇಮರಾಹಿತ್ಯ, ಕೇಡಿಗತನ, ಉದಾತ್ತತೆ ಎಲ್ಲರೊಳಗೂ ಇರುತ್ತವೆ. ಅವುಗಳಲ್ಲಿ ಯಾವುದು ಮೇಲುಗೈ ಸಾಧಿಸುತ್ತದೆ ಎನ್ನುವುದು ಆಯಾ ವ್ಯಕ್ತಿತ್ವ, ಸಾಮಾಜಿಕ ಪರಿಸರ, ಕಾಲಮಾನವನ್ನು ಅವಲಂಬಿಸಿದೆ. ಈ ಕಾಲದ ಮೌಲ್ಯ, ಮಾದರಿಗಳಾದರೂ ಹೇಗಿವೆ? ತುಳಿದಾದರೂ ಸರಿ, ನೀನು ಮೇಲೇರು ಎಂಬ ದುಷ್ಟ ಹುಮ್ಮಸ್ಸು ತುಂಬುವ 'ನಾ ಲೋಕ', ಮಾಡಿದ್ದೆಲ್ಲವನ್ನೂ 'ಜಯಿಸಿಕೊಳ್ಳುವೆ' ಎಂಬ ಹಮ್ಮಿನ ನಾಯಕರು, ಕುಟುಂಬದಿಂದ ಹಿಡಿದು ಸಂಸತ್ತಿನವರೆಗೆ, ಸೆರೆಮನೆಯಿಂದ ಗುರುಮನೆಯವರೆಗೆ 'ಹೇಳುವುದು ಒಂದು ಮಾಡುವುದು ಇನ್ನೊಂದು' ಆಗಿರುವ ಹುಸಿತನ, ಉದಾತ್ತ ಕಾರ್ಯಗಳ ಬಗೆಗಿನ ಅಸಡ್ಡೆ, ತಿರಸ್ಕಾರ, ಯಾವುದು ಮೌಲ್ಯವೆಂದು ಬದುಕಿ ತೋರಿಸುವ ಪಾಲಕರು- ಗುರುಗಳು ಇಲ್ಲದ ಕಲಿಕೆಯ ವ್ಯವಸ್ಥೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಪ್ರೇಮರಾಹಿತ್ಯ- ಇವು ಸಮಾಜದ ಇಂದಿನ ಪರಿಸ್ಥಿತಿಗೆ ಕಾರಣಗಳಾಗಿವೆ.



ಸಂಘಜೀವಿ ಮನುಷ್ಯರು ಒಂಟಿಜೀವಿಗಳಾಗಿರುವುದು, ಗುಂಪುಹಿತ ಕಾಯುವುದಕ್ಕಿಂತ ಸ್ವಹಿತವೇ ಮುಖ್ಯವಾಗಿರುವುದು, ಪ್ರಕೃತಿಸಹಜ ಬದುಕಿನಿಂದ ಬಲುದೂರ ಬಂದಿರುವುದು ಮನುಷ್ಯಸಮಾಜವು ಕೇಡುಗಳ ಪ್ರವಾಹದಲ್ಲಿ ಸಿಲುಕಿಕೊಂಡಿರುವುದರ ಕಾರಣಗಳಾಗಿವೆ. ಹಿಂದೆಂದೂ ಇಲ್ಲದಂತೆ ಪ್ರಬಲ ಪ್ರಭೇದವೊಂದರ 750 ಕೋಟಿ ಜನರು ಭೂಮಿಯನ್ನು ತುಂಬಿದ್ದಾರೆ. ತಂತ್ರಜ್ಞಾನದಿಂದ ಅವರ ನಡುವಿನ ಗಡಿಗೆರೆ, ಅಂತರ ಕಡಿಮೆಯಾಗಿದೆ. ಆದರೂ ಭಾರಿ ಸಂಖ್ಯೆಯ ಜೀವಿಗಳು ಒಂದು ವ್ಯವಸ್ಥೆಯೊಳಗೆ ನಿಯಮಬದ್ಧವಾಗಿ ಬದುಕುವಂತೆ ಮಾಡಲು ಹಿಂಸೆ ಬಳಕೆಯಾಗಲೇಬೇಕಾಗುತ್ತದೆ. ಈ ವಿದ್ಯಮಾನವು ಮನುಷ್ಯರಲ್ಲಿ ಒಂದುತನದ ಭಾವ ಹುಟ್ಟಿಸುವ ಬದಲು ಜಂಗುಳಿಯಲ್ಲಿ ಕಳೆದುಹೋದ ಮಗುವಿನ ಭಯಗ್ರಸ್ತ ಸ್ಥಿತಿಯನ್ನು ಸೃಷ್ಟಿಸಿದೆ. ಅಭದ್ರ ಮನಃಸ್ಥಿತಿಯು ತಮ್ಮನ್ನು ಮರಿಗುಂಪುಗಳಾಗಿ, ಉಪಗುಂಪುಗಳಾಗಿ ಒಡೆದುಕೊಳ್ಳಲು, ಜನರ ನಡುವಿದ್ದೂ ಒಂಟಿಯಾಗಿ ಉಳಿಯಲು, ಪ್ರೇಮರಾಹಿತ್ಯದ ಬಾಯಾರಿಕೆಯಿಂದ, ಹಸಿವಿನಿಂದ ಮನುಷ್ಯಸಮಾಜ ಜರ್ಝರಿತವಾಗಲು ಕಾರಣವಾಗಿದೆ.

ಒಂದು ಅಪ್ಪನಗೆ, ಸ್ಪರ್ಶ, ಸಂತೈಕೆಯ ಅರಸುತ್ತ ಬಡವ, ಸಿರಿವಂತರೆಲ್ಲ ಅಲೆಯುತ್ತಿದ್ದಾರೆ. ತಮ್ಮದೇ ಸುರಕ್ಷಿತ ಪ್ರೇಮವಲಯ ಕಟ್ಟಿಕೊಳ್ಳುವುದರಲ್ಲಿ ಹತಾಶರಾಗುತ್ತಿದ್ದಾರೆ. ಹುಟ್ಟುತ್ತಾ ವಿಶ್ವಮಾನವರಂತಿರುವ ಮಕ್ಕಳನ್ನು ಬೆಳೆಯುತ್ತಾ ಹೆಣ್ಣುಗಂಡೆಂಬ, ಜಾತಿಮತವೆಂಬ, ದೇಶಭಾಷೆಯವರೆಂಬ ಅಸ್ಮಿತೆಗಳೊಳಗೆ ಬಂಧಿಸಿ ಅಲ್ಪಮಾನವರನ್ನಾಗಿಸುತ್ತಿದ್ದೇವೆ.

ಇದನ್ನು ದಾಟುವುದು ಹೇಗೆ? ಲೋಕದೊಳಗೊಂದಾಗಿ ಸುರಕ್ಷಿತ ಭಾವ ಅನುಭವಿಸಲು ಮನುಷ್ಯರಿಗೆ ಆಧ್ಯಾತ್ಮಿಕ ಬದುಕು ಅಗತ್ಯ. ನಿಲ್ಲಿ, ಅಧ್ಯಾತ್ಮದ ಬದುಕೆಂದರೆ ಡಂಬಾಚರಣೆಯಲ್ಲ. ದಾರ, ಯಂತ್ರ, ಉಂಗುರ, ತಾಯಿತ ಧರಿಸಿ, ವ್ರತಾಚರಣೆಗಳಲ್ಲಿ ಮುಳುಗಿ ಆರಾಧನಾ ಸ್ಥಳಗಳನ್ನು ಸಂದರ್ಶಿಸುವುದಲ್ಲ. ಆಧ್ಯಾತ್ಮಿಕ ಬದುಕೆಂದರೆ ನ್ಯಾಯಾನ್ಯಾಯಗಳ ಗುರುತು ಹಚ್ಚಲು ಸಾಧ್ಯವಾಗುವಂತಹ ಒಳಪಯಣ. ಸ್ವ ಅವಲೋಕನ. ಸತ್ಯದ ಹಾದಿಯ ನಡಿಗೆ. ಬುದ್ಧ ಹೇಳುವಂತೆ, ಹೊರಗಣ ದುಃಖವನ್ನೂ ಒಳಗಣ ದುಃಖವನ್ನೂ ಅರಿತು ಪರಿಹಾರ ಮಾರ್ಗ ಅರಸುವ, ವಿಶ್ವಚೇತನರಾಗುವ ಚಲನೆ.

ಅದಕ್ಕಾಗಿ ಉದಾತ್ತ ಮಾದರಿಗಳನ್ನು ಕಣ್ಣೆದುರು ಇಟ್ಟುಕೊಳ್ಳುವುದು, ತಪ್ಪುಸರಿಗಳ ಬಗೆಗೆ ಆಳವಾಗಿ ಎಲ್ಲ ದಿಕ್ಕಿನಿಂದಲೂ ಯೋಚಿಸುವುದು, ನ್ಯಾಯಾನ್ಯಾಯಗಳ ಗುರುತಿಸುವ ವಿವೇಕವನ್ನು ನಮ್ಮಲ್ಲಿ ಬೆಳೆಸಿಕೊಂಡು ಮಕ್ಕಳಿಗೂ ಕಲಿಸುವುದು ಅಗತ್ಯವಾಗಿದೆ. ಆಗಮಾತ್ರ ನಿನ್ನೆ, ನಾಳೆಯ ನಡುವಿನ ಕಾಲದ ಕೊಂಡಿಯಂತೆ ಲೋಕಹಿತಕಾರಿಯಾಗಿ ಮನುಷ್ಯರು ಬಾಳಲು ಸಾಧ್ಯವಿದೆ.

ಚುರುಮುರಿ



ಬ್ರೇಕಿಂಗ್ ನ್ಯೂಸ್!

• ಬಿ.ಎನ್.ಮಲ್ಲೇಶ್

ಪೆನ್‌ಡ್ರೈವ್ ನ್ಯೂಸ್ ಬೆನ್ನುಹತ್ತಿ ಬಿಸಿಲಲ್ಲಿ ಗರಗರ ತಿರುಗಿ ತಲೆತಿರುಗಿ ಬಿದ್ದಿದ್ದ ಟಿ.ವಿ. ರಿಪೋಟ್ರು ತೆಪರೇಸಿಯನ್ನು ಯಾರೋ ಆಸ್ಪತ್ರೆಗೆ ಸೇರಿಸಿದ್ದರು. ತೆಪರೇಸಿ ಹೆಂಡ್ತಿ ಪಮ್ಮಿ ಮತ್ತು ಹರಟೆಕಟ್ಟೆ ಸದಸ್ಯರು ಆಸ್ಪತ್ರೆಗೆ ಧಾವಿಸುವಷ್ಟರಲ್ಲಿ ಡಾಕ್ಟರು ತೆಪರೇಸಿಯ ತಲೆ, ಕಿಡ್ನಿ, ಲಿವರು, ಬೋಟಿ ಎಲ್ಲ ಸ್ಕ್ಯಾನ್ ಮಾಡ್ಸಿ ರಿಪೋರ್ಟ್‌ಗೆ ಕಾಯ್ತಾ ಕೂತಿದ್ದರು.

'ಡಾಕ್ಟ್ರೆ, ನಮ್ ತೆಪರೇಸಿ ಹೆಂಗದಾನೆ, ಏನಾಗಿಲ್ಲ ತಾನೆ?' ಗುಡ್ಡೆ ವಿಚಾರಿಸಿದ. ಪಮ್ಮಿ ಮುಖದಲ್ಲಿ ಆತಂಕ.

ಡಾಕ್ಟರು ಕನ್ನಡಕ ತೆಗೆದಿಡುತ್ತ 'ನಿಮ್ ಪೇಶಂಟ್‌ನ ಪೊಲೀಸರಿಗೆ ಒಪ್ಸಿಸಬೇಕಂತಿದೀನಿ, ಆದ್ರೆ ಇನ್ನೂ ಎಚ್ಚರ ಬಂದಿಲ್ಲ' ಎಂದರು ಗಂಭೀರವಾಗಿ.

'ಯಾಕ್ಸಾ, ಅವನೇನ್ ಮಾಡಿದ?'

'ಅಲ್ರೀ, ಅವರ ತಲೆ ಸ್ಕ್ಯಾನ್ ಮಾಡಿದ್ರೆ ಒಳಗೆ ಬರೀ ಪೆನ್‌ಡ್ರೈವೇ ಕಾಣ್ತಾವಲ್ರೀ... ಜೊತೆಗೆ ಬ್ಲೂಕಾರ್ನರು, ಬ್ಲ್ಯಾಕ್‌ಮೇಲು, ಸೂತ್ರಧಾರ ಅಂತೆಲ್ಲ ಬಡಬಡಾಯಿಸ್ತಿದ್ರು. ರಾಜ್ಯದಲ್ಲಿ ಈಗ ನಡೀತಿರೋ ಪೆನ್‌ಡ್ರೈವ್ ಪ್ರಕರಣಕ್ಕೂ ಇವರಿಗೂ ಏನೋ ಸಂಬಂಧ ಇರ್ಬೇಕು ಅನ್ಸುತ್ತೆ' ಎಂದರು ಡಾಕ್ಟರು.

'ಅಯ್ಯೋ ಸಂಬಂಧ ಏನಿಲ್ಲ ಸಾ, ಅವ್ನು ಬ್ರೇಕಿಂಗ್ ನ್ಯೂಸ್ ಟಿ.ವಿ. ರಿಪೋಟ್ರು. ಪೆನ್‌ಡ್ರೈವ್ ಕೇಸ್‌ನ ದಿನಾ ಅವ್ನೇ ವರದಿ ಮಾಡೋದು. ಅದ್ನೆಲ್ಲ ಕೇಳಿ ಕೇಳಿ ತಲೆ ಕೆಟ್ಟು ಹಂಗೆ ಬಡಬಡಾಯಿಸಿರ್ಬೇಕು' ದುಬ್ಬೀರ ಸಮಜಾಯಿಷಿ ನೀಡಿದ.

'ಹೌದು ಸಾ... ರಾತ್ರಿ ಎಲ್ಲ ನಿದ್ದೇಲಿ ಅರೆಸ್ಟು, ಕಸ್ಟಡಿ, ಜೇಲಾ ಬೇಲಾ ಅಂತಿರ್ತಾರೆ' ಪಮ್ಮಿಯೂ ದನಿಗೂಡಿಸಿದಳು.

ಅಷ್ಟರಲ್ಲಿ ನರ್ಸ್ ಬಂದು 'ಡಾಕ್ಟ್ರೆ, ಪೇಶಂಟ್‌ಗೆ ಎಚ್ಚರ ಬಂದಿದೆ' ಎಂದಳು. ಎಲ್ಲರೂ ವಾರ್ಡ್‌ಗೆ ಹೋದರು. ಡಾಕ್ಟರು ತೆಪರೇಸಿಯ ಭುಜ ಮುಟ್ಟಿ 'ಏನ್ರಿ ತೆಪರೇಸಿ, ಈಗ ಹೇಗಿದೆ?' ಎಂದು ಮಾತಾಡಿಸಿದರು.

ತೆಪರೇಸಿ ಮೆಲ್ಲಗೆ ಕಣ್ಣು ಬಿಡುತ್ತ 'ನಿಮ್ದೂ ಎಲ್ಲ ಬಿಚ್ಚಿಡ್ತೀನಿ' ಎಂದ. ಡಾಕ್ಟರಿಗೆ ಗಾಬರಿಯಾದರೆ, ದುಬ್ಬೀರ, ಗುಡ್ಡೆ ಒಳಗೇ ನಕ್ಕರು.

ಸಂಗತ

ಅಂಕಪಟ್ಟಿ: ಬದುಕಿನ ಹಕ್ಕುಪತ್ರವಲ್ಲ

ಬದುಕು ಕಲಿಸಬೇಕಾದ ಶಾಲೆಯು ಮಕ್ಕಳನ್ನು ಅಂಕದ ಹಿಂದೆ ಓಡಲು ನಿಲ್ಲಿಸಿದರೆ ಅಂತಹ ಸ್ಥಿತಿಗೆ ಯಾರನ್ನು ದೂರುವುದು?

• ಸದಾಶಿವ್ ಸೊರಟೂರು

ಇದು, ನನ್ನ ಪರಿಚಿತ ವಲಯದಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಪ್ರಕರಣ. ಅಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಘೋಷಣೆಯಾಗಲಿತ್ತು. ಪರೀಕ್ಷೆ ಬರೆದಿದ್ದ ಒಬ್ಬಳು ಹುಡುಗಿ ಬೆಳಿಗ್ಗೆಯಿಂದ ಆತಂಕದಲ್ಲಿ ಫಲಿತಾಂಶಕ್ಕಾಗಿ ಕಾದಿದ್ದಳು. ಆಗಿನ್ನೂ ಸ್ಮಾರ್ಟ್‌ಫೋನ್ ಹೆಚ್ಚಿನ ಜನರ ಬಳಿ ಇರಲಿಲ್ಲ. ಪಕ್ಕದ ಪಟ್ಟಣದಂತಹ ಊರಿನ ಕಂಪ್ಯೂಟರ್ ಸೆಂಟರಿನಲ್ಲಿ ಪರೀಕ್ಷೆಯ ಫಲಿತಾಂಶ ನೋಡಬಹುದಿತ್ತು. ಈ ಹುಡುಗಿಗೆ ಹೋಗಲಾಗಲಿಲ್ಲ. ಫಲಿತಾಂಶ ನೋಡಲೆಂದೇ ಹೋದ ಗೆಳತಿಯೊಬ್ಬಳಿಗೆ ತನ್ನ ಫಲಿತಾಂಶವನ್ನೂ ನೋಡಿಕೊಂಡು ಬರಲು ಹೇಳಿ ಕಾದು ಕುಳಿತಳು.

ಒಂದೆರಡು ಗಂಟೆಗಳ ತರುವಾಯ, ಫಲಿತಾಂಶ ನೋಡಲು ಹೋದ ಗೆಳತಿ ಬಂದು 'ನಿಂದು ಫೇಲಾಗಿಬಿಟ್ಟಿದೆ ಕಣೇ' ಅಂದು ಹೊರಟುಹೋದಳು. ಅದೇನನ್ನಿಸಿತೋ ಏನೋ ಈ ಹುಡುಗಿ ಏಕಾಏಕಿ ಕೋಣೆಯ ಒಳಗೆ ಹೋಗಿ ನೇಣಿಗೆ ಶರಣಾಗಿಬಿಟ್ಟಳು. ಆದರೆ ನಂತರ ಗೊತ್ತಾದ ಸತ್ಯವೆಂದರೆ, ಆ ಹುಡುಗಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಳು. ಅವಳ ಗೆಳತಿ ಸುಮ್ಮನೆ ರೇಗಿಸಲು ಹೇಳಿದ ಮಾತು ಆ ಮುಗ್ಧ ಮಗುವಿನ ಜೀವವನ್ನೇ ಬಲಿ ತೆಗೆದುಕೊಂಡುಬಿಟ್ಟಿತು.

ಇಲ್ಲಿ ಮಗುವಿಗೆ ಕೈಕೊಟ್ಟದ್ದು ಅದರ ಆತ್ಮವಿಶ್ವಾಸ. ಮಕ್ಕಳ ಮುಗ್ಧತೆ, ಬೆರಗು, ಭರವಸೆ, ಆತ್ಮವಿಶ್ವಾಸ, ಸೃಜನಾತ್ಮಕತೆ ಮತ್ತು ಎಲ್ಲಾ ಒಳಿತುಗಳು, ಒತ್ತಡಗಳನ್ನು ಅವರ ಮೇಲೆ ವ್ಯವಸ್ಥಿತವಾಗಿ ಹೇರುವ ಮೂಲಕ ಅವರನ್ನು ದಿಕ್ಕೆಡಿಸುವುದೇ ಶಿಕ್ಷಣವೇನೊ ಅನ್ನಿಸಿಬಿಡುತ್ತದೆ ಒಮ್ಮೊಮ್ಮೆ.

ಈ ಬಾರಿ ಫೇಲಾದರೆ ಇನ್ನೊಮ್ಮೆ ಪರೀಕ್ಷೆ ಬರೆಯಬಹುದು ಎಂಬುದು ಆ ಮಗುವಿಗೆ ಗೊತ್ತಿರದಿದ್ದ ಸಂಗತಿಯೇನಲ್ಲ. ಒಂದು ವೇಳೆ ಈ ಪರೀಕ್ಷೆ ಫೇಲಾಗಿಬಿಟ್ಟರೆ ಬದುಕೂ ಫೇಲಾಗಿಬಿಡುತ್ತದೆ ಎಂದು ಆಕೆ ಅರ್ಥೈಸಿಕೊಂಡಿರಲಿಲ್ಲ. ಓದು ಮತ್ತು ಪರೀಕ್ಷೆಯ ಗೊಡವೆ ಇಲ್ಲದೆ ಒಳ್ಳೆಯ ಜೀವನ ಸಾಗಿಸುತ್ತಿರುವ ಬಹಳಷ್ಟು ಜನ ಆಕೆಯ ಸುತ್ತಮುತ್ತಲೇ ಇದ್ದರು. ಅದು ಅವಳಿಗೂ ಗೊತ್ತಿತ್ತು. ಆದರೂ ಆಕೆ ಈ ಬದುಕೇ ಬೇಡ ಎಂದುಕೊಂಡು ಹೊರಟುಹೋದದ್ದು ಯಾಕೆ?

ಒಂದು ಪರೀಕ್ಷೆಯ ಗೆಲುವನ್ನು ಬದುಕಿನ ಗೆಲುವು ಎಂದೂ ಅಂಕಗಳನ್ನು ಪ್ರತಿ ತಿಂಗಳೂ ಬರುವ ಸಂಬಳವೆಂದೂ ಅಂಕಪಟ್ಟಿಯನ್ನು ಕೆಲಸಕ್ಕೆಂದು ಕೊಡುವ ಆದೇಶಪತ್ರವೆಂದೂ ಒಳ್ಳೆಯ ಕಾಲೇಜಿನಲ್ಲಿ ಸಿಕ್ಕ ಸೀಟೇ ತನಗೆ ದಕ್ಕಿದ ಮಹಲಿನ ಸುಖವೆಂದೂ ಈ ಸಮಾಜ ಮಗುವನ್ನು ನಂಬಿಸಿದೆ ಮತ್ತು ಅದನ್ನು ಮಕ್ಕಳಿಂದ ಬಯಸುತ್ತದೆ.

ಪರೀಕ್ಷೆಯಲ್ಲಿ ಸೋತ ವಿದ್ಯಾರ್ಥಿಗೆ ತನ್ನನ್ನು ತಾನು ನಿಭಾಯಿಸಿಕೊಳ್ಳುವುದು ಅಷ್ಟೇನೂ ಕಷ್ಟವಲ್ಲ. ತನ್ನನ್ನು ಸಮಾಧಾನಪಡಿಸಿಕೊಳ್ಳುವುದು ಗೊತ್ತಿರುತ್ತದೆ. ಕದಡಿದ ನೀರು ಸದಾ ಕಾಲ ಕದಡಿಕೊಂಡೇ ಇರುವುದಿಲ್ಲ. ಆದರೆ ಸತತವಾಗಿ ಕಾಡುವ ಪೋಷಕರನ್ನು, ಒತ್ತಡ ಹಾಕುವ ಶಿಕ್ಷಕರನ್ನು, ನೋಡಿ ನಗುವ ಗೆಳೆಯರನ್ನು, ಹೀನಾಯವಾಗಿ ನಡೆಸಿಕೊಳ್ಳುವ ಸಮಾಜವನ್ನು ಎದುರಿಸಲಾಗುವುದಿಲ್ಲ. ಅವರ ಪ್ರಶ್ನೆಗಳಿಗೆ ಉತ್ತರಿಸಲಾಗುವುದಿಲ್ಲ. 'ಇರಲಿ ಬಿಡು ಕಂದ. ಮತ್ತೊಮ್ಮೆ ಓದಿ ಬರೆದರಾಯಿತು. ಅದೇ ಬದುಕಲ್ಲವಲ್ಲ' ಎನ್ನುವ ಒಂದು ಮಾತು ಆ ಹೊತ್ತಿನಲ್ಲಿ ಮಗುವಿಗೆ ಸಿಕ್ಕಿಬಿಟ್ಟರೆ, ಆ ಕ್ಷಣದಲ್ಲಿ ಅದರೊಳಗೆ ಸಮಾಧಾನದ ಅಲೆ. ನಾವು ಸಮಾಧಾನ ಮತ್ತು ಬುದ್ಧಿ ಹೇಳಬೇಕಾಗಿರುವುದು ಮಗುವಿಗಿಂತ ಅದರ ಹೆತ್ತವರಿಗೆ, ಶಿಕ್ಷಕರಿಗೆ ಮತ್ತು ಸಮಾಜಕ್ಕೆ. ಅವರೆಲ್ಲಾ ಸರಿಯಾದ ದಿನ ಮಕ್ಕಳು ಒಂಚೂರು ನಿರಾಳರಾಗುತ್ತಾರೆ.

'ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ. ಅವರು ನಿಮ್ಮ ಮೂಲಕ ಬರುತ್ತಾರೆಯೇ ವಿನಾ ನಿಮ್ಮಿಂದ ಅಲ್ಲ. ಅವರು ನಿಮ್ಮೊಂದಿಗೇ ಇದ್ದರೂ ನಿಮ್ಮ ಒಡೆತನಕ್ಕೆ ಒಳಪಟ್ಟವರಲ್ಲ. ನೀವು ಅವರಿಗೆ ನಿಮ್ಮ ಒಲವನ್ನು ನೀಡಬಹುದು, ಆಲೋಚನೆಗಳನ್ನಲ್ಲ. ಅವರಿಗೆ ಅವರದೇ ಆದ ಆಲೋಚನೆಗಳು ಇರುತ್ತವೆ. ಅವರ ದೇಹಗಳಿಗೆ ನೀವು ಆಶ್ರಯ ನೀಡಬಹುದು, ಆತ್ಮಗಳಿಗಲ್ಲ' ಎನ್ನುತ್ತಾನೆ ಖಲೀಲ್ ಗಿಬ್ರಾನ್.



ನಮ್ಮ ಮಕ್ಕಳು ನಮ್ಮ ಗುಲಾಮರಲ್ಲ. ಹುಟ್ಟುವ ಪ್ರತಿ ಮಗುವೂ ಒಳ್ಳೆಯದಾಗಿಯೇ ಹುಟ್ಟಿರುತ್ತದೆ. ಹುಟ್ಟಿದ ನಂತರ ಅದನ್ನು ಹಂತ ಹಂತವಾಗಿ ಹಾಳು ಮಾಡುವ ಗುತ್ತಿಗೆಯನ್ನು ನಾವು ತೆಗೆದುಕೊಳ್ಳುತ್ತೇವೆ. 'ಮಗು ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟುತ್ತದೆ. ಅದನ್ನು ನಾವು ಅಲ್ಪಮಾನವನನ್ನಾಗಿ ಮಾಡುತ್ತೇವೆ' ಎನ್ನುವ ಕುವೆಂಪು ಅವರ ಮಾತು ಎಷ್ಟೊಂದು ಅರ್ಥಗಳನ್ನು ಹೊಮ್ಮಿಸುತ್ತದೆ.

ಫಲಿತಾಂಶದ ಈ ದಿನಗಳಲ್ಲಿ ನನಗೆ ಪತ್ರಿಕೆಗಳನ್ನು ನೋಡಲು, ವಾರ್ತೆಗಳನ್ನು ಕೇಳಲು ಭಯವಾಗುತ್ತದೆ. ಮಕ್ಕಳು ಆತ್ಮಹತ್ಯೆ ಮಾಡಿಕೊಂಡವು ಎಂಬ ಸುದ್ದಿಗಿಂತ ಕೆಟ್ಟ ಸುದ್ದಿ ಬಹುಶಃ ಜಗತ್ತಿನಲ್ಲಿ ಮತ್ತೆ ಯಾವುದೂ ಇರಲಿಕ್ಕಿಲ್ಲ. ಮಕ್ಕಳ ಆತ್ಮಹತ್ಯೆಗಳ ಪೈಕಿ, ಪರೀಕ್ಷಾ ಒತ್ತಡದಿಂದಾದ ಸಾವುಗಳ ಸಂಖ್ಯೆಯೇ ಹೆಚ್ಚಾಗಿರುತ್ತದೆ ಎಂಬುದು ದಿಗಿಲು ಹುಟ್ಟಿಸುವ ಸಂಗತಿ.

ಹುಟ್ಟು ಎಂದರೇನು, ಸಾವು ಎಂದರೇನು, ಬದುಕು ಎಂದರೇನು ಎಂಬುದು ಗೊತ್ತಿರದ ಮಕ್ಕಳೆಲ್ಲಾ ಉಸಿರು ಚೆಲ್ಲುವುದನ್ನು ನೋಡುವುದಕ್ಕೆ ಸಂಕಟವಾಗುತ್ತದೆ. 'ಎಂಥದ್ದೇ ಸಂದರ್ಭ ಬಂದರೂ ನಾನು ಬದುಕಬಲ್ಲೆ' ಎಂಬುದನ್ನು ಕಲಿಸುವುದು ಶಿಕ್ಷಣವಾಗಬೇಕಿತ್ತು. ಅಂಕ ಕಡಿಮೆ ಬಂತು ಎಂದು ಸತ್ತುಹೋಗುವ ವಿದ್ಯಾರ್ಥಿಗಳ ಎದುರು ಶಿಕ್ಷಣವನ್ನು ಏನೆಂದು ವ್ಯಾಖ್ಯಾನಿಸುವುದು? ಬದುಕು ಕಲಿಸಬೇಕಾದ ಶಾಲೆಯು ಮಕ್ಕಳನ್ನು ಅಂಕದ ಹಿಂದೆ ಓಡಲು ನಿಲ್ಲಿಸಿದರೆ ಯಾರನ್ನು ದೂರುವುದು? ಅಂಕ ಇಲ್ಲದವನಿಗೂ ಇಲ್ಲಿ ಹೊಟ್ಟೆ ತುಂಬಾ ಅನ್ನವಿದೆ ಎಂದು ಹೇಳಿಕೊಡಬಾರದೇ ಶಾಲೆ?

ವಾಚಕರ ವಾಣಿ

ಅಪ್‌ಗ್ರೇಡೆಡ್ ಆ್ಯಪ್ ಬಿಡುಗಡೆಯಾಗಲಿ

ಅಂಚೆ ಇಲಾಖೆಯು ತನ್ನ ಗ್ರಾಹಕರು ತಮ್ಮ ಉಳಿತಾಯ ಖಾತೆಯ ವ್ಯವಹಾರಗಳನ್ನು ನಿಭಾಯಿಸಲು ಐಪಿಪಿಬಿ ಮೊಬೈಲ್ ಆ್ಯಪ್ ನೀಡಿತ್ತು. ನಾವು ಬಳಸುತ್ತಿದ್ದೆವು. ಈಗ ದಿಢೀರೆಂದು ಅದನ್ನು ಅಪ್‌ಗ್ರೇಡ್ ಮಾಡಿದೆ. ಅದು ನಮ್ಮ ಮೊಬೈಲುಗಳಲ್ಲಿ ಕೆಲಸ ಮಾಡುತ್ತಿಲ್ಲ. ಅದಕ್ಕಾಗಿ ನಾವು ಹೊಸ ಮೊಬೈಲನ್ನು ಕೊಳ್ಳಬೇಕಂತೆ? ಇದೆಲ್ಲಿಯ ನ್ಯಾಯ? ದಯವಿಟ್ಟು ಇಲಾಖೆಯು ನಮ್ಮ ಈಗಿರುವ ಮೊಬೈಲುಗಳಲ್ಲೇ ಕೆಲಸ ಮಾಡುವಂತಹ ಅಪ್‌ಗ್ರೇಡೆಡ್ ಆ್ಯಪನ್ನು ಸಿದ್ಧಪಡಿಸಿಕೊಡಬೇಕೆಂದು ಗ್ರಾಹಕರೆಲ್ಲರ ಪರವಾಗಿ ಕೋರುತ್ತೇನೆ.

ಬಿ.ಆರ್. ಲಕ್ಷ್ಮಣರಾವ್, ಬೆಂಗಳೂರು

ಬೌದ್ಧಿಕ ದಿವಾಳಿತನ, ಪುಕ್ಕಲುತನದ ಪ್ರದರ್ಶನ

ಭಾರತದ ವೈವಿಧ್ಯತೆ ಕುರಿತು ಸ್ಯಾಮ್ ಪಿತ್ರೋಡಾ ಅವರ ಹೇಳಿಕೆಗೆ ಸಂಬಂಧಿಸಿದ ವಿಷಯದಲ್ಲಿನ ಕಾಂಗ್ರೆಸ್ ನಡೆಯು ಅದರ ಬೌದ್ಧಿಕ ದಿವಾಳಿತನವನ್ನು ಸೂಚಿಸುತ್ತದೆ. ಆದರೆ, ವಿವಾದ ಹುಟ್ಟಿದ ಕೂಡಲೇ ಕಾಂಗ್ರೆಸ್ ಪಕ್ಷದ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಪಿತ್ರೋಡಾ ಅವರ ಪುಕ್ಕಲುತನ ಅಸಹನೀಯ ಎನಿಸುತ್ತದೆ. ರಾಜಕಾರಣಿಗಳನ್ನು ಎದುರಿಸುವ ಧೈರ್ಯ ಮತ್ತು ತಮ್ಮ ವಿಚಾರಗಳ ಬಗ್ಗೆ ದೃಢವಾದ ನಿಷ್ಠೆ ಇಲ್ಲದ ವಿಚಾರವಾದಿಗಳಿಂದ ಸಮಾಜಕ್ಕೆ ಯಾವ ಮಹತ್ವದ ಕೊಡುಗೆಗಳೂ ಸಿಗವು. ಅಲ್ಲದೆ ಪಿತ್ರೋಡಾ ಅವರ ವಿಚಾರಗಳನ್ನು ವಸ್ತುನಿಷ್ಠವಾಗಿ ಚರ್ಚಿಸುವುದನ್ನು ಬಿಟ್ಟು ಅವರು ರಾಜೀನಾಮೆ ನೀಡುವ ಸನ್ನಿವೇಶ ಸೃಷ್ಟಿಸಿದ ಕಾಂಗ್ರೆಸ್ಸಿಗರ ಬೌದ್ಧಿಕ ದಿವಾಳಿತನ ಮತ್ತು ಅವರ ಅಭಿಪ್ರಾಯಗಳನ್ನು ರಾಜಕೀಯ ಲಾಭಕ್ಕಾಗಿ ವಿರೂಪಗೊಳಿಸಿ ಪ್ರಚಾರ ಮಾಡುತ್ತಿರುವ ಬಿಜೆಪಿಯವರ ಬೌದ್ಧಿಕ ಕಿಡಿಗೇಡಿತನ ನಿಜಕ್ಕೂ ಅಕ್ಷಮ್ಯ ಅಪರಾಧಗಳಾಗಿವೆ.

ಈ ರಾಜಕಾರಣಿಗಳು ಧರ್ಮವನ್ನು ರಾಜಕೀಯಕ್ಕೆಳೆದು ಅದನ್ನು ಸೂತಕಗೊಳಿಸಿದ್ದಾಯಿತು. ಈಗ ವ್ಯಕ್ತಿಗಳ ವೈಚಾರಿಕ ಅಭಿವ್ಯಕ್ತಿಯನ್ನು ಹತ್ತಿಕ್ಕುವ ಹಾಗೂ ವಿರೂಪಗೊಳಿಸಿ ವ್ಯಾಖ್ಯಾನಿಸುವ ಮೂಲಕ ವೈಚಾರಿಕತೆಯನ್ನೂ ನಿರ್ವೀರ್ಯಗೊಳಿಸುವ ಹುನ್ನಾರ ಪ್ರಾರಂಭಿಸಿದ್ದಾರೆ. ಅಧಿಕಾರದ ಚುಕ್ಕಾಣಿ ಹಿಡಿದವರು ಬೌದ್ಧಿಕ ದಿವಾಳಿತನವನ್ನೂ ಅಧಿಕಾರವುಳ್ಳವರನ್ನು ತಿದ್ದಿ ಸರಿದಾರಿಯಲ್ಲಿ ನಡೆಸಬೇಕಾದ ಬುದ್ಧಿಜೀವಿಗಳು ಹೇಡಿತನವನ್ನೂ ಪ್ರದರ್ಶಿಸಲಾರಂಭಿಸಿದರೆ ಅಂತಹ ದೇಶದಲ್ಲಿ ವೈಚಾರಿಕತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಭವಿಷ್ಯ ಇರುವುದಿಲ್ಲ.

ಟಿ.ಎನ್.ವಾಸುದೇವಮೂರ್ತಿ, ಬಿ.ಜಿ.ನಗರ, ಬೆಳ್ಳೂರು

ಸ್ವಚ್ಛಗೊಳ್ಳಬೇಕಿರುವುದು ದೇಗುಲವಲ್ಲ...

ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಚುನಾವಣಾ ಪ್ರಚಾರದ ವೇಳೆ ಕನೌಜ್‌ನ ಸಿದ್ಧ ಬಾಬಾ ಗೌರಿಶಂಕರ ದೇವಾಲಯಕ್ಕೆ ಭೇಟಿ ನೀಡಿ ತೆರಳಿದ ನಂತರ, ಬಿಜೆಪಿ ಕಾರ್ಯಕರ್ತರು ಗಂಗಾಜಲ ಬಳಸಿ ದೇಗುಲವನ್ನು ಸ್ವಚ್ಛಗೊಳಿಸಿದ ಬಗ್ಗೆ ವರದಿಯಾಗಿದೆ. ಇದೆಂಥ ಮಾನವೀಯತೆ, ಮನುಷ್ಯತ್ವ? ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಜಾತೀಯತೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲವೇಕೆ? ಜಾತೀಯತೆಯ ವಿಷಬೀಜವನ್ನು ಇನ್ನೂ ಮುಂದುವರಿಸುತ್ತಿರುವ ವಿಕೃತ ಮನಸ್ಸುಗಳಿಗೆ ಏನೆನ್ನಬೇಕು? ಮೊದಲು ತಮ್ಮ ತಮ್ಮ ಮನಸ್ಸುಗಳನ್ನು ಶುದ್ಧೀಕರಿಸಿಕೊಂಡರೆ ಒಳ್ಳೆಯದು.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಒತ್ತಡಕ್ಕೆ ಸಿಲುಕಿದರೇ ಪ್ರಧಾನಿ?

'ಐದು ವರ್ಷಗಳಿಂದ ಅದಾನಿ ಮತ್ತು ಅಂಬಾನಿ ವಿಷಯ ಪ್ರಸ್ತಾಪಿಸುತ್ತಿದ್ದ 'ಶಹಜಾದ' ಈಗ ಈ ವಿಷಯವಾಗಿ ಮೌನ ತಾಳಿರುವುದೇಕೆ?' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಹುಲ್ ಗಾಂಧಿ ಹಾಗೂ ಆ ಮೂಲಕ ಕಾಂಗ್ರೆಸ್ಸನ್ನು ತಿವಿದಿದ್ದಾರೆ (ಪ್ರ.ವಾ., ಮೇ 9). ಈ ಬಾರಿಯ ಲೋಕಸಭಾ ಚುನಾವಣೆ ಮತ್ತು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆ ಪ್ರಕಟಗೊಂಡ ನಂತರ ಪ್ರಧಾನಿಯವರು ಜನರ ಮುಂದೆ ತಮ್ಮ ಆಳ್ವಿಕೆಯಲ್ಲಿನ ಜನಪರ ನೀತಿ ನಿರ್ಧಾರಗಳ ಬಗ್ಗೆ ಚರ್ಚಿಸಬೇಕಿತ್ತು. ಅಂತಹ ಕ್ರಮಗಳಿಂದ ಶ್ರೀಸಾಮಾನ್ಯರ ಜೀವನದಲ್ಲಾದ ಸುಖಕರ, ಸಹನೀಯ ಬದಲಾವಣೆಗಳೇನೆಂದು ಉಲ್ಲೇಖಿಸಬೇಕಿತ್ತು. ಆದರೆ ಅವರು ಕಾಂಗ್ರೆಸ್ ಪ್ರಣಾಳಿಕೆಯನ್ನೇ ಚುನಾವಣಾ ಭಾಷಣದ ಟೀಕೆ-ಟಿಪ್ಪಣಿಗೆ ಅಸ್ತ್ರವಾಗಿಸಿಕೊಂಡಿರುವುದನ್ನು ವಿಷಾದನೀಯ ಎನ್ನಬೇಕೊ, ಬೌದ್ಧಿಕ ದಿವಾಳಿತನ ಎನ್ನಬೇಕೊ?

ಮೊದಲನೇ ಹಂತದ ಚುನಾವಣೆಯವರೆಗೂ ಸ್ವಲ್ಪ ಸಮಚಿತ್ತದಿಂದ ಇದ್ದ ಪ್ರಧಾನಿಯವರ ಭಾಷಣದಲ್ಲಿ ಇದ್ದಕ್ಕಿದ್ದಂತೆ ಮಹಿಳೆಯರ ಮಾಂಗಲ್ಯಸೂತ್ರ ಕಂಡುಹಿಡಿಯುವ ಕ್ಷ-ಕಿರಣ ಯಂತ್ರ ತೂರಿ ಬಂತು, ರೈತರ ದನಕರುಗಳ ಹಿಂಡು ನುಗ್ಗಿ ಬಂತು. ಕೊನೆಗೆ ಈಗ ಅದಾನಿ, ಅಂಬಾನಿಯವರು ತಮ್ಮ ಕಪ್ಪುಹಣದ ರಾಶಿಯನ್ನು ಕಾಂಗ್ರೆಸ್ ಕಡೆ ಒಯ್ಯುತ್ತಿದ್ದಾರೆಂದೂ ಅದಾಗಿ ರಾಹುಲ್ ಅವರು ಅವರನ್ನು ನಿಂದಿಸುತ್ತಿಲ್ಲವೆಂದೂ ವಿಚಿತ್ರವಾಗಿ ವಿಶ್ಲೇಷಣೆ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಹಾಗೂ ಅದಾನಿ, ಅಂಬಾನಿಯವರ ನಡುವಿನ ಗೆಳೆತನವನ್ನು ರಾಹುಲ್ ಅವರು ಸತತವಾಗಿ ಜನರೆದುರು ಮಂಡಿಸಿದ ಪರಿಣಾಮವಾಗಿ ಪ್ರಧಾನಿ ಒತ್ತಡಕ್ಕೆ ಸಿಲುಕಿ ಹೀಗೆ ಮಾತನಾಡುತ್ತಿರಬಹುದು.

ಶ್ರೀಧರ್ ಗಾರೆಮನೆ, ಬೆಂಗಳೂರು

ಚುನಾವಣೆ: ಕಹಿ ಮರೆಸಿದ ವ್ಯವಸ್ಥೆ

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ನಾನು, ಇದೇ ತಿಂಗಳ 6ರಂದು ತೀರ್ಥಹಳ್ಳಿ ತಾಲ್ಲೂಕಿನಿಂದ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಹೊರಟೆ. ಈ ಮೊದಲಿನ ಚುನಾವಣೆಗಳಲ್ಲಿ ಹೀಗೆ ಕರ್ತವ್ಯಪಾಲನೆಗೆ ನಿಯೋಜನೆಗೊಂಡಿದ್ದಾಗ ಆಗಿದ್ದ ಕಹಿ ಅನುಭವಗಳ ಕಾರಣದಿಂದ, ಈ ಬಾರಿಯೂ ಎಂದಿನಂತೆ ಬೇಸರದಿಂದಲೇ ಸಹೋದ್ಯೋಗಿಗಳೊಂದಿಗೆ ತೆರಳಿದಾಗ ಅಲ್ಲಿ ಆಶ್ಚರ್ಯ ಕಾದಿತ್ತು. ಯಾವುದೋ ಮದುವೆ ಸಮಾರಂಭಕ್ಕೆ ಬಂದಂತೆ ಭಾಸವಾಯಿತು. ಕಾಲೇಜನ್ನು ಮದುವಣಗಿತ್ತಿಯಂತೆ ಸಿಂಗರಿಸಲಾಗಿತ್ತು. ಬಿಸಿಲು ತಾಗದಂತೆ ಅಳವಡಿಸಿದ್ದ ಬೃಹತ್ ಶಾಮಿಯಾನದ ಅಡಿ ಅತ್ಯುತ್ತಮವಾದ ಆಸನದ ವ್ಯವಸ್ಥೆಯ ಜೊತೆಗೆ ಉತ್ತಮವಾದ ಊಟ, ತಿಂಡಿ, ಕುಡಿಯುವ ನೀರು, ಶೌಚಾಲಯದಂತಹ ವ್ಯವಸ್ಥೆ ಕಲ್ಪಿಸಿದ್ದನ್ನು ಕಂಡು ಎಲ್ಲಾ ಚುನಾವಣಾ ಸಿಬ್ಬಂದಿ ಸಂತಸಪಟ್ಟರು. ಚುನಾವಣೆಯ ಎರಡೂ ದಿನಗಳು ಚುನಾವಣಾ ಸಿಬ್ಬಂದಿಯೊಂದಿಗೆ ಚುನಾವಣಾ ಆಯೋಗ ಕೈ ಜೋಡಿಸಿದ ರೀತಿ ಇತರ ಎಲ್ಲಾ ಚುನಾವಣೆಗಳಲ್ಲಾದ ಕಹಿ ನೆನಪುಗಳನ್ನು ಮರೆಸುವಂತಿತ್ತು.

ಎಂ.ಜೆ.ಅಲ್ಫೋನ್ಸ್ ಪಿಂಟೋ, ತೀರ್ಥಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಿಂದೂ–ಮುಸ್ಲಿಮರ ಜನಸಂಖ್ಯೆ ಪ್ರಮಾಣ

ಪ್ರಧಾನಿ ಆರ್ಥಿಕ ಸಲಹೆಗಾರರ ವರದಿಯಲ್ಲಿ ಹಲವಾರು ದೋಷ

‘ದೇಶದ ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣ 1950ರಿಂದ 2015ರ ನಡುವೆ ಶೇ 43ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಹಿಂದೂಗಳ ಪ್ರಮಾಣ ಶೇ 7.8ರಷ್ಟು ಇಳಿಕೆಯಾಗಿದೆ’ ಎಂದು ಪ್ರಧಾನಿಯ ಆರ್ಥಿಕ ಸಲಹಾ ಸಮಿತಿಯ ಅಧಿಕಾರಿಗಳು ಸಿದ್ಧಪಡಿಸಿರುವ ವರದಿ ಹೇಳಿದೆ. ಪ್ರಧಾನಿಯ ಆರ್ಥಿಕ ಸಲಹಾ ಸಮಿತಿ ಬಿಡುಗಡೆ ಮಾಡಿರುವ ಈ ವರದಿಯು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ಮಧ್ಯೆ ಜಟಾಪಟಿಗೆ ಕಾರಣವಾಗಿದೆ. ಆದರೆ ಸಮಿತಿಯೇ, ‘ಈ ವರದಿಯಲ್ಲಿ ಇರುವ ವಿವರಗಳು, ದತ್ತಾಂಶಗಳು ಮತ್ತು ಅಭಿಪ್ರಾಯಗಳು ಲೇಖಕರಿಗೆ ಮಾತ್ರ ಸಂಬಂಧಿಸಿದ್ದು’ ಎಂದು ಹೇಳಿದೆ. ಈ ಮೂಲಕ ಸರ್ಕಾರಕ್ಕೂ ಈ ವರದಿಗೂ ಸಂಬಂಧವಿಲ್ಲ ಎಂದು ಹೇಳಿದೆ. ಚುನಾವಣೆಯ ಮಧ್ಯೆ ಈ ವರದಿ ಬಿಡುಗಡೆಯಾಗಿರುವುದಕ್ಕೆ ಆಕ್ಷೇಪಗಳೂ ವ್ಯಕ್ತವಾಗಿವೆ. ಇದಲ್ಲದೇ ವರದಿ ಸಿದ್ಧಪಡಿಸಲು ಬಳಸಿಕೊಂಡ ದತ್ತಾಂಶಗಳಲ್ಲಿ ಹಲವು ದೋಷಗಳಿವೆ

ವರದಿಯ ಮುಖ್ಯಾಂಶ

1. ‘1950–2015ರ ಮಧ್ಯೆ ದೇಶದ ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣ ಶೇ 9.8ರಿಂದ ಶೇ 14.09ಕ್ಕೆ ಏರಿಕೆಯಾಗಿದೆ. ಇದು ಶೇ 43ರಷ್ಟು ಏರಿಕೆ. ಇದೇ ಅವಧಿಯಲ್ಲಿ ಹಿಂದೂಗಳ ಪ್ರಮಾಣ ಶೇ 84.68ರಿಂದ ಶೇ 78.06ಕ್ಕೆ ಇಳಿಕೆಯಾಗಿದೆ. ಇದು ಶೇ 7.8ರಷ್ಟು ಇಳಿಕೆ. ಮುಸ್ಲಿಮರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಮತ್ತು ಹಿಂದೂಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯ ದೋಷ

1. 1950ರಲ್ಲಿ ಜನಸಂಖ್ಯೆ ಎಷ್ಟು ಇತ್ತು ಎಂಬುದನ್ನು ವರದಿಯಲ್ಲಿ ಎಲ್ಲೂ ಉಲ್ಲೇಖಿಸಿಲ್ಲ. ವಾಸ್ತವದಲ್ಲಿ 1950ರಲ್ಲಿ ದೇಶದ ಜನಸಂಖ್ಯೆ ಎಷ್ಟಿತ್ತು ಮತ್ತು ಅದರಲ್ಲಿ ಹಿಂದೂ ಮತ್ತು ಮುಸ್ಲಿಮರ ಪ್ರಮಾಣ ಎಷ್ಟು ಇತ್ತು ಎಂಬ ದತ್ತಾಂಶ ಲಭ್ಯವೇ ಇಲ್ಲ. ಏಕೆಂದರೆ ಸ್ವತಂತ್ರ ಭಾರತದಲ್ಲಿ ಮೊದಲ ಜನಗಣತಿ ನಡೆದದ್ದು 1951ರಲ್ಲಿ. ಲಭ್ಯವೇ ಇಲ್ಲದ ಜನಸಂಖ್ಯೆಯ ಆಧಾರದಲ್ಲಿ ಈ ಏರಿಕೆ ಇಳಿಕೆ ಪ್ರಮಾಣವನ್ನು ಲೆಕ್ಕಾಚಾರ ಮಾಡಲಾಗಿದೆ.

2015ರಲ್ಲಿ ಜನಸಂಖ್ಯೆ ಇಂತಿಷ್ಟಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ವಾಸ್ತವದಲ್ಲಿ 2015ರಲ್ಲಿ ಜನಸಂಖ್ಯೆ ಎಷ್ಟು ಎಂಬುದರ ಅಧಿಕೃತ ದತ್ತಾಂಶ ಲಭ್ಯವಿಲ್ಲ. ಏಕೆಂದರೆ ಈಚೆಗೆ ನಡೆದ ಜನಗಣತಿ ಎಂದರೆ 2011ರದ್ದು. 2011ರ ಜನಗಣತಿ ದತ್ತಾಂಶವನ್ನು ಗಣನೆಗೆ ತೆಗೆದುಕೊಳ್ಳದೆ, ಲಭ್ಯವೇ ಇಲ್ಲದ 2015ರ ಜನಸಂಖ್ಯಾ ಪ್ರಮಾಣವನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

1951ರ ಜನಗಣತಿ ಪ್ರಕಾರ ದೇಶದಲ್ಲಿನ ಹಿಂದೂಗಳ ಪ್ರಮಾಣ ಶೇ 84.98ರಷ್ಟು. 2011ರ ಜನಗಣತಿ ಪ್ರಕಾರ ಹಿಂದೂಗಳ ಪ್ರಮಾಣ ಶೇ79.79ರಷ್ಟು. ಈ ಎರಡೂ ಸಂಖ್ಯೆಗಳನ್ನು ಈ ವರದಿಯಲ್ಲಿ, 1950ರಲ್ಲಿ ಶೇ 84.68 ಎಂದೂ, 2015ರಲ್ಲಿ ಶೇ78.06 ಎಂದು ತಪ್ಪಾಗಿ ಉಲ್ಲೇಖಿಸಲಾಗಿದೆ. ಈ ಮೂಲಕ ಇಳಿಕೆ ಪ್ರಮಾಣವು ತೀರಾ ಹೆಚ್ಚು ಎಂಬಂತೆ ಬಿಂಬಿಸಲಾಗಿದೆ.

1951ರ ಜನಗಣತಿಯ ಪ್ರಕಾರ ಮುಸ್ಲಿಮರ ಜನಸಂಖ್ಯೆ ಪ್ರಮಾಣ ಶೇ 9.91ರಷ್ಟು ಇತ್ತು. 2011ರ ಜನಗಣತಿ ವೇಳೆಗೆ ಅದು ಶೇ 14.2ರಷ್ಟಾಗಿದೆ. ಆದರೆ ವರದಿಯಲ್ಲಿ ಇದನ್ನು ಶೇ 9.8ರಿಂದ ಶೇ14.09ಕ್ಕೆ ಏರಿಕೆ ಎಂದು ಉಲ್ಲೇಖಿಸಲಾಗಿದೆ. ವರದಿಯಲ್ಲಿರುವ ಈ ಅಂಕಿಅಂಶವೂ ತಪ್ಪಾಗಿದೆ.

ವರದಿಯ ಮುಖ್ಯಾಂಶ

2. ‘ಈ ದತ್ತಾಂಶಗಳನ್ನು ನಾವು ಅಸೋಸಿಯೇಶನ್ ಫಾರ್ ರಿಲೀಜಿಯನ್ ಡಾಟಾ ಅರ್ಕೈವ್‌ನ (ಎಆರ್‌ಡಿಆರ್) ವರದಿಗಳಿಂದ ತೆಗೆದುಕೊಂಡಿದ್ದೇವೆ. ಇದು ಜಗತ್ತಿನಲ್ಲಿ ಲಭ್ಯವಿರುವ ಧಾರ್ಮಿಕ ಜನಸಂಖ್ಯಾ ದತ್ತಾಂಶಗಳಲ್ಲೇ ಅತ್ಯಂತ ನಿಖರವಾದುದು. ವಿಶ್ವಸಂಸ್ಥೆಯ ಕೆಲವು ದತ್ತಾಂಶಗಳು ಇವೆಯಾದರೂ, ಅವುಗಳ ವ್ಯಾಪ್ತಿ ಕಡಿಮೆ. ಆದರೆ ಎಆರ್‌ಡಿಆರ್ ಕೆಲವು ದೇಶಗಳಿಗೆ ಸಂಬಂಧಿಸಿದಂತೆ 1800ರಿಂದಲೂ ಜನಸಂಖ್ಯಾ ದತ್ತಾಂಶ ಹೊಂದಿದೆ. ಆ ದತ್ತಾಂಶಗಳನ್ನೇ ಬಳಸಿಕೊಂಡಿದ್ದೇವೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯ ದೋಷ

2. ಭಾರತದ ಜನಸಂಖ್ಯೆಗೆ ಸಂಬಂಧಿಸಿದಂತೆ ಎಆರ್‌ಡಿಆರ್ ಉಲ್ಲೇಖಿಸಿರುವ ದತ್ತಾಂಶಗಳಲ್ಲಿ ಹಲವು ದೋಷಗಳಿವೆ. 1951ರ ಜನಗಣತಿ ಪ್ರಕಾರ ದೇಶದ ಹಿಂದೂಗಳ ಪ್ರಮಾಣ ಶೇ 84.98ರಷ್ಟು. ಆದರೆ ಎಆರ್‌ಡಿಆರ್ ತನ್ನ ದತ್ತಾಂಶಗಳಲ್ಲಿ ಇದನ್ನು ಶೇ 80 ಎಂದು ಉಲ್ಲೇಖಿಸಿದೆ. 2001ರ ಜನಗಣತಿಯಲ್ಲಿ ಹಿಂದೂಗಳ ಪ್ರಮಾಣ ಶೇ 80.45 ಎಂದು ಇದ್ದು, ಎಆರ್‌ಡಿಆರ್ ತನ್ನ ದತ್ತಾಂಶದಲ್ಲಿ ಶೇ 73.6 ಎಂದು ಉಲ್ಲೇಖಿಸಿದೆ. ಇಂತಹ ಹಲವು ದೋಷಗಳು ಎಆರ್‌ಡಿಆರ್ ದತ್ತಾಂಶಗಳಲ್ಲಿ ಇವೆ. ಭಾರತದ ಜನಗಣತಿ ವರದಿಗೂ, ಎಆರ್‌ಡಿಆರ್ ವರದಿಗೂ ಬಹಳ ವ್ಯತ್ಯಾಸವಿದೆ.

ಹೆಚ್ಚು ನಿಖರವಾದ ಭಾರತದ ಜನಗಣತಿ ದತ್ತಾಂಶಗಳು ಲಭ್ಯವಿದ್ದರೂ, ಪ್ರಧಾನಿ ಆರ್ಥಿಕ ಸಲಹಾ ಸಮಿತಿಯ ಸದಸ್ಯರು ತೀರಾ ದೋಷಗಳಿಂದ ಕೂಡಿರುವ ಎಆರ್‌ಡಿಆರ್ ವರದಿಗಳನ್ನು ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ.

ವರದಿಯ ಮುಖ್ಯಾಂಶ

3. ‘ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಸರ್ಕಾರಗಳು ವಿಶೇಷ ಹಕ್ಕುಗಳು ಮತ್ತು ವಿಶೇಷ ರಕ್ಷಣೆಯನ್ನು ಒದಗಿಸುತ್ತದೆ. ಈ ಕಾರಣದಿಂದಲೇ ಧಾರ್ಮಿಕ ಅಲ್ಪಸಂಖ್ಯಾತರ (ಮುಸ್ಲಿಮರ) ಜನಸಂಖ್ಯೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಅವರ ಜನಸಂಖ್ಯೆ ಏರಿಕೆಯಾಗಲು ಫಲದಾಯಕ ಪರಿಸ್ಥಿತಿ ಇದೆ. ಇದೇ ನಮ್ಮ ಅಧ್ಯಯನದ ಕೇಂದ್ರ ವಿಷಯ’ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯ ದೋಷ

3. ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಸರ್ಕಾರಗಳು ವಿಶೇಷ ಹಕ್ಕುಗಳು ಮತ್ತು ವಿಶೇಷ ರಕ್ಷಣೆಯನ್ನು ಒದಗಿಸುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಅಂತಹ ವಿಶೇಷ ಹಕ್ಕುಗಳು ಮತ್ತು ರಕ್ಷಣೆಗಳು ಯಾವುವು ಎಂಬುದನ್ನು ವರದಿಯಲ್ಲಿ ಎಲ್ಲೂ ಉಲ್ಲೇಖಿಸಿಲ್ಲ. ಜತೆಗೆ, ಧಾರ್ಮಿಕ ಅಲ್ಪಸಂಖ್ಯಾತರ ಪ್ರಮಾಣ ಏರಿಕೆಯಾಗಲು ಅಂತಹ ವಿಶೇಷ ಹಕ್ಕು–ರಕ್ಷಣೆಗಳು ಹೇಗೆ ಕಾರಣವಾದವು ಎಂಬುದನ್ನೂ ವರದಿಯಲ್ಲಿ ವಿವರಿಸಿಲ್ಲ.

ದೇಶದ ಎಲ್ಲಾ ಧರ್ಮಗಳ ಜನರೂ ವಿವಾಹ, ಸಂತಾನ, ವಿಚ್ಛೇದನ, ವಾರಸುದಾರಿಕೆಗೆ ಸಂಬಂಧಿಸಿದಂತೆ ತಮ್ಮ ವೈಯಕ್ತಿಕ ಕಾನೂನುಗಳನ್ನು ಅನುಸರಿಸುವ ಹಕ್ಕು ಹೊಂದಿದ್ದಾರೆ. ದಂಪತಿಯು ಎಷ್ಟು ಮಕ್ಕಳನ್ನು ಹೊಂದಬಹುದು ಎಂಬುದಕ್ಕೆ ಸಂಬಂಧಿಸಿದಂತೆ ಹಿಂದೂಗಳೂ ಸೇರಿ ಯಾವ ಧರ್ಮದವರ ಮೇಲೂ ನಿರ್ಬಂಧವಿಲ್ಲ. ಹೀಗಾಗಿ ವಿಶೇಷ ಹಕ್ಕು–ರಕ್ಷಣೆಗಳು ಧಾರ್ಮಿಕ ಬಹುಸಂಖ್ಯಾತರ ಪ್ರಮಾಣ ಇಳಿಕೆಯಾಗಲು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಪ್ರಮಾಣ ಏರಿಕೆಯಾಗಲು ಕಾರಣ ಎಂದು ಹೇಳುವುದರಲ್ಲಿ ತರ್ಕವಿಲ್ಲ.

ಎಲ್ಲಾ ಧಾರ್ಮಿಕ ಅಲ್ಪಸಂಖ್ಯಾತರಿಗೂ ನೀಡಲಾಗಿರುವ ಹಕ್ಕುಗಳು ಜೈನರು ಮತ್ತು ಪಾರ್ಸಿಗಳಿಗೂ ದೊರೆತಿವೆ. ಆದರೆ ಆ ಎರಡೂ ಧಾರ್ಮಿಕ ಸಮುದಾಯಗಳ ಪ್ರಮಾಣ ಈ ಅವಧಿಯಲ್ಲಿ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದಕ್ಕೆ ಕಾರಣ ಏನು ಎಂಬುದನ್ನು ಪರಿಶೀಲಿಸುವ ಯತ್ನವನ್ನು ಸಂಶೋಧಕರು ಮಾಡಿಲ್ಲ. ಈ ಬಗ್ಗೆ ವರದಿಯಲ್ಲಿ ಎಲ್ಲೂ ಉಲ್ಲೇಖವಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಈ ವರದಿಯಲ್ಲೇ, ‘ಧಾರ್ಮಿಕ ಅಲ್ಪಸಂಖ್ಯಾತರ ಪ್ರಮಾಣ ಏರಿಕೆಯಾಗಲು ಪಕ್ಕದ ದೇಶಗಳಿಂದ ವಲಸೆ, ಅಕ್ರಮ ವಲಸೆ, ನಿರಾಶ್ರಿತರಿಗೆ ದೇಶದಲ್ಲಿ ಆಶ್ರಯ ಕಲ್ಪಿಸುವುದು ಮತ್ತು ಆಯಾ ಜನರ ಫಲವಂತಿಕೆಯ ಮಟ್ಟ ಪ್ರಮುಖ ಕಾರಣ. ಆದರೆ ನಮ್ಮ ಅಧ್ಯಯನದಲ್ಲಿ ನಾವು ಸರ್ಕಾರದ ವಿಶೇಷ ಹಕ್ಕು ಮತ್ತು ರಕ್ಷಣೆಗಳ ಬಗ್ಗೆ ಮಾತ್ರ ಗಮನಹರಿಸುತ್ತೇವೆ’ ಎಂದು ವಿವರಿಸಲಾಗಿದೆ. ಅಂದರೆ ಯಾವುದೇ ಧರ್ಮ–ಸಮುದಾಯದ ಜನರ ಪ್ರಮಾಣ ಏರಿಕೆಯಾಗಲು ನೈಜ ಕಾರಣ ಏನು ಎಂಬುದು ಈ ಅಧ್ಯಯನ ನಡೆಸಿದವರಿಗೆ ಗೊತ್ತಿದ್ದೂ, ಆ ಬಗ್ಗೆ ನಾವು ಗಮನ ಹರಿಸುವುದಿಲ್ಲ ಎಂದು ಹೇಳಿದ್ದಾರೆ. ಜನಸಂಖ್ಯೆ ಏರಿಕೆ–ಇಳಿಕೆಯನ್ನು ಪ್ರಭಾವಿಸದೇ ಇರುವ ಅಂಶಗಳನ್ನೇ ಮುಂದು ಮಾಡಿಕೊಂಡು ಸತ್ಯವನ್ನು ಮರೆಮಾಚುವ ರೀತಿಯಲ್ಲಿ ವರದಿ ಸಿದ್ಧಪಡಿಸಲಾಗಿದೆ.

ವರದಿಯ ಮುಖ್ಯಾಂಶ

4. ‘ಇದೇ ಅವಧಿಯಲ್ಲಿ ಸಿಖ್ ಧರ್ಮೀಯರ ಜನಸಂಖ್ಯೆ ಪ್ರಮಾಣ ಶೇ 6.58ರಷ್ಟು ಏರಿಕೆಯಾಗಿದೆ. ಬೌದ್ಧ ಧರ್ಮೀಯರ ಜನಸಂಖ್ಯೆ ಪ್ರಮಾಣ ಶೇ0.05ರಿಂದ ಶೇ 0.81ಕ್ಕೆ ಏರಿಕೆಯಾಗಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯ ದೋಷ

4. ಈ ಅಂಶಗಳೂ ಬಹಳಷ್ಟು ದೋಷಗಳಿಂದ ಕೂಡಿವೆ. ವರದಿಯಲ್ಲೇ ನೀಡುವ ಜನಸಂಖ್ಯಾ ಪ್ರಮಾಣದ ಪ್ರಕಾರ 1950ರಿಂದ 2015ರ ಮಧ್ಯೆ ದೇಶದ ಜನಸಂಖ್ಯೆಯಲ್ಲಿ ಸಿಖ್ ಧರ್ಮೀಯರ ಪ್ರಮಾಣದಲ್ಲಿ ಶೇ 49.19ರಷ್ಟು ಏರಿಕೆಯಾಗಿದೆ. ಆದರೆ ಇದನ್ನು ಶೇ 6.58 ಎಂದು ತಪ್ಪಾಗಿ ಉಲ್ಲೇಖಿಸಲಾಗಿದೆ. ಇದೇ ಅವಧಿಯಲ್ಲಿ ಬೌದ್ಧ ಧರ್ಮೀಯರ ಪ್ರಮಾಣ ಶೇ 1,520ರಷ್ಟು ಏರಿಕೆಯಾಗಿದೆ.

ರಾಜಕೀಯ ಜಟಾಪಟಿ

ಈ ವರದಿಯಲ್ಲಿನ ಅಂಶಗಳನ್ನು ಬಳಸಿಕೊಂಡು ಬಿಜೆಪಿ ನಾಯಕರು ಕಾಂಗ್ರೆಸ್ ಮತ್ತು ಅದರ ನೀತಿಗಳ ವಿರುದ್ಧ ಹರಿಹಾಯ್ದಿದ್ದಾರೆ. ಆದರೆ ಈ ವರದಿಯ ಸತ್ಯಾಸತ್ಯತೆಯನ್ನೇ ವಿರೋಧ ಪಕ್ಷಗಳು ಪ್ರಶ್ನಿಸುತ್ತಿವೆ. ಕಾಂಗ್ರೆಸ್ ಮಾತ್ರವಲ್ಲ, ಇತರ ವಿರೋಧ ಪಕ್ಷಗಳೂ ಈ ವರದಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿವೆ

ಬಿಜೆಪಿಯಿಂದ ಕಾಂಗ್ರೆಸ್ ಟೀಕೆ

ಒಂದು ಸಮುದಾಯದ ಜನಸಂಖ್ಯೆ ಹೇಗೆ ಏರಿಕೆಯಾಗುತ್ತಿದೆ ಎಂದರೆ, ದೇಶದ ಜನಸಂಖ್ಯಾ ಚಿತ್ರಣವೇ ಬದಲಾಗಲಿದೆ. ಈ ಬಗ್ಗೆ ಒಂದು ಪ್ರಶ್ನೆಯನ್ನು ಎತ್ತಲೇಬೇಕು. ಮುಸ್ಲಿಮರ ಜನಸಂಖ್ಯೆ ಏರಿಕೆಯಾಗಲು ಮತಾಂತರ ಮತ್ತು ಅಕ್ರಮ ವಲಸೆ ಎಷ್ಟರಮಟ್ಟಿಗೆ ಕಾರಣ ಎಂಬುದಕ್ಕೆ ಉತ್ತರ ಬೇಕು. ಮುಸ್ಲಿಮರ ಸಂಖ್ಯೆಯೇ ಏರಿಕೆಯಾಗುತ್ತಿದ್ದರೆ ಇತರ ಧಾರ್ಮಿಕ ಅಲ್ಪಸಂಖ್ಯಾತರಾದ ಜೈನರು, ಬೌದ್ಧರು, ಸಿಖ್ಖರು ಮತ್ತು ಕ್ರಿಶ್ಚಿಯನ್ನರಿಗೆ ಸಿಗಬೇಕಾದ ಅವಕಾಶಗಳ ಕತೆ ಏನಾಗಬೇಕು.

ಕಾಂಗ್ರೆಸ್ ಸಂವಿಧಾನವನ್ನು ನೆಲಕಚ್ಚಿಸಲು ಯತ್ನಿಸುತ್ತಿದೆ. ಧಾರ್ಮಿಕ ಮೀಸಲಾತಿ ಜಾರಿಗೆ ತಂದು ಮುಸ್ಲಿಮರಿಗೆ ಮೀಸಲಾತಿ ನೀಡಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕಸಿದುಕೊಳ್ಳಲು ಯತ್ನಿಸುತ್ತಿದೆ.

ರಾಜೀವ್ ಚಂದ್ರಶೇಖರ್, ಕೇಂದ್ರ ಸಚಿವ

ಮುಸ್ಲಿಮರು ಒಂದಕ್ಕಿಂತ ಹೆಚ್ಚು ಮದುವೆಯಾಗಲು ಅವಕಾಶವಿರುವುದರಿಂದಲೇ ಅವರ ಜನಸಂಖ್ಯೆ ವಿಪರೀತ ಏರಿಕೆಯಾಗುತ್ತಿರಬೇಕು. ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದರೆ, ಅವರು ಮೀಸಲಾತಿಯನ್ನು ಬದಲಿಸುತ್ತಲೇ ಇರುತ್ತಾರೆ.

ಸುಧಾಂಶು ತ್ರಿವೇದಿ, ಬಿಜೆಪಿ ರಾಷ್ಟ್ರೀಯ ವಕ್ತಾರ

ವಿಪಕ್ಷಗಳ ತಿರುಗೇಟು

2021ಕ್ಕೆ ಜನಗಣತಿ ನಡೆಯಬೇಕಿತ್ತು, 2024 ಆದರೂ ಜನಗಣತಿ ನಡೆದಿಲ್ಲ. ಈ ದತ್ತಾಂಶಗಳು ಎಲ್ಲಿಂದ ಬಂದವು. ಜನಗಣತಿಯನ್ನೇ ನಡೆಸದೆ ಜನಸಂಖ್ಯೆಯ ಬಗ್ಗೆ ಮಾತನಾಡಲಾಗುತ್ತಿದೆ. ಬಿಜೆಪಿ 10 ವರ್ಷಗಳಿಂದ ಅಧಿಕಾರದಲ್ಲಿತ್ತು. ಆಗ ಜನರನ್ನು ಯಾಮಾರಿಸಿತು. ಈಗಲೂ ಅದನ್ನೇ ಮಾಡುತ್ತಿದೆ. ಬಿಜೆಪಿಯು ಜನರ ಮಧ್ಯೆ ದ್ವೇಷ ಹುಟ್ಟುಹಾಕಿ, ಒಡೆದಾಳಲು ಯತ್ನಿಸುತ್ತಿದೆ. ಪ್ರಧಾನಿ ಮೋದಿ ಅವರೇ ಈ ಹಿಂದೂ–ಮುಸ್ಲಿಂ ಜನಸಂಖ್ಯೆಯನ್ನು ಬಿಡಿ. ದೇಶದ ನಿಜವಾದ ಸಮಸ್ಯೆಗಳಾದ ನಿರುದ್ಯೋಗ, ಬೆಲೆ ಏರಿಕೆಯ ಬಗ್ಗೆ ಮಾತನಾಡಿ

ತೇಜಸ್ವಿ ಯಾದವ್, ಆರ್‌ಜೆಡಿ ಮುಖಂಡ

ಮೋದಿ ಅವರ ಸರ್ಕಾರ ಬಂದದ್ದು 2014ರಲ್ಲಿ. ಈ ಅಧ್ಯಯನ ನಡೆಸಿದ್ದು 1950–2015ಕ್ಕೆ ಸಂಬಂಧಿಸಿದಂತೆ. ಈ ಸರ್ಕಾರ ಜನಗಣತಿ ನಡೆಸುತ್ತಿಲ್ಲ, ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ನೀಡುತ್ತಿಲ್ಲ, ವಲಸೆ ಕಾರ್ಮಿಕರ ಸಂಖ್ಯೆ ನೀಡುತ್ತಿಲ್ಲ, ಬಡತನದ ಬಗ್ಗೆಯೂ ಸರ್ಕಾರದ ಬಳಿ ದತ್ತಾಂಶಗಳು ಇಲ್ಲ. ಆದರೆ ಈ ವರದಿ ಸಿದ್ಧಪಡಿಸಲು ಸರ್ಕಾರಕ್ಕೆ ದತ್ತಾಂಶ ಎಲ್ಲಿ ದೊರೆಯಿತು?

ಡಿ.ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ

ಮುಸ್ಲಿಮರ ಜನಸಂಖ್ಯೆ ಏರಿಕೆ ದರ ಭಾರಿ ಇಳಿಕೆ


‘ಮುಸ್ಲಿಮರ ಜನಸಂಖ್ಯೆ ಏರಿಕೆ ದರ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಮತ್ತು ದೇಶದ ಯಾವುದೇ ಧರ್ಮದ ಜನಸಂಖ್ಯೆ ದರ ಇಳಿಕೆಗಿಂತಲೂ ಮುಸ್ಲಿಮರ ಜನಸಂಖ್ಯೆ ಏರಿಕೆ ದರ ಕುಸಿತವೇ ಹೆಚ್ಚು’ ಎಂದು ಸ್ವಯಂಸೇವಾ ಸಂಸ್ಥೆ ಪಾಪುಲೇಷನ್ ಫೌಂಡೇಷನ್ ಆಫ್ ಇಂಡಿಯಾ ಹೇಳಿದೆ.

ಧಾರ್ಮಿಕ ಜನಸಂಖ್ಯಾ ಪ್ರಮಾಣಕ್ಕೆ ಸಂಬಂಧಿಸಿದಂತೆ ಪ್ರಧಾನಿಯ ಆರ್ಥಿಕ ಸಲಹಾ ಸಮಿತಿಯ ವರದಿಯಲ್ಲಿನ ಅಂಶಗಳಿಗೆ ಸಂಸ್ಥೆಯು ಈ ರೀತಿ ಪ್ರತಿಕ್ರಿಯೆ ನೀಡಿದೆ. ‘1981–1991ರ ದಶಕದಲ್ಲಿ ಮುಸ್ಲಿಮರ ಜನಸಂಖ್ಯೆ ಏರಿಕೆ ದರವು ಶೇ 32.9ರಷ್ಟು ಇತ್ತು. 2001–2011ರ ದಶಕದಲ್ಲಿ ಈ ದರವು ಶೇ 24.6ಕ್ಕೆ ಕುಸಿದಿತ್ತು. ಅಂದರೆ ಈ ಅವಧಿಯಲ್ಲಿ ಮುಸ್ಲಿಮರ ಜನಸಂಖ್ಯೆ ಏರಿಕೆ ದರದಲ್ಲಿ 8.3 ಶೇಕಡಾವಾರು ಅಂಶಗಳಷ್ಟು ಕುಸಿದಿತ್ತು’ ಎಂದು ಸಂಸ್ಥೆಯು ಹೇಳಿದೆ.

‘1981–1991ರ ದಶಕದಲ್ಲಿ ಹಿಂದೂಗಳ ಜನಸಂಖ್ಯೆ ಏರಿಕೆ ದರವು ಶೇ 22.7ರಷ್ಟು ಇತ್ತು. 2001–2011ರ ದಶಕದಲ್ಲಿ ಆ ದರವು ಶೇ 16.8ಕ್ಕೆ ಕುಸಿದಿತ್ತು. ಅಂದರೆ ಈ ಅವಧಿಯಲ್ಲಿ ಹಿಂದೂಗಳ ಜನಸಂಖ್ಯೆ ಏರಿಕೆ ದರವು 5.9 ಶೇಕಡಾವಾರು ಅಂಶಗಳಷ್ಟು ಇಳಿಕೆ ಕಂಡಿತ್ತು’ ಎಂದು ಜನಗಣತಿಯ ದತ್ತಾಂಶಗಳನ್ನು ಸಂಸ್ಥೆಯು ಉಲ್ಲೇಖಿಸಿದೆ.

ಆಧಾರ: ಪ್ರಧಾನಿಯ ಆರ್ಥಿಕ ಸಲಹಾ ಸಮಿತಿಯ ‘ಷೇರಿಂಗ್ ಆಫ್ ರಿಲೀಜಿಯಸ್ ಮೀನಾರಿಟೀಸ್: ಎ ಕ್ರಾಸ್ ಕಂಟ್ರಿ ಅನಾಲಿಸಿಸ್ (1950–2015) ವರದಿ, ದೇಶದ ಜನಗಣತಿ ವರದಿಗಳು, ಎಆರ್‌ಡಿಆರ್‌ನ ಧಾರ್ಮಿಕ ಜನಸಂಖ್ಯಾ ವರದಿಗಳು, ಪಿಟಿಐ

ಸಿದ್–ಅನಾಹಿತ ಪ್ರೇಮ್‌ಕಹಾನಿ



ರಕ್ಷಿತ್ ಶೆಟ್ಟಿ

ರಕ್ಷಿತ್ ಶೆಟ್ಟಿ ಸಾರಥ್ಯದ ಪರಂವಃ ಸ್ಟುಡಿಯೋಸ್ ನಿರ್ಮಾಣ ಮಾಡಿರುವ ‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಆಗಸ್ಟ್ ಅಂತ್ಯಕ್ಕೆ ಅಥವಾ ಸೆಪ್ಟೆಂಬರ್‌ನಲ್ಲಿ ಸಿನಿಮಾ ತೆರೆಕಾಣಲಿದೆ.

‘ಪಂಚತಂತ್ರ’ ಸಿನಿಮಾ ಖ್ಯಾತಿಯ ವಿಹಾನ್ ಹಾಗೂ ‘ನಮ್ಮನೆ ಯುವರಾಣಿ’ ಧಾರಾವಾಹಿ ಖ್ಯಾತಿಯ ಅಂಕಿತಾ ಅಮರ್ ‘ಸಿದ್–ಅನಾಹಿತ’ ಎಂಬ ಹೆಸರಿನಲ್ಲಿ ಈ ಸಿನಿಮಾದಲ್ಲಿ ಜೋಡಿಯಾಗಿದ್ದಾರೆ. ಪಾತ್ರಗಳ ವಿಶೇಷತೆ ಹೊತ್ತ ಪೋಸ್ಟರ್‌ಗಳನ್ನು ಚಿತ್ರದ ನಿರ್ದೇಶಕ ಚಂದ್ರಜಿತ್ ಬೆಳ್ಳಿಯಪ್ಪ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದಾರೆ. ‘ಸಿದ್’ ಆ್ಯಂಗ್ರಿಯಂಗ್ ಮ್ಯಾನ್ ಆಗಿದ್ದು, ಕ್ರಿಕೆಟ್ ಈತನ ವೃತ್ತಿ. ಅತ್ತ ‘ಅನಾಹಿತ’ ನೀರಂತೆ ನಿಷ್ಕಲ್ಮಷೆ, ನಿರಂತರೆ. ಕವನಗಳಲ್ಲಿ ಮುಳುಗಿದಾಕೆ. ಅವಳೇ ಒಂದು ಕವಿತೆಯಂತೆ ಎಂದಿದ್ದಾರೆ ಚಂದ್ರಜಿತ್. ಇವರಿಬ್ಬರ ಕಾವ್ಯಾತ್ಮಕ ಪ್ರೇಮಕಥೆಯೇ ಚಿತ್ರದ ಕಥಾಹಂದರ.

‘ಸಿನಿಮಾದಲ್ಲಿ ಹೆಚ್ಚಿನ ವಿಎಫ್‌ಎಕ್ಸ್ ಇದ್ದು, ಅದರ ಕೆಲಸಗಳು ನಡೆಯುತ್ತಿವೆ. ಜನ ಚುನಾವಣೆಯ ಮೂಡ್‌ನಿಂದ ಹೊರಬಂದ ಬಳಿಕ ಟ್ರೇಲರ್ ಬಿಡುಗಡೆ ಮಾಡಿ ರಿಲೀಸ್ ದಿನಾಂಕ ಘೋಷಣೆ ಮಾಡುತ್ತೇವೆ. ಇದನ್ನು ಹೊರತುಪಡಿಸಿ ಸದ್ಯ ಎರಡು ಸ್ಕ್ರಿಪ್ಟ್‌ಗಳ ಮೇಲೆ ಕೆಲಸ ಮಾಡುತ್ತಿದ್ದೇನೆ. ‘ಇಬ್ಬನಿ..’ಯ ಫಲಿತಾಂಶ ನೋಡಿಕೊಂಡು ಮುಂದಿನ ಹೆಜ್ಜೆ’ ಎನ್ನುತ್ತಾರೆ ಚಂದ್ರಜಿತ್.

ಮೂರನೇ ಕೃಷ್ಣಪ್ಪನ ಟ್ರೇಲರ್ ಇಂದು

ರಂಗಾಯಣ ರಘು ಹಾಗೂ ಸಂಪತ್ ಮುಖ್ಯಭೂಮಿಕೆಯಲ್ಲಿರುವ ‘ಮೂರನೇ ಕೃಷ್ಣಪ್ಪ’ ಚಿತ್ರವು ಮೇ 24ರಂದು ತೆರೆಕಾಣುತ್ತಿದ್ದು, ಸಿನಿಮಾದ ಟ್ರೇಲರ್ ಇಂದು(ಮೇ 10) ಬಿಡುಗಡೆಯಾಗಲಿದೆ.

ನವೀನ್ ನಾರಾಯಣಘಟ್ಟ ನಿರ್ದೇಶನದ ಈ ಚಿತ್ರವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್‌ನ ನಾರಾಯಣಪುರ ಎಂಬಲ್ಲಿ ನಡೆಯುವ ಕಥೆಯನ್ನು ಹೊಂದಿದೆ. ಚಿತ್ರದಲ್ಲಿ ಸಂಪೂರ್ಣವಾಗಿ ಬೆಂಗಳೂರು ಸುತ್ತಮುತ್ತಲಿನ ಪ್ರದೇಶದ ಭಾಷೆ ಬಳಕೆಯಾಗಿದೆ. ಚಿತ್ರದ ಟ್ರೇಲರ್‌ಗೆ ನಟ ಲೂಸ್‌ಮಾದ ಯೋಗಿ ಧ್ವನಿ ನೀಡಿದ್ದು, ಚಿತ್ರದ ಕಥೆಯನ್ನು ಸಂಕ್ಷಿಪ್ತವಾಗಿ ನಿರೂಪಣೆ ಮಾಡಿದ್ದಾರೆ.

ಊರಲ್ಲಿ ‘ಕೃಷ್ಣಪ್ಪ’ ಹೆಸರಿನ ಮೂವರಿದ್ದು, ಅದರಲ್ಲಿ ನಟ ಸಂಪತ್ ‘ಮೂರನೇ ಕೃಷ್ಣಪ್ಪ’ನಿಗೆ ಬಣ್ಣಹಚ್ಚಿದ್ದಾರೆ. ಈ ‘ಕೃಷ್ಣಪ್ಪ’ನ ಜೀವನದ ಸುತ್ತ ಚಿತ್ರದ ಕಥೆಯಿದೆ. ‘ವೀರಣ್ಣ’ನಾಗಿ ರಂಗಾಯಣ ರಘು ಇಲ್ಲಿ ಕಾಣಿಸಿಕೊಂಡಿದ್ದಾರೆ. ‘ಅಕಿರ’ ಮತ್ತು ‘ರಿಲ್ಯಾಕ್ಸ್ ಸತ್ಯ’ ಸಿನಿಮಾ ನಿರ್ದೇಶಿಸಿದ್ದ ನವೀನ್ ಅವರ ಮೂರನೇ ಸಿನಿಮಾ ಇದಾಗಿದೆ. ಶ್ರೀಪ್ರಿಯಾ ನಾಯಕಿಯಾಗಿ ನಟಿಸಿದ್ದು, ಸಂತೋಷ್, ಉಗ್ರಂ ಮಂಜು ತಾರಾಬಳಗದಲ್ಲಿದ್ದಾರೆ



ರಂಗಾಯಣ ರಘು



ಸಂಪತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನುಡಿ ಬೆಳಗು

ಮನುಷ್ಯ ಹಾರುವುದಾ? ಇಂಪಾಸಿಬಲ್



ಪ್ರೊ.ಎಂ. ಕೃಷ್ಣೇಗೌಡ

ಅವರೊಬ್ಬರು ಅಮೆರಿಕದ ಪ್ರಾಟೆಸ್ಟೆಂಟ್ ಕ್ರೈಸ್ತ ಬಿಷಪ್. ಒಂದು ಬಾರಿ ತಮ್ಮದೇ ಚರ್ಚ್ ನಡೆಸುತ್ತಿದ್ದ ಶಾಲೆಯೊಂದಕ್ಕೆ ಹೋಗಿದ್ದರು. ಅವರು ಆ ಶಾಲೆಗೆ ಹೋಗಿ ಬಹಳ ದಿನಗಳಾಗಿದ್ದ ಕಾರಣ ಆ ರಾತ್ರಿ ಅಲ್ಲಿಯೇ ಉಳಿದುಕೊಂಡರು. ರಾತ್ರಿ ಊಟವಾದ ಮೇಲೆ ಆ ಶಾಲೆಯ ಪ್ರಾಂಶುಪಾಲರ ಜೊತೆ ಲೋಕಾಭಿರಾಮವಾಗಿ ಮಾತಾಡುತ್ತಾ ‘ನೋಡಿ, ಮನುಷ್ಯ ಏನೇನೆಲ್ಲಾ ಕಂಡುಹಿಡಿದುಬಿಟ್ಟಿದ್ದಾನೆ... ಪ್ರಕೃತಿಯ ಎಲ್ಲಾ ರಹಸ್ಯವನ್ನೂ ಬಯಲು ಮಾಡಿಬಿಟ್ಟಿದ್ದಾನೆ. ಇನ್ನು ಕಂಡುಹಿಡಿಯುವುದಕ್ಕೆ ಮನುಷ್ಯನಿಗೆ ಏನೂ ಇಲ್ಲ. ಈ ಜಗತ್ತು ಕೊನೆಯಾಗುವ ಕಾಲ ಬಹುಶಃ ಹತ್ತಿರದಲ್ಲೇ ಇದೆ’ ಅಂದರು.

ಪ್ರಾಂಶುಪಾಲರಿಗೆ ಬಿಷಪ್ ಅವರ ಅಭಿಪ್ರಾಯ ಸಮ್ಮತವೆನಿಸಲಿಲ್ಲ. ಅವರು ಹೇಳಿದರು: ‘ನನಗೆ ಹಾಗನ್ನಿಸುವುದಿಲ್ಲ ಮೈ ಲಾರ್ಡ್. ಮನುಷ್ಯ ಕಂಡುಹಿಡಿಯಬಹುದಾದದ್ದು ಇನ್ನೂ ಬೇಕಾದಷ್ಟಿದೆ. ನಮ್ಮ ಜೀವಿತ ಕಾಲದಲ್ಲೇ ನಾವು ಬೆರಗಾಗುವಂಥ ಆವಿಷ್ಕಾರಗಳನ್ನು ಕಾಣುತ್ತೇವೆ’.

ಬಿಷಪ್ ಕೇಳಿದರು: ‘ಮನುಷ್ಯ ಇನ್ನೇನು ಕಂಡುಹಿಡಿಯಬಹುದು?’

ಪ್ರಾಂಶುಪಾಲರು: ‘ಬಹುಶಃ ಆಕಾಶದಲ್ಲಿ ಹಾರುವುದನ್ನು’.

ಬಿಷಪ್: ‘ಮನುಷ್ಯ ಹಾರುವುದಾ? ಇಂಪಾಸಿಬಲ್... ಮನುಷ್ಯ ಹಾರಬೇಕೆಂಬುದು ಬಹುಶಃ ದೇವರ ಇಚ್ಛೆಯಲ್ಲ. ಹಾಗಿದ್ದರೆ ಅವನು ಮನುಷ್ಯನನ್ನು ಸೃಷ್ಟಿಸುವಾಗಲೇ ರೆಕ್ಕೆಗಳನ್ನಿಟ್ಟಿರುತ್ತಿದ್ದ. ಹಕ್ಕಿಗಳಿಗೆ, ಚಿಟ್ಟೆಗಳಿಗೆ ರೆಕ್ಕೆಯನ್ನಿಟ್ಟು ಕಳುಹಿಸಿದವನಿಗೆ ಮನುಷ್ಯನಿಗೆ ರೆಕ್ಕೆಗಳನ್ನಿಡಲು ಆಗುತ್ತಿರಲಿಲ್ಲವೆ?’ ಪ್ರಾಂಶುಪಾಲರು, ದೊಡ್ಡವರ ಹತ್ತಿರ ಮಾತು ಬೆಳೆಸುವುದು ಬೇಡವೆಂದು ಸುಮ್ಮನಾದರು.

ಆ ಬಿಷಪ್ಪರ ಹೆಸರು ಮಿಲ್ಟನ್ ರೈಟ್. ಸ್ವಾರಸ್ಯವೇನು ಗೊತ್ತೆ? ವಿಮಾನವನ್ನು ಕಂಡುಹಿಡಿದವರು ರೈಟ್ ಬ್ರದರ್ಸ್ ಎಂದು ನಾವು ಶಾಲೆಯ ಪುಸ್ತಕಗಳಲ್ಲಿ ಓದಿದ್ದೇವಲ್ಲವೆ? ಆ ರೈಟ್ ಬ್ರದರ್ಸ್– ಆರ್ವಿಲ್ಲೆ ರೈಟ್ ಮತ್ತು ವಿಲ್ಬರ್ ರೈಟ್- ಇದೇ ಬಿಷಪ್ ಮಿಲ್ಟನ್ ರೈಟ್ ಅವರ ಮಕ್ಕಳು. ಹೈಸ್ಕೂಲ್ ವರೆಗೆ ಮಾತ್ರ ಓದಿದ್ದ ಹುಡುಗರು ಅವರು.

ಡಿಸೆಂಬರ್ 17, 1903ರಂದು ಅವರು ತಾವೇ ನಿರ್ಮಿಸಿದ ವಿಮಾನವನ್ನು ಅಮೆರಿಕದ ನಾರ್ತ್ ಕೆರೋಲಿನಾ ರಾಜ್ಯದ ಕಿಟ್ಟಿಹಾಕ್‌ನಿಂದ ಆರು ಕಿಲೋ ಮೀಟರ್‌ನಷ್ಟು ದೂರ ಇರುವ ಕಿಲ್ ಡೆವಿಲ್ ಹಿಲ್ ಎಂಬಲ್ಲಿ ಯಶಸ್ವಿಯಾಗಿ ಆಕಾಶದಲ್ಲಿ ಹಾರಾಡಿಸಿದರು. ಮುಂದೆ ಒಂದೇ ವರ್ಷದಲ್ಲಿ ಸುಧಾರಿಸಿದ ವಿಮಾನವನ್ನೂ ಹಾರಿಸಿದರು.

ಮನುಷ್ಯನ ಮತಿಯ ಅನಂತ ಸಾಧ್ಯತೆಗಳಿಗೆ ಕೊನೆಯೆಲ್ಲಿ? ಪ್ರಕೃತಿಯ ರಹಸ್ಯಗಳನ್ನು ಭೇದಿಸುತ್ತಾ, ಹೊಸ ಹೊಸ ಅಚ್ಚರಿಗಳನ್ನು ಉಂಟುಮಾಡುವುದರಿಂದಲೇ ಮನುಕುಲದ ಇತಿಹಾಸ ರೋಚಕವೂ ರಮ್ಯವೂ ಆಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ತೃತೀಯ ಗಂ. 26-51 ನಕ್ಷತ್ರ: ರೋಹಿಣಿ ಗಂ. 10-47 ಯೋಗ: ಅತಿಗಂಡ ಗಂ. 12-06 ಕರಣ: ತೈತಿಲ ಗಂ. 15-30, ಮೇಷ ಮಾಸದ 28 ನೇ ದಿನ, ಮಳೆನಕ್ಷತ್ರ: ಭರಣಿ 4.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-09 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 01 ಜುಲ್ಕಾಯದ್
ದಿನ ವಿಶೇಷ : ಪರಶುರಾಮ ಜಯಂತಿ, ಅಕ್ಷಯ ತೃತೀಯ, ವಾರ್ಸಿತಾಪ ಸಮಾಪನ (ಜೈನ್), ಕೇದಾರ - ಬದ್ರಿ ಯಾತ್ರೆ, ಅದೃಷ್ಟ ಸಂಖ್ಯೆ : 1, 6

ಮೇಷ: ಸ್ವತ್ತು ವಿವಾದಗಳ ಇತ್ಯರ್ಥಕ್ಕೆ ಸೂಕ್ತ ವಾತಾವರಣ ಸೃಷ್ಟಿಯಾಗಲಿದೆ. ವಿಮರ್ಶಾತ್ಮಕ ಆಲೋಚನೆಯನ್ನು ಎಲ್ಲರೂ ಪ್ರಶಂಸಿಸುವರು. ನಿರಂತರ ಪ್ರಯತ್ನದಿಂದ ಕಾರ್ಯಸಿದ್ಧಿ ಆಗುತ್ತದೆ.

ವೃಷಭ: ಪ್ರತಿ ವಿಷಯವನ್ನು ಗಹನವಾಗಿ ಚಿಂತಿಸಿದರೆ ಲೋಪ ದೋಷಗಳೇ ಕಂಡು ಬರುವವು. ಸ್ನೇಹಿತನ ವಿಷಯದಲ್ಲಿ ಈ ದಿನ ಆಸಕ್ತಿಯನ್ನು ವಹಿಸಲಿದ್ದೀರಿ.

ಮಿಥುನ: ಸಸ್ಯ ಮಾರಾಟಗಾರರಿಗೆ, ನರ್ಸರಿ ಹೊಂದಿರುವವರಿಗೆ ಲಾಭದ ದಿನ. ಮನೆಯ ಅಥವಾ ಕಚೇರಿಯ ಹೆಚ್ಚುವರಿ ಜವಾಬ್ದಾರಿಗಳನ್ನು ನಿಭಾಯಿಸುವ ಹೊಣೆ ನಿಮ್ಮದಾಗುತ್ತದೆ. ಹಣಕಾಸಿನ ಕೊರತೆ ಇರುವುದಿಲ್ಲ.

ಕರ್ಕಾಟಕ: ದೂರದ ಪ್ರಯಾಣದ ಆಯಾಸವನ್ನು ಆರಾಮವಾಗಿ ಇರುವುದರಿಂದ ನೀಗಿಸಿಕೊಳ್ಳುವಿರಿ. ಕೆಲವೊಂದು ವಿಚಾರಗಳು ನೀವೆಷ್ಟೇ ತಲೆಕೆಡಿಸಿಕೊಂಡು ಮಾಡಿದರೂ ಸರಿಯಾಗಿ ಆಗುವುದಿಲ್ಲ.

ಸಿಂಹ: ಮನೆಯಲ್ಲಿನ ಸಣ್ಣ ಮಕ್ಕಳ ಆರೋಗ್ಯದಲ್ಲಿನ ಏರುಪೇರು ಕಳವಳವನ್ನು ತಂದೊಡ್ಡಬಹುದು. ಸ್ಥಿರಾಸ್ತಿ ಸಂಬಂಧಿಸಿದ ವ್ಯವಹಾರಗಳಿಂದ ಲಾಭ. ಹಲವು ದಿನಗಳ ನಂತರ ತಾಯಿಯೊಂದಿಗೆ ಕಳೆದ ಸಮಯ ಮನಸ್ಸಿಗೆ ಮುದ ನೀಡಲಿದೆ.

ಕನ್ಯಾ: ಅನೇಕ ವಿಚಾರಗಳನ್ನು ಒಂದೇ ಬಾರಿಗೆ ಸಮರ್ಥವಾಗಿ ನಿರ್ವಹಿಸುವ ಕಾರ್ಯನಿರ್ವಹಣಾ ವೈಖರಿಗೆ ಉತ್ತಮ ಮಾತುಗಳನ್ನು ಕೇಳುವಿರಿ. ಸದ್ವರಂಪರೆಯಲ್ಲಿ ಜನಿಸಿದ್ದಕ್ಕಾಗಿ ಹೆಮ್ಮೆ ಪಡುವಂತೆ ಆಗುತ್ತದೆ.

ತುಲಾ: ಸಾಂತ್ವನ ನುಡಿಗಳು ಬೇಸರಗೊಂಡ ವ್ಯಕ್ತಿಗೆ ಆಸರೆಯ ಹೆಗಲಾದಂತೆ ಆಗುತ್ತದೆ. ಸಮಾಜ ಸೇವೆಯಲ್ಲಿ ಪುತ್ರರ ಘನತೆ ಗೌರವ ಹೆಚ್ಚಳವಾಗುವುದು. ಉಸಿರಾಟ ಸಂಬಂಧಿ ಸಮಸ್ಯೆಗಳಾಗಬಹುದು.

ವೃಶ್ಚಿಕ: ಕಾರ್ಯಕ್ರಮದಲ್ಲಿ ನಿಮ್ಮ ಪಾತ್ರವನ್ನು ಬಹಳ ಪ್ರಶಂಸಿಸಿ ಜನರು ಮಾತನಾಡುವರು . ಹೊಸ ಹಿಂಬಾಲಕರನ್ನು ಸಂಪಾದಿಸುವಿರಿ. ರೈತಾಪಿ ವರ್ಗದವರಿಗೆ ತಮ್ಮ ವೃತ್ತಿಯಲ್ಲಿನ ಕ್ರಿಯಾಶೀಲತೆ ಶುಭದಾಯಕ.

ಧನು: ಮಕ್ಕಳ ಅಗತ್ಯವನ್ನು ಪೂರೈಸುವುದರಲ್ಲಿ ಆಸಕ್ತರಾದ ನೀವು ಸಂಜೆ ಮಕ್ಕಳೊಂದಿಗೆ ತಿರುಗಾಟ ಮಾಡುವಿರಿ. ಕಷ್ಟ ಕೋಟಲೆಗಳಿಂದ ನಿರ್ಮುಕ್ತರಾಗುವ ಸುಸಂದರ್ಭ ತುಂಬಾ ಸನಿಹವಾಗಿ ಇದೆ.

ಮಕರ: ಸ್ವಲ್ಪ ಮಟ್ಟಿಗೆ ಧನ ವ್ಯಯವಿದ್ದರೂ ವಿವಿಧ ಹೊಸ ಮೂಲಗಳಿಂದ ಧನಾಗಮವಾಗುವುದು. ಇಂಪಾದ ವಾದ್ಯ ಸಂಗೀತ ಮನಸ್ಸನ್ನು ತಿಳಿಗೊಳಿಸುವಲ್ಲಿ ಸಹಕಾರಿ. ತಾಯಿಯ ಆರೈಕೆಯಿಂದಾಗಿ ಸುಖಕರವೆನಿಸುತ್ತದೆ.

ಕುಂಭ: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಎದುರಾಗುವ ಏರಿಳಿತದ ನಡುವೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ಈಡೇರಲಿವೆ. ಬೇಸರಪಡುವ ಅವಶ್ಯಕತೆ ಇಲ್ಲ.


ಮೀನ: ಆತ್ಮೀಯರ ಅಗಲಿಕೆಯಿಂದಾಗಿ ಕ್ಷಣವು ಯುಗಗಳನ್ನು ಕಳೆದ ಅನುಭವವಾಗಬಹುದು. ಉತ್ತರ ತಿಳಿಯದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಗೋಜಿನಲ್ಲಿ ವಾಸ್ತವನ್ನು ಮರೆಯದಿರಿ.

ಪದಬಂಧ 5676

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಗೊಂದಲಗೊಂಡವನು ಬಲಕ್ಕೆ ವಿರುದ್ಧವಾಗಿದ್ದಾನಲ್ಲಾ! (5)
4.ಇದು ತರ್ಕಕ್ಕೆ ಸಂಬಂಧಿಸಿದ್ದು (3)
5.ಶಿವನ ಬಳಿಯಲಿರುವ ಚರ್ಮ ವಾದ್ಯ (3)
7.ಕಾಣದಾಗುವುದು ಉಲ್ಟಾ ಆಗಿದೆ (2)
10.ಮಂದಿರದ ಹತ್ತಿರ ಕೇಳಿಸಿದ್ದು ಕೆಳಗಿನ ಸ್ವರ (2)
11.ಭೂಮಿಯನ್ನು ಮುಟ್ಟಿದಂತೆ ಕಾಣುವ ಆಕಾಶಭಾಗ (3)
12.ನಾ ದ್ವಿರುಕ್ತಿಯಾಗಿ ಬಗೆಬಗೆಯಾದೀತು(2)
13.ರಾಮನ ಮಗ (2)
15.ಮುಂಗುಸಿಯಿಲ್ಲಿ ಉಲ್ಟಾ ಕಾಣುತ್ತಿದೆ (3)
18.ಕೊಪ್ಪರಿಗೆಯಿಲ್ಲಿ ತಿರುವುಮುರುವಾಗಿದೆ (3)
19.ಕಾಡಿನಲ್ಲಿಯ ತಿರುಗಾಟ (5)

ಮೇಲಿಂದ ಕೆಳಕ್ಕೆ
1.ನಂಬಿಗೆಯಿಟ್ಟು ನೀಡಿರುವ ಚರಿಗೆ! (3)
2.ನಲವತ್ತು ಗುಂಟೆಗಳ ಭೂಮಿಯ ಅಳತೆ (3)
3.ಸಸಿಗಿಂತ ದೊಡ್ಡದು ಅಥವಾ ಸಣ್ಣ ಮರ ಎಂದರೂ ಸರಿ (2)
4.ನಕ್ಷತ್ರಗಳಿಂದ ಕೂಡಿದ ಆಕಾಶ (5)
6.ದುಃಖಾಂತವಾದ ಪ್ರಹಸನ ~ (5)
8.ಜೇನು ನೊಣ ಇಲ್ಲಿ ಕಾಣುತ್ತಿದೆ (3)
9.ದನಕರುಗಳ ಮೂತ್ರ (3)
14.ವೈರ ಇಲ್ಲಿ ವಿರಳವಾಗಿದೆ (3)
16.ವನದಲ್ಲಿ ತಿರುಗಿದಾಗ ಹೊಸತು ಕಂಡೀತೇ? (2)
17.ತತ್ಪರತೆಯಿಂದ ಮಾಡುವ ವಿದ್ಯಾಭ್ಯಾಸ (3)



5675ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರವ 3.ಪ್ರಸವ
6.ರಸಿಕ 8.ತಿದ್ದುಪಡಿ
10.ವಿವರ 11.ಚಡಾವು
12.ಶಿಲಾಯುಗ 15.ಮಕರ
17.ತಸ್ಕರ 18.ನಿಜ

ಮೇಲಿಂದ ಕೆಳಕ್ಕೆ:
2.ವಯ್ಯಾರ 3.ಪ್ರತೀಕ
4.ವರ್ಧಂತಿ 5.ತಾಪ
7.ಸಿತಾರ 9.ಡಿಕಾವು
10.ವಿದೇಶಿ 11.ಚರಕ
13.ಲಾಲಿ 14.ಗಣಿತ
15.ಮತ್ಸರ 16.ರಜನಿ


ಸುಡೊಕು 6061

			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6060 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5



ಆವೇಶಂ ಚಿತ್ರದ ಪೋಸ್ಟರ್


ರೋಮಾಂಚಂ ಚಿತ್ರದ ಪೋಸ್ಟರ್

ಮಲಯಾಳ ಸಿನಿಮಾಗಳ ಫಸಲು!

ನಮ್ಮ ನೆಲದಲ್ಲಿ ನಡೆಯುವ ಅವರ ಕಥೆಗಳು...

ಕನ್ನಡ ಚಿತ್ರರಂಗ ಗಟ್ಟಿಯಾದ ಕಥೆಗಳ ಕೊರತೆಯಿಂದ ಬಳಲುತ್ತಿರುವ ಹೊತ್ತಿನಲ್ಲಿ ಮಲಯಾಳ ಚಿತ್ರರಂಗದವರು ನಮ್ಮ ನಾಡಿನ ಕಥೆಗಳನ್ನಿಟ್ಟುಕೊಂಡು ಗಲ್ಲಾಪೆಟ್ಟಿಗೆಯನ್ನು ತುಂಬಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಬಿಡುಗಡೆಗೊಂಡ ಫಹಾದ್ ಫಾಸಿಲ್ ನಟನೆಯ 'ಆವೇಶಂ' ಚಿತ್ರ ಆ ಸಾಲಿಗೆ ಮತ್ತೊಂದು ಸೇರ್ಪಡೆ...

ವಿನಾಯಕ ಕೆ.ಎಸ್

ಮಲಯಾಳ ಚಿತ್ರರಂಗದವರು ಬೆಂಗಳೂರು, ಮೈಸೂರು, ಮಂಗಳೂರು ಭಾಗಗಳಲ್ಲಿ ನಡೆಯುವ ಮಲಯಾಳಿಗಳ ಕಥೆಗಳನ್ನು ತಮ್ಮ ಭಾಷೆಯಲ್ಲಿ ಸಿನಿಮಾ ಮಾಡಿ ಗೆದ್ದ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಮೊನ್ನೆ ತಾನೆ ತೆರೆಕಂಡು, ಈಗಲೂ ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡುತ್ತಿರುವ ಫಹಾದ್ ಫಾಸಿಲ್ ನಟನೆಯ 'ಆವೇಶಂ' ಸಿನಿಮಾ ಈ ಸಾಲಿಗೆ ಮತ್ತೊಂದು ಸೇರ್ಪಡೆ. ಈಗಾಗಲೇ ₹100 ಕೋಟಿಗಿಂತ ಹೆಚ್ಚು ಬಾಚಿರುವ ಈ ಚಿತ್ರದ ನಿರ್ದೇಶಕ ಜಿತ್ತು ಮಾಧವನ್ ಅವರ ಹಿಂದಿನ ಸಿನಿಮಾ 'ರೋಮಾಂಚಂ' ಕೂಡ ಪೂರ್ತಿಯಾಗಿ ಬೆಂಗಳೂರಿನಲ್ಲಿ ನಡೆದ ಕಥೆ. ದೊಡ್ಡನಕುಂದಿಯಲ್ಲಿ ನಡೆದ ನೈಜ ಘಟನೆಯೊಂದನ್ನಿಟ್ಟುಕೊಂಡು ಸಿದ್ಧಗೊಂಡಿದ್ದ ಈ ಸಿನಿಮಾ ಕಳೆದ ವರ್ಷ ₹50 ಕೋಟಿ ಗಳಿಸಿತ್ತು.

'ನಾನು ಹನ್ನೆರಡು ವರ್ಷ ಬೆಂಗಳೂರಿನಲ್ಲಿದ್ದೆ. ಓದಿದ್ದು, ಮೊದಲು ಕೆಲಸ ಮಾಡಿದ್ದು ಇಲ್ಲಿಯೇ. ತಿಳಿವಳಿಕೆ ಬಂದಾಗ ಇಲ್ಲಿದ್ದೆ. ಹೀಗಾಗಿ ಇಲ್ಲಿನ ಎಷ್ಟೋ ನೆನಪುಗಳು ಈಗಲೂ ಕಣ್ಣೆದುರಿಗಿವೆ. ನನ್ನದೇ ಸುತ್ತ ನಡೆದ ನೈಜ ಘಟನೆಯನ್ನಿಟ್ಟುಕೊಂಡು 'ರೋಮಾಂಚಂ' ಸಿನಿಮಾ ಮಾಡಿದೆ. ಜನಕ್ಕೆ ಇಷ್ಟವಾಯ್ತು. 'ರೋಮಾಂಚಂ' ಚಿತ್ರದ ಕೊನೆಯಲ್ಲಿ ಬೆಂಗಳೂರಿನ ರೂಮಿನಲ್ಲಿ ವಾಸವಿದ್ದ ನನ್ನ ಆ ನಾಲ್ವರು ಗೆಳೆಯರ ಚಿತ್ರವನ್ನು ಹಾಕಿದ್ದೇನೆ' ಎನ್ನುತ್ತಾರೆ ನಿರ್ದೇಶಕ ಜಿತ್ತು ಮಾಧವನ್.



ಬೆಂಗಳೂರು ಡೇಸ್ ಚಿತ್ರದ ಪೋಸ್ಟರ್

2018ರಲ್ಲಿ ವಿನೀತ್ ಶ್ರೀನಿವಾಸನ್ ಅವರ 'ಅರವಿಂದಂಡೆ ಅತಿಥಿಗಳ್' ಚಿತ್ರ ತೆರೆಕಂಡು ಯಶಸ್ವಿ ಆಗಿತ್ತು. ಕೊಲ್ಲೂರು ಮೂಕಾಂಬಿಕೆಯ ಸುತ್ತಲೂ ನಡೆಯುವ ಕಥೆಯನ್ನಾಧರಿಸಿದ ಸಿನಿಮಾವಿದು. ಕೊಲ್ಲೂರು, ನಿಟ್ಟೂರು, ಉಡುಪಿಯ ಸುತ್ತಲಿನ ಪರಿಸರವನ್ನು ಬಹಳ ಚೆಂದವಾಗಿ ಚಿತ್ರಿಸಿದ್ದರು.

ಕರುನಾಡಿನ ಕಥೆಗಳೊಂದಿಗೆ ಮಲೆಯಾಳ ಚಿತ್ರರಂಗದ ಈ ನಂಟು ಹೊಸತೇನಲ್ಲ. 1989ರಲ್ಲಿ ತೆರೆಕಂಡ ಮೋಹನ್ ಲಾಲ್ ನಟನೆಯ ಸೂಪರ್ ಹಿಟ್ 'ನಾಡು ವಾಳಿಕಳ್' ಚಿತ್ರದ ಪಾತ್ರದಲ್ಲಿ ಮೋಹನ್ ಲಾಲ್ ಬೆಂಗಳೂರಿನವ ರಾಗಿರುತ್ತಾರೆ. ಇವರದ್ದೇ ನಟನೆಯ 'ವಂದನಂ', 'ಬಟರ್‌ಫ್ಲೈಸ್' ಚಿತ್ರಗಳ ಕಥೆಯೂ ಸಿಲಿಕಾನ್ ಸಿಟಿಯಲ್ಲಿಯೇ ನಡೆಯುವಂಥದ್ದು.

ಸಾಲು ಸಾಲು ಸಿನಿಮಾಗಳು

ಬೆಂಗಳೂರು, ಮೈಸೂರು, ಮಂಗಳೂರು ಭಾಗದ ಕಥೆಗಳನ್ನಿಟ್ಟುಕೊಂಡು ಗೆದ್ದ ಮಲಯಾಳ ಸಿನಿಮಾಗಳ ಪಟ್ಟಿ ದೊಡ್ಡದಿದೆ. ಅಂಜಲಿ ಮೆನನ್ ನಿರ್ದೇಶನದ 'ಬೆಂಗಳೂರು ಡೇಸ್' ಸಂಚಲನ ಮೂಡಿಸಿತ್ತು. ನಿವಿನ್ ಪೌಲಿ, ದುಲ್ಕರ್ ಸಲ್ಮಾನ್, ಫಹಾದ್, ಪಾರ್ವತಿ ಮೆನನ್ ನಟನೆಯ ಸಿನಿಮಾ ಈಗ ನೋಡಿದರೂ ಬೆಂಗಳೂರು ಕುರಿತು ನವಿರು ಭಾವ ಮೂಡಿಸುತ್ತದೆ.

ಮಮ್ಮುಟಿ ಅಭಿನಯದ 'ಸೈಲೆನ್ಸ್', ದುಲ್ಕರ್ ನಟನೆಯ 'ಹಂಡ್ರೆಡ್ ಡೇಸ್ ಆಫ್ ಲವ್', ಟೋವಿನೊ ಥಾಮಸ್ ಅಭಿನಯದ 'ಡಿಯರ್ ಫ್ರೆಂಡ್', 'ಮರಡೋನ', ದಿಲೀಪ್ ಅವರ 'ಡಾರ್ಲಿಂಗ್ ಡಾರ್ಲಿಂಗ್', ಮುಕೇಶ್ ನಟನೆಯ 'ಫಿಲಿಪ್ಸ್', ಫಹಾದ್ ಅಭಿನಯದ 'ಅಯಾಳ್ ನಾನಲ್ಲ', '22 ಫೀಮೇಲ್ ಕೊಟ್ಟಾಯಂ' ಸಿನಿಮಾಗಳಲ್ಲಿ ಬೆಂಗಳೂರು ಕಥಾಕೇಂದ್ರ. ಇಲ್ಲಿ ಚಿತ್ರೀಕರಣಗೊಳ್ಳದಿದ್ದರೂ, 'ಜನಗಣಮನ' ಸಿನಿಮಾದ ಕಥೆಯಲ್ಲಿ ರಾಮನಗರ ಬರುತ್ತದೆ. 'ಪ್ರೇಮಂ' ಚಿತ್ರದಲ್ಲಿ ಬೆಂಗಳೂರಿನ ಉಲ್ಲೇಖ ಬರುತ್ತದೆ. ಇದಲ್ಲದೇ ಮೈಸೂರನ್ನು ಕಥೆಯ ಭಾಗವಾಗಿಸಿಕೊಂಡ ಒಂದಷ್ಟು ಚಿತ್ರಗಳೂ ಸಿಗುತ್ತವೆ.

ಕನೆಕ್ಟ್ ಆಗುವ ಪಾತ್ರಗಳು

'ಬೆಂಗಳೂರಿನ ಐಟಿ ಜಗತ್ತಿನ ಕಥೆ ಹೇಳುವ ಸಾಕಷ್ಟು ಸಿನಿಮಾಗಳು ಮಲಯಾಳದಲ್ಲಿ ಬಂದಿವೆ. ಕೊಲ್ಲೂರು ಮೂಕಾಂಬಿಕೆ ಕೇರಳದ ಹಲವರಿಗೆ ಮನೆ ದೇವರು. ಹೀಗಾಗಿ ದೇವಿಯ ಕುರಿತಾದ ಚಿತ್ರಗಳೂ ಒಂದಷ್ಟಿವೆ. ಮಂಗಳೂರು, ಕಾಸರಗೋಡು, ಕೊಡಗಿನ ಕಥೆಯನ್ನು ಹೊಂದಿರುವ ಚಿತ್ರಗಳಿಗೆ ಲೆಕ್ಕವಿಲ್ಲ. ವಿನೀತ್ ಶ್ರೀನಿವಾಸನ್ ನಿರ್ದೇಶನದ 'ತಿರ' ಸಿನಿಮಾ ಕರ್ನಾಟಕ–ಗೋವಾ ಗಡಿ ಬೆಳಗಾವಿಯಲ್ಲಿ ನಡೆಯುವ ಕಥೆಯನ್ನು ಹೊಂದಿದೆ. ಕೇರಳದಲ್ಲಿ ಓದು ಮುಗಿದ ನಂತರ ದುಬೈಗೆ ಹೋಗಬೇಕು, ಇಲ್ಲವಾದರೆ ಬೆಂಗಳೂರಿಗೆ ಹೋಗಬೇಕು ಎಂಬುದು ಬಹುತೇಕರ ಗುರಿಯಾಗಿರುತ್ತದೆ. ಅಷ್ಟರಮಟ್ಟಿಗೆ ಬೆಂಗಳೂರು ನಮ್ಮಗಳ ಮನಸ್ಸಿನಾಳಕ್ಕೆ ಇಳಿದಿದೆ. ನನ್ನ ಅಣ್ಣ 1995ರಲ್ಲಿ ಬೆಂಗಳೂರಿಗೆ ಬಂದು ವಾಸವಾಗಿದ್ದರು. ಆಗ ನಾನು ವಯನಾಡಿನಿಂದ ಬೆಂಗಳೂರಿಗೆ ಬರುತ್ತಿದ್ದೆ. 'ಆವೇಶಂ' ಸಿನಿಮಾ ನೋಡುವಾಗ ಆಗ ನೋಡಿದ ಸಾಕಷ್ಟು ಪಾತ್ರಗಳು, ಸ್ಥಳಗಳು ನೆನಪಾದವು. ಮುಖ್ಯವಾಗಿ ಈ ಸಿನಿಮಾಗಳ ಪಾತ್ರಗಳು ಕನೆಕ್ಟ್ ಆಗುತ್ತವೆ. ಬದುಕಿಗೆ ಬಹಳ ಹತ್ತಿರವೆನಿಸುತ್ತವೆ. ನಮ್ಮದೇ ಬಳಗದಲ್ಲಿನ ಪಾತ್ರಗಳಂತಿರುತ್ತವೆ. ಆ ಕಾರಣಕ್ಕೆ ಸಿನಿಮಾ ಇಷ್ಟವಾಗುತ್ತದೆ' ಎನ್ನುತ್ತಾರೆ ಕನ್ನಡ ಚಿತ್ರರಂಗದಲ್ಲಿ ಜನಪ್ರಿಯ ಡಿಐ ಮತ್ತು ಕಲರಿಸ್ಟ್ ಆಗಿರುವ ಕೇರಳ ಮೂಲದ ಟಾಮ್ ಸಿ ಜೋಸ್. ❖

'ನಮ್ಮ ನಡುವಿನ ಕಥೆಗಳು ಬೇಕು'


ಹೇಮಂತ್ ರಾವ್

'ಆವೇಶಂ ಚಿತ್ರ ನೋಡಿದರೆ ಬೆಂಗಳೂರಿಗರ ಕಥೆಯಲ್ಲ. ಬೆಂಗಳೂರಿಗೆ ಬಂದು ಸಿಕ್ಕಿಹಾಕಿಕೊಳ್ಳುವ ಮಲಯಾಳಿ ಹುಡುಗರ ಕಥೆ. ಹೀಗಾಗಿ ಅಲ್ಲಿಯವರಿಗೆ ಕನೆಕ್ಟ್ ಆಯ್ತು. 'ಬೆಂಗಳೂರು ಡೇಸ್' ಸಿನಿಮಾದಲ್ಲಿ ಬೆಂಗಳೂರಿನಲ್ಲಿ ಮಲಯಾಳಿಗರು ಹೆಚ್ಚಿರುವ ಭಾಗವನ್ನು ರಿಸರ್ಚ್ ಮಾಡಿ, ಅಲ್ಲಿಯೇ ಚಿತ್ರೀಕರಣ ನಡೆಸಿದ್ದರು. ಇದು ಅವರಿಗೆ ಅವರ ಜನರ ಮೇಲಿರುವ ಪ್ರೀತಿಯನ್ನು ತೋರಿಸುತ್ತದೆ. 'ಅಮೆರಿಕ, ಅಮೆರಿಕ' ಸಿನಿಮಾ ಏಕೆ ನಮಗೆಲ್ಲ ಕನೆಕ್ಟ್ ಆಯ್ತು? ಅದು ಅಮೆರಿಕದ ಕಥೆಯಲ್ಲ, ಅಲ್ಲಿರುವ ನಮ್ಮವರ ಕಥೆ. ನಾವು ನಮ್ಮ ಸುತ್ತಲಿರುವ ಕಥೆಗಳನ್ನು ಹೆಕ್ಕುವಲ್ಲಿ ವಿಫಲರಾಗುತ್ತಿದ್ದೇವೆ. ನಮ್ಮ ನಡುವಿನ ಕಥೆಗಳಿಗೆ ಇಲ್ಲಿಯೂ ಜನ ಸ್ಪಂದಿಸುತ್ತಾರೆ. 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ', 'ಡೇರ್ ಡೆವಿಲ್ ಮುಸ್ತಾಫ', 'ಕ್ಷೇತ್ರಪತಿ'ಯಂತಹ ಸಿನಿಮಾಗಳು ಇದಕ್ಕೆ ಉದಾಹರಣೆ. ಇಲ್ಲಿ ನಾವೇ ಪ್ರೇಕ್ಷಕರನ್ನು ಮಾಸ್, ಕ್ಲಾಸ್, ಎ,ಬಿ,ಸಿ ಕೆಟಗರಿಯ ಆಡಿಯನ್ಸ್ ಎಂದೆಲ್ಲ ವಿಂಗಡಿಸಿಕೊಂಡು ನಿರ್ಲಕ್ಷಿಸುತ್ತಿದ್ದೇವೆ. ಇಲ್ಲಿ ಉತ್ತಮವಾದ ಸಿನಿಮಾಗಳು ಬರುತ್ತಿಲ್ಲ. ಹೀಗಾಗಿ ಜನ ಬೇರೆ ಭಾಷೆಯ ಸಿನಿಮಾಗಳತ್ತ ಮುಖ ಮಾಡುತ್ತಿದ್ದಾರೆ. ಬೇರೆ ಭಾಷೆಯ ಹೀರೊಗಳ ಸಿನಿಮಾಗಳನ್ನು ಅನುಕರಿಸಬಾರದು. ಮೊದಲು ನಮ್ಮ ಸುತ್ತಲಿನ ಕಥೆಗಳು ಚಿತ್ರವಾಗಬೇಕು. ನಮ್ಮ ನೆಲದ ಕಥೆಗಳು ಗೆದ್ದಾಗ ಅಂಥ ಕಥೆಗಳಿಗೆ ಹಣ ಹಾಕುವ ನಿರ್ಮಾಪಕರು ಹೆಚ್ಚುತ್ತಾರೆ. ಇಲ್ಲವಾದರೆ ಮೂರು ಫೈಟು, ನಾಲ್ಕು ಹಾಡಿನ ಚಿತ್ರಗಳನ್ನು ಕೇಳುವ ನಿರ್ಮಾಪಕರೇ ಹೆಚ್ಚಿರುತ್ತಾರೆ' ಎಂದು ನಿರ್ದೇಶಕ ಹೇಮಂತ್ ರಾವ್ ಅಭಿಪ್ರಾಯಪಡುತ್ತಾರೆ.

'ಬೆಂಗಳೂರು ಚಿರಪರಿಚಿತ'


ಜಿತ್ತು ಮಾಧವನ್

'ಯಾವುದೋ ಸ್ಥಳಕ್ಕಿಂತ ಬೆಂಗಳೂರನ್ನು ಮಲಯಾಳ ಪ್ರೇಕ್ಷಕರಿಗೆ ಸುಲಭವಾಗಿ ಅರ್ಥ ಮಾಡಿಸಬಹುದು. ಕೇರಳದಲ್ಲಿ ಎಲ್ಲರಿಗೂ ಬೆಂಗಳೂರು ಗೊತ್ತಿದೆ. ಒಂದಲ್ಲ ಒಂದು ಕಾರಣಕ್ಕೆ ಇಲ್ಲಿಗೆ ಭೇಟಿ ನೀಡಿರುತ್ತಾರೆ. ಅವರ ಸಂಬಂಧಿಕರು, ಕುಟುಂಬದವರು ಇಲ್ಲಿರುತ್ತಾರೆ. ಸಾಕಷ್ಟು ಮಲೆಯಾಳಿಗಳು ಬೆಂಗಳೂರಿನಲ್ಲಿದ್ದಾರೆ. ಹೀಗಾಗಿ ನಮ್ಮ ಪ್ರೇಕ್ಷಕರಿಗೆ ಬೆಂಗಳೂರು ಬಹಳ ಬೇಗ ಕನೆಕ್ಟ್ ಆಗುತ್ತದೆ' ಎನ್ನುತ್ತಾರೆ ಜಿತ್ತು ಮಾಧವನ್.

ಮತ್ತೊಂದು ವಿಶೇಷವೆಂದರೆ ಈ ವರ್ಷ ಬೆಂಗಳೂರಿನಲ್ಲಿ ಚಿತ್ರಮಂದಿರಗಳಲ್ಲಿನ ಗಳಿಕೆಯಲ್ಲಿಯೂ ಮಲೆಯಾಳ ಚಿತ್ರಗಳು ಮೊದಲ ಸ್ಥಾನದಲ್ಲಿವೆ. ಕಳೆದ ತಿಂಗಳು ತೆರೆಕಂಡ 'ಮಂಜುಮ್ಮಲ್ ಬಾಯ್ಸ್' ಚಿತ್ರ ಬೆಂಗಳೂರಿನಲ್ಲಿಯೇ ₹4 ಕೋಟಿಗಿಂತ ಹೆಚ್ಚು ಗಳಿಕೆ ಕಂಡಿತ್ತು. ಕೇವಲ ಮಲಯಾಳದವರು ಮಾತ್ರವಲ್ಲದೇ ಕನ್ನಡಿಗರು ಈ ಚಿತ್ರಗಳನ್ನು ಚಿತ್ರಮಂದಿರಗಳಿಗೆ ಹೋಗಿ ವೀಕ್ಷಿಸುತ್ತಿದ್ದಾರೆ.



ರಾಗಿಣಿ ಹೊಸ ಸಿನಿಮಾ

'ಜಟ್ಟ', 'ಮೈತ್ರಿ' ಅಂತಹ ಸಾಮಾಜಿಕ ಕಳಕಳಿಯ ಚಿತ್ರಗಳನ್ನು ನೀಡಿದ್ದ ಬಿ.ಎಂ. ಗಿರಿರಾಜ್ ಮತ್ತೊಂದು ಚಿತ್ರ ನಿರ್ದೇಶನಕ್ಕೆ ಅಣಿಯಾಗಿದ್ದಾರೆ. ಇನ್ನೂ ಹೆಸರಿಡಿದ ಈ ಚಿತ್ರಕ್ಕೆ ನಟಿ ರಾಗಿಣಿ ದ್ವಿವೇದಿ ನಾಯಕಿ. ರಾಮಕೃಷ್ಣ ನಿಗಾಡಿ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

'ಹರಿವು' ಚಿತ್ರದಿಂದ ನನ್ನ ಸಿನಿ ಪಯಣ ಆರಂಭವಾಯಿತು. ಹತ್ತು ವರ್ಷಗಳಿಂದ ರಾಗಿಣಿ ಅವರ ಜೊತೆಗೆ ಚಿತ್ರ ನಿರ್ಮಾಣ ಮಾಡಬೇಕೆಂದು ಪ್ರಯತ್ನಿಸುತ್ತಿದೆ. ಈಗ ಕಾಲ ಕೂಡಿ ಬಂದಿದೆ. ನಿರ್ದೇಶಕ ಬಿ.ಎಂ.ಗಿರಿರಾಜ್ ಒಳ್ಳೆ ಕಥೆ ಮಾಡಿಕೊಂಡಿದ್ದಾರೆ' ಎಂದರು ನಿರ್ಮಾಪಕರಲ್ಲೊಬ್ಬರಾದ ಗಿರೀಶ್ ವಿ ಗೌಡ.

'ಕೌಂಡಿನ್ಯ' ಅವರು ನನ್ನ ನೆಚ್ಚಿನ ಲೇಖಕರು. ಅವರ ಕಥೆಗಳಿಂದ ಪ್ರೇರಿತನಾಗಿ ಈ ಚಿತ್ರದ ಕಥೆ ಸಿದ್ಧ ಮಾಡಿದ್ದೇನೆ. ರಾಗಿಣಿ ಅವರ ಜೊತೆ ಇದು ನನ್ನ ಮೊದಲ ಸಿನಿಮಾ' ಎಂದು ನಿರ್ದೇಶಕ ಬಿ.ಎಂ.ಗಿರಿರಾಜ್ ತಿಳಿಸಿದರು.

'ಚಿತ್ರದ ಫಸ್ಟ್ ಲುಕ್ ಚೆನ್ನಾಗಿದೆ. ಚಿತ್ರದ ಶೀರ್ಷಿಕೆ ಹಾಗೂ ಕಥೆ ಇನ್ನೂ ಚೆನ್ನಾಗಿದೆ. ಸದ್ಯದಲ್ಲೇ ಶೀರ್ಷಿಕೆ ಅನಾವರಣವಾಗಲಿದೆ. ಉಳಿದ ಮಾಹಿತಿಗಳನ್ನು ಹಂತಹಂತವಾಗಿ ಹಂಚಿಕೊಳ್ಳುತ್ತ ಹೋಗುತ್ತೇವೆ' ಎಂದರು ರಾಗಿಣಿ. ❖

'ಗ್ರೇ' ಗೇಮ್ಸ್

ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದ್ದ ವಿಜಯ ರಾಘವೇಂದ್ರ, ಭಾವನಾ ರಾವ್ ನಟನೆಯ 'ಗ್ರೇ ಗೇಮ್ಸ್' ಇಂದು ತೆರೆ ಕಾಣುತ್ತಿರುವ ಮತ್ತೊಂದು ಚಿತ್ರ. ಗಂಗಾಧರ್ ಸಾಲಿಮಠ ನಿರ್ದೇಶನದ ಚಿತ್ರ ಸಸ್ಪೆನ್ಸ್ ಡ್ರಾಮಾ ಕಥೆಯನ್ನು ಹೊಂದಿದೆ. 'ಇಲ್ಲಿ ಚಿಂತನೆಗಳ ಪ್ರಚೋದನೆ ನಡೆಯುತ್ತದೆ. ಸರಿ ತಪ್ಪುಗಳ ಗ್ರಹಿಕೆಗಳಿಗೂ ಸವಾಲೆಸೆಯಲಾಗುತ್ತದೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಆನ್‌ಲೈನ್ ಗೇಮಿಂಗ್ ಪೈಪೋಟಿ ಜೊತೆಗೆ ಮೆಟಾವರ್ಸ್‌ನ ಸಂಕೀರ್ಣತೆಗಳ ಬೆಸುಗೆ ಗ್ರೇ ಗೇಮ್ಸ್' ಎಂದಿದೆ ಚಿತ್ರತಂಡ. ಶ್ರುತಿ ಪ್ರಕಾಶ್, ಅಪರ್ಣಾ, ರವಿ ಭಟ್ ಮುಖ್ಯಭೂಮಿಕೆಯಲ್ಲಿದ್ದಾರೆ. ಆನ್‌ಲೈನ್ ಗೇಮಿಂಗ್ ಹಿನ್ನೆಲೆಯಲ್ಲಿ ಸಾಗುವ ಈ ಸಿನಿಮಾದಲ್ಲಿ ಸೈಕಾಲಜಿಸ್ಟ್ ಆಗಿ ವಿಜಯ ರಾಘವೇಂದ್ರ ನಟಿಸಿದರೆ, ಸೈಬರ್ ಕ್ರೈಂ ತನಿಖಾಧಿಕಾರಿಯಾಗಿ ಭಾವನಾ ರಾವ್ ಕಾಣಿಸಿಕೊಂಡಿದ್ದಾರೆ. ವೃತ್ತಿಪರ ಗೇಮರ್ ಆಗಿ ಜೈ, ಚಿತ್ರನಟಿಯಾಗಿ ಶ್ರುತಿ ಪ್ರಕಾಶ್ ಸಿನಿಮಾದಲ್ಲಿದ್ದಾರೆ. ಆನಂದ್ ಮುಗದ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ವರುಣ್ ಡಿಕೆ ಛಾಯಾಚಿತ್ರಗ್ರಹಣ, ಜಗದೀಶ್ ಎನ್. ಸಂಕಲನ ಚಿತ್ರಕ್ಕಿದೆ.


ವಿಜಯ ರಾಘವೇಂದ್ರ, ಭಾವನಾ ರಾವ್

ಮಳೆಗಾಲದಲ್ಲಿ ಬರಲಿದ್ದಾನೆ 'ಭಗೀರಥ'


ಶ್ರೀಯಾ ಪಾವನಿ

'ಬಾಯ್ ಫ್ರೆಂಡ್' ಸೇರಿದಂತೆ ಕೆಲ ಸಿನಿಮಾಗಳನ್ನು ನಿರ್ದೇಶಿಸಿದ್ದ ರಾಮ್ ಜನಾರ್ದನ್ ಅವರ 'ಭಗೀರಥ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ ಸುರೇಶ್ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

'ಚಿತ್ರೀಕರಣ ಮುಕ್ತಾಯವಾಗಿ, ಮಂದಿನ ತಿಂಗಳಲ್ಲಿ ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ. ನನ್ನ ನಿರ್ದೇಶನದ ಐದನೇ ಚಿತ್ರ. ಇದೊಂದು ಪ್ರಸ್ತುತ ರಾಜಕಾರಣದ ಕಥಾಹಂದರ ಹೊಂದಿರುವ ಹಾಗೂ ಪತ್ರಕರ್ತರೊಬ್ಬರ ಸುತ್ತ ನಡೆಯುವ ಕಥೆ. ತುಂಬಾ ಅಸಾಧ್ಯವಾದುದ್ದನ್ನು ಕಷ್ಟಪಟ್ಟು ಸಾಧ್ಯವಾಗಿಸಿದರೆ ಅದನ್ನು 'ಭಗೀರಥ' ಪ್ರಯತ್ನ ಎನ್ನುತ್ತಾರೆ. ಅಂತಹ ಕಥೆ ಈ ಚಿತ್ರದಲ್ಲಿದೆ' ಎಂದರು ನಿರ್ದೇಶಕರು. ಸಾಯಿ ರಮೇಶ್ ಪ್ರೊಡಕ್ಷನ್ ಲಾಂಛನದಲ್ಲಿ ಕೆ.ರಮೇಶ್ ಹಾಗೂ ಬಿ.ಬೈರಪ್ಪ ಮೈಸೂರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಜಯಪ್ರಕಾಶ್‌ಗೆ ಜೋಡಿಯಾಗಿ ಶ್ರೀಯಾ ಪಾವನಿ ಕಾಣಿಸಿಕೊಂಡಿದ್ದಾರೆ.

'ಪತ್ರಿಕೋದ್ಯಮ ಮುಗಿಸಿ ಪತ್ರಕರ್ತನಾಗಿದ್ದ ನಾನು, 'ಜಮಾನ' ಚಿತ್ರದ ಮೂಲಕ ನಟನಾದೆ. ಇದು ನನ್ನ ಮೂರನೆ ಚಿತ್ರ. ಶೀರ್ಷಿಕೆಗೆ ತಕ್ಕಂತೆ ನೀರಿಗೆ ಸಂಬಂಧಿಸಿದ ಕಥೆಯೂ ಈ ಚಿತ್ರದಲ್ಲಿದೆ' ಎಂದು ನಾಯಕ ಜಯಪ್ರಕಾಶ್ ಹೇಳಿದರು. ಚಂದನ ರಾಘವೇಂದ್ರ, ಸುಧಾ ಬೆಳವಾಡಿ, ಶಿವರಾಜ್ ಕೆ.ಆರ್ ಪೇಟೆ, ರವಿಕಾಳೆ, ಶ್ರೀನಿವಾಸಪ್ರಭು, ಬಲ ರಾಜವಾಡಿ, ನಯನ, ಸುರಭಿ ರವಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಬಸವಣ್ಣನ ಕಥೆ ಹೇಳುವ ಶರಣರ ಶಕ್ತಿ



ಹನ್ನೆರಡನೆ ಶತಮಾನದ ಶರಣರು, ಅನುಭವ ಮಂಟಪ ಮತ್ತು ಬಸವಣ್ಣನ ಕುರಿತಾದ ಕಥೆಯನ್ನು ಹೊಂದಿರುವ 'ಶರಣರ ಶಕ್ತಿ' ಚಿತ್ರದ ಪೋಸ್ಟರ್ ಹಾಗೂ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿತು.

ಶ್ರೀಷ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡಿರುವ ಆರಾಧನಾ ಕುಲಕರ್ಣಿ, ಅಕ್ಕ ನಾಗಮ್ಮನ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ವಜ್ರೇಶ್ವರಿ ಕಂಬೈನ್ಸ್‌ದಲ್ಲಿ ಕೆಲಸ ಮಾಡಿರುವ ದಿಲೀಪ್ ಶರ್ಮ ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

'ಬಸವಣ್ಣನವರು ಕಲ್ಯಾಣ ಕ್ರಾಂತಿ, ವಚನ ಸಾಹಿತ್ಯ ರಕ್ಷಣೆ ಮಾಡಲು ಹೇಗೆ ಹೋರಾಡಿದರು? ಎಲ್ಲೆಲ್ಲಿ ವಚನಗಳನ್ನು ಬಚ್ಚಿಟ್ಟರು? ಅದನ್ನು ಜನರಿಗೆ ಯಾವ ರೀತಿ ಹರಡಿದರು. ವೇಶ್ಯೆ ಸಂಕವ್ವನ ಕಥೆ ಏನು? ತಳವಾರು ಕಾಮಿದೇವ ಶರಣರು ಯಾಕೆ ಕಲ್ಯಾಣಕ್ಕೆ ಬಂದರು ಎಂಬಿತ್ಯಾದಿ ವಿಷಯಗಳ ಕುರಿತು ಚಿತ್ರದಲ್ಲಿ ಮಾಹಿತಿ ಇದೆ' ಎಂದು ನಿರ್ದೇಶಕರು ತಿಳಿಸಿದರು.

ಬಸವಣ್ಣನಾಗಿ ಮಂಜುನಾಥಗೌಡ ಪಾಟೀಲ್, ನೀಲಾಂಬಿಕೆಯಾಗಿ ಸಂಗೀತ ಮಡ್ಲೂರು, ಶೀಲವಂತನಾಗಿ ವಿಶ್ವರಾಜ ರಾಜಗುರು, ಚನ್ನಬಸವಣ್ಣನಾಗಿ ಧ್ರುವಶರ್ಮ ನಟಿಸಿದ್ದಾರೆ. ವಿನುಮನಸು ಸಂಗೀತ, ಮುಂಜಾನೆ ಮಂಜು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ಈ ವಾರ ನಾಲ್ಕು ಚಿತ್ರಗಳು ತೆರೆಗೆ

ರಾಜ್ಯದಲ್ಲಿ ಲೋಕಸಭೆ ಚುನಾವಣೆ ಮುಕ್ತಾಯಗೊಳ್ಳುತ್ತಿದ್ದಂತೆ ಸಿನಿಮಾ ಬಿಡುಗಡೆ ಚಟುವಟಿಕೆ ಚುರುಕುಗೊಂಡಿದೆ. ಈ ವಾರ ನಾಲ್ಕು ಸಿನಿಮಾಗಳು ತೆರೆ ಕಾಣುತ್ತಿವೆ. ಜೊತೆಗೆ ಪುನೀತ್ ರಾಜ್‌ಕುಮಾರ್ ನಟನೆಯ 'ಅಂಜನಿ ಪುತ್ರ' ಚಿತ್ರ ಮರುಬಿಡುಗಡೆಗೊಳ್ಳುತ್ತಿದೆ.

ರಾಮನ ಅವತಾರ

'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ರಿಷಿ ನಾಯಕನಾಗಿ ನಟಿಸಿರುವ 'ರಾಮನ ಅವತಾರ' ಚಿತ್ರ ಇಂದು (ಮೇ 10) ಬಿಡುಗಡೆಗೆಯಾಗುತ್ತಿದೆ. ಕಳೆದ ವರ್ಷ ಜೂನ್‌ನಲ್ಲಿಯೇ ತೆರೆಗೆ ಬರಲು ಸಿದ್ಧವಿದ್ದ ಹಾಸ್ಯಮಯ ಕಥಾ ಹಂದರ ಹೊಂದಿರುವ ಚಿತ್ರವನ್ನು ವಿಕಾಸ್ ಪಂಪಾಪತಿ ನಿರ್ದೇಶಿಸಿದ್ದಾರೆ. ಸ್ಟಾರ್ ಫ್ಯಾಬ್ ಪ್ರೊಡಕ್ಷನ್ ಅಡಿಯಲ್ಲಿ 'ಆಪರೇಷನ್ ಅಲಮೇಲಮ್ಮ' ಸಿನಿಮಾ ನಿರ್ಮಾಣ ಮಾಡಿದ್ದ ಅಮರೇಜ್ ಸೂರ್ಯವಂಶಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಪ್ರಣೀತಾ ಸುಭಾಷ್ ಹಾಗೂ ಶುಭ್ರ ಅಯ್ಯಪ್ಪ ನಾಯಕಿಯರಾಗಿ ನಟಿಸಿದ್ದು, ಅರುಣ್ ಸಾಗರ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ರೋಮ್ಯಾಂಟಿಕ್ ಕಾಮಿಡಿ ಜಾನರ್ ಸಿನಿಮಾಗೆ ವಿಷ್ಣುಪ್ರಸಾದ್ ಹಾಗೂ ಸಮೀರ್ ದೇಶಪಾಂಡೆ ಕ್ಯಾಮೆರಾ ಕೈಚಳಕವಿದ್ದು, ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಅಮರನಾಥ್ ಸಂಲಕನವಿದೆ. ಉಡುಪಿ, ಬೆಂಗಳೂರು ಸುತ್ತುಮುತ್ತ ಚಿತ್ರೀಕರಣಗೊಂಡಿದೆ.

ಅಲ್ಲೈಕ್ಯಾ

ಬಹುತೇಕ ಹೊಸಬರಿಂದಲೇ ಕೂಡಿರುವ 'ಅಲ್ಲೈಕ್ಯಾ' ಚಿತ್ರ ತೆರೆ ಕಾಣುತ್ತಿದೆ. ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಸಾತ್ವಿಕ್ ಎಂ.ಭೂಪತಿ ಕಥೆ ಬರೆದು, ಆ್ಯಕ್ಷನ್–ಕಟ್ ಹೇಳಿದ್ದಾರೆ. 'ಒಂದಷ್ಟು ಸ್ನೇಹಿತರ ತಂಡ ವೀಕೆಂಡ್ ಕಳೆಯಲು ಗೆಸ್ಟ್‌ಹೌಸ್‌ಗೆ ಹೋಗುತ್ತಾರೆ. ಅಲ್ಲಿ ಅನಿರೀಕ್ಷಿತವಾಗಿ ನಡೆದ ಕೆಲವು ಘಟನೆಗಳಿಗಳಿಂದ ಆ ಅತಿಥಿಗೃಹದಲ್ಲಿ ಆತ್ಮಗಳಿರುವುದು ಗೊತ್ತಾಗಿ ಅಲ್ಲಿಂದ ತಪ್ಪಿಸಿಕೊಂಡು ಬರಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಈ ಪಯಣವೇ ಚಿತ್ರದ ಕಥೆ' ಎಂದಿದ್ದಾರೆ ನಿರ್ದೇಶಕರು.

ಎಂ.ಭೂಪತಿ ಬಂಡವಾಳ ಹೂಡಿರುವ ಈ ಚಿತ್ರ ಬೆಂಗಳೂರು, ಚಿಕ್ಕಮಗಳೂರು, ಮೇಲುಕೋಟೆ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಸಾಯಿ ಸೋಮೇಶ್ ಸಂಗೀತ, ಬುಗುಡೆ ವೀರೇಶ್ ಛಾಯಾಚಿತ್ರಗ್ರಹಣ, ಮುತ್ತುರಾಜ್ ಸಂಕಲನ ಈ ಚಿತ್ರಕ್ಕಿದೆ. ದರ್ಶಿನಿ ಆರ್.ಒಡೆಯರ್, ನಿಸರ್ಗ ಮನ್ವೀರ್ ಚವ್ಹಾಣ್, ವಿವೇಕ ಚಕ್ರವರ್ತಿ ಮುಂತಾದವರು ನಟಿಸಿದ್ದಾರೆ.

ಅಂಜನಿ ಪುತ್ರ

ಪುನೀತ್ ರಾಜ್‌ಕುಮಾರ್, ರಶ್ಮಿಕಾ ಮಂದಣ್ಣ ಜೋಡಿಯಾಗಿ ನಟಿಸಿದ್ದ ಅಂಜನಿಪುತ್ರ ಸಿನಿಮಾ ಮರುಬಿಡುಗಡೆಯಾಗುತ್ತಿದೆ. 2017ರ ಡಿಸೆಂಬರ್ 21ರಂದು ಈ ಚಿತ್ರ ತೆರೆ ಕಂಡಿತ್ತು. ಎಂಎನ್‌ಕೆ ಮೂವಿಸ್ ಮೂಲಕ ಎಂಎನ್ ಕುಮಾರ್ ನಿರ್ಮಿಸಿದ್ದ ಚಿತ್ರಕ್ಕೆ ಎ ಹರ್ಷ ನಿರ್ದೇಶನವಿದೆ. ಪಿ. ರವಿಶಂಕರ್, ರಮ್ಯಾ ಕೃಷ್ಣನ್, ಮುಖೇಶ್ ತಿವಾರಿ ಮತ್ತು ಚಿಕ್ಕಣ್ಣ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ರವಿಬಸ್ರೂರ್ ಸಂಗೀತ, ಸ್ವಾಮಿ ಜೆ ಛಾಯಾಚಿತ್ರಗ್ರಹಣ, ದೀಪು ಎಸ್ ಕುಮಾರ್ ಸಂಕಲನವಿದೆ. ❖

'4 ಎನ್ 6'

ಪರ್ಪಲ್ ಪ್ಯಾಚ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಸಾಯಿಪ್ರೀತಿ ಎನ್. ನಿರ್ಮಿಸಿರುವ, ಮರ್ಡರ್ ಮಿಸ್ಟ್ರಿ ಜೊತೆಗೆ ಪತ್ತೆದಾರಿ, ಥ್ರಿಲ್ಲರ್ ಕಥೆ ಹೊಂದಿರುವ '4 ಎನ್ 6' ಈ ವಾರ ತೆರೆಗೆ ಬರುತ್ತಿದೆ.

'ಲವ್ ಮಾಕ್ಟೇಲ್' ಖ್ಯಾತಿಯ ರಚನಾ ಇಂದರ್ ಫೋರೆನ್ಸಿಕ್ ಡಿಟೆಕ್ಟಿವ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದರ್ಶನ್ ಶ್ರೀನಿವಾಸ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಕೊಲೆಯೊಂದರ ತನಿಖೆಯ ಸುತ್ತ ನಡೆಯುವ ಕಥಾಹಂದರ ಚಿತ್ರದಲ್ಲಿದ್ದು, ಇಂಥ ಪ್ರಕರಣ ಪತ್ತೆಹಚ್ಚುವಲ್ಲಿ ಫೋರೆನ್ಸಿಕ್ ರಿಪೋರ್ಟ್ ತುಂಬಾ ಪ್ರಮುಖವಾಗಿರುತ್ತದೆ. ಇದು ಬರೀ ಮರ್ಡರ್ ಇನ್ವೆಸ್ಟಿಗೇಶನ್ ಸುತ್ತ ನಡೆವ ಕಥೆಯಲ್ಲ, ಸೈಕಲಾಜಿಕಲ್ ಚಿತ್ರವೂ ಹೌದು' ಎಂದಿದೆ ಚಿತ್ರತಂಡ. ಭವಾನಿ ಪ್ರಕಾಶ್, ನವೀನ್ ಕುಮಾರ್ ಹಾಗೂ ಆದ್ಯಶೇಖರ್ ತಾರಾಗಣದಲ್ಲಿದ್ದಾರೆ. ಚರಣ್ ತೇಜ್ ಛಾಯಾಚಿತ್ರಗ್ರಹಣ, ಸಾಯಿ ಸೋಮೇಶ್ ಸಂಗೀತ ನಿರ್ದೇಶನವಿದೆ.

ಮಾತೆಂಬ ಜ್ಯೋತಿರ್ಲಿಂಗ

• ಮಂಜುನಾಥ ಕೊಳ್ಳೇಗಾಲ



ಬಸವ ಜಯಂತಿ

'ನುಡಿದಡೆ ಮುತ್ತಿನ ಹಾರದಂತಿರಬೇಕು...' ಅಣ್ಣನವರ ಈ ಸುಪ್ರಸಿದ್ಧ ವಚನವನ್ನು ಕೇಳದವರಾರು? ಸಿಕ್ಕಸಿಕ್ಕವರೆಲ್ಲ ಉದ್ಧರಿಸುವ ವಚನಗಳಲ್ಲಿ ಇದೊಂದು. ಆದರೆ ಇದರ ಶಕ್ತಿ ನೋಡಿ - ಬಳಸಿದವರು ಯಾರೇ ಇರಲಿ, ಯಾವ ಗದ್ದಲದೊಡನೆಯೇ ಬಳಸಿರಲಿ, ಆ ಗದ್ದಲವನ್ನೂ ಮೀರಿ ಪ್ರಜ್ಞೆಯನ್ನು ತಟ್ಟುತ್ತದೆ, ಉಜ್ವಲ ಪ್ರಭೆಯಿಂದ ಕಣ್ಸೆಳೆಯುತ್ತದೆ - 'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಹಿರಿಯರಿವಿನಿಂದ ಬಂದ ಕಾಣ್ಕೆ ಅದು.

ನುಡಿಯೊಂದು ಹೇಗಿರಬೇಕೆಂಬುದಕ್ಕೆ ಹಲವು ಉಪಮೆಗಳು, ಸೋಪಾನ ಕ್ರಮದಲ್ಲಿ ಒಂದು ಇನ್ನೊಂದಕ್ಕಿಂತ ಉಜ್ವಲಗೊಳ್ಳುತ್ತಾ ಕೊನೆಗೆ ಅತ್ಯುನ್ನತವಾದ ಪರಿಣಾಮದಲ್ಲಿ ವಿಶ್ರಾಂತವಾಗುತ್ತದೆ. ಒಂದು ವಾಕ್ಯ-ಪದ-ಅಕ್ಷರವನ್ನೂ ತೆಗೆದು ಹಾಕುವಂತಿಲ್ಲ - ವಚನಗಳ ಸೊಗಸೇ ಹಾಗೆ. ಅದರಲ್ಲೂ ಈ ವಚನವಂತೂ ಸ್ವೋಪಜ್ಞವಾದುದು, ತನ್ನ ಮಾತಿಗೆ ತಾನೇ ಉದಾಹರಣೆಯಾಗಿ ನಿಲ್ಲುವಂಥದು.

ಮೊದಲನೆಯದಾಗಿ ಮುತ್ತು ಅಪರೂಪದ ವಸ್ತು. ಎಲ್ಲೋ ಲಕ್ಷಾಂತರ ಹನಿಗಳಲ್ಲಿ ಒಂದು ಮುತ್ತಾಗುತ್ತದೆ. ಇಂತಹ ಮುತ್ತುಗಳ ಹಾರವೊಂದನ್ನು ಮಾಡಬೇಕಾದರೆ ಒಂದೊಂದೇ ಮುತ್ತನ್ನು ಹೆಕ್ಕಿ ತರಬೇಕು. ಇನ್ನು ಮುತ್ತಿನ ಹಾರವೆಂದರೆ ಕಣ್ಣಿಗೆ ಬರುವುದು ಶುಭ್ರವಾದ ಬಿಳಿಯ ಮುತ್ತೇ. ಈ 'ಶುಭ್ರ'ತೆಯೇ ಮಾತಿನ ಮುಖ್ಯಗುಣ. ಅದಕ್ಕೇ ವಾಗ್ದೇವಿಯನ್ನು 'ಸರ್ವಶುಕ್ಲಾ' ಎಂದಿದ್ದಾನೆ ಲಾಕ್ಷಣಿಕ ದಂಡಿ; ಮುತ್ತಿನ ಇನ್ನೊಂದು ಲಕ್ಷಣ ದುಂಡು - ದುಂಡೆಂದರೆ ದುಂಡೇ, ಒಂದಿನಿತೂ ಓರೆಕೋರೆಗಳಿಲ್ಲ. ಮಾತು ಹೀಗೆ ಸ್ಫುಟವಾಗಿರಬೇಕೆಂಬುದು ಒಂದು. ಮತ್ತೆ, ಇಲ್ಲಿ ಅಣ್ಣನವರು ಹೇಳುತ್ತಿರುವುದು ಮುತ್ತಿನಂತಹ ಮಾತಿನ ಬಗೆಗಲ್ಲ, ಮುತ್ತಿನ ಹಾರದಂತಹ ಮಾತಿನ ಬಗೆಗೆ. ಮುತ್ತಿನಂತಹ ಮಾತನ್ನು ಸುಸಂಬದ್ಧವಾಗಿ ಕಟ್ಟುವುದು ಕೌಶಲ ಬೇಡುವಂಥದ್ದು.

ಶುಭ್ರತೆ, ಹೊಳಪು, ಸಮಂಜಸತೆ, ಸಂಬದ್ಧತೆ. ಇಷ್ಟಿದ್ದರೆ ಸಾಕೇ? ಅರ್ಥದ ಬೆಳಕಿಲ್ಲದ ಬರೀ ಮಾತು ಎಷ್ಟು ಸುಂದರವಾಗಿದ್ದರೆ ಏನು ಪ್ರಯೋಜನ? ಮಾಣಿಕದ ದೀಪ್ತಿಯಂತೆ ಅರ್ಥವನ್ನು ಬೆಳಗಿ ತೋರಿಸಲಾರದಾದರೆ? ಮಾತು ಬೆಳಗಿ ಅರ್ಥದ ಬೆಳಕು ಹೊಮ್ಮುವುದೇನೋ ಸರಿಯೇ. ಆ ಬೆಳಕಿನಲ್ಲಿ ಕಣ್ಣಿಗೆ ಕಾಣುವುದು ಕಂಡಿತು. ಕಾಣದ್ದು? ಹೊರಗಿನದನ್ನು ಬೆಳಗುವ ಮಾತಿಗೆ ತನ್ನನ್ನು ತಾನೇ ಬೆಳಗಿಸಿಕೊಳ್ಳುವ, ತನ್ನ ಒಳಗನ್ನು ತೆರೆದು ತೋರುವ ಶಕ್ತಿಯೂ ಇರಬೇಕಲ್ಲವೇ? ಇಲ್ಲಿ ಅಣ್ಣನವರು ಸ್ಫಟಿಕಶಲಾಕೆಯನ್ನು ಹೇಳುತ್ತಾರೆ. ಸ್ಫಟಿಕವು ಶುಭ್ರತೆಯ, ಪಾರದರ್ಶಕತೆಯ ಸಂಕೇತ. ಆಡಿದ ಮಾತು ಸ್ಫಟಿಕದಂತೆ ನಿಚ್ಚಳವಾಗಿ, ಒಳ-ಹೊರ ಅರ್ಥಗಳೆಲ್ಲ ಮನದಟ್ಟಾಗುವಂತಿದ್ದರೆ ಸಾಕೇ? ಅದು ಸ್ಫಟಿಕದ ಶಲಾಕೆಯಾಗಬೇಕು. ಆ ಮೊನೆಯಾದ, ದೃಢವಾದ, ಹಗುರಾದ ಶಲಾಕೆಯನ್ನು ಹಿಡಿದು ತೋರಿದರೆ, ಅದರ ಮೊನೆ ಗಮ್ಯವನ್ನು ಮುಟ್ಟಬೇಕು, ತೋರಿದ ಅರಿವಾಗಬೇಕು, ಆದರೆ ತೋರುವ ಶಲಾಕೆ ಕಾಣಬಾರದು - ಅರ್ಥವುಳಿಯಬೇಕು, ಮಾತು ನಿಲ್ಲಬಾರದು.

ಇವೆಲ್ಲದರ ಅಂತಿಮಗಮ್ಯವಾದರೂ ಏನು? 'ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು'. ಲಿಂಗವೆಂದರೆ ಕಲ್ಲುಬಂಡೆಯಲ್ಲ - ನನ್ನದೇ ಒಳಗಿನ ಒಳಗು - ಅದು ಪ್ರಜ್ಞೆಯ, ಅಸ್ತಿತ್ವದ ಒಂದು ಭಾಗವೇ ಆಗಿರದಿದ್ದರೆ ಅದು ಕೇವಲ ಕಲ್ಲು. ಈ ನಿಮ್ಮೊಳಗಿನ ಲಿಂಗ ನಿಮ್ಮ ಮಾತನ್ನು ಮೆಚ್ಚಿ ಅಹುದಹುದೆನಬೇಕು.

ಮಾತೆಂಬುದು ಜ್ಯೋತಿರ್ಲಿಂಗವೆಂಬ ಪ್ರಜ್ಞೆಯಿರುವವನು ಆಡಿ ಅದನ್ನು ಮೈಲಿಗೆ ಮಾಡಲಾರ. ಆಡಲೇಬೇಕೆಂದರೆ, ನುಡಿಯ ಸೂತಕವನ್ನೊಲ್ಲದ ನಿಚ್ಚಟನು ಆ ನುಡಿಗೆ 'ನಡೆ'ಯ ಮುಡಿ ಹಾಸುತ್ತಾನೆ, ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನು ಒಲಿಯನೆಂಬ ಪ್ರಜ್ಞೆ ಅವನಿಗಿದ್ದೇಯಿದೆ. ಈ ಪ್ರಜ್ಞೆಯನ್ನು ಜಗತ್ತಿಗೆ ಉಜ್ವಲಿಸಿ ಕೊಟ್ಟ ಬಸವಣ್ಣನವರ ಜಯಂತಿಯಿಂದು, ಈ ಭುವನದ ಬೆಳಕಿಗೆ ನಮನ. ❖

ಸಂಪತ್ತು ದಾನಗಳ ಹಬ್ಬ...

• ನವೀನ ಭಟ್ಟ ಗಂಗೋತ್ರಿ



ಅಕ್ಷಯ ತೃತೀಯಾ

ಚಾಂದ್ರಮಾನ ಪಂಚಾಂಗದಲ್ಲಿ ವೈಶಾಖಮಾಸದ ಶುಕ್ಲಪಕ್ಷದ ಮೂರನೆಯ ದಿನವನ್ನು 'ಅಕ್ಷಯತೃತೀಯಾ' ಎಂದು ಗುರುತಿಸಲಾಗುತ್ತದೆ. ಇದೊಂದು ವಿಶೇಷವಾದ ದಿನ ಮತ್ತು ಎಲ್ಲ ಶುಭಕಾರ್ಯಗಳಿಗೆ ಬಲು ಪ್ರಶಸ್ತವಾದ ಮುಹೂರ್ತದ ದಿನವೂ ಹೌದು. ಅಕ್ಷಯತೃತೀಯಾ ಎಂಬ ಸಂಸ್ಕೃತ ಪದವೇ ಕನ್ನಡದಲ್ಲಿ 'ಅಕ್ಷಯತದಿಗೆ' ಎಂತಲೂ, 'ಆಖಾ ತೀಜ್', 'ಅಖ್ತಿ' ಎಂಬುದಾಗಿ ಉತ್ತರದ ಭಾಷೆಗಳಲ್ಲೂ ಪ್ರಚಲಿತವಿದೆ. ಪದಗಳು ಬೇರೆಬೇರೆಯಾದರೂ ಇಲ್ಲಿರುವ ಭಾವ ಮಾತ್ರ ಕೊನೆಯಿಲ್ಲದ, ಕ್ಷಯವಿಲ್ಲದ, ಕಳೆಗುಂದದ ಮಂಗಲವನ್ನು ಕೊಡುವಂಥದು ಎಂಬುದೇ ಆಗಿದೆ. ಹೀಗಾಗಿ ಅಕ್ಷಯತೃತೀಯೆಯ ದಿನವೇ ಮಂಗಳಕಾರ್ಯಗಳನ್ನು ಕೈಗೊಳ್ಳುವುದು ಸಂಪ್ರದಾಯದಲ್ಲಿ ಬಂದಿದೆ. ಈ ದಿನ ಮಾಡುವ ಮಂಗಳಕಾರ್ಯಗಳಿಗೆ ದಿನದ ಯಾವುದೋ ಒಂದು ಸಮಯದಲ್ಲಿ ಮಾತ್ರ ಒಳ್ಳೆಯ ಮುಹೂರ್ತವನ್ನು ಹುಡುಕುವ ಅನಿವಾರ್ಯತೆ ಇರುವುದಿಲ್ಲ, ಬದಲಾಗಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಇಡೀ ದಿನವೂ ಮಂಗಳಕಾರ್ಯಗಳನ್ನು ನೆರವೇರಿಸಬಹುದಾಗಿದೆ. ಹಾಗಾಗಿಯೇ ಸಾಮೂಹಿಕ ಉಪನಯನ, ಮದುವೆ ಮುಂತಾದ ಮಂಗಳಕಾರ್ಯಗಳು ಈ ದಿನ ಹೆಚ್ಚಾಗಿ ನಡೆಯುತ್ತವೆ. ಈ ದಿನ ಹಿಂದೂ ಸಂಪ್ರದಾಯಗಳಲ್ಲಿ ಮಾತ್ರವಲ್ಲದೆ ಜೈನರಲ್ಲಿಯೂ ಆಚರಣೆಯಲ್ಲಿದೆ.

ಈ ದಿನವೇ ಪರಶುರಾಮಜಯಂತಿಯೂ ಹೌದು. ಇತಿಹಾಸ ಮತ್ತು ಪುರಾಣ ಪ್ರಸಿದ್ಧವಾದ ಕೆಲವು ಮಹತ್ಕಾರ್ಯಗಳು ಅಕ್ಷಯತೃತೀಯೆಯಂದೇ ನಡೆದುವು ಎಂಬುದು ಪ್ರತೀತಿ. ಆಚಾರ್ಯ ಶಂಕರರಿಗೆ ಕನಕಧಾರಾಸ್ತೋತ್ರದ ಮೂಲಕ ಲಕ್ಷ್ಮೀಕಟಾಕ್ಷ ಸಿದ್ಧಿಸಿದ್ದು, ತಲೆಮಾರುಗಳವರೆಗೆ ನೆನೆಗುದಿಯಲ್ಲಿದ್ದ ಗಂಗಾ ನಯನ ಯೋಜನೆಯನ್ನು ರಾಜಾ ಭಗೀರಥನು ತನ್ನ ತಪಸ್ಸಿನ ಮೂಲಕ ಪೂರ್ಣಗೊಳಿಸಿದ್ದು, ವನವಾಸದಲ್ಲಿದ್ದ ಪಾಂಡವರಿಗೆ ಸೂರ್ಯದೇವನು ಅಕ್ಷಯಪಾತ್ರೆಯನ್ನು ಕರುಣಿಸಿದ್ದು, ಬಡವನಾದ ಕುಚೇಲನಿಗೆ ಭಗವಾನ್ ಶ್ರೀಕೃಷ್ಣನ ಅನುಗ್ರಹವಾಗಿ ಕುಚೇಲನ ಕಷ್ಟಗಳು ನೀಗಿದ್ದು, ಕುಬೇರನಿಗೆ ಲಕ್ಷ್ಮೀ ಕೃಪೆಯಾಗಿ ಆತ ಸಂಪತ್ತಿಗೆ ಅಧಿಪತಿಯಾದ್ದು ಸಹ ಇದೇ ದಿನವೆಂದು ಹೇಳಲಾಗುತ್ತದೆ. ಈ ಎಲ್ಲ ಇತಿಹಾಸಪುರಾಣ ಪ್ರಸಿದ್ಧ ಘಟನೆಗಳನ್ನು ನೋಡುವಾಗ ಅಕ್ಷಯತೃತೀಯೆಗೆ ಸಂಪತ್ತಿನ ಜೊತೆಗೆ ಅನಾದಿಕಾಲದ ನಂಟು ಇದೆಯೆಂದು ತೋರುತ್ತದೆ. ನಮ್ಮ ಕಾಲದಲ್ಲಿಯಾದರೂ ಇದು ಮುಂದುವರಿದುಕೊಂಡು ಬಂದಿದೆ ಎನ್ನಬಹುದು. ಈ ಎಲ್ಲ ಪ್ರಾಕ್ಕಾಲದ ಐತಿಹ್ಯಗಳ ಆಧಾರದಲ್ಲಿಯೇ ಇವತ್ತಿಗೂ ಅಕ್ಷಯತೃತೀಯೆಯ ದಿನದಂದು ಜನರು ಬಂಗಾರ, ಬೆಳ್ಳಿ ಮತ್ತಿತರ ಮೌಲ್ಯಭರಿತ ವಸ್ತುಗಳನ್ನು ಕೊಳ್ಳುವುದು ಚಾಲ್ತಿಗೆ ಬಂದಿದೆ. ನಮ್ಮ ಕಾಲದಲ್ಲಿಯಂತೂ ಬಂಗಾರದ ಮಳಿಗೆಗಳು ಈ ದಿನವನ್ನು ತಮ್ಮ ವ್ಯವಹಾರದ ಅತಿ ಮುಖ್ಯ ದಿನವನ್ನಾಗಿ ನೋಡುತ್ತವೆ. ಅದರಲ್ಲಿಯೂ ಈ ಬಾರಿ ಅಕ್ಷಯತೃತೀಯಾ ಶುಕ್ರವಾರದಂದು ಬಂದಿರುವುದರಿಂದ ಇನ್ನಷ್ಟು ಹೆಚ್ಚಿನ ಮಹತ್ವದ್ದೆನಿಸಿದೆ.

ಆದರೆ ಶಾಸ್ತ್ರಗಳನ್ನು ನೋಡುವಾಗ ನಮಗೆ ಅಕ್ಷಯತೃತೀಯೆ ದಾನಕ್ಕೆ ಪ್ರಶಸ್ತವಾದ ದಿನವಾಗಿ ಕಾಣುತ್ತದೆಯೇ ಹೊರತು ಸಂಪತ್ತನ್ನು ಕೂಡಿಡುವುದಕ್ಕಲ್ಲ. 'ಕೊಟ್ಟಿದ್ದು ತನಗೆ, ಬಚ್ಚಿಟಿದ್ದು ಪರರಿಗೆ' ಎಂಬ ತಿಳಿನುಡಿಯು ಶಾಸ್ತ್ರಗಳ ಈ ನಿಲುವನ್ನೇ ಸಮರ್ಥಿಸುವಂತಿದೆ. ಅಂದರೆ ದಾನವೆಂಬ ಮೌಲ್ಯದ ಆಚರಣೆಗೆ ಇರುವಷ್ಟು ಮಹತ್ತು ನಮ್ಮಲ್ಲಿ ಸಂಪತ್ತನ್ನು ಕೂಡಿಡುವುದಕ್ಕೆ ಇರಲಿಲ್ಲ. ಇದರರ್ಥ ಸಂಪತ್ತನ್ನು ಗಳಿಸಬಾರದೆಂದಲ್ಲ; ಗಳಿಸ ಬೇಕು, ತನಗಾಗಿ ಕೊಂಚ ಉಳಿಸಬೇಕು ಮತ್ತು ಕೈದೆರೆದು ದಾನ ಮಾಡಬೇಕು ಎನ್ನುವುದು. ಆದರೆ ಸದ್ಯಕ್ಕೆ ನಮ್ಮ ಸಮಾಜದ ಬದುಕೆಲ್ಲವೂ ಧನಕನಕಗಳನ್ನು ಕೇಂದ್ರದಲ್ಲಿ ಇರಿಸಿಕೊಂಡಿರುವುದರಿಂದ ದಾನಕ್ಕೆ ಹೆಚ್ಚಿನ ಒತ್ತು ಸಿಗುತ್ತಿಲ್ಲ. ಅಕ್ಷಯತೃತೀಯ ದಿನದಂದು ಗಂಗೆಯಲ್ಲಿ ಮಿಂದು ದಾನಧರ್ಮಾದಿಗಳನ್ನು ಮಾಡಬೇಕು ಅನ್ನುವುದು ಪರಂಪರೆಯ ಆದರ್ಶ. ದಾನವು ಇಹದಲ್ಲಿಯೂ ಪರದಲ್ಲಿಯೂ ಶ್ರೇಯಸ್ಸನ್ನು ಕೊಡುವ ಕರ್ಮವಾದ್ದರಿಂದ, ಈ ದಿನದಂದು ಕೊಡುವ ದಾನವು ಕುಂದಿಲ್ಲದ ಒಳಿತನ್ನು ತರುವುದು ಎಂಬುದು ಶಾಸ್ತ್ರದ ನಿಲ್ಮೆ. ದಾನವೇ ಯಜ್ಞಗಳಲ್ಲಿ ಶ್ರೇಷ್ಠತಮ ಹಾಗೂ ದಾನ ಕೊಡುವವರನ್ನು ನೆಚ್ಚಿಯೇ ಜೀವಲೋಕ ಬದುಕಿದೆ ಎಂಬುದು ವೇದದ ಕಾಣ್ಕೆ.

ಹಣ, ಬಂಗಾರ ಮತ್ತಿತರ ಸಂಪತ್ತುಗಳ ಸಂಗತಿಯನ್ನು ಹೊರತುಪಡಿಸಿ ಅಕ್ಷಯ ತೃತೀಯೆಯಂದು ನೆನೆದುಕೊಳ್ಳಬೇಕಾದ ಅವತಾರ ಪುರುಷ ಪರಶುರಾಮ. ಆತ ನುಕುಲದಲ್ಲಿ ಆಗಿ ಹೋದ ಬ್ರಾಹ್ಮ ಮತ್ತು ಕ್ಷಾತ್ರಗಳ ಸಮ್ಮಿಲನದ ಮಹಾನ್ ಉದಾಹರಣೆ. ಹಾಗಾಗಿ ಈ ಅಕ್ಷಯತೃತಿಯೆಯಂದು ಸಂಪತ್ತಿನ ಜೊತೆಯಲ್ಲಿ ದಾನ ಹಾಗೂ ಪರಶುರಾಮನ ಚಿಂತನೆಯೂ ನಮಗೆಲ್ಲ ಬರಲಿ. ನಾಡಿನ ಒಳಿತು ಅಕ್ಷಯವಾಗಲಿ. ❖

ಚಿಕ್ಕಮಗಳೂರಿನಲ್ಲಿ ಆನೆ ಸುತ್ತಾಟ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆನೆಯೊಂದು ಚಿಕ್ಕಮಗಳೂರು ನಗರದ ಒಳಭಾಗಕ್ಕೆ ಬಂದು ಜಯನಗರದ ಬೀದಿಗಳಲ್ಲಿ ಸುತ್ತಾಡುವ ಮೂಲಕ ಆತಂಕ ಸೃಷ್ಟಿಸಿತು. ಬೆಳಗಿನ ಜಾವ ವಾಯು ವಿಹಾರಕ್ಕೆ ಹೋಗುತ್ತಿದ್ದ ಜನರಿಗೆ ಆನೆ ಎದುರಾಗಿದೆ. ಕೂಡಲೇ ಎಲ್ಲರೂ ಮನೆ ಸೇರಿಕೊಂಡು ಆನೆ ಓಡಾಡುವ ವಿಡಿಯೊ ಮಾಡಿಕೊಂಡಿದ್ದಾರೆ. ಅರಣ್ಯ ಇಲಾಖೆಗೂ ಸುದ್ದಿ ಮುಟ್ಟಿಸಿದ್ದಾರೆ. ಜಯನಗರದಿಂದ ಮತ್ತೆ ತೇಗೂರು ಕಡೆಗೆ ಹೋದ ಆನೆ ಈಗ ಕದ್ರಿಮಿದ್ರಿ ಅರಣ್ಯದಲ್ಲಿ ಸೇರಿದೆ. 10–12 ವರ್ಷದ ಮರಿಯಾನೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ.

'ಆನೆಗಳ ಹಿಂಡಿನಲ್ಲಿದ್ದ ಮರಿಯಾನೆ ತಪ್ಪಿಸಿಕೊಂಡು ಊರಿನತ್ತ ಬಂದಿದೆ. ಸದ್ಯ ಸುರಕ್ಷಿತ ಜಾಗದಲ್ಲಿದ್ದು, ಅದನ್ನು ಹಿಂಡಿನತ್ತ ಓಡಿಸಲಾಗುವುದು. ಜನ ಆತಂಕ ಗೊಳ್ಳುವುದು ಬೇಡ' ಎಂದು ಉಪಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಬಾಬು ತಿಳಿಸಿದರು.

ರಮಾಕುಮಾರಿಗೆ ಅನುಪಮಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬಾ.ಹ. ರಮಾಕುಮಾರಿ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ ಅನುಪಮಾ ನಿರಂಜನ ಪ್ರಶಸ್ತಿಗೆ ಲೇಖಕಿ ಬಾ.ಹ. ರಮಾಕುಮಾರಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹5,000 ನಗದು, ಪ್ರಶಸ್ತಿ ಪತ್ರ ಹಾಗೂ ಫಲಕ ಒಳಗೊಂಡಿದೆ. ಅನುಪಮಾ ನಿರಂಜನ ಜನ್ಮ ದಿನದ ಅಂಗವಾಗಿ ಏರ್ಪಡಿಸಿದ್ದ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಂಗಳೂರು ಕೊಳಚಪ್ಪುವಿನ ಬಿ.ಸತ್ಯವತಿ ಭಟ್ ಪ್ರಥಮ, ಹೊಸಕೋಟೆಯ ಗಾಯತ್ರಿ ಕುಲಕರ್ಣಿ ದ್ವಿತೀಯ ಹಾಗೂ ಮಡಿಕೇರಿಯ ರಾಧಿಕಾ ವಿಶ್ವನಾಥ್ ತೃತೀಯ ಸ್ಥಾನ ಪಡೆದಿದ್ದಾರೆ. ಬಹುಮಾನಗಳು ಕ್ರಮವಾಗಿ 2500, ₹2,000 ಮತ್ತು ₹1,500 ನಗದು ಒಳಗೊಂಡಿದೆ. ಎನ್.ಆರ್. ಕಾಲೊನಿಯಲ್ಲಿರುವ ಬಿಎಂಶ್ರೀ ಕಲಾ ಭವನದಲ್ಲಿ ಮೇ 17ರಂದು ಸಂಜೆ 5ಕ್ಕೆ ನಡೆಯಲಿರುವ ಅನುಪಮಾ ನಿರಂಜನ ಅವರ ಜನ್ಮದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಹಾಗೂ ಬಹುಮಾನ ವಿತರಣೆ ನಡೆಯಲಿದೆ ಎಂದು ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ತಿಳಿಸಿದ್ದಾರೆ.

ವಜಾಗೊಳಿಸಿದ್ದ 25 ಕ್ಯಾಬಿನ್ ಸಿಬ್ಬಂದಿ ಮರು ಸೇರ್ಪಡೆಗೆ ಕಂಪನಿ ಒಪ್ಪಿಗೆ

ಏರ್ ಇಂಡಿಯಾ: ಬಿಕ್ಕಟ್ಟು ಸುಖಾಂತ್ಯ

ನವದೆಹಲಿ (ಪಿಟಿಐ): ಕ್ಯಾಬಿನ್ ಸಿಬ್ಬಂದಿ ಮತ್ತು ಟಾಟಾ ಸಮೂಹಕ್ಕೆ ಸೇರಿದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯ ಪ್ರತಿನಿಧಿಗಳ ನಡುವೆ ನಡೆದ ಸಂಧಾನ ಯಶಸ್ವಿಯಾಗಿದ್ದು, ಪ್ರತಿಭಟನೆ ಹಿಂಪಡೆಯಲು ಸಿಬ್ಬಂದಿ ಸಮ್ಮತಿಸಿದ್ದಾರೆ ಎಂದು ಗುರುವಾರ ಮೂಲಗಳು ತಿಳಿಸಿವೆ.

ಆಡಳಿತ ಮಂಡಳಿಯ ಅಸಮರ್ಪಕ ನಿರ್ವಹಣೆ ಖಂಡಿಸಿ 200ಕ್ಕೂ ಹೆಚ್ಚು ಸಿಬ್ಬಂದಿ ಅನಾರೋಗ್ಯದ ರಜೆ ಮೇಲೆ ತೆರಳಿದ್ದರು. ಕಳೆದ ಎರಡು ದಿನಗಳಿಂದ ಕಂಪನಿಯ 170ಕ್ಕೂ ವಿಮಾನಗಳ ಹಾರಾಟ ರದ್ದಾಗಿತ್ತು. ಇದರಿಂದ ಸಾವಿರಾರು ಪ್ರಯಾಣಿಕರು ತೊಂದರೆಗೆ ಸಿಲುಕಿದ್ದರು.

ಅನಾರೋಗ್ಯದ ರಜೆ ಮೇಲೆ ತೆರಳಿರುವ 25 ಕ್ಯಾಬಿನ್ ಸಿಬ್ಬಂದಿ ವಿರುದ್ಧ ಕಂಪನಿಯು ಕೆಲಸದಿಂದ ವಜಾಗೊಳಿಸುವ ಅಸ್ತ್ರ ಪ್ರಯೋಗಿಸಿತ್ತು. ಅವರಿಗೆ ನೋಟಿಸ್ ಕೂಡ ಜಾರಿಗೊಳಿಸಿತ್ತು. ಈ ಸಿಬ್ಬಂದಿಯನ್ನು ಮರಳಿ ಕೆಲಸಕ್ಕೆ ಸೇರ್ಪಡೆ ಮಾಡಿಕೊಳ್ಳುವುದಾಗಿ ಕಂಪನಿಯು ಒಪ್ಪಿಗೆ ನೀಡಿದೆ. ಹಾಗಾಗಿ, ಮಂಗಳವಾರ ರಾತ್ರಿಯಿಂದ ತಲೆದೋರಿದ್ದ ಬಿಕ್ಕಟ್ಟು ಶಮನಗೊಂಡಿದೆ ಎಂದು ಮೂಲಗಳು ವಿವರಿಸಿವೆ.


ನವದೆಹಲಿಯ ಮುಖ್ಯ ಕಾರ್ಮಿಕ ಆಯುಕ್ತರ ಕಚೇರಿಯಲ್ಲಿ (ಕೇಂದ್ರ) ನಡೆದ ಸಂಧಾನ ಸಭೆಯಲ್ಲಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ನೌಕರರ ಸಂಘ ಹಾಗೂ ಕಂಪನಿಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸತತ ಐದು ಗಂಟೆಗಳ ಕಾಲ ನಡೆದ ಸಭೆಯು ಅಂತಿಮವಾಗಿ ಸುಖಾಂತ್ಯಗೊಂಡಿದೆ.

ದೈಹಿಕ ಕ್ಷಮತೆ ಪ್ರಮಾಣ ಪತ್ರ ಸಲ್ಲಿಸುವ ಮೂಲಕ ರಜೆಯ ಮೇಲೆ ತೆರಳಿರುವ ಸಿಬ್ಬಂದಿಗೆ ಕೆಲಸಕ್ಕೆ ಹಾಜರಾಗಲು ಸೂಚಿಸಲಾಗಿದೆ.

ನೌಕರರ ಸಂಘವು ಭಾರತೀಯ ಮಜ್ದೂರ್ ಸಂಘದೊಂದಿಗೆ (ಬಿಎಂಎಸ್) ಸಂಯೋಜನೆಗೊಂಡಿದೆ.

ಸಭೆಯ ಬಳಿಕ ಮಾತನಾಡಿದ ಬಿಎಂಎಸ್ ಅಧ್ಯಕ್ಷ ಗಿರೀಶ್ ಚಂದ್ರ ಆರ್ಯ, 'ವಜಾಗೊಳಿಸಿದ್ದ ನೌಕರರನ್ನು ಮರಳಿ ಕೆಲಸಕ್ಕೆ ಸೇರ್ಪಡೆ ಮಾಡಿಕೊಳ್ಳಲು ಕಂಪನಿಯು ಒಪ್ಪಿದೆ. ಎರಡು ಕಡೆಯವರು ಮೇ 28ರಂದು ನಡೆಯುವ ಸಭೆಯಲ್ಲಿ ಸಮಸ್ಯೆಗಳ ಬಗ್ಗೆ ಚರ್ಚಿಸಿ ಬಗೆಹರಿಸಿಕೊಳ್ಳಲು ಒಪ್ಪಿಕೊಂಡಿದ್ದಾರೆ' ಎಂದು ಹೇಳಿದರು.

ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನಲ್ಲಿ ಒಟ್ಟು 1,400ಕ್ಕೂ ಹೆಚ್ಚು ಕ್ಯಾಬಿನ್ ಸಿಬ್ಬಂದಿ ಇದ್ದಾರೆ. ಈ ಪೈಕಿ 500ಕ್ಕೂ ಹೆಚ್ಚು ಹಿರಿಯ ಕ್ಯಾಬಿನ್ ಸಿಬ್ಬಂದಿ ಇದ್ದಾರೆ.



ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯ ವಿಮಾನ ಹಾರಾಟ ರದ್ದಾಗಿದ್ದರಿಂದ ಗುರುವಾರ ಪಟ್ನಾ ವಿಮಾನ ನಿಲ್ದಾಣದಲ್ಲಿರುವ ಏರ್ ಇಂಡಿಯಾ ಕೌಂಟರ್ ಮುಂಭಾಗ ಚಿಂತಾಕ್ರಾಂತರಾಗಿ ಕುಳಿತಿರುವ ಪ್ರಯಾಣಿಕರು –ಪಿಟಿಐ ಚಿತ್ರ

85 ವಿಮಾನ ಹಾರಾಟ ರದ್ದು

ಕ್ಯಾಬಿನ್ ಸಿಬ್ಬಂದಿಯ ಕೊರತೆಯಿಂದಾಗಿ ಎರಡನೇ ದಿನವಾದ ಗುರುವಾರ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ 85 ವಿಮಾನಗಳ ಹಾರಾಟ ರದ್ದಾಯಿತು. ದೈನಂದಿನ ಹಾರಾಟದ ಶೇ 23ರಷ್ಟು ವಿಮಾನ ಸೇವೆಗೆ ಅಡ್ಡಿಯಾಗಿತ್ತು. ಹಾಗಾಗಿ, ಪ್ರಯಾಣಿಕರಿಗೆ ಎದುರಾಗಿರುವ ಅನನುಕೂಲ ತಪ್ಪಿಸಲು ಕಂಪನಿಯು ರದ್ದುಪಡಿಸಿರುವ 20 ಮಾರ್ಗಗಳಲ್ಲಿ ಏರ್ ಇಂಡಿಯಾ ಕಂಪನಿಗೆ ಸೇರಿದ ವಿಮಾನಗಳು ಕಾರ್ಯಾಚರಣೆ ನಡೆಸಿದವು.


'ವಿಮಾನ ರದ್ದು ಅಥವಾ ವಿಳಂಬವು ಮೂರು ಗಂಟೆ ಕಾಲ ಮೀರಿದರೆ ಟಿಕೆಟ್ ಖರೀದಿಸಿದ ಹಣವನ್ನು ಮರುಪಾವತಿಸಲಾಗುವುದು ಅಥವಾ ಶುಲ್ಕ ರಹಿತವಾಗಿ ಮತ್ತೆ ನಿಗದಿತ ಸ್ಥಳಕ್ಕೆ ಪ್ರಯಾಣಿಸಲು ಬೇರೆ ದಿನದಂದು ವಿಮಾನ ಸೇವೆ ಒದಗಿಸಲಾಗುವುದು' ಎಂದು ಕಂಪನಿ ಹೇಳಿದೆ.

ಭ್ರೂಣ ಹತ್ಯೆ ಪ್ರಕರಣ; ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಪಟ್ಟಣದ ಆರೋಗ್ಯ ಇಲಾಖೆ ವಸತಿ ಗೃಹದಲ್ಲಿ ಈಚೆಗೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದ ಮೇರೆಗೆ ಇಬ್ಬರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತರ ಸಂಖ್ಯೆ 6ಕ್ಕೇರಿದೆ.

ತಾಲ್ಲೂಕಿನ ಸುಂಕಾತೊಣ್ಣೂರು ಗ್ರಾಮದ ನವೀನ್ ಕುಮಾರ್, ಮೈಸೂರು ತಾಲ್ಲೂಕಿನ ಡಿ.ಸಾಲುಂಡಿ ಗ್ರಾಮದ ಕುಮಾರ್ ಬಂಧಿತರು.




ನವೀನ್ ಕುಮಾರ್



ಕುಮಾರ

'ನವೀನ್ ಕುಮಾರ್ ಈ ಹಿಂದೆ ಕೂಡ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಆರೋಪಿಯಾಗಿ ಬಂಧಿತನಾಗಿದ್ದ. ಜಾಮೀನಿನ ಮೇಲೆ ಹೊರಬಂದು ಮತ್ತೆ ಅದೇ ಕೃತ್ಯವನ್ನು ಮುಂದುವರಿಸಿದ್ದ. ಚಾಲಕನಾಗಿರುವ ಈತ ಗರ್ಭಪಾತ ಮಾಡಿಸಿಕೊಳ್ಳುವವರನ್ನು ರಹಸ್ಯವಾದ ಸ್ಥಳಕ್ಕೆ ಕರೆದೊಯ್ಯುತ್ತಿದ್ದ. ಗಾರೆ ಕೆಲಸ ಮಾಡುತ್ತಿದ್ದ ಕುಮಾರ್ ಈ ಪ್ರಕರಣದಲ್ಲಿ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,302
ಇಂದಿನ ಅಂತ್ಯ	21,957
▼	345
ದಿನದ ಕನಿಷ್ಠ	21,932

ವಿನಿಮಯ ದರ

$ ಡಾಲರ್	83.48
£ ಪೌಂಡ್	104.25
€ ಯುರೊ	89.61
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹75
ಮೈಸೂರು	
100ಕ್ಕೆ	₹585

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1515 (1510)
ಸೋಯಾ (ರಿಫೈನ್ಡ್)	₹915 (920)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹890 (894)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14400
ಎಸಿ	₹8540
ಆರ್‌ಪಿ	₹14900
ಆರ್‌ಸಿ	₹8450

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹159.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಬಿ)	₹300-499
ದ್ವಿತಳಿ (ಬಿ.ವಿ)	₹260-595

ಎಚ್‌ಪಿಸಿಎಲ್ ಲಾಭ ಶೇ 25ರಷ್ಟು ಕುಸಿತ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಎಚ್‌ಪಿಸಿಎಲ್) ನಿವ್ವಳ ಲಾಭದಲ್ಲಿ ಶೇ 25ರಷ್ಟು ಇಳಿಕೆಯಾಗಿದೆ.

2022–23ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,608 ಕೋಟಿ ಲಾಭ ಗಳಿಸಿತ್ತು. ಈಗ ₹2,709 ಕೋಟಿ ಗಳಿಸಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

ಲಾಭ ಇಳಿಕೆಗೆ ಕಾರಣವೇನು: ಲೋಕಸಭಾ ಚುನಾವಣೆಯಿಂದಾಗಿ ಕೇಂದ್ರ ಸರ್ಕಾರವು ಮಾರ್ಚ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ ₹2 ಕಡಿತಗೊಳಿಸಿತು. ಇದು ಎಚ್‌ಪಿಸಿಎಲ್ ಸೇರಿ ಉಳಿದ ಎರಡು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ಮೇಲೆ ಪರಿಣಾಮ ಬೀರಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದ ವೇಳೆ ದೇಶದಲ್ಲಿ ಇಂಧನದ ಬೆಲೆ ಕಡಿತಗೊಳಿಸಿದ್ದರಿಂದ ಲಾಭದ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯ ವಹಿವಾಟಿನಲ್ಲಿ ಏರಿಕೆಯಾಗಿದ್ದು, ₹1.15 ಲಕ್ಷ ಕೋಟಿಯಿಂದ ₹1.22 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ. ಪ್ರತಿ ಎರಡು ಷೇರಿಗೆ ಲಾಭಾಂಶದ ರೂಪದಲ್ಲಿ ಉಚಿತವಾಗಿ ಒಂದು ಷೇರು ವಿತರಿಸಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

ಸೆನ್ಸೆಕ್ಸ್ 1,062 ಅಂಶ ಕುಸಿತ: ಕರಗಿದ ಹೂಡಿಕೆದಾರರ ₹7.34 ಲಕ್ಷ ಕೋಟಿ ಸಂಪತ್ತು

ಷೇರುಪೇಟೆಯಲ್ಲಿ ಚಂಚಲ ವಹಿವಾಟು


ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗುರುವಾರ ಕರಡಿ ಕುಣಿತ ಜೋರಾಗಿತ್ತು. ಲೋಕಸಭಾ ಚುನಾವಣಾ ಫಲಿತಾಂಶದ ಬಗೆಗಿನ ಅನಿಶ್ಚಿತತೆಯಿಂದಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಸೂಚ್ಯಂಕಗಳು ಕುಸಿತ ಕಂಡಿವೆ.


ಅಲ್ಲದೆ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆತಕ್ಕೆ ಮುಂದಾಗಿದ್ದು, ಕೂಡ ಷೇರುಪೇಟೆಯ ಮೇಲೆ ಪರಿಣಾಮ ಬೀರಿತು. ಎಚ್‌ಡಿಎಫ್‌ಸಿ ಬ್ಯಾಂಕ್, ಎಲ್ ಆ್ಯಂಡ್ ಟಿ, ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಹೂಡಿಕೆದಾರರು ಭಾರಿ ಸಂಖ್ಯೆಯಲ್ಲಿ ಈ ಕಂಪನಿಗಳ ಷೇರುಗಳನ್ನು ಮಾರಾಟ ಮಾಡಿದ್ದರಿಂದ ಸೂಚ್ಯಂಕಗಳು ಕುಸಿತದ ಹಾದಿ ಹಿಡಿದವು.

ಒಂದೇ ದಿನ ಹೂಡಿಕೆದಾರರ ₹7.34 ಲಕ್ಷ ಕೋಟಿ ಸಂಪತ್ತು ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,062 ಅಂಶ (ಶೇ 1.45ರಷ್ಟು) ಕುಸಿತ ಕಂಡು, 72,404 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ದಿನದ ವಹಿವಾಟಿನಲ್ಲಿ 1,132 ಅಂಶ ಕುಸಿತ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 345 ಅಂಶ (ಶೇ 1.55ರಷ್ಟು) ಇಳಿಕೆ ಕಂಡು 21,957 ಅಂಶಗಳಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು.





‘ಮಾರ್ಚ್ ತ್ರೈಮಾಸಿಕದಲ್ಲಿ ಲಾರ್ಜ್ ಕ್ಯಾಪ್ ಕಂಪನಿಗಳು ನಿರೀಕ್ಷಿತ ಮಟ್ಟದಲ್ಲಿ ಲಾಭಗಳಿಸಿಲ್ಲ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಯಾವ ಪಕ್ಷ ಅಧಿಕಾರದ ಗದ್ದುಗೆ ಹಿಡಿಯಲಿದೆ ಎಂಬುದು ಅನಿಶ್ಚಿತತೆಯಿಂದ ಕೂಡಿದೆ. ಇದು ಹೂಡಿಕೆದಾರರ ಮೇಲೂ ಪರಿಣಾಮ ಬೀರಿದೆ. ಹಾಗಾಗಿ, ಸೂಚ್ಯಂಕಗಳು ಕುಸಿತದ ಹಾದಿ ಹಿಡಿಯಲು ಕಾರಣವಾಗಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಬ್ಯಾಂಕ್ ಆಫ್ ಇಂಗ್ಲೆಂಡ್ ಬಡ್ಡಿದರ ದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಮುಂದಿನ ವಾರ ಅಮೆರಿಕದ ಹಣದುಬ್ಬರದ ವರದಿ ಬಿಡುಗಡೆ ಯಾಗಲಿದೆ. ಹಾಗಾಗಿ, ಕೆಲವು ನಿರ್ದಿಷ್ಟ ಅವಧಿವರೆಗೆ ಮಾರುಕಟ್ಟೆಯಲ್ಲಿ ಇದೇ ಪರಿಸ್ಥಿತಿ ಮುಂದುವರಿಯಬಹುದು’ ಎಂದು ಹೇಳಿದ್ದಾರೆ.

ಏಷ್ಯನ್ ಪೇಂಟ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಐಟಿಸಿ, ಬಜಾಜ್ ಫೈನಾನ್ಸ್, ಇಂಡಸ್‌ಇಂಡ್ ಬ್ಯಾಂಕ್, ಟಾಟಾ ಸ್ಟೀಲ್, ಬಜಾಜ್ ಫಿನ್‌ಸರ್ವ್, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಪವರ್ ಗ್ರಿಡ್ ಷೇರಿನ ಮೌಲ್ಯ ಕುಸಿತ ಕಂಡಿದೆ. ಟಾಟಾ ಮೋಟರ್, ಮಹೀಂದ್ರ ಆ್ಯಂಡ್ ಮಹೀಂದ್ರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಇನ್ಫೊಸಿಸ್, ಎಚ್‌ಸಿಎಲ್ ಟೆಕ್ ಕಂಪನಿನ ಷೇರುಗಳು ಏರಿಕೆ ಕಂಡಿವೆ.

ತೈಲ ಮತ್ತು ಅನಿಲ (ಶೇ 3.41), ಬಂಡವಾಳ ಸರಕು (ಶೇ 3.37), ಲೋಹ (ಶೇ 3.13), ಕೈಗಾರಿಕೆ (ಶೇ 2.92), ಯುಟಿಲಿಟಿ (ಶೇ 2.59) ಹಾಗೂ ಸರಕು (ಶೇ 2.39) ವಲಯದ ಷೇರುಗಳು ಕುಸಿತ ಕಂಡಿವೆ. ಆಟೊ ವಲಯದ ಷೇರುಗಳು ಏರಿಕೆ ಕಂಡಿವೆ.

ಬುಧವಾರದಂದು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,669 ಕೋಟಿ ಮೌಲ್ಯದ ಷೇರು ಮಾರಾಟ ಮಾಡಿದ್ದಾರೆ.

ಏನಿದು ಚಂಚಲತೆ ಮಾಪಕ?: ಲೋಕಸಭಾ ಚುನಾವಣಾ ಫಲಿತಾಂಶ ಕುರಿತ ಅನಿಶ್ಚಿತತೆಯು ಭಾರತದ ಚಂಚಲತೆಯ ಮಾಪಕವಾದ ಇಂಡಿಯಾ ವಿಐಎಕ್ಸ್ ಅನ್ನು ಹೆಚ್ಚಿಸಿದೆ. ಇದರಿಂದ ಷೇರು ಮಾರುಕಟ್ಟೆಗಳಲ್ಲಿ ಆತಂಕ ಸೃಷ್ಟಿಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಷೇರುಪೇಟೆಯ ಕಳೆದ ಎಂಟು ವಹಿವಾಟುಗಳಲ್ಲಿ ಇಂಡಿಯಾ ವಿಐಎಕ್ಸ್ ಶೇ 70ರಷ್ಟು ಏರಿಕೆಯಾಗಿದ್ದು, 52 ವಾರಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಷೇರುದಾರರು ಮತ್ತು ಹೂಡಿಕೆದಾರರಲ್ಲಿ ಆತಂಕ ಸೃಷ್ಟಿಸಿದೆ’ ಎಂದು ಸ್ವಸ್ತಿಕ ಇನ್‌ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಸಂತೋಷ್ ಮೀನಾ ಹೇಳಿದ್ದಾರೆ.

ಎಲ್ ಆ್ಯಂಡ್ ಟಿಗೆ ₹28,737 ಕೋಟಿ ನಷ್ಟ

ಎಲ್ ಆ್ಯಂಡ್ ಟಿ ಕಂಪನಿಯ ಷೇರಿನ ಮೌಲ್ಯವು ಶೇ 6ರಷ್ಟು ಕುಸಿತ ಕಂಡಿದ್ದು, ಕಂಪನಿಯ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ಒಂದೇ ದಿನ ₹28,737 ಕೋಟಿ ಕರಗಿದೆ.

ಕಂಪನಿಯು ಹೂಡಿಕೆದಾರರ ನಿರೀಕ್ಷೆಗೆ ತಕ್ಕಂತೆ ಲಾಭಗಳಿಸದಿರುವ ಪರಿಣಾಮ ಷೇರುಗಳ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 6ರಷ್ಟು ಕುಸಿತ ಕಂಡಿದ್ದು, ಪ್ರತಿ ಷೇರಿನ ಬೆಲೆಯು ₹3,276.15 ಆಗಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 6ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆಯು ₹3,275.45 ಆಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹4.50 ಲಕ್ಷ ಕೋಟಿ ಆಗಿದೆ.

ಟಿವಿಎಸ್ ಮೋಟರ್ ಷೇರು ಏರಿಕೆ

ನವದೆಹಲಿ (ಪಿಟಿಐ): ಮಾರ್ಚ್ ತ್ರೈಮಾಸಿಕದಲ್ಲಿ ಟಿವಿಎಸ್ ಮೋಟರ್ ಕಂಪನಿಯ ನಿವ್ವಳ ಲಾಭದಲ್ಲಿ ಏರಿಕೆ ಆಗಿರುವುದರಿಂದ ಕಂಪನಿಯ ಷೇರಿನ ಮೌಲ್ಯವು ಶೇ 3ರಷ್ಟು ಏರಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 2.74ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆಯು ₹2,061.15 ಆಗಿದೆ. ವಹಿವಾಟಿನ ಒಂದು ಸಂದರ್ಭದಲ್ಲಿ ಶೇ 5.73ರಷ್ಟು ಹೆಚ್ಚಳವಾಗಿತ್ತು. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 3.25ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆಯು ₹2,061.60 ಆಗಿದೆ. ವಹಿವಾಟಿನ ಒಂದು ಹಂತದಲ್ಲಿ ಶೇ 6.32ರಷ್ಟು ಏರಿಕೆಯಾಗಿತ್ತು.

ಎಸ್‌ಬಿಐಗೆ ₹21,384 ಕೋಟಿ ಲಾಭ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2023–24ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹21,384 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹18,093 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 18ರಷ್ಟು ಏರಿಕೆ ಆಗಿದೆ. ಒಟ್ಟು ವರಮಾನವು ₹1.06 ಲಕ್ಷ ಕೋಟಿಯಿಂದ ₹1.28 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಬಡ್ಡಿಯೇತರ ವರಮಾನದ ಏರಿಕೆಯಿಂದಾಗಿ ಲಾಭ ದಲ್ಲಿ ಹೆಚ್ಚಳವಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಗುರುವಾರ ತಿಳಿಸಿದೆ.

ಬಡ್ಡಿಯೇತರ ವರಮಾನದಲ್ಲಿ ಶೇ 24ರಷ್ಟು ಹೆಚ್ಚಳವಾಗಿದ್ದು, ₹17,369 ಕೋಟಿ ಗಳಿಸಿದೆ. 2023–24ರ ಪೂರ್ಣ ಹಣಕಾಸು ವರ್ಷದ ಲಾಭದಲ್ಲಿ ಶೇ 20ರಷ್ಟು ಏರಿಕೆ ಆಗಿದ್ದು, ₹67,084 ಕೋಟಿ ಗಳಿಸಿದೆ. ವೆಚ್ಚವು ₹29,732 ಕೋಟಿಯಿಂದ ₹30,276 ಕೋಟಿಗೆ ಏರಿಕೆಯಾಗಿದೆ.

‘ವಸೂಲಾಗದ ಸಾಲದ ಸರಾಸರಿ ಪ್ರಮಾಣದಲ್ಲಿ (ಎನ್‌ಪಿಎ) ಸುಧಾರಣೆ ಕಂಡಿದ್ದು, ಶೇ 2.78ರಿಂದ ಶೇ 2.24ಕ್ಕೆ ಇಳಿದಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 2.42ರಷ್ಟಿತ್ತು’ ಎಂದು ಬ್ಯಾಂಕ್ ಅಧ್ಯಕ್ಷ ದಿನೇಶ ಕುಮಾರ್ ಖಾರಾ ತಿಳಿಸಿದ್ದಾರೆ.

ಈಕ್ವಿಟಿ ಎಂ.ಎಫ್: ಹೂಡಿಕೆ ಶೇ 16 ಇಳಿಕೆ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ಈಕ್ವಿಟಿ ಮ್ಯೂಚುಯಲ್ ಫಂಡ್ಸ್‌ನಲ್ಲಿ ಬಂಡವಾಳದ ಒಳಹರಿವು ಶೇ 16ರಷ್ಟು ಕುಸಿತ ಕಂಡಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ. ಮಾರ್ಚ್‌ನಲ್ಲಿ ₹22,633 ಕೋಟಿ ಹೂಡಿಕೆ ಆಗಿತ್ತು. ಏಪ್ರಿಲ್‌ನಲ್ಲಿ ₹18,917 ಕೋಟಿ ಹೂಡಿಕೆಯಾಗಿದೆ ಎಂದು ಎಎಂಎಫ್‌ಐ ತಿಳಿಸಿದೆ.

ಎಸ್‌ಐಪಿ ಹೆಚ್ಚಳ: ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಏಪ್ರಿಲ್‌ನಲ್ಲಿ ₹20,371 ಕೋಟಿ ಹೂಡಿಕೆಯಾಗಿದೆ. ಮಾರ್ಚ್‌ನಲ್ಲಿ ₹19,271 ಕೋಟಿ ಹೂಡಿಕೆಯಾಗಿತ್ತು. ಏಪ್ರಿಲ್‌ನಲ್ಲಿ 63.65 ಲಕ್ಷ ಹೊಸ ಖಾತೆಗಳು ನೋಂದಣಿ ಆಗಿದ್ದು, ಒಟ್ಟು ಖಾತೆಗಳ ಸಂಖ್ಯೆ 8.7 ಕೋಟಿಗೆ ಮುಟ್ಟಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

9-5-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1515 (1515)
ಸೋಯಾ ಕಚ್ಚಾ	865 (865)
ಪಾಮ್ ವಾರದ ಡೆಲಿವರಿ	892 (892)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹71,100 (71,250)

ಬೆಳ್ಳಿ ಕೆ.ಜಿ ₹82,400 (81,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹4900-9150
ತಿಪಟೂರು	₹8100-9400

ಮಾರುಕಟ್ಟೆ ಧಾರಣೆ

(ಅಡಿಕೆ)

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಚಿತ್ರದುರ್ಗ	
ಅಪಿ	52600-53000
ಬೆಟ್ಟೆ	36700-37100
ಕೆಂಪುಗೋಟು	29600-30000
ರಾಶಿ	52100-52500
ಕಾರ್ಕಳ	
ಹೊಸತು	25000-38000
ಹಳತು	30000-46000
ಪುತ್ತೂರು	
ಹೊಸತು	26500-38000
ಸಾಗರ	
ಬಿಳಿಗೋಟು	22989-29625
ಚಾಲಿ	31699-37671
ಕೋಕ	13017-30199
ಕೆಂಪುಗೋಟು	20290-36370
ರಾಶಿ	36199-52799
ಸಿಪ್ಪೆಗೋಟು	17010-20299
ಕುಮಟ	
ಚಿಪ್ಪು	25191-31611
ಕೋಕ	15069-28679
ಹಳೆಚಾಲಿ	38099-39899
ಹೊಸಚಾಲಿ	32300-37679
ಶಿವಮೊಗ್ಗ	
ಬೆಟ್ಟೆ	46569-55599
ಗೊರಬಲು	18900-38099
ರಾಶಿ	32009-53029
ಸರಕು	51000-85700
ಸಿದ್ದಾಪುರ	
ಬಿಳಿಗೋಟು	27319-30940
ಚಾಲಿ	34309-37419
ಕೋಕ	25389-30009
ಹಳೆಚಾಲಿ	35539-37619
ಕೆಂಪುಗೋಟು	28800-32200
ರಾಶಿ	43999-48799
ತಟ್ಟಿಬೆಟ್ಟೆ	35400-42599
ಶಿರಸಿ	
ಬೆಟ್ಟೆ	38550-45600
ಬಿಳಿಗೋಟು	24758-32426
ಚಾಲಿ	35019-38899
ಕೆಂಪುಗೋಟು	27400-31699
ರಾಶಿ	46409-48699
ಯಲ್ಲಾಪುರ	
ಅಪಿ	53399-59069
ಬಿಳಿಗೋಟು	21099-33099
ಕೋಕ	16099-28899
ಹಳೆಚಾಲಿ	38699-39599
ಹೊಸಚಾಲಿ	33199-38599
ಕೆಂಪುಗೋಟು	25016-34299
ರಾಶಿ	44099-52699
ತಟ್ಟಿಬೆಟ್ಟೆ	36699-44219

ಪಂಜಾಬ್ ಬ್ಯಾಂಕ್ ಲಾಭ ಮೂರು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕ ದಲ್ಲಿ ₹3,010 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹1,159 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಮೂರು ಪಟ್ಟು ಏರಿಕೆಯಾಗಿದೆ.

ಒಟ್ಟು ವರಮಾನವು ₹27,269 ಕೋಟಿಯಿಂದ ₹32,361 ಕೋಟಿಗೆ ಹೆಚ್ಚಳವಾಗಿದೆ. ವಸೂಲಾಗದ ಸಾಲ ಗಳಿಗೆ ತೆಗೆದಿರಿಸಬೇಕಿರುವ ಮೊತ್ತ ಕೂಡ ತಗ್ಗಿದೆ ಎಂದು ಬ್ಯಾಂಕ್, ಗುರುವಾರ ಷೇರುಪೇಟೆಗೆ ತಿಳಿಸಿದೆ.

ನಿವ್ವಳ ಬಡ್ಡಿ ವರಮಾನವು ₹9,499 ಕೋಟಿಯಿಂದ ₹10,363 ಕೋಟಿಗೆ (ಶೇ9ರಷ್ಟು) ಹೆಚ್ಚಳವಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 8.74ರಿಂದ ಶೇ 5.73ಕ್ಕೆ ಕುಸಿದಿದೆ. ನಿವ್ವಳ ಎನ್‌ಪಿಎ ಶೇ 2.72ರಿಂದ ಶೇ 0.73ಕ್ಕೆ ಇಳಿಕೆಯಾಗಿದೆ.

‘ನಿವ್ವಳ ಬಡ್ಡಿ ವರಮಾನ ಮತ್ತು ಎನ್‌ಪಿಎ ಇಳಿಕೆಯಾಗಿರುವುದರಿಂದ ಕೊನೆಯ ತ್ರೈಮಾಸಿಕದ ನಿವ್ವಳ ಲಾಭ ದಲ್ಲಿ ಏರಿಕೆಯಾಗಿದೆ’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಅತುಲ್ ಕುಮಾರ್ ಗೋಯಲ್ ತಿಳಿಸಿದ್ದಾರೆ.

ಭಾರತದ ರಾಜಕೀಯ ಪರಿಸ್ಥಿತಿ ಅಸ್ಥಿರಗೊಳಿಸಲು ಯತ್ನ: ಟೀಕೆ

ಅಮೆರಿಕ ಹಸ್ತಕ್ಷೇಪ: ರಷ್ಯಾ ಆರೋಪ

ಮಾಸ್ಕೊ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆ ಯತ್ನದ ಸಂಚಿನಲ್ಲಿ ಭಾರತೀಯ ನಾಗರಿಕರು ಭಾಗಿಯಾಗಿದ್ದಾರೆ ಎಂಬುದಕ್ಕೆ ಅಮೆರಿಕವು ಇಲ್ಲಿಯವರೆಗೂ ಯಾವುದೇ ವಿಶ್ವಾಸಾರ್ಹ ಪುರಾವೆಗಳನ್ನು ಒದಗಿಸಿಲ್ಲ ಎಂದು ರಷ್ಯಾ ಹೇಳಿದೆ.



ಮರಿಯಾ ಜಖರೋವಾ

ಅಲ್ಲದೆ, ಅಮೆರಿಕವು ಭಾರತದ ಆಂತರಿಕ ವ್ಯವಹಾರಗಳು ಮತ್ತು ಪ್ರಸ್ತುತ ನಡೆಯುತ್ತಿರುವ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂದು ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮರಿಯಾ ಜಖರೋವಾ ಆರೋಪಿಸಿದರು.

ಸೂಕ್ತ ಪುರಾವೆಗಳನ್ನು ಒದಗಿಸದೆ ಭಾರತೀಯ ನಾಗರಿಕರು ಕೊಲೆ ಸಂಚಿನಲ್ಲಿ ಪಾಲ್ಗೊಂಡಿದ್ದಾರೆ ಎಂಬುದು ಸ್ವೀಕಾರಾರ್ಹವಲ್ಲ ಎಂದು ಅವರು ಹೇಳಿದರು.

ಭಾರತವು ರಷ್ಯಾ ಮತ್ತು ಸೌದಿ ಅರೇಬಿಯಾದಂತೆ ನೀತಿಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ವಾಷಿಂಗ್ಟನ್ ಪೋಸ್ಟ್ ಮಾಡಿರುವ ವರದಿಗೆ ಪ್ರತಿಕ್ರಿಯಿಸಿದ ಅವರು, 'ಅದಕ್ಕೆ ಭಾರತದ ರಾಷ್ಟ್ರೀಯ ಮನಃಸ್ಥಿತಿ ಮತ್ತು ಇತಿಹಾಸದ ಬಗ್ಗೆ ತಿಳಿವಳಿಕೆ ಇಲ್ಲ. ಹೀಗಾಗಿಯೇ ಅದು ಭಾರತದಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಆಧಾರ ರಹಿತ ಆರೋಪಗಳನ್ನು ಮಾಡುವುದನ್ನು ಮುಂದುವರಿಸಿದೆ' ಎಂದರು.

ಶ್ವೇತಭವನವು ಭಾರತದಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದು, ಚುನಾವಣೆಯನ್ನು ಸಂಕೀರ್ಣಗೊಳಿಸಲು ಯತ್ನಿಸುತ್ತಿದೆ. ಈ ಮೂಲಕ ಅದು ಭಾರತದ ಆಂತರಿಕ ರಾಜಕೀಯ ಪರಿಸ್ಥಿತಿಯನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ಅದು ಭಾರತದ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸುವ ಭಾಗವಾಗಿದೆ ಎಂದು ಅವರು ಆರೋಪಿಸಿದರು.

'ಪನ್ನೂ ಹತ್ಯೆಗೆ ನಿಖಿಲ್ ಗುಪ್ತಾ ಎಂಬ ಭಾರತೀಯ ನಡೆಸಿದ್ದ ಯತ್ನವನ್ನು ವಿಫಲಗೊಳಿಸಲಾಗಿತ್ತು. ಭಾರತೀಯ ಸರ್ಕಾರಿ ಉದ್ಯೋಗಿಯೊಬ್ಬರ ಬಳಿ ನಿಖಿಲ್ ಕೆಲಸ ಮಾಡುತ್ತಿದ್ದ' ಎಂದು ಅಮೆರಿಕದ ಅಧಿಕಾರಿಗಳು ಕಳೆದ ವರ್ಷ ನವೆಂಬರ್‌ನಲ್ಲಿ ಆರೋಪಿಸಿದ್ದರು.

ಭಯೋತ್ಪಾದನೆಯ ಆರೋಪದ ಮೇಲೆ ಭಾರತಕ್ಕೆ ಬೇಕಾಗಿರುವ ಪನ್ನೂ, ಅಮೆರಿಕ ಮತ್ತು ಕೆನಡಾದ ದ್ವಿಪೌರತ್ವ ಹೊಂದಿದ್ದಾರೆ. ಭಯೋತ್ಪಾದನ ನಿಗ್ರಹ ಕಾಯ್ದೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ ನಿಷೇಧ ಕಾಯ್ದೆಯಡಿಯಲ್ಲಿ ಕೇಂದ್ರ ಗೃಹ ಸಚಿವಾಲಯವು ಅವರನ್ನು ಭಯೋತ್ಪಾದಕ ಎಂದು ಹೆಸರಿಸಿದೆ.

ನಿಜ್ಜರ್ ಪ್ರಕರಣ: ಪುರಾವೆ ಇಲ್ಲ– ಕೇಂದ್ರ

ನವದೆಹಲಿ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆನಡಾದಿಂದ ತನಗೆ ಯಾವುದೇ ನಿರ್ದಿಷ್ಟ ಪುರಾವೆ ಅಥವಾ ಮಾಹಿತಿ ದೊರೆತಿಲ್ಲ ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ. ಈ ಹತ್ಯೆಗೆ ಸಂಬಂಧಿಸಿದಂತೆ ಮೂವರು ಭಾರತೀಯರನ್ನು ಬಂಧಿಸಲಾಗಿದೆ ಎಂದು ಕೆನಡಾ ಪೊಲೀಸರು ಹೇಳಿದ ಕೆಲವೇ ದಿನಗಳಲ್ಲಿ ಕೇಂದ್ರ ಈ ಪ್ರತಿಕ್ರಿಯೆ ನೀಡಿದೆ.

ಆದರೆ ಬಂಧನದ ಬಗ್ಗೆ ಕೆನಡಾದಿಂದ ಮಾಹಿತಿ ದೊರೆತಿರುವುದಾಗಿ ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. 'ಕೆನಡಾದ ಅಧಿಕಾರಿಗಳು ಇದುವರೆಗೆ ಯಾವುದೇ ನಿರ್ದಿಷ್ಟ ಅಥವಾ ಸಂಬಂಧಪಟ್ಟ ಪುರಾವೆಯನ್ನು, ಮಾಹಿತಿಯನ್ನು ಹಂಚಿಕೊಂಡಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ಹೀಗಾಗಿ, ಈ ವಿಚಾರವಾಗಿ ಎಲ್ಲ ಆಯಾಮಗಳನ್ನು ಅರಿಯುವ ಮೊದಲೇ ಒಂದು ತೀರ್ಮಾನಕ್ಕೆ ಬರುವ ಕೆಲಸ ಆಗುತ್ತಿದೆ ಎಂದು ನಾವು ಹೇಳುತ್ತಿದ್ದೇವೆ' ಎಂದು ಅವರು ವಾರದ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು. ಮೂವರು ಭಾರತೀಯರ ಮೇಲೆ ಕೆನಡಾದ ಅಧಿಕಾರಿಗಳು ನಿಜ್ಜರ್ ಹತ್ಯೆಯ ಆರೋಪ ಹೊರಿಸಿದ್ದಾರೆ. ಈ ಮೂವರು ವಿದ್ಯಾರ್ಥಿ ವೀಸಾ ಪಡೆದು ಕೆನಡಾ ಪ್ರವೇಶಿಸಿದ್ದರು ಎಂದು ವರದಿಯಾಗಿದೆ.

'ಇಲ್ಲಿ ರಾಜಕೀಯ ಹಿತಾಸಕ್ತಿ ಕೆಲಸ ಮಾಡುತ್ತಿದೆ ಎಂಬುದು ಸ್ಪಷ್ಟ. ಪ್ರತ್ಯೇಕತಾವಾದಿಗಳು, ತೀವ್ರಗಾಮಿಗಳು ಮತ್ತು ಹಿಂಸೆಯ ಪರವಾಗಿ ಇರುವವರಿಗೆ ಕೆನಡಾದಲ್ಲಿ ರಾಜಕೀಯ ಸ್ಥಳಾವಕಾಶ ಒದಗಿಸಲಾಗುತ್ತಿದೆ ಎಂಬುದನ್ನು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ.

ಷಿಕಾಗೊ: ಮೇ 2ರಿಂದ ಭಾರತೀಯ ವಿದ್ಯಾರ್ಥಿ ನಾಪತ್ತೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಷಿಕಾಗೊದಲ್ಲಿ 26 ವರ್ಷದ ಭಾರತ ಮೂಲದ ವಿದ್ಯಾರ್ಥಿಯೊಬ್ಬರು ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ ಎಂದು ನಗರದ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ಇತ್ತೀಚೆಗೆ ಅಮೆರಿಕದಲ್ಲಿ ಭಾರತೀಯ ವಿದ್ಯಾರ್ಥಿಗಳ ಹತ್ಯೆ ಮತ್ತು ನಾಪತ್ತೆಯಂತಹ ಪ್ರಕರಣಗಳು ಹೆಚ್ಚಾಗಿವೆ.

ರೂಪೇಶ್ ಚಂದ್ರ ಚಿಂತಕಿಂಡಿ ಎಂಬ ವಿದ್ಯಾರ್ಥಿ ಎನ್.ಶೆರಿಡಾನ್ ರಸ್ತೆಯ ಬ್ಲಾಕ್ ನಂಬರ್ 4,300 ದಿಂದ ಕಾಣೆಯಾಗಿದ್ದಾರೆ ಎಂದು ಚಿಕಾಗೊ ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರೂಪೇಶ್ ಅವರನ್ನು ಪತ್ತೆ ಹಚ್ಚಲು ಪೊಲೀಸರು ಮತ್ತು ಭಾರತೀಯ ರಾಯಭಾರದೊಂದಿಗೆ ತಾವು ಸಂಪರ್ಕದಲ್ಲಿರುವುದಾಗಿ ಚಿಕಾಗೊದ ಭಾರತದ ಕಾನ್ಸುಲೇಟ್ ಜನರಲ್ ತಿಳಿಸಿದ್ದಾರೆ.

'ಮೇ 2ರಿಂದ ಭಾರತ ಮೂಲದ ವಿದ್ಯಾರ್ಥಿ ರೂಪೇಶ್ ಚಂದ್ರ ಚಿಂತಕಿಂಡಿ ಕಾಣೆಯಾಗಿದ್ದಾರೆ ಎಂದು ತಿಳಿದು ಕಾನ್ಸುಲೇಟ್ ತೀವ್ರ ಕಳವಳ ವ್ಯಕ್ತಪಡಿಸಿದೆ. ರೂಪೇಶ್ ಅವರ ಹುಡುಕಾಟಕ್ಕಾಗಿ ನಾವು ಪೊಲೀಸರೊಂದಿಗೆ ಸಂಪರ್ಕದಲ್ಲಿದ್ದೇವೆ' ಎಂದು ಕಾನ್ಸುಲೇಟ್ ತನ್ನ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದೆ.

ಅಮೆರಿಕದಲ್ಲಿ ಕಳೆದ ಏಪ್ರಿಲ್‌ನಲ್ಲಿ ನಾಪತ್ತೆಯಾಗಿದ್ದ ಹೈದರಾಬಾದ್‌ನ ನಾಚಾರಂ ಮೂಲದ ಮೊಹಮ್ಮದ್ ಅಬ್ದುಲ್ ಅರ್ಫಾತ್ (25) ಅವರು ಅಮೆರಿಕದ ಕ್ಲೀವ್‌ಲ್ಯಾಂಡ್ ನಗರದಲ್ಲಿ ಶವವಾಗಿ ಪತ್ತೆಯಾಗಿದ್ದರು.

ಮಾರ್ಚ್‌ನಲ್ಲಿ ಮಿಸೌರಿಯ ಸೇಂಟ್ ಲೂಯಿನಲ್ಲಿ ಭಾರತೀಯ ಮೂಲದ ನೃತ್ಯ ಕಲಾವಿದ ಅಮರನಾಥ್ ಘೋಷ್ (34) ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಯಿತು.

ಭಾರತ ಮೂದಲ ವಿದ್ಯಾರ್ಥಿ ಸಮೀರ್ ಕಾಮತ್ (23) ಅವರು ಅಮೆರಿಕದ ಇಂಡಿಯಾನಾದಲ್ಲಿ ಫೆ.5ರಂದು ಶವವಾಗಿ ಪತ್ತೆಯಾಗಿದ್ದರು. ಫೆ.2ರಂದು ಭಾರತೀಯ ಮೂಲದ ಐಟಿ ಕೆಲಸಗಾರ ವಿವೇಕ್ ತನೇಜಾ (41) ಅವರು ವಾಷಿಂಗ್ಟನ್‌ನ ರೆಸ್ಟೋರೆಂಟ್ ಹೊರಗೆ ನಡೆದ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದರು.

'ಪರಸ್ಪರ ಹಿತಾಸಕ್ತಿಗಳ ಆಧಾರದಲ್ಲಿ ಭಾರತ–ಮಾಲ್ದೀವ್ಸ್ ಅಭಿವೃದ್ಧಿ'

ನವದೆಹಲಿ (ಪಿಟಿಐ): ಭಾರತ ಮತ್ತು ಮಾಲ್ದೀವ್ಸ್‌ನ ಅಭಿವೃದ್ಧಿಯು ಎರಡು ರಾಷ್ಟ್ರಗಳ ಹಿತಾಸಕ್ತಿ ಮತ್ತು ಪರಸ್ಪರ ಸೂಕ್ಷ್ಮತೆಗಳನ್ನು ಗೌರವಿಸುವ ಆಧಾರದಲ್ಲಿ ನಡೆಯುತ್ತದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ತಿಳಿಸಿದರು.

ಮಾಲ್ದೀವ್ಸ್‌ನ ವಿದೇಶಾಂಗ ಸಚಿವ ಮೂಸಾ ಜಮೀರ್ ಅವರೊಂದಿಗೆ ಗುರುವಾರ ನವದೆಹಲಿಯಲ್ಲಿ ಜೈಶಂಕರ್ ಮಾತುಕತೆ ನಡೆಸಿದರು.

'ನೆರೆಯ ರಾಷ್ಟ್ರಗಳಿಗೆ ಪ್ರಥಮ ಆದ್ಯತೆ ಮತ್ತು ಸಾಗರ್ ಮಿಷನ್‌ಗೆ ಭಾರತ ಬದ್ಧವಾಗಿದೆ. ಇಂದಿನ ಸಭೆಯು ವಿವಿಧ ವಲಯಗಳಲ್ಲಿನ ನಮ್ಮ ದೃಷ್ಟಿಕೋನವನ್ನು ಮತ್ತಷ್ಟು ಬಲಪಡಿಸಲಿದೆ' ಎಂದರು.

'ಮಾಲ್ದೀವ್ಸ್ ಅಭಿವೃದ್ಧಿಗೆ ಸಹಕರಿಸುತ್ತಿರುವ ರಾಷ್ಟ್ರಗಳಲ್ಲಿ ಭಾರತ ಪ್ರಮುಖವಾದದ್ದು. ನಾವು ಈ ಹಿಂದೆ ನೀಡಿದ್ದ ಆರ್ಥಿಕ ಸಹಕಾರವನ್ನು ವಿಸ್ತರಿಸಿದ್ದೇವೆ. ವಿವಿಧ ಸಂದರ್ಭಗಳಲ್ಲಿ ಮಾಲ್ದೀವ್ಸ್ ನೆರವಿಗೆ ಧಾವಿಸಿದ ಮೊದಲ ರಾಷ್ಟ್ರ ಭಾರತ' ಎಂದು ತಿಳಿಸಿದರು.



ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಮಾಲ್ದೀವ್ಸ್‌ನ ವಿದೇಶಾಂಗ ಸಚಿವ ಮೂಸಾ ಜಮೀರ್ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

ಮಾಲ್ದೀವ್ಸ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಭಾರತೀಯ ಸೇನೆಯನ್ನು ಹಿಂಪಡೆದುಕೊಳ್ಳುವಂತೆ ಅಲ್ಲಿನ ಪ್ರಧಾನಿ ಒತ್ತಾಯಿಸಿದ ಬಳಿಕ ಎರಡು ರಾಷ್ಟ್ರಗಳ ನಡುವಿನ ಬಾಂಧವ್ಯ ಹದಗೆಟ್ಟಿತ್ತು.

ಬಾಂಗ್ಲಾದ ತೀಸ್ತಾ ಜಲಾಶಯ ಯೋಜನೆ: ಭಾರತ ಬೆಂಬಲ



ಢಾಕಾ (ಪಿಟಿಐ): ಬಾಂಗ್ಲಾದೇಶದ ಗಡಿಯಲ್ಲಿ ಹರಿಯುವ ತೀಸ್ತಾ ನದಿಗೆ ಜಲಾಶಯ ನಿರ್ಮಿಸುವ ಯೋಜನೆಗೆ ಭಾರತ ಬೆಂಬಲ ವ್ಯಕ್ತಪಡಿಸಿದೆ ಎಂದು ಬಾಂಗ್ಲಾದ ವಿದೇಶಾಂಗ ಸಚಿವ ಹಸನ್ ಮಹಮೂದ್ ಗುರುವಾರ ತಿಳಿಸಿದರು.

ಭಾರತದ ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಅವರು ಬಾಂಗ್ಲಾದ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿದ ಬಳಿಕ ಅವರು ಈ ವಿಷಯವನ್ನು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ತೀಸ್ತಾ ನದಿ ನೀರಿನ ಹಂಚಿಕೆಯು ನವದೆಹಲಿ ಮತ್ತು ಢಾಕಾ ನಡುವೆ ವಿವಾದಾತ್ಮಕ ವಿಷಯವಾಗಿ ಉಳಿದಿದೆ. ಇಲ್ಲಿ ಜಲಾಶಯ ನಿರ್ಮಿಸುವ ಯೋಜನೆ ಕೈಗೊಳ್ಳಲು ಬಾಂಗ್ಲಾ ಮುಂದಾಗಿದ್ದು, ಅದಕ್ಕೆ ಬೀಜಿಂಗ್ ತಕ್ಷಣವೇ ತನ್ನ ಬೆಂಬಲ ವ್ಯಕ್ತಪಡಿಸಿತ್ತು.

'ನಮ್ಮ ತೀಸ್ತಾ ಯೋಜನೆಗೆ ಭಾರತವು ಹಣಕಾಸು ನೀಡಲು ಬಯಸುತ್ತಿದೆ. ಯೋಜನೆಯು ನಮ್ಮ ಅಗತ್ಯಗಳಿಗೆ ಅನುಗುಣವಾಗಿ ಇರಬೇಕು ಮತ್ತು ನಮ್ಮ ಅಗತ್ಯಗಳನ್ನು ಪೂರೈಸಬೇಕು ಎಂದು ನಾವು ಹೇಳಿದ್ದೇವೆ' ಎಂದು ಸಚಿವರು ತಿಳಿಸಿದರು. ಆದರೆ ಭಾರತದ ಪ್ರಸ್ತಾವನೆ ಕುರಿತು ಸಚಿವರು ಹೆಚ್ಚಿನ ವಿವರ ನೀಡಲಿಲ್ಲ.

ಇದಕ್ಕೂ ಮುನ್ನಾ ಕ್ವಾತ್ರಾ ಅವರು ಪ್ರಧಾನಿ ಶೇಖ್ ಹಸೀನಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಈ ವೇಳೆ ಹಸೀನಾ ಅವರನ್ನು ಭಾರತಕ್ಕೆ ಭೇಟಿ ನೀಡುವಂತೆ ಕ್ವಾತ್ರಾ ಆಹ್ವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕಕ್ಕೆ ಕೊಂಡೊಯ್ಯುವ ನಾಯಿಗಳಿಗೆ ಮೈಕ್ರೊಚಿಪ್ ಕಡ್ಡಾಯ

ನ್ಯೂಯಾರ್ಕ್ (ಎಪಿ): ಅನ್ಯ ದೇಶಗಳಿಂದ ಅಮೆರಿಕಕ್ಕೆ ಕೊಂಡೊಯ್ಯುವ ಶ್ವಾನಗಳಿಗೆ ಕನಿಷ್ಠ 6 ತಿಂಗಳಾಗಿರಬೇಕು ಮತ್ತು ರೇಬಿಸ್ ತಡೆಗಟ್ಟುವ ಲಸಿಕೆ ಹಾಕಿಸಿರುವ ಮಾಹಿತಿ ಇರುವ ಮೈಕ್ರೊಚಿಪ್ ಅಳವಡಿಸಿರಬೇಕು ಎಂದು ಸರ್ಕಾರವು ಹೊಸ ನಿಯಮ ಜಾರಿ ಮಾಡಿದೆ.

ನೂತನ ನಿಯಮದ ಪ್ರಕಾರ, ರೇಬಿಸ್ ಸಾಮಾನ್ಯವಾಗಿರುವ ದೇಶಗಳಿಂದ ತರುವ ನಾಯಿಗಳಿಗೆ ಲಸಿಕೆ ಕಡ್ಡಾಯವಾಗಿ ಹಾಕಿಸಿರಬೇಕು. ಈ ನಿಯಮವು ನಾಯಿಗಳ ತಳಿ ಅಭಿವೃದ್ಧಿಪಡಿಸುವವರು ಮತ್ತು ರಕ್ಷಕರು ಮತ್ತು ಮಾಲೀಕರೊಂದಿಗೆ ಪ್ರವಾಸ ಮಾಡುವ ನಾಯಿಗಳಿಗೂ ಅನ್ವಯವಾಗಿದೆ.

ಪ್ರತಿ ವರ್ಷ 10 ಲಕ್ಷ ಶ್ವಾನಗಳು ಅಮೆರಿಕ ಪ್ರವೇಶಿಸುತ್ತವೆ.

ಪೂಜೆಗೆ ಅರಳಿ ಹೂವು ಬಳಕೆ ನಿಲ್ಲಿಸಲು ಟಿಡಿಬಿ ತೀರ್ಮಾನ

ತಿರುವನಂತಪುರ (ಪಿಟಿಐ): ಕೇರಳದ ತಿರುವಾಂಕೂರು ದೇವಸ್ಥಾನ ಆಡಳಿತ ಮಂಡಳಿಯು (ಟಿಡಿಬಿ) ತನ್ನ ಸುಪರ್ದಿಯಲ್ಲಿರುವ ದೇವಾಲಯಗಳಲ್ಲಿ ಪೂಜೆಗೆ ಅರಳಿ ಹೂವು (ಒಲಿಯಾಂಡರ್–ಕಣಗಿಲು ಜಾತಿಗೆ ಸೇರಿದ ಹೂವು) ಬಳಸುವುದನ್ನು ನಿಲ್ಲಿಸಲು ತೀರ್ಮಾನಿಸಿದೆ.

ಈ ಹೂವು ಮನುಷ್ಯ ಮತ್ತು ಪ್ರಾಣಿಗಳ ಆರೋಗ್ಯಕ್ಕೆ ಹಾನಿಕಾರವಾದ ಕಾರಣ ಈ ನಿರ್ಧಾರ ಕೈಗೊಂಡಿದೆ.

ಮಂಡಳಿಯ ಅಧ್ಯಕ್ಷ ಪಿ.ಎಸ್. ಪ್ರಶಾಂತ್, 'ಪೂಜೆ ಮತ್ತು ನೈವೇದ್ಯದಲ್ಲಿ ಅರಳಿ ಹೂವುಗಳ ಬಳಕೆಯನ್ನು ಸಂಪುರ್ಣವಾಗಿ ನಿಲ್ಲಿಸಲು ನಿರ್ಧರಿಸಿದ್ದೇವೆ. ಇವುಗಳ ಬದಲಾಗಿ ತುಳಸಿ, ಮಲ್ಲಿಗೆ, ದಾಸವಾಳ, ಗುಲಾಬಿ ಮತ್ತಿರ ಹೂವುಗಳನ್ನು ಬಳಸುತ್ತೇವೆ' ಎಂದು ತಿಳಿಸಿದರು.

ಅಲಪ್ಪುಳ ಮತ್ತು ಪತ್ತನಂತಿಟ್ಟಂನಲ್ಲಿ ಈ ಹೂವುಗಳ ಸೇವನೆಯಿಂದ ಮಹಿಳೆ ಮತ್ತು ಗೋವುಗಳು ಸಾವಿಗೀಡಾದ ಬಗ್ಗೆ ವರದಿಯಾದ ಬೆನ್ನಲ್ಲೇ ಈ ನಿರ್ಧಾರ ಕೈಗೊಂಡಿದೆ.

ಗಾಜಾದ ಬಂದರಿಗೆ ಮಾನವೀಯ ನೆರವಿನ ಸರಕು

ನಿಕೋಷಿಯಾ (ಸೈಪ್ರಸ್): ಗಾಜಾ ಕಡಲ ತೀರದಲ್ಲಿ ಇತ್ತೀಚೆಗಷ್ಟೇ ಅಮೆರಿಕ ನಿರ್ಮಾಣ ಮಾಡಿರುವ ತೇಲುವ ಬಂದರಿಗೆ ಇದೇ ಮೊದಲ ಬಾರಿಗೆ ಮಾನವೀಯ ನೆರವಿನ ಸರಕು ರವಾನೆ ಮಾಡಲಾಗುತ್ತಿದೆ.

ಯೂರೋಪ್‌ನ ಪುಟ್ಟ ದ್ವೀಪ ರಾಷ್ಟ್ರ ಸೈಪ್ರಸ್ ಈ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ತನ್ನ ಲಾರ್ಕಾನಾ ಬಂದರಿನಿಂದ ಮಾನವೀಯ ನೆರವಿನ ಸರಕುಗಳುಳ್ಳ ಹಡಗನ್ನು ಕಳುಹಿಸಿ ಕೊಟ್ಟಿದೆ. ಅದು ಶೀಘ್ರದಲ್ಲಿಯೇ ಗಾಜಾವನ್ನು ತಲುಪಲಿದೆ ಎಂದು ಮೂಲಗಳು ತಿಳಿಸಿವೆ.

ವಿದೇಶಗಳಿಂದ ಬರುವ ಮಾನವೀಯ ನೆರವಿನ ಸರಕುಗಳನ್ನು ಸ್ವೀಕರಿಸಲು ಅನುಕೂಲವಾಗುವಂತೆ ಗಾಜಾ ಸಮೀಪದಲ್ಲಿ ವಿಶಾಲವಾದ ತೇಲುವ ಬಂದರು ನಿರ್ಮಿಸುವಂತೆ ಎರಡು ತಿಂಗಳ ಹಿಂದೆ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಆದೇಶಿಸಿದ್ದ ಬಳಿಕ ಈ ಬೆಳವಣಿಗೆ ನಡೆದಿದೆ.

ಕೇದಾರನಾಥ, ಗಂಗೋತ್ರಿ ದೇವಾಲಯ ಇಂದಿನಿಂದ ಭಕ್ತರಿಗೆ ಮುಕ್ತ

ಡೆಹ್ರಾಡೂನ್ (ಉತ್ತರಾಖಂಡ) (ಪಿಟಿಐ): ಉತ್ತರಾಖಂಡದ ಕೇದಾರನಾಥ, ಗಂಗೋತ್ರಿ ಹಾಗೂ ಯಮುನೋತ್ರಿ ದೇವಸ್ಥಾನಗಳು ಶುಕ್ರವಾರ ಭಕ್ತರಿಗೆ ಮುಕ್ತವಾಗಲಿವೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಹಿಮಾಲಯದ ಗಢವಾಲ್ ಪರ್ವತ ಶ್ರೇಣಿಗಳಲ್ಲಿರುವ ಈ ದೇವಾಲಯಗಳನ್ನು ಪ್ರತಿವರ್ಷ ಚಳಿಗಾಲ ಆರಂಭವಾದ ನಂತರ ಮುಚ್ಚಲಾಗುತ್ತದೆ. ಬೇಸಿಗೆ ಆರಂಭಗೊಂಡ ನಂತರ ಮತ್ತೆ ದರ್ಶನಕ್ಕೆ ಮುಕ್ತಗೊಳಿಸಲಾಗುತ್ತದೆ.

ಕೇದಾರನಾಥ ಮತ್ತು ಯಮುನೋತ್ರಿ ದೇವಾಲಯಗಳನ್ನು ಬೆಳಿಗ್ಗೆ 7ಕ್ಕೆ ತೆರೆಯಲಾಗುತ್ತದೆ. ಗಂಗೋತ್ರಿ ದೇವಾಲಯವನ್ನು ಮಧ್ಯಾಹ್ನ 12.20ಕ್ಕೆ ತೆರೆಯಲಾಗುತ್ತದೆ ಎಂದು ದೇವಾಲಯಗಳ ಆಡಳಿತ ಸಮಿತಿ ಅಧಿಕಾರಿಗಳು ಹೇಳಿದ್ದಾರೆ.

ರಾಜ್ಯದ 'ಚಾರ್‌ಧಾಮ್ ಯಾತ್ರೆ' ಭಾಗವಾಗಿರುವ ಬದರಿನಾಥ ದೇವಾಲಯವನ್ನು ಮೇ 12ರಂದು ಬೆಳಿಗ್ಗೆ 6ಕ್ಕೆ ತೆರೆಯಲಾಗುತ್ತದೆ.



ಕೇದಾರನಾಥ ದೇವಸ್ಥಾನವನ್ನು ಭಕ್ತರಿಗೆ ಮುಕ್ತಗೊಳಿಸಲಾಗುತ್ತಿರುವ ಕಾರಣ ದೇಗುಲವನ್ನು ಹೂವುಗಳಿಂದ ಗುರುವಾರ ಅಲಂಕಾರ ಮಾಡಲಾಯಿತು –ಪಿಟಿಐ ಚಿತ್ರ

ಚಾಲನೆ: ಈ ಮೂರು ದೇವಾಲಯಗಳಿಗೆ ತೆರಳುವ ಯಾತ್ರಿಗಳನ್ನು ಹೊತ್ತ ವಾಹನಗಳಿಗೆ ಗುರುವಾರ ಹಸಿರು ನಿಶಾನೆ ತೋರಲಾಯಿತು. 135 ವಾಹನಗಳಲ್ಲಿ ಒಟ್ಟು 4,050 ಜನರು ಯಾತ್ರೆ ಕೈಗೊಂಡಿದ್ದಾರೆ.

'ಈ ವರ್ಷ ದಾಖಲೆ ಸಂಖ್ಯೆಯಲ್ಲಿ ಯಾತ್ರಿಗಳು ಈ ನಾಲ್ಕು ದೇವಾಲಯಗಳಿಗೆ ಭೇಟಿ ನೀಡುವ ನಿರೀಕ್ಷೆ ಇದೆ' ಎಂದು ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಚಿವ ಪ್ರೇಮಚಂದ್ ಅಗರವಾಲ್ ಹೇಳಿದ್ದಾರೆ.

ದಡಾರ ಲಸಿಕೆ ಪಡೆಯದ ದೇಶದ ಶೇ 12ರಷ್ಟು ಮಕ್ಕಳು

ನವದೆಹಲಿ (ಪಿಟಿಐ): ದಡಾರ ಲಸಿಕೆಗೆ ಅರ್ಹವಾಗಿರುವ ಭಾರತದ ಶೇ 12ರಷ್ಟು ಮಕ್ಕಳು, ಶಿಫಾರಸು ಮಾಡಲಾದ ಲಸಿಕೆಯ ಎರಡು ಡೋಸ್‌ಗಳ ಪೈಕಿ ಯಾವುದನ್ನೂ ಪಡೆದುಕೊಂಡಿಲ್ಲ. ಇದು ಪ್ರತಿರಕ್ಷಣೆಯಲ್ಲಿನ ಅಂತರವನ್ನು ಸೂಚಿಸುತ್ತದೆ ಎಂದು ಅಧ್ಯಯನವೊಂದು ತಿಳಿಸಿದೆ.

ಈಶಾನ್ಯ ರಾಜ್ಯಗಳಲ್ಲಿ ಯಾವುದೇ ಡೋಸ್ ಪಡೆದುಕೊಳ್ಳದ ಮಕ್ಕಳ ಅಥವಾ ಶೂನ್ಯ ಡೋಸ್ ಪ್ರಕರಣಗಳ ಸಂಖ್ಯೆಯು ಅಧಿಕವಾಗಿದೆ. ಈ ಪೈಕಿ ನಾಗಾಲ್ಯಾಂಡ್ ಮೊದಲ ಸ್ಥಾನದಲ್ಲಿದ್ದು, ಶೇ 26ರಷ್ಟು ಶೂನ್ಯ ಡೋಸ್ ಪ್ರಕರಣಗಳನ್ನು ಹೊಂದಿದೆ. ತಮಿಳುನಾಡು ಅತ್ಯಂತ ಕಡಿಮೆ, ಶೇ 4.06ರಷ್ಟು ಶೂನ್ಯ ಡೋಸ್ ಪ್ರಕರಣ ಹೊಂದಿದೆ.

ದೇಶದ ಶೇ 30ರಷ್ಟು ಮಕ್ಕಳು ದಡಾರ ಲಸಿಕೆಯ ಒಂದು ಡೋಸ್ (ಎಮ್‌ಸಿವಿ1) ಮಾತ್ರ ಸ್ವೀಕರಿಸಿದ್ದಾರೆ. ಶೇ 60ರಷ್ಟು ಮಕ್ಕಳು ಲಸಿಕೆಯ ಎರಡೂ ಡೋಸ್‌ಗಳನ್ನು (ಎಮ್‌ಸಿವಿ2– 2ನೇ ಡೋಸ್) ಪಡೆದುಕೊಂಡಿದ್ದಾರೆ.

ಲಸಿಕೆ ವಿತರಣೆಯಲ್ಲಿ ವಿವಿಧ ರಾಜ್ಯಗಳಲ್ಲಿ ಅಂತರಜಿಲ್ಲಾ ವ್ಯತ್ಯಾಸಗಳೂ ಕಂಡುಬಂದಿವೆ. ಅರುಣಾಚಲ ಪ್ರದೇಶದ ಪಶ್ಚಿಮ ಸಿಯಾಂಗ್ ಜಿಲ್ಲೆಯಲ್ಲಿ ಶೇ 50ರಷ್ಟು ಶೂನ್ಯ ಡೋಸ್ ಪ್ರಕರಣ ಪತ್ತೆಯಾಗಿದ್ದರೆ, ದಿಬಾಂಗ್ ಕಣಿವೆ ಜಿಲ್ಲೆಯಲ್ಲಿ ಈ ಪ್ರಮಾಣ ಕೇವಲ ಶೇ 2.8ರಷ್ಟಿದೆ.

ಲಸಿಕೆಯು ರೋಗಗಳ ಹರಡುವಿಕೆಯನ್ನು ತಡೆಗಟ್ಟುವ ಮತ್ತು ಅನಾರೋಗ್ಯಕ್ಕೆ ತುತ್ತಾಗುವುದನ್ನು ತಪ್ಪಿಸುವ ಉತ್ತಮ ಮಾರ್ಗವಾಗಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ತಾಯಿಯ ಶಿಕ್ಷಣ, ತಪ್ಪು ಮಾಹಿತಿ, ಸಂಸ್ಕೃತಿ ಮತ್ತು ಹಿಂಜರಿಕೆಯಂತಹ ಕಾರಣಗಳು ಲಸಿಕೆ ಪ್ರಸರಣದ ಮೇಲೆ ಪ್ರಭಾವ ಬೀರುತ್ತವೆ ಎಂದು ವರದಿಯಲ್ಲಿ ಸಂಶೋಧಕರು ತಿಳಿಸಿದ್ದಾರೆ.

2020ರ ದೆಹಲಿ ಗಲಭೆ ತಾಹಿರ್‌ಗೆ ಜಾಮೀನು

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆಯ ಪ್ರಕರಣವೊಂದರಲ್ಲಿ ಎಎಪಿಯ ಮಾಜಿ ಕೌನ್ಸಿಲರ್ ತಾಹಿರ್ ಹುಸೇನ್‌ಗೆ ಇಲ್ಲಿನ ನ್ಯಾಯಾಲಯವು ಜಾಮೀನು ನೀಡಿದೆ.

ಹುಸೇನ್ ಈಗಾಗಲೇ ಮೂರು ವರ್ಷ ಬಂಧನದಲ್ಲಿದ್ದಾರೆ. ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ಸಾಧ್ಯತೆ ಕಡಿಮೆಯಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಜಾಮೀನು ಮಂಜೂರು ಮಾಡಿದ ನ್ಯಾಯಾಲಯವು ಹೇಳಿದೆ.

ಕೋಮು ದಳ್ಳುರಿಗೆ ಪಿತೂರಿ ನಡೆಸಿದ್ದು ಸೇರಿದಂತೆ ಇದಕ್ಕೆ ಧನ ಸಹಾಯದ ನಂಟಿರುವ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಹುಸೇನ್ ಆರೋಪಿಯಾಗಿರುವುದರಿಂದ ಬಂಧನದಲ್ಲೇ ಮುಂದುವರಿಯಲಿದ್ದಾರೆ.

2020ರ ಫೆ. 25ರಂದು ನಡೆದ ಗಲಭೆ ಸಂದರ್ಭ ಜನಸಮೂಹವು ಅಂಗಡಿಯನ್ನು ಧ್ವಂಸಗೊಳಿಸಿ ಬೆಂಕಿ ಹಚ್ಚಿತ್ತು. ಖಜೂರೀ ಖಾಸ್ ಪೊಲೀಸ್ ಠಾಣೆಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿತ್ತು. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಪುಲಸ್ತ್ಯ ಪ್ರಮಾಚಲ ಅವರು ಹುಸೇನ್ ಜಾಮೀನು ಅರ್ಜಿಯ ವಿಚಾರಣೆ ನಡೆಸಿದರು.



ವಿರಾಟ್ ಕೊಹ್ಲಿ –ರಜತ್ ಪಾಟೀದಾರ್ ಜೊತೆಯಾಟ • ಪಂಜಾಬ್ ಕಿಂಗ್ಸ್‌ಗೆ ಸೋಲು

ಆರ್‌ಸಿಬಿಗೆ ಸತತ ನಾಲ್ಕನೇ ಗೆಲುವು

ಧರ್ಮಶಾಲಾ (ಪಿಟಿಐ): ವಿರಾಟ್ ಕೊಹ್ಲಿ (92,47ಎ) ಅವರ ಮಿಂಚಿನ ಅರ್ಧ ಶತಕದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸತತ ನಾಲ್ಕನೇ ಗೆಲುವು ದಾಖಲಿಸಿತು. ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ವಿರುದ್ಧ 60 ರನ್‌ಗಳ ಸುಲಭ ಜಯ ಗಳಿಸಿತು.

ಈ ಗೆಲುವಿನೊಡನೆ ಆರ್‌ಸಿಬಿ ಏಳನೇ ಸ್ಥಾನದಲ್ಲೇ ಉಳಿಯಿತು. ಈ ಸೋಲಿನೊಂದಿಗೆ ಪಂಜಾಬ್ ಕಿಂಗ್ಸ್ ತಂಡದ ಪ್ಲೇ ಆಫ್ ಕನಸು ಭಗ್ನಗೊಂಡಿತು. ಮಳೆಯ ಕಾರಣದಿಂದ ಕೆಲಕಾಲ ಪಂದ್ಯ ಸ್ಥಗಿತಗೊಂಡಿತು.

ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆರ್‌ಸಿಬಿ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 241 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ಪಂಜಾಬ್ ತಂಡ ನಿಯಮಿತವಾಗಿ ವಿಕೆಟ್ ಕಳೆದುಕೊಂಡು 17 ಓವರ್‌ಗಳಲ್ಲಿ 181 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸ್ವಪ್ನಿಲ್ ಸಿಂಗ್ ಮತ್ತು ಫರ್ಗ್ಯೂಸನ್ ಪಂಜಾಬ್ ತಂಡಕ್ಕೆ ಆರಂಭಿಕ ಆಘಾತ ನೀಡಿದರು. ಪ್ರಭಸಿಮ್ರನ್ ಸಿಂಗ್ ಮತ್ತು ಜಾನಿ ಬೇಸ್ಟೊ ಹೆಚ್ಚು ರನ್ ಗಳಿಸಲು ಆಗಲಿಲ್ಲ. ನಂತರ ಬಂದ ಶಶಾಂಕ್ ಸಿಂಗ್ (37, 19ಎ) ಮತ್ತು ರಿಲಿ ರೂಸೊ (61, 27ಎ) ಜೊತೆಯಾಟದಿಂದ ಗೆಲುವಿನ ಆಸೆ ಚಿಗುರಿತ್ತು. ಆದರೆ, ಇಬ್ಬರು ಔಟಾಗುತ್ತಿದ್ದಂತೆ ಉಳಿದ ಬ್ಯಾಟರ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಮೊಹಮದ್ ಸಿರಾಜ್ ಕೊನೆಯ ಮೂರು ವಿಕೆಟ್ ಕಬಳಿಸಿದರು.

ಟಾಸ್ ಗೆದ್ದ ಪಂಜಾಬ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರ್‌ಸಿಬಿ ಪವರ್ ಪ್ಲೇ ಅವಧಿಯಲ್ಲೇ ಎರಡು ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತು. ನಾಯಕ ಡುಪ್ಲೆಸಿ ಹಾಗೂ ವಿಲ್ ಜ್ಯಾಕ್ಸ್ ಬೇಗನೆ ನಿರ್ಗಮಿಸಿದರು. ಐಪಿಎಲ್‌ನಲ್ಲಿ ಪದಾರ್ಪಣೆ ಮಾಡಿದ ಕನ್ನಡಿಗ ವಿದ್ವತ್ ಕಾವೇರಪ್ಪ ಅವರ ಮೊದಲ ಸ್ಪೆಲ್‌ನ ಎರಡು ಓವರ್‌ಗಳಲ್ಲಿಯೂ ಫೀಲ್ಡರ್‌ಗಳು ಮಾಡಿದ ಲೋಪಗಳಿಂದ ವಿರಾಟ್ ಕೊಹ್ಲಿ ಜೀವದಾನ ಪಡೆದರು. ಅದರ ಫಲವಾಗಿ ವಿರಾಟ್ ಬ್ಯಾಟಿಂಗ್‌ನಲ್ಲಿ ಮಿಂಚಿದರು. ಸಿಕ್ಸರ್ ಮತ್ತು ಬೌಂಡರಿಗಳ ಸುರಿಮಳೆಗರೆದರು. ಒಂದು ರನ್‌ಔಟ್ ಸಹ ಮಾಡಿದರು.

ರಜತ್ ಪಾಟೀದಾರ್ (55; 23ಎ) ಹಾಗೂ ಕ್ಯಾಮರಾನ್ ಗ್ರೀನ್ (46; 27ಎ) ಕೂಡ ಮಹತ್ವದ ಕಾಣಿಕೆ ನೀಡಿದರು.ಪಂಜಾಬ್ ತಂಡದ ವೇಗಿ ಅರ್ಷದೀಪ್ ಸಿಂಗ್ ಅವರಿಂದ ಕ್ಯಾಪ್ ಪಡೆದ ವಿದ್ವತ್ ಮೊದಲ ಓವರ್ ಹಾಕುವ ಅವಕಾಶ ಪಡೆದರು. ಓವರ್‌ನ ಮೂರನೇ ಎಸೆತವನ್ನು ಹೊಡೆದ ವಿರಾಟ್ ಬ್ಯಾಟ್ ಅಂಚಿಗೆ ಅಪ್ಪಳಿಸಿದ ಚೆಂಡು ಎತ್ತರಕ್ಕೆ ಚಿಮ್ಮಿತು. ಅಶುತೋಷ್ ಸಿಂಗ್ ಓಡಿ ಹೋಗಿ ಕ್ಯಾಚ್ ಪಡೆಯುವಲ್ಲಿ ವಿಫಲರಾದರು.

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ವಿದ್ವತ್ ಎರಡನೇ ಎಸೆತದಲ್ಲಿಯೇ ಡುಪ್ಲೆಸಿ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಅದೇ ಓವರ್ ಕೊನೆಯ ಎಸೆತದಲ್ಲಿ ವಿರಾಟ್ ಅವರ ಕ್ಯಾಚ್ ಪಡೆಯುವ ಅವಕಾಶವನ್ನು ರಿಲಿ ರೂಸೊ ಕೈಚೆಲ್ಲಿದರು. ವಿದ್ವತ್ ತಮ್ಮ ಇನ್ನೊಂದು ಓವರ್‌ನಲ್ಲಿ ವಿಲ್ ಜ್ಯಾಕ್ಸ್ (12ರನ್) ವಿಕೆಟ್ ಕೂಡ ಪಡೆದರು. ಆದರೆ ಕೊನೆಯವರೆಗೂ ವಿರಾಟ್ ವಿಕೆಟ್ ಗಳಿಸುವ ಅದೃಷ್ಟ ಅವರಿಗೆ ಸಿಗಲಿಲ್ಲ.

18ನೇ ಓವರ್‌ನಲ್ಲಿ ವಿರಾಟ್ ವಿಕೆಟ್ ಪಡೆಯುವಲ್ಲಿ ಅರ್ಷದೀಪ್ ಸಿಂಗ್ ಯಶಸ್ವಿಯಾದರು. ಆದರೆ ಅದಕ್ಕೂ ಮುನ್ನ ವಿರಾಟ್ ಅಮೋಘವಾದ ಬ್ಯಾಟಿಂಗ್ ಮಾಡಿದರು.

ಎರಡು ಜೊತೆಯಾಟ: ವಿರಾಟ್ ಅವರು ಎರಡು ಮಹತ್ವದ ಜೊತೆಯಾಟಗಳಲ್ಲಿ ಭಾಗಿಯಾದರು. ಅಷ್ಟೇ ಅಲ್ಲ. ತಾವು ಕೂಡ ಮಿಂಚಿನ ವೇಗದಲ್ಲಿ ರನ್ ಗಳಿಸುವ ಸಮರ್ಥರು ಎಂಬುದನ್ನೂ ಇಲ್ಲಿ ತೋರಿಸಿಕೊಟ್ಟರು. ಅವರು 195.74ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. 34 ಎಸೆತಗಳಲ್ಲಿ 50 ರನ್ ಗಳಿಸಿದ ಅವರು, ಈ ಟೂರ್ನಿಯಲ್ಲಿ ಐದನೇ ಅರ್ಧಶತಕ ದಾಖಲಿಸಿದರು. ನಂತರದ 13 ಎಸೆತಗಳಲ್ಲಿ 42 ರನ್‌ಗಳನ್ನು ಸೂರೆ ಮಾಡಿದರು. ಅಲ್ಲದೇ ಒಟ್ಟು 600 ರನ್‌ಗಳ ಗಡಿ ಮೀರಿದ ಹೆಗ್ಗಳಿಕೆಯೂ ಅವರದ್ದಾಯಿತು.

ವಿರಾಟ್ ಅವರಿಗಿಂತಲೂ ಬಿರುಸಾದ ಬ್ಯಾಟಿಂಗ್ ಮಾಡಿದ ರಜತ್ ಪಾಟೀದಾರ್ (55; 23ಎ) ತಂಡದ ಮೊತ್ತ ಶರವೇಗದಲ್ಲಿ ಏರಲು ಕಾರಣರಾದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಮತ್ತು ರಜತ್ 76 ರನ್ ಗಳಿಸಿದರು.

ಅದರಲ್ಲಿ ರಜತ್ ಅವರದ್ದೇ ಸಿಂಹಪಾಲು. ಅವರು 19 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ರಜತ್‌ಗೂ ಒಂದು ಜೀವದಾನ ಲಭಿಸಿತು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಮತ್ತು ಗ್ರೀನ್ ಅವರು 92 ರನ್ ಸೇರಿಸಿದರು.



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ರಜತ್ ಪಾಟೀದಾರ್ ಮತ್ತು ವಿರಾಟ್ ಕೊಹ್ಲಿ
–ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು
7ಕ್ಕೆ241 (20 ಓವರ್‌ಗಳಲ್ಲಿ)

ವಿರಾಟ್ ಸಿ ರೂಸೊ ಬಿ ಅರ್ಷದೀಪ್ 92 (47ಎ, 4X7, 6X6)
ಡುಪ್ಲೆಸಿ ಸಿ ಶಶಾಂಕ್ ಬಿ ವಿದ್ವತ್ 9 (7ಎ, 4X2)
ವಿಲ್ ಸಿ ಹರ್ಷಲ್ ಬಿ ವಿದ್ವತ್ 12 (7ಎ, 4X1, 6X1)
ರಜತ್ ಸಿ ಜಾನಿ ಬಿ ಸ್ಯಾಮ್ 55 (23ಎ, 4X3, 6X6)
ಗ್ರೀನ್ ಸಿ ಸ್ಯಾಮ್ ಬಿ ಪಟೇಲ್ 46 (27ಎ, 4X5, 6X1)
ದಿನೇಶ್ ಸಿ ಸ್ಯಾಮ್ ಬಿ ಪಟೇಲ್ 18 (7ಎ, 4X1, 6X2)
ಮಹಿಪಾಲ್ ಬಿ ಪಟೇಲ್ 0 (2ಎ)
ಸ್ವಪ್ನಿಲ್ ಔಟಾಗದೆ 1 (1ಎ)

ಇತರೆ: 8 (ಲೆಗ್‌ಬೈ 1, ವೈಡ್ 6, ನೋಬಾಲ್ 1)

ವಿಕೆಟ್ ಪತನ: 1–19 (ಫಫ್ ಡುಪ್ಲೆಸಿ; 2.2), 2–43 (ವಿಲ್ ಜ್ಯಾಕ್ಸ್; 4.4), 3–119 (ರಜತ್ ಪಾಟೀದಾರ್; 9.6), 4–211 (ವಿರಾಟ್ ಕೊಹ್ಲಿ; 17.4), 5–238 (ದಿನೇಶ್ ಕಾರ್ತಿಕ್; 19.1) 6–240 (ಮಹಿಪಾಲ್ ಲೊಮ್ರೊರ್; 19.4), 7–241 (ಕ್ಯಾಮರಾನ್ ಗ್ರೀನ್; 19.6)

ಬೌಲಿಂಗ್: ವಿದ್ವತ್ ಕಾವೇರಪ್ಪ 4–0–36–2, ಅರ್ಷದೀಪ್ ಸಿಂಗ್ 3–0–41–1, ಸ್ಯಾಮ್ ಕರನ್ 3–0–50–1, ಹರ್ಷಲ್ ಪಟೇಲ್ 4–0–38–3, ರಾಹುಲ್ ಚಾಹರ್ 3–0–47–0, ಲಿಯಾಮ್ ಲಿವಿಂಗ್‌ಸ್ಟೋನ್ 3–0–28–0

ಪಂಜಾಬ್ ಕಿಂಗ್ಸ್ 181 (17 ಓವರ್‌ಗಳಲ್ಲಿ)

ಪ್ರಭಸಿಮ್ರನ್ ಸಿಂಗ್ ಎಲ್‌ಬಿಡಬ್ಲ್ಯು ಸ್ವಪ್ನಿಲ್ 6 (4ಎ, 4X1)
ಬೇಸ್ಟೊ ಸಿ ಡುಪ್ಲೆಸಿ ಬಿ ಫರ್ಗ್ಯೂಸನ್ 27 (16ಎ, 4X1,6X1)
ರಿಲಿ ರೂಸೊ ಸಿ ಜ್ಯಾಕ್ಸ್ ಬಿ ಶರ್ಮಾ 61 (27ಎ, 4X9, 6X3)
ಶಶಾಂಕ್ ಸಿಂಗ್ ರನ್‌ಔಟ್ (ಕೊಹ್ಲಿ) 37 (19ಎ, 4X4, 6X2)
ಜಿತೇಶ್ ಬಿ ಶರ್ಮಾ 5 (4ಎ, 4X1)
ಲಿವಿಂಗ್‌ಸ್ಟೋನ್ ಸಿ ಶರ್ಮಾ ಬಿ ಸ್ವಪ್ನಿಲ್ 0 (2ಎ)
ಕರನ್ ಬಿ ಫರ್ಗ್ಯೂಸನ್ 22 (16ಎ, 4X2)
ಅಶುತೋಷ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 8 (5ಎ, 6X1)
ಹರ್ಷಲ್ ಸಿ ಫರ್ಗುಸನ್ ಬಿ ಸಿರಾಜ್ 0 (1ಎ)
ರಾಹುಲ್ ಔಟಾಗದೇ 5 (5ಎ, 4X1)
ಅರ್ಷ್‌ದೀಪ್ ಸಿ ಶರ್ಮಾ ಬಿ ಸಿರಾಜ್ 4 (3ಎ, 4X1)

ಇತರೆ: 6 (ಲೆಗ್‌ಬೈ2, ವೈಡ್ 4)


ವಿಕೆಟ್ ಪತನ: 1-6 (ಪ್ರಭಸಿಮ್ರನ್ ಸಿಂಗ್ , 0.4), 2-71 (ಜಾನಿ ಬೆಸ್ಟೊ, 5.5), 3-107 (ರಿಲಿ ರೂಸೊ8.6), 4-125 (ಜಿತೇಶ್ ಶರ್ಮಾ, 10.5), 5-126 (ಲಿಯಾಮ್ ಲಿವಿಂಗ್‌ಸ್ಟೋನ್ 11.2), 6-151 (ಶಶಾಂಕ್ ಸಿಂಗ್, 13.4), 6-151 (ಶಶಾಂಕ್ ಸಿಂಗ್, 13.4), 6-151 (ಶಶಾಂಕ್ ಸಿಂಗ್, 13),9–174 (ಹರ್ಷಲ್ ಪಟೇಲ್ 16,1) 10–181 (ಅರ್ಷ್‌ದೀಪ್ ಸಿಂಗ್ 16.6)

ಬೌಲಿಂಗ್: ಸ್ವಪ್ನಿಲ್ ಸಿಂಗ್ 3–0–28–2, ಮೊಹಮದ್ ಸಿರಾಜ್ 4–0–43–3, ಯಶ್ ದಯಾಳ್ 2–0–22–0, ಲಾಕಿ ಫರ್ಗ್ಯೂಸನ್ 3–0–29–2, ವಿಲ್ ಜ್ಯಾಕ್ಸ್ 1–0–5–0, ಕ್ಯಾಮರಾನ್ ಗ್ರೀನ್ 1–0–16–0, ಕರ್ಣ ಶರ್ಮಾ 3–0–36–2

ಪಂದ್ಯ ಶ್ರೇಷ್ಠ: ವಿರಾಟ್ ಕೊಹ್ಲಿ

ನಾಯಕತ್ವ ತ್ಯಜಿಸುವರೇ ರಾಹುಲ್?

ಫ್ರಾಂಚೈಸಿ ಮಾಲೀಕ ತರಾಟೆ: ಹರಿದಾಡಿದ ವಿಡಿಯೊ



ಕೆ.ಎಲ್. ರಾಹುಲ್



ಸಂಜೀವ್ ಗೊಯೆಂಕಾ

ನವದೆಹಲಿ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅವರು ಐಪಿಎಲ್ ಟೂರ್ನಿಯಲ್ಲಿ ಇನ್ನುಳಿದಿರುವ ಎರಡು ಪಂದ್ಯಗಳಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕತ್ವದಿಂದ ಕೆಳಗಿಳಿಯುವ ಸಾಧ್ಯತೆ ಇದೆ.

ಬುಧವಾರ ನಡೆದ ಪಂದ್ಯದಲ್ಲಿ ಲಖನೌ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು 10 ವಿಕೆಟ್‌ಗಳಿಂದ ಸೋತಿತ್ತು.

ಪಂದ್ಯದ ನಂತರ ಫ್ರಾಂಚೈಸಿಯ ಮಾಲೀಕ ಸಂಜೀವ್ ಗೊಯೆಂಕಾ ಅವರು ತಂಡದ ನಾಯಕ ಕೆ.ಎಲ್. ರಾಹುಲ್ ಅವರನ್ನು ವಾಚಾಮಗೋಚರವಾಗಿ 'ತರಾಟೆ'ಗೆ ತೆಗೆದುಕೊಂಡಂತೆ ಕಂಡ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ. ಇದು ಕ್ರಿಕೆಟ್ ಅಭಿಮಾನಿಗಳ ವಲಯದಲ್ಲಿ ಬಹಳಷ್ಟು ಚರ್ಚೆಗೆ ಕಾರಣವಾಗಿದೆ.

ಪಂದ್ಯದಲ್ಲಿ ರಾಹುಲ್ ಬಳಗವು 167 ರನ್‌ಗಳ ಗುರಿ ನೀಡಿತ್ತು. ಹೈದರಾಬಾದ್ ತಂಡದ ಆರಂಭಿಕ ಜೋಡಿ ಟ್ರಾವಿಸ್ ಹೆಡ್ (ಔಟಾಗದೆ 89; 30ಎಸೆತ) ಮತ್ತು ಅಭಿಷೇಕ್ ಶರ್ಮಾ (75; 28ಎಸೆತ) ಕೇವಲ ಹತ್ತು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ ಜಯದ ಕಾಣಿಕೆ ನೀಡಿದ್ದರು.

ಅಲ್ಲದೇ ರಾಹುಲ್ ಅವರು ಬ್ಯಾಟಿಂಗ್‌ನಲ್ಲಿಯೂ ಪರದಾಡಿದ್ದರು. 33 ಎಸೆತಗಳಲ್ಲಿ 29 ರನ್ ಗಳಿಸಿದ್ದರು. ಟೂರ್ನಿಯಲ್ಲಿ ಅವರು 12 ಪಂದ್ಯಗಳಲ್ಲಿ 460 ರನ್ ಗಳಿಸಿದ್ದಾರೆ. ಆದರೆ ಅವರ ಸ್ಟ್ರೈಕ್‌ರೇಟ್ (136.09) ಕೂಡ ಸಾಧಾರಣವಾಗಿದೆ.

ತಂಡದ ಖಾತೆಯಲ್ಲಿ 12 ಅಂಕಗಳಿವೆ. ಇನ್ನುಳಿದ ಎರಡು ಪಂದ್ಯಗಳಲ್ಲಿ ಗೆದ್ದರೆ ಪ್ಲೇ ಆಫ್ ಪ್ರವೇಶಿಸುವ ಸಾಧ್ಯತೆಯೂ ಇದೆ. ಆದರೆ ನೆಟ್ ರನ್‌ರೇಟ್ (-0760) ಕೂಡ ಹೆಚ್ಚಿಸಿಕೊಳ್ಳಬೇಕಿದೆ. ಮೇ 14 (ಡೆಲ್ಲಿ ಕ್ಯಾಪಿಟಲ್ಸ್) ಹಾಗೂ ಮೇ 17 (ಮುಂಬೈಇಂಡಿಯನ್ಸ್) ರಂದು ಪಂದ್ಯಗಳನ್ನು ಆಡಲಿದೆ.

ಈ ಹೊತ್ತಿನಲ್ಲಿ ನಾಯಕತ್ವ ಬದಲಾವಣೆಯ ಮಾತು ಕೇಳಿಬಂದಿದೆ.

'ಮುಂದಿನ ಪಂದ್ಯಕ್ಕೆ ಇನ್ನೂ ಐದು ದಿನಗಳ ಸಮಯ ಇದೆ. ಸದ್ಯಕ್ಕೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ರಾಹುಲ್ ಅವರು ತಮ್ಮ ಬ್ಯಾಟಿಂಗ್ ಮೇಲಷ್ಟೇ ಗಮನ ಕೇಂದ್ರಿಕರಿಸಲು ನಿರ್ಧರಿಸಿದರೆ ನಾಯಕತ್ವ ಬಿಡಬಹುದು. ಈ ಬಗ್ಗೆ ಮ್ಯನೇಜ್ ಮೆಂಟ್ ಕೂಡ ತಕರಾರು ಮಾಡುವುದಿಲ್ಲ' ಎಂದು ಐಪಿಎಲ್ ಮೂಲಗಳು ತಿಳಿಸಿವೆ.

ಒಂದೊಮ್ಮೆ ರಾಹುಲ್ ನಾಯಕತ್ವ ಬಿಟ್ಟುಕೊಟ್ಟರೆ ಉಪನಾಯಕ ನಿಕೊಲಸ್ ಪೂರನ್ ನಾಯಕತ್ವ ವಹಿಸಬಹುದು. ಈ ಟೂರ್ನಿಯಲ್ಲಿ ಪೂರನ್ ಅಮೋಘವಾಗಿ ಬ್ಯಾಟಿಂಗ್ ಮಾಡಿದ್ದಾರೆ.

ಕ್ರಿಕೆಟ್ ಅಭಿಮಾನಿಗಳ ಆಕ್ರೋಶ

ಲಖನೌ ಸೂಪರ್ ಜೈಂಟ್ಸ್ ಫ್ರಾಂಚೈಸಿ ಮಾಲೀಕರಾದ ಸಂಜೀವ ಗೊಯೆಂಕಾ ಅವರು ಕೆ.ಎಲ್. ರಾಹುಲ್ ಅವರನ್ನು 'ತರಾಟೆ'ಗೆ ತೆಗೆದುಕೊಂಡಿದ್ದನ್ನು ಕ್ರಿಕೆಟ್ ಅಭಿಮಾನಿಗಳು ಟೀಕಿಸಿದ್ದಾರೆ.

ಸನ್‌ರೈಸರ್ಸ್ ಎದುರಿನ ಪಂದ್ಯದ ನಂತರ ಕ್ರೀಡಾಂಗಣದ ಬೌಂಡರಿಗೆರೆಯ ಸಮೀಪದಲ್ಲಿಯೇ ಗೊಯೆಂಕಾ ಅವರು ರಾಹುಲ್ ಅವರೊಂದಿಗೆ ಮಾತನಾಡಿದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಓಡಾಡಿದೆ. ಗೊಯೆಂಕಾ ಅವರ ಹಾವಭಾವಗಳನ್ನು ನೋಡಿದರೆ ರಾಹುಲ್ ಅವರ ನಾಯಕತ್ವ ಮತ್ತು ಬ್ಯಾಟಿಂಗ್ ಎರಡರ ಬಗ್ಗೆ ತರಾಟೆ ತೆಗೆದುಕೊಂಡಂತೆ ಕಾಣುತ್ತಿದೆ. 'ಸೋಲು ಗೆಲುವು ಆಟದ ಅವಿಭಾಜ್ಯ ಅಂಗಗಳು. ಅದರಲ್ಲೂ ರಾಹುಲ್ ಭಾರತ ತಂಡದ ಆಟಗಾರ. ಅಲ್ಲದೇ ಭಾರತ ತಂಡವನ್ನು ಹಲವು ಪಂದ್ಯಗಳಲ್ಲಿ ನಾಯಕನಾಗಿ ಮುನ್ನಡೆಸಿದವರು. ಸಭ್ಯ ವ್ಯಕ್ತಿತ್ವದವರು. ಗೊಯೆಂಕಾ ಅಷ್ಟು ಜೋರಾಗಿ ಮಾತನಾಡಿದರೂ ರಾಹುಲ್ ಸಮಾಧಾನದಿಂದಲೇ ಪ್ರತಿಕ್ರಿಯಿಸಿದಂತೆ ಕಾಣುತ್ತಿದೆ. ಆಟಗಾರರನ್ನು ಸಾರ್ವಜನಿಕವಾಗಿ ಹಾಗೂ ಟಿ.ವಿ. ಕ್ಯಾಮೆರಾಗಳ ಮುಂದೆ ಈ ರೀತಿ ನಡೆಸಿಕೊಳ್ಳುವುದು ಸರಿಯಲ್ಲ. ಈ ಮಾತುಕತೆಯನ್ನು ಡ್ರೆಸಿಂಗ್ ರೂಮ್‌ನೊಳಗೆ ಮಾಡಬಹುದಿತ್ತಲ್ಲ' ಎಂದು ಹಲವಾರು ಜನರು ಸಾಮಾಜಿಕ ಜಾಲತಾಣಗಳಲ್ಲಿ ಬರೆದಿದ್ದಾರೆ.

'ಆರ್‌ಸಿಬಿಗೆ ಬನ್ನಿ ರಾಹುಲ್..'

'ರಾಹುಲ್ ನಿಮ್ಮನ್ನು ಈ ರೀತಿ ನೋಡಲು ನಮಗೆ ಬೇಸರವಾಗುತ್ತಿದೆ. ದಯವಿಟ್ಟು ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಬನ್ನಿ' ಎಂದು ಹಲವು ಕ್ರಿಕೆಟ್‌ಪ್ರಿಯರು ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಆರಂಭಿಸಿದ್ದಾರೆ.

'ರಾಹುಲ್ ನೀವು ತಂಡದಿಂದ ಹೊರಬರಬೇಕು. ಮೆಗಾ ಹರಾಜಿಗೆ ಲಭ್ಯರಾಗಬೇಕು. ಅಲ್ಲಿ ಆರ್‌ಸಿಬಿಯು ಯಾವುದೇ ಮೌಲ್ಯ ನೀಡಿಯಾದರೂ ರಾಹುಲ್ ಅವರನ್ನು ಖರೀದಿಸಬೇಕು' ಎಂದು ಕೆಲವು ಅಭಿಮಾನಿಗಳು ಆರ್‌ಸಿಬಿಯ ಎಕ್ಸ್ ಖಾತೆಯನ್ನು ಟ್ಯಾಗ್ ಮಾಡಿ ಸಂದೇಶ ಹಾಕಿದ್ದಾರೆ.

ಕ್ಲೀನ್‌ಸ್ವೀಪ್ ಮಾಡಿದ ಭಾರತ

ಬಾಂಗ್ಲಾದೇಶ ವಿರುದ್ಧ ಮಹಿಳಾ ಟಿ20 ಕ್ರಿಕೆಟ್ ಸರಣಿ

ಸಿಲ್ಹೆಟ್ (ಬಾಂಗ್ಲಾದೇಶ): ಬ್ಯಾಟರ್‌ಗಳ ಸಾಂಘಿಕ ಪ್ರದರ್ಶನದ ನಂತರ ರಾಧಾ ಯಾದವ್ (24ಕ್ಕೆ3) ಅವರ ಉತ್ತಮ ಬೌಲಿಂಗ್ ನೆರವಿನಿಂದ ಭಾರತ ತಂಡ ಐದನೇ ಹಾಗೂ ಅಂತಿಮ ಮಹಿಳಾ ಟಿ20 ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 21 ರನ್‌ಗಳಿಂದ ಸೋಲಿಸಿತು. ಭಾರತ ಸರಣಿಯನ್ನು 5–0 ಯಿಂದ ಕ್ಲೀನ್ ಸ್ವೀಪ್ ಮಾಡಿಕೊಂಡಿತು.

157 ರನ್‌ಗಳ ಗುರಿ ಬೆನ್ನತ್ತಿ ದ ಬಾಂಗ್ಲಾದೇಶ ತಂಡಕ್ಕೆ ಎಡಗೈ ಸ್ಪಿನ್ನರ್ ರಾಧಾ ಯಾದವ್ ಪೆಟ್ಟುಕೊಟ್ಟರು. ಮೊದಲ ನಾಲ್ಕು ವಿಕೆಟ್‌ಗಳಲ್ಲಿ ಮೂರನ್ನು ಪಡೆದರು.

ರೀತು ಮೋನಿ (37, 33ಎ, 4x4) ಮತ್ತು ಶರೀಫಾ ಖಾತುನ್ (ಅಜೇಯ 28, 21ಎ, 4x3) ಮಾತ್ರ ಸ್ವಲ್ಪ ಹೋರಾಟ ತೋರಿದರು. ಅವರಿಬ್ಬರು ಆರನೇ ವಿಕೆಟ್‌ಗೆ 57 ರನ್ ಸೇರಿಸಿದ್ದರು.

ಇದು ಬಾಂಗ್ಲಾ ಮಹಿಳಾ ತಂಡದ ಪರ ಆರನೇ ವಿಕೆಟ್‌ಗೆ ದಾಖಲೆ ಜೊತೆಯಾಟವೆನಿಸಿತು. ಸ್ಪಿನ್ನರ್ ಆಶಾ ಶೋಭನಾ ಈ ಜೊತೆಯಾಟ ಮುರಿದರು.

ಆದರೆ ಆತಿಥೇಯರು ಅಂತಿಮವಾಗಿ 20 ಓವರುಗಳಲ್ಲಿ 6 ವಿಕೆಟ್‌ಗೆ 135 ರನ್ ಗಳಿಸಲಷ್ಟೇ ಶಕ್ತರಾದರು. ಇದಕ್ಕೆ ಮೊದಲು ಭಾರತದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು– ಸ್ಮೃತಿ ಮಂದಾನ (33, 25ಎ), ನಾಯಕಿ ಹರ್ಮನ್‌ಪ್ರೀತ್ ಕೌರ್ (30, 24ಎ), ದಯಾಳನ್ ಹೇಮಲತಾ (37, 28) ಉಪಯುಕ್ತ ಆಟವಾಡಿದರು. ಹರ್ಮನ್‌ಪ್ರೀತ್ ಮತ್ತು ಹೇಮಲತಾ ನಡುವೆ ಮೂರನೇ ವಿಕೆಟ್‌ಗೆ 41 ಎಸೆತಗಳಲ್ಲಿ 60 ರನ್‌ಗಳು ಬಂದವು.

ಆರಂಭ ಆಟಗಾರ್ತಿ ಶಫಾಲಿ ವರ್ಮಾ (14) ವಿಫಲರಾದರು. ಕೊನೆಯಲ್ಲಿ ರಿಚಾ ಘೋಷ್ 17 ಎಸೆತಗಳಲ್ಲಿ ಒಂದು ಸಿಕ್ಸರ್, ಮೂರು ಬೌಂಡರಿಗಳಿದ್ದ ಅಜೇಯ 28 ರನ್ ಗಳಿಸಿದರು. ರಾಧಾ ಯಾದವ್ ಈ ಸರಣಿಯಲ್ಲಿ 10 ವಿಕೆಟ್ ಗಳಿಸಿ ಯಶಸ್ವಿ ಬೌಲರ್ ಎನಿಸಿದರೆ, ಸ್ಮೃತಿ ಮಂದಾನ (116) ಯಶಸ್ವಿ ಬ್ಯಾಟರ್ ಎನಿಸಿದರು.

ಸ್ಕೋರುಗಳು: ಭಾರತ: 20 ಓವರು ಗಳಲ್ಲಿ 5ಕ್ಕೆ156 (ಸ್ಮೃತಿ ಮಂದಾನ 33, ದಯಾಳನ್ ಹೇಮಲತಾ 37, ಹರ್ಮನ್‌ಪ್ರೀತ್ ಕೌರ್ 30, ರಿಚಾ ಘೋಷ್ ಔಟಾಗದೇ 28; ರಬಿಯಾ ಖಾನ್ 28ಕ್ಕೆ2, ನಹಿದಾ ಅಖ್ತರ್ 27ಕ್ಕೆ2); ಬಾಂಗ್ಲಾದೇಶ: 20 ಓವರುಗಳಲ್ಲಿ 6ಕ್ಕೆ 135 (ರುಬಿಯಾ ಹೈದರ್ 20, ರಿತು ಮೋನಿ 37, ಶರೀಫಾ ಖಾತುನ್ ಔಟಾಗದೇ 28, ರಬಿಯಾ ಖಾನ್ ಔಟಾಗದೇ 14; ರಾಧಾ ಯಾದವ್ 24ಕ್ಕೆ3, ಆಶಾ ಶೋಭನಾ 25ಕ್ಕೆ2).

ಬಾಕು ವಿಶ್ವಕಪ್: ಶೂಟರ್‌ಗಳ ನೀರಸ ಪ್ರದರ್ಶನ

ನವದೆಹಲಿ (ಪಿಟಿಐ): ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್‌ಗಳ ನೀರಸ ಪ್ರದರ್ಶನ ಮುಂದುವರಿದಿದ್ದು, ಪುರುಷರ ಮತ್ತು ಮಹಿಳೆಯರ ಸ್ಪರ್ಧೆಗಳಲ್ಲಿ ಸ್ಪರ್ಧಿಗಳು ಗುರುವಾರ ಫೈನಲ್‌ಗೆ ಪ್ರವೇಶಿಸಲಿಲ್ಲ.

ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಅನಂತ್ ಜೀತ್ ಸಿಂಗ್ ನರುಕಾ (125ಕ್ಕೆ/120) ಅಂಕಗಳೊಂದಿಗೆ 15ನೇ ಸ್ಥಾನ ಪಡೆದರೆ, 48 ವರ್ಷದ ಅನುಭವಿ ಶೂಟರ್ ಮೈರಾಜ್ ಅಹ್ಮದ್ ಖಾನ್ ಕೇವಲ 105 ಅಂಕಗಳನ್ನು ಗಳಿಸಿ, ಕಣದಲ್ಲಿದ್ದ 80 ಶೂಟರಗಳ ಪೈಕಿ 76ನೇ ಸ್ಥಾನ ಪಡೆದರು.

ಒಲಿಂಪಿಯನ್ ಮೈರಾಜ್ ಅವರು ಎರಡು ಅರ್ಹತಾ ಸುತ್ತುಗಳಲ್ಲಿ ಒಟ್ಟು 105 ಅಂಕಗಳನ್ನು ಗಳಿಸಿದರು. ಭಾರತದ ಮೂರನೇ ಆಟಗಾರ ಶೀರಾಜ್ ಶೇಖ್ ಐದು ಅರ್ಹತಾ ಸುತ್ತುಗಳಲ್ಲಿ ತಲಾ 25 ಶಾಟ್ ಗಳಲ್ಲಿ 115 ಅಂಕಗಳನ್ನು ಗಳಿಸಿ 54ನೇ ಸ್ಥಾನ ಪಡೆದರು.


ಮಹಿಳೆಯರ ವಿಭಾಗದಲ್ಲಿ ರೈಜಾ ಧಿಲ್ಲಾನ್ 114 ಅಂಕಗಳೊಂದಿಗೆ 16ನೇ ಸ್ಥಾನ ಪಡೆದರೆ, ಮಹೇಶ್ವರಿ ಚೌಹಾಣ್ 113 ಅಂಕಗಳೊಂದಿಗೆ 20ನೇ ಸ್ಥಾನ ಪಡೆದರು. ಮತ್ತೊಬ್ಬ ಯುವ ಶೂಟರ್ ಗನೆಮತ್ ಸೆಖೋನ್ 111 ಅಂಕಗಳೊಂದಿಗೆ 25ನೇ ಸ್ಥಾನ ಪಡೆದರು. ಪೃಥ್ವಿ ತೊಂಡೈಮನ್ (117) 24ನೇ ಹಾಗೂ ಒಲಿಂಪಿಕ್ ಕೋಟಾ ವಿಜೇತ ಭೌನೀಶ್ ಮೆಂಡಿರಟ್ಟಾ (116) 39ನೇ ಸ್ಥಾನ ಪಡೆದರು.

ಪ್ಲೇ ಆಫ್ ಸ್ಥಾನದ ಮೇಲೆ ಚೆನ್ನೈ ಕಣ್ಣು

ಋತುರಾಜ್ ಗಾಯಕವಾಡ ಬಳಗಕ್ಕೆ ಗುಜರಾತ್ ಟೈಟನ್ಸ್ ಸವಾಲು ಇಂದು



ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಹೇಂದ್ರಸಿಂಗ್ ಧೋನಿ ಮತ್ತು ಋತುರಾಜ್ ಗಾಯಕವಾಡ –ಪಿಟಿಐ ಚಿತ್ರ



ಶುಭಮನ್ ಗಿಲ್

ಅಹಮದಾಬಾದ್ (ಪಿಟಿಐ): ಪ್ಲೇ ಆಫ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳುವ ಛಲದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶುಕ್ರವಾರ ಗುಜರಾತ್ ಟೈಟನ್ಸ್ ವಿರುದ್ಧ ಕಣಕ್ಕಿಳಿಯಲಿದೆ.

12 ಅಂಕ ಗಳಿಸಿರುವ ಋತುರಾಜ್ ಗಾಯಕವಾಡ ನಾಯಕತ್ವದ ಚೆನ್ನೈ ತಂಡದಲ್ಲಿ ಅನುಭವಿ ಬೌಲರ್‌ಗಳ ಕೊರತೆ ಇದೆ.

ಆದರೆ ಆಲ್‌ರೌಂಡರ್‌ಗಳ ಮೇಲೆಯೇ ತಂಡವು ಅವಲಂಬಿತವಾಗಿದೆ. ಮುಸ್ತಫಿಜುರ್ ರೆಹಮಾನ್, ದೀಪಕ್ ಚಾಹರ್ ಮತ್ತು ಮಥೀಷ ಪಥಿರಾಣ ಅವರು ಲಭ್ಯರಿಲ್ಲ.

ತುಷಾರ್ ದೇಶಪಾಂಡೆ ಹಾಗೂ ರಿಚರ್ಡ್ ಗ್ಲೀಸನ್ ಅವರ ಮೇಲೆ ನಿರೀಕ್ಷೆ ಇದೆ. ಉಳಿದಂತೆ ಶಾರ್ದೂಲ್ ಠಾಕೂರ್, ಸ್ಪಿನ್ನರ್ ರವೀಂದ್ರ ಜಡೇಜ, ಮಿಚೆಲ್ ಸ್ಯಾಂಟನರ್ ಹಾಗೂ ಮೋಯಿನ್ ಅಲಿ ಅವರೇ ಆಸರೆ.

ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಜಡೇಜ ಆಲ್‌ರೌಂಡ್ ಆಟವೇ ಜಯಕ್ಕೆ ಕಾರಣವಾಗಿತ್ತು. ಆದರೆ ಬ್ಯಾಟಿಂಗ್‌ನಲ್ಲಿಯೂ ಋತುರಾಜ್, ಡ್ಯಾರಿಲ್ ಮಿಚೆಲ್, ಶಿವಂ ದುಬೆ ಹಾಗೂ ಜಡೇಜ ಅವರನ್ನೇ ತಂಡವು ನೆಚ್ಚಿಕೊಳ್ಳಬೇಕಾಗಿದೆ.

ಅಜಿಂಕ್ಯ ರಹಾನೆ ಅವರು ಲಯಕ್ಕೆ ಮರಳುತ್ತಿಲ್ಲ. ಮೋಯಿನ್ ಅಲಿ ಕೂಡ ರನ್ ಗಳಿಸಿದರೆ ತಂಡದ ಬಲ ಹೆಚ್ಚಲಿದೆ. ಧರ್ಮಶಾಲಾದಲ್ಲಿ ಪಂಜಾಬ್ ಎದುರು 167 ರನ್‌ಗಳ ಸಾಧಾರಣ ಗುರಿಯೊಡ್ಡಿಯೂ ಚೆನ್ನೈ ಗೆದ್ದಿತ್ತು.

ಸದ್ಯ ಅಂಕಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಗುಜರಾತ್ ಟೈಟನ್ಸ್ ತಂಡದ ಎದುರೂ ಇಂತಹದೇ ಛಲದಾಟ ತೋರುವ ಹುಮ್ಮಸ್ಸಿನಲ್ಲಿ ಚೆನ್ನೈ ಇದೆ.

ಟೂರ್ನಿಯ ಮೊದಲ ಸುತ್ತಿನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದ ಸಂದರ್ಭದಲ್ಲಿಯೂ ಚೆನ್ನೈ ಜಯಿಸಿತ್ತು.

ತನ್ನ ಕಳೆದ ಮೂರು ಪಂದ್ಯಗಳಲ್ಲಿಯೂ ಗುಜರಾತ್ ಸತತವಾಗಿ ಸೋತಿದೆ. ಶುಭಮನ್ ಗಿಲ್ ನಾಯಕತ್ವದ ತಂಡವು ಜಯದ ಹಾದಿಗೆ ಮರಳುವ ಪ್ರಯತ್ನದಲ್ಲಿದೆ.

ಅನುಭವಿ ಮೋಹಿತ್ ಶರ್ಮಾ, ಅಫ್ಗನ್ ಸ್ಪಿನ್ನರ್ ರಶೀದ್ ಖಾನ್ ಅವರು ಇರುವ ಬೌಲಿಂಗ್ ವಿಭಾಗವು ಚೆನ್ನಾಗಿದೆ.

ಬ್ಯಾಟಿಂಗ್‌ನಲ್ಲಿ ಶುಭಮನ್, ಸಾಯಿ ಸುದರ್ಶನ್, ವೃದ್ಧಿಮಾನ್ ಸಹಾ ಹಾಗೂ ಶಾರೂಕ್ ಖಾನ್ ಅವರು ತಮ್ಮ ಲಯ ಕಂಡುಕೊಂಡರೆ ತಂಡವು ಪುಟಿದೇಳಬಹುದು.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪ್ಲೇ ಆಫ್ ಹಾದಿಯನ್ನು ಕಠಿಣಗೊಳಿಸಬಹುದು!

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	11	8	3	16	1.453
ರಾಜಸ್ಥಾನ ರಾಯಲ್ಸ್	11	8	3	16	0.476
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಚೆನ್ನೈ ಸೂಪರ್ ಕಿಂಗ್ಸ್	11	6	5	12	0.700
ಡೆಲ್ಲಿ ಕ್ಯಾಪಿಟಲ್ಸ್	12	6	6	12	-0.316
ಲಖನೌ ಸೂಪರ್ ಜೈಂಟ್ಸ್	12	6	6	12	-0.769
ಆರ್‌ಸಿಬಿ	12	5	7	10	0.217
ಮುಂಬೈ ಇಂಡಿಯನ್ಸ್	12	4	8	8	-0.212
ಪಂಜಾಬ್ ಕಿಂಗ್ಸ್	12	4	8	8	-0.423
ಗುಜರಾತ್ ಟೈಟನ್ಸ್	11	4	7	8	-1.320

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (634)
ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್ (20 ವಿಕೆಟ್)

ಗ್ರೀಕೊ ರೋಮನ್ ಪೈಲ್ವಾನರು ವಿಫಲ

ಇಸ್ತಾಂಬುಲ್ (ಟರ್ಕಿ), (ಪಿಟಿಐ): ಭಾರತದ ಗ್ರೀಕೊ ರೋಮನ್ ಕುಸ್ತಿಪಟುಗಳು, ಗುರುವಾರ ಆರಂಭವಾದ ವಿಶ್ವ ಒಲಿಂಪಿಕ್ ಗೇಮ್ಸ್ ಅರ್ಹತಾ ಕೂಟದ ಮೊದಲ ದಿನ ಗಮನಸೆಳೆಯಲಿಲ್ಲ. ಹೆಚ್ಚಿನ ಪೈಲ್ವಾರು ನೀರಸ ಪ್ರದರ್ಶನ ನೀಡಿದರು.

ಸುಮಿತ್ (60 ಕೆ.ಜಿ), ಆಶು (67 ಕೆ.ಜಿ), ವಿಕಾಸ್ (77 ಕೆ.ಜಿ), ಸುನಿಲ್ ಕುಮಾರ್ (87 ಕೆ.ಜಿ) ಮತ್ತು ನಿತೇಶ್ (97 ಕೆ.ಜಿ) ಅವರು ತಮ್ಮ ವಿಭಾಗದ ಸ್ಪರ್ಧೆಗಳಲ್ಲಿ ಸೋತರು. ಹೀಗಾಗಿ ಈಗ ಫ್ರೀಸ್ಟೈಲ್ ಕುಸ್ತಿಪಟುಗಳಿಂದ ಉತ್ತಮ ಪ್ರದರ್ಶನದ ನಿರೀಕ್ಷೆ ಹೊಂದಲಾಗಿದೆ. ಸುಮಿತ್ 60 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲಿ ರುಮೇನಿಯಾದ ಎದುರಾಳಿ ರಝ್ವಾನ್ ಅರ್ನಾಟ್ ಅವರಿಗೆ ತಾಂತ್ರಿಕ ಆಧಾರದಲ್ಲಿ 10–0ಯಿಂದ ಸೋತರು. ಆಶು, ನಾರ್ವೆಯ ಎದುರಾಳಿ ಹಾವರ್ಡ್ ಯಾರ್ಗೆನ್ಸನ್ ಎದುರು 5–4 ರಲ್ಲಿ ಜಯಗಳಿಸಿದರೂ, ನಂತರದ ಸುತ್ತಿನಲ್ಲಿ ಏಳನೇ ಕ್ರಮಾಂಕದ ಕ್ರಿಟ್ಟಿನ ವಾಂಕ್‌ಝಾ ಅವರಿಗೆ ತಾಂತ್ರಿಕ ಕೌಶಲದ ಆಧಾರದಲ್ಲಿ 10–0ಯಿಂದ ಸೋತರು.

ವಿಕಾಸ್ ಮೊದಲ ಸುತ್ತಿನಲ್ಲಿ ಇಟಲಿಯ ರಿಕಾರ್ಡೊ ಅಬ್ರೆಸಿಯಾ ಎದುರು ಜಯಗಳಿಸಿದರೂ, ನಂತರ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಜಾರ್ಜಿ ಯಾದ ಲುರಿ ಲೊಮಾಡ್ಜೆ ಅವರಿಗೆ 0–8 ರಲ್ಲಿ ಮಣಿದರು. 87 ಕೆ.ಜಿ. ವಿಭಾಗದಲ್ಲಿ ಸುನಿಲ್ ಕುಮಾರ್ 3–1 ರಿಂದ ಜೋಸ್ ಆಂಡ್ರೆಸ್ ವರ್ಗಾಸ್ ಅವರನ್ನು ಸೋಲಿಸಿದರು. ಆದರೆ ನಂತರ ಅಜರ್‌ಬೈಜಾನ್‌ನ ರಫೀಖ್ ಹುಸೆಯ್ನೊವ್ ಅವರಿಗೆ 4–3ರಲ್ಲಿ ಮಣಿದರು. ಒಲಿಂಪಿಕ್ಸ್ ಕಂಚಿನ ಪದಕ ವಿಜೇತರಾದ ರಫೀಕ್ ಅತಿ ಕಡಿಮೆ ಅಂತರದಲ್ಲಿ ಗೆದ್ದು ಕ್ವಾರ್ಟರ್‌ಫೈನಲ್ ತಲುಪಿದರು.

ಮಣಿಕಾ ಯಶಸ್ಸಿನ ಓಟ ಅಂತ್ಯ

ಜೆಡ್ಡಾ (ಪಿಟಿಐ): ಸೌದಿ ಸ್ಮ್ಯಾಶ್ 2024' ಡಬ್ಲ್ಯುಟಿಟಿ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಅವರ ಯಶಸ್ಸಿನ ಓಟ ಗುರುವಾರ ಕ್ವಾರ್ಟರ್‌ಫೈನಲ್‌ನಲ್ಲಿ ಕೊನೆಗೊಂಡಿತು.

ವಿಶ್ವದ ಐದನೇ ರ್‍ಯಾಂಕ್ ಆಟಗಾರ್ತಿಯಾದ ಜಪಾನ್‌ನ ಹಿನಾ ಹಯಾಟಾ ಅವರು 7-11, 11-6, 11-4, 13-11, 11-2 ರಲ್ಲಿ 28 ವರ್ಷದ ಮಣಿಕಾ ಮೇಲೆ ಜಯಗಳಿಸಿದರು. ಎರಡನೇ ಸುತ್ತಿನಲ್ಲಿ ವಿಶ್ವದ ಎರಡನೇ ನಂಬರ್ ಆಟಗಾರ್ತಿ ವಾಂಗ್ ಮನ್ಯು ಅವರನ್ನು ಸೋಲಿಸಿದ್ದ ಮಣಿಕಾ, ನಂತರ 14ನೇ ಕ್ರಮಾಂಕದ ನೀನಾ ಮಿಟ್ಟೆಲ್ಹಮ್ ಅವರನ್ನು ಬುಧವಾರ ಕೇವಲ 22 ನಿಮಿಷಗಳಲ್ಲಿ 11-6, 11-9, 11-7 ರಿಂದ ಮಣಿಸಿದ್ದರು. ಆದರೆ ಹಿನಾ ಎದುರು ಅದೇ ಲಯದಲ್ಲಿ ಮುಂದುವರಿಯಲು ವಿಶ್ವದ 39ನೇ ಕ್ರಮಾಂಕದ ಆಟಗಾರ್ತಿಗೆ ಆಗಲಿಲ್ಲ.

ಯುಡಬ್ಲ್ಯುಡಬ್ಲ್ಯು: ಬಜರಂಗ್ ಅಮಾನತು



ಬಜರಂಗ್

ನವದೆಹಲಿ (ಪಿಟಿಐ): ವಿಶ್ವ ಕುಸ್ತಿ ಆಡಳಿತ ನೋಡಿಕೊಳ್ಳುವ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು), ದೇಶದ ಯಶಸ್ವಿ ಪೈಲ್ವಾನರಲ್ಲಿ ಒಬ್ಬರಾದ ಬಜರಂಗ್ ಪೂನಿಯಾ ಅವರನ್ನು ವರ್ಷಾಂತ್ಯದವರೆಗೆ ಅಮಾನತು ಮಾಡಿದೆ. ಉದ್ದೀಪನ ಮದ್ದು ಪರೀಕ್ಷೆಗೆ ಒಳಪಡಲು ನಿರಾಕರಿಸಿದ ಕಾರಣ 'ನಾಡಾ' ಅವರನ್ನು ಕಳೆದ ತಿಂಗಳು ತಾತ್ಕಾಲಿಕವಾಗಿ ಅಮಾತನು ಮಾಡಿತ್ತು.

'ನಾಡಾ' (ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಏಜನ್ಸಿ) ಆದೇಶದ ಮಾಹಿತಿಯಿದ್ದರೂ ಭಾರತ ಕ್ರೀಡಾ ಪ್ರಾಧಿಕಾರವು, ಅವರಿಗೆ ವಿದೇಶದಲ್ಲಿ ತರಬೇತಿಗೆ ₹ 9 ಲಕ್ಷ ಮಂಜೂರು ಮಾಡಿದೆ.

ವಾಸ್ತವ್ಯದ (ವೇರಬೌಟ್ಸ್) ಮಾಹಿತಿ ನೀಡಲು ವಿಫಲರಾಗಿದ್ದಕ್ಕೆ ಪೂನಿಯಾ ಅವರಿಗೆ ಏಪ್ರಿಲ್ 18ರಂದು 'ನಾಡಾ' ಅವರಿಗೆ ನೋಟಿಸ್ ನೀಡಿತ್ತು. ಏ. 23ರಂದು ಅವರ ಮೇಲೆ ತಾತ್ಕಾಲಿಕ ನಿಷೇಧ ಹೇರಿತ್ತು.

ಆದರೆ ಪರೀಕ್ಷೆಗೆ ಸ್ಯಾಂಪಲ್ ನೀಡಲು ನಿರಾಕರಿಸಿಲ್ಲ. ತಮ್ಮ ಮಾದರಿ ಪಡೆದುಕೊಳ್ಳಲು ಬಂದ ಸಂದರ್ಭದಲ್ಲಿ ತರಲಾಗಿದ್ದ ಕಿಟ್‌ಗಳ ಅವಧಿ (ಎಕ್ಸ್‌ಪೈರಿ ಡೇಟ್) ಮುಗಿದ ಕಾರಣ ಅಧಿಕಾರಿಯನ್ನು ಪ್ರಶ್ನಿಸಿದ್ದೆ ಎಂದು ಬಜರಂಗ್ ಈ ಹಿಂದೆಯೇ ಹೇಳಿದ್ದರು.


'ತಮ್ಮ ಅಮಾನತಿನ ಬಗ್ಗೆ ಯುಡಬ್ಲ್ಯುಡಬ್ಲ್ಯುನಿಂದ ಯಾವುದೇ ಸಂದೇಶ ತಮಗೆ ಬಂದಿಲ್ಲ' ಎಂದು ಬಜರಂಗ್ ಪೂನಿಯಾ ಹೇಳಿದ್ದಾರೆ. ಆದರೆ ಯುಡಬ್ಲ್ಯುಡಬ್ಲ್ಯು ಆಂತರಿಕ ಪಟ್ಟಿಯನ್ನು ಅಪ್ಡೇಟ್ ಮಾಡಿದ್ದು, ಇದರಲ್ಲಿ ಬಜರಂಗ್ ಅವರನ್ನು ಅಮಾನತು ಮಾಡಿರುವುದನ್ನು ಸ್ಪಷ್ಟವಾಗಿ ತಿಳಿಸಿದೆ. ಬಜರಂಗ್ ಅವರ ಪ್ರೊಫೈಲ್‌ನಲ್ಲಿ, ಡಿಸೆಂಬರ್ 31ರವರೆಗೆ ಅಮಾನತು ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಈ ನಡುವೆ ಅಚ್ಚರಿಯೆಂಬಂತೆ, ಏಪ್ರಿಲ್ 25ರಂದು ನಡೆದ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ಸಭೆಯು ಬಜರಂಗ್ ಅವರಿಗೆ ರಷ್ಯಾದ ದಾಗೆಸ್ತಾನದಲ್ಲಿ ತರಬೇತಿ ವೆಚ್ಚವಾಗಿ 8,82,000 ಜೊತೆಗೆ ವಿಮಾನ ಪ್ರಯಾಣದ ವೆಚ್ಚ ನೀಡುವಂತೆ ಕೋರಿದ ಪ್ರಸ್ತಾವಕ್ಕೆ ಸಮ್ಮತಿ ನೀಡಿರುವುದಾಗಿ ತಿಳಿಸಿತು. 35 ದಿನಗಳ ತರ ಬೇತಿ ಏ. 24ರಂದು ಆರಂಭವಾಗಬೇಕಿತ್ತು. ಆದರೆ ತಮ್ಮ ವಾಸ್ತವ್ಯದ ಮಾಹಿತಿ ನೀಡಲು ವಿಫಲರಾಗಿದ್ದ ಅವರು ಪ್ರಯಾಣವನ್ನು ಮೇ 28ಕ್ಕೆ ಮುಂದೂಡಿದ್ದರು.

ಈ ಬಗ್ಗೆ ಕ್ರೀಡಾ ಪ್ರಾಧಿಕಾರಮಹಾ ನಿರ್ದೇಶಕ ಸಂದೀಪ್ ಪ್ರಧಾನ್ ಅವರಾಗಲಿ, 'ಟಾಪ್ಸ್' ಯೋಜನೆಯ ಜಂಟಿ ಸಿಇಒ ಕರ್ನಲ್ ರಾಕೇಶ್ದ್ ಯಾದವ್ ಅವರಾಗಲಿ ವಿವರ ಕೋರಿ ಸುದ್ದಿಸಂಸ್ಥೆ ಮಾಡಿದ ಕರೆಗೆ ಪ್ರತಿಕ್ರಿಯಿಸಿಲ್ಲ.

ಸಿಂಗಪುರದ ಅಂತರರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಎರಡು ಪದಕ

ತರಕಾರಿ ಮಾರುವ ಧನರಾಜ್ ಬೆಳ್ಳಿ ಸಾಧನೆ

ಪ್ರಜಾವಾಣಿ ವಾರ್ತೆ



ಧನರಾಜ್



ಬೆಳ್ಳಿ ಗೆದ್ದ ವೈಶಾಖ್

ಮೈಸೂರು: ತರಕಾರಿ ಮಾರುತ್ತಲೇ ಕಸರತ್ತು ನಡೆಸಿದ, ಸರಗೂರು ತಾಲ್ಲೂಕಿನ ಸಾಗರೆ ಗ್ರಾಮದ ಯುವಕ ಧನರಾಜ್, ಇತ್ತೀಚೆಗೆ ಸಿಂಗಪುರದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಬೆಳ್ಳಿ ಪದಕದ ಸಾಧನೆ ಮಾಡಿದ್ದಾರೆ.

ಎಫ್‌ಐಎಫ್ (ಫಿಟ್‌ನೆಸ್ ಇಂಟರ್‌ನ್ಯಾಷನಲ್ ಫೆಡರೇಷನ್) ಆಯೋಜಿಸಿದ್ದ ಸ್ಪರ್ಧೆಯ ಜ್ಯೂನಿಯರ್ ಹಾಗೂ ಕ್ಲಾಸಿಕ್ ಫಿಸಿಕ್ ವಿಭಾಗದಲ್ಲಿ ಬೆಳ್ಳಿ ಪದಕಗಳಿಗೆ ಕೊರಳೊಡ್ಡಿದ್ದಾರೆ.


ಮೈಸೂರಿನ ಅರವಿಂದ ನಗರದಲ್ಲಿರುವ ಸಿ.ಆರ್ ಫಿಟ್‌ನೆಸ್ ಕೇಂದ್ರದಲ್ಲಿ ಕೋಚ್ ಎಂ.ಬಿ.ಚಂದನ್ ಅವರಿಂದ ಕಳೆದ ಒಂದೂವರೆ ವರ್ಷದಿಂದ ಧನರಾಜ್ ತರಬೇತಿ ಪಡೆದಿದ್ದರು. ತರಕಾರಿ ಮಾರಾಟ ಮಾಡಲು ಮೈಸೂರಿಗೆ ಬರುವ ಅವರು, ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಬಿಡುವಿನ ಸಮಯವನ್ನು ಬಳಸಿಕೊಂಡಿದ್ದಾರೆ.

ಜಿಲ್ಲಾ ಕೇಂದ್ರದಿಂದ 65 ಕಿ.ಮೀ ದೂರವಿರುವ ಸಾಗರೆಯಿಂದ ತರಕಾರಿ ಖರೀದಿಸಲು ನಿತ್ಯ ಸಂಜೆ ಮೈಸೂರಿಗೆ ಬರುತ್ತಿದ್ದ ಅವರು, ಸಂಜೆ 7ರಿಂದ 9ರವರೆಗೆ ಕಸರತ್ತು ನಡೆಸುತ್ತಿದ್ದರು. ರಾತ್ರಿ 12ರವರೆಗೆ ಎಪಿಎಂಸಿ ಮಾರುಕಟ್ಟೆಯಲ್ಲಿ ತರಕಾರಿ ಲೋಡ್ ಮಾಡಿಕೊಂಡು ಎಚ್.ಡಿ.ಕೋಟೆಗೆ ತೆರಳಿ ರಾತ್ರಿಯಿಡೀ ವಾಹನದಲ್ಲಿಯೇ ನಿದ್ರೆ ಮಾಡುತ್ತಿದ್ದರು. ಮರುದಿನ ಬೆಳಿಗ್ಗೆ ತರಕಾರಿ ಮಾರಾಟ ಮಾಡಿ ಮನೆಗೆ ಹೋಗುತ್ತಿದ್ದರು. ದುಡಿಮೆಯ ಜೊತೆಗೆ ಕ್ರೀಡಾ ಸಾಧನೆ ಮಾಡಲು ಪೋಷಕರಾದ ಮಹದೇವ–ಲಕ್ಷ್ಮಮ್ಮ ಕೂಡ ನೆರವಾಗಿದ್ದಾರೆ.

ವೈಶಾಖ್ ಸಾಧನೆ: ಕೆ.ಆರ್.ಮೊಹಲ್ಲಾ ನಿವಾಸಿ, ಬಿ.ಕಾಂ ವಿದ್ಯಾರ್ಥಿ 22 ವರ್ಷದ ವೈಶಾಖ್ ಇದೇ ಸ್ಪರ್ಧೆಯ ಜ್ಯೂನಿಯರ್ ವಿಭಾಗದಲ್ಲಿ ಬೆಳ್ಳಿ, ಕ್ಲಾಸಿಕ್ ಫಿಸಿಕ್ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಅವರಿಗೆ ಪೋಷಕರಾದ ಪುಟ್ಟಸ್ವಾಮಿ– ಬಿ.ಆರ್.ಭಾರತಿ ಪ್ರೋತ್ಸಾಹ ನೀಡುತ್ತಿದ್ದಾರೆ. 'ಏಕಲವ್ಯ' ಪ್ರಶಸ್ತಿ ಪಡೆವ ಮಹತ್ವಾಕಾಂಕ್ಷೆ ಅವರದ್ದು.

'ಸಾಧನೆಗೆ ಪರಿಶ್ರಮದೊಂದಿಗೆ ಸೂಕ್ತ ತರಬೇತಿಯೂ ಮುಖ್ಯ. ದೇಹದಾರ್ಢ್ಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬೇಕೆಂಬುದು ಕನಸಾಗಿತ್ತು. ಕೆಲಸದ ನಡುವೆಯೇ ತರಬೇತಿ ಪಡೆದೆ' ಎಂದು ಧನರಾಜ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಕ್ರೀಡಾಸಕ್ತಿ ಜೊತೆಗೆ ಶ್ರದ್ಧೆ, ಶಿಸ್ತು ಅಗತ್ಯ. ಧನರಾಜ್ ಹಾಗೂ ವೈಶಾಖ್ ಅವರ ಪರಿಶ್ರಮವೇ ಪ್ರಶಸ್ತಿ ಬಳಿಗೆ ಅವರನ್ನು ಕರೆದೊಯ್ದಿವೆ. ಆಸಕ್ತ ಕ್ರೀಡಾಪಟುಗಳಿಗೆ ಅಗತ್ಯ ಪ್ರೋತ್ಸಾಹವೂ ಬೇಕಿದೆ' ಎಂದರು.


ALVA'S HIGH SCHOOL
ALVA'S Education Foundation®
PUTTIGE, MOODUBIDIRE D.K-574227
SSLC RESULT 2024
OUTSTANDING PERFORMANCE IN THE STATE
ABOVE 95% 92 STUDENTS
ABOVE 90% 189 STUDENTS
ABOVE 85% 277 STUDENTS
ABOVE 600 MARKS 51 STUDENTS
619 ISHANA 99.04 %
618 MANISHA N 98.88 %
617 MANYA N POOJARY 98.72 %
617 RUTURAJ RAMAKRISHNA CHINAGE, 98.72 %
616 MURUGESH BIRADAR PATIL 98.56%
614 GOPAL KENCHAPPA SUNADHOLI 98.24 %
614 MALLIKARJUN RAMALINGAYYA MATHAPATI 98.24 %
612 ANNAPOORNA KAMATH, 97.92 %
612 PRANITHA 97.92 %
612 BHUMIKA SHRISAIL JODATTI 97.92 %
611 GOPAL PARAMANAND TORAGALLA 97.76 %
611 LAXMI HANAMANT HULAGANNAVAR 97.76 %
610 ARPITA HURALI 97.6 %
610 PRAJWAL GANAPATI KALLI 97.6 %
610 SUPRIYA MAHANTESH SUNKAD, 97.6 %
609 SUMUKHA SHARMA B V, 97.44 %
609 ASHARANI MURALIDHAR PUTHANIKAR, 97.44 %
608 GOWTHAM REDDY K A, 97.28 %
608 ADITYA ANIL KENCHANNAVAR, 97.28 %
608 MALLIKARJUN S BYAKOD, 97.28 %
607 LAXMI HANAMANTH KUMBAR, 97.12 %
607 SAMRUDHA SIDDAGOUD B PATIL, 97.12 %
607 AKASH V KALGUDI 97.12 %
606 KISHAN GANGADHAR GOLABHANVI, 96.96 %
606 PRADEEP CHANNAPPA BELAGALI, 96.96 %
606 SAMIKSHA VINOD MONE, 96.96 %
606 SANGAMESH TIPPANNA HOOLAGERI, 96.96 %
606 SHLOK 96.96 %
605 B S RAGHAVENDRA MYLAR, 96.8 %
605 VISHWANATH RAMAPPA KATTIKAR, 96.8 %
604 KAVANASHREE N B 96.64 %
604 CHAITRA ANANDARAO JADHAV, 96.64 %
604 ROHIT PRAKASH WALI, 96.64 %
604 SUDARSHAN SUKHADEV KANTEKAR, 96.64 %
603 NISHA BASAPPA KADAKOL, 96.48 %
603 NISHA KASHAPPA GUDADARA, 96.48 %
603 SANJANA SANGAPPA KARISIDDANNAVAR 96.48 %
603 SHIVARAJ MUTTAPPA BHOVI, 96.48 %
603 SOURABH SATISH KANKANAWADI, 96.48 %
603 TANMAYA SURAGOUDA PATIL, 96.48 %
603 VINAY IRAGOUDA KELAGINAMANI, 96.48 %
601 CHINMAY LAGAMAPPA TUPPAROTTI, 96.16 %
601 KAVYA NAGANAGOUDA MALAGOUDRA, 96.16 %
600 JAYANTH K P 96 %
600 LIWA SNEHAL MENDA, 96 %
600 M RAKSHAN RAI 96 %
600 PRAJWAL 96 %
600 SINCHANA SHYAMSUNDAR DAMBAL, 96 %
600 AISHWARYA MAHANTAYYA MATH, 96 %
600 SANTOSH MANTAYYA SHIVAYOGIMATH, 96 %
600 VAISHALI KUBER KONGI, 96%
ALVA'S PRE UNIVERSITY
Vidyagiri, Moodubidire - 574 227 D.K.
ALVA'S CENTRAL SCHOOL (CBSE Aff. No. 830919) & ENGLISH MEDIUM SCHOOL (State Syllabus)
Puthige, Moodubidire- 574227
ADMISSIONS OPEN
Two Years Integrated PU Programme
SCIENCE
PCMB | PCMC PCMS | PCME
with NEET | CET JEE
NATA | NDA | CLAT
COMMERCE
EBAC | EBAS | EBAH
BASBm | BAEBm
with CA | CS | NDA | CLAT
ARTS
HEPS with
CLAT |
CIVIL SERVICE
Special concession for STATE, CBSE & ICSE meritorious students*
Free education for achievers in sports and cultural field *
6366377825 | 6366377827 | 6366377823
www.alvaspucollege.org
CBSE 6th 7th 8th 9th & 11th
State Syllabus 6th 7th 8th 9th
7760272525 | 6366377824
7026529757 | 9071705131
www.alvascentalschool | www.alvasschools.com

ಒಲಿಂಪಿಕ್ಸ್ ಜ್ಯೋತಿ ಯಾತ್ರೆಗೆ ಚಾಲನೆ

ಮಾರ್ಸೆ (ಫ್ರಾನ್ಸ್): ಅತ್ಯಾಕರ್ಷಕ 'ಬೆಲೆಮ್' ಹೆಸರಿನ ಹಡಗಿನಲ್ಲಿ ಒಲಿಂಪಿಕ್ ಜ್ಯೋತಿ ಬುಧವಾರ ಇರುಳಲ್ಲಿ ಇಲ್ಲಿ ತಲುಪಿತು. ಭವ್ಯ ಸ್ವಾಗತ ಸಮಾರಂಭದ ನಂತರ ಜ್ಯೋತಿ ಯಾತ್ರೆ ಗುರುವಾರ ನಗರದಲ್ಲಿ ಆರಂಭವಾಯಿತು.

ಒಲಿಂಪಿಕ್ ಜ್ಯೋತಿಯಾತ್ರೆ 11 ವಾರಗಳ ಕಾಲ ದೇಶದ 450 ನಗರಗಳನ್ನು ಕ್ರಮಿಸಲಿದೆ. ಈ ಯಾತ್ರೆಯುದ್ದಕ್ಕೆ 10,000 ಮಂದಿ ಜ್ಯೋತಿ ಹಿಡಿದು ಓಡಲಿದ್ದಾರೆ. ಒಲಿಂಪಿಕ್ಸ್ ಜುಲೈ 26ರಂದು ಪ್ಯಾರಿಸ್‌ನಲ್ಲಿ ಆರಂಭವಾಗಲಿದೆ.

ಮೆಡಿಟರೆನಿಯನ್ ಸಾಗರಕ್ಕೆ ಮುಖಮಾಡಿರುವ ಐತಿಹಾಸಿಕ ನಾತ್ರೆ ಡಾಮ್ ಲಾ ಗಾರ್ದೆ ಬೆಸಿಲಿಕಾದಿಂದ ಜ್ಯೋತಿ ಯಾತ್ರೆಯನ್ನು ಮಾಜಿ ಫುಟ್‌ಬಾಲ್ ಆಟಗಾರ ಬಾಸಿಲ್ ಬೋಲಿ ಅವರು ಆರಂಭಿಸಿದರು. 1990ರ ದಶಕದಲ್ಲಿ ಅವರು ಮಾರ್ಸೆ ತಂಡಕ್ಕೆ ಆಡಿದ್ದರು. ಒಲಿಂಪಿಕ್ಸ್‌ನ ಸೇಲಿಂಗ್ ಸ್ಪರ್ಧೆಗಳು ಮಾರ್ಸೆಯಲ್ಲಿ ನಡೆಯಲಿವೆ.

'ನನಗೆ ಹೆಮ್ಮೆ ಎನಿಸಿದೆ. ಈ ಸಂಭ್ರಮ ಹೇಳಿಕೊಳ್ಳಲು ಆಗದು. ಒಲಿಂಪಿಕ್ ಜ್ಯೋತಿ ಕ್ರೀಡೆಯ ಸಂಕೇತ' ಎಂದು ಬೋಲಿ ಹೇಳಿದರು.

ನೀರಜ್‌ಗೆ 90 ಮೀ. ಗಡಿ ದಾಟುವ ವಿಶ್ವಾಸ

ದೋಹಾ (ಎಎಫ್‌ಪಿ): ಶುಕ್ರವಾರ ಇಲ್ಲಿ ನಡೆಯುವ ದೋಹಾ ಡೈಮಂಡ್ ಲೀಗ್‌ನಲ್ಲಿ ಜಾವೆಲಿನ್‌ಅನ್ನು 90 ಮೀ.ದೂರಕ್ಕೆಸೆಯುವ ವಿಶ್ವಾಸ ಹೊಂದಿರುವುದಾಗಿ ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಗುರುವಾರ ಇಲ್ಲಿ ಹೇಳಿದರು. ಚೋಪ್ರಾ ಈವರೆಗಿನ ಶ್ರೇಷ್ಠ ಸಾಧನೆ 89.94 ಮೀ. (2022) ಆಗಿದೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಜ್ಜಾಗಲು ಕತಾರ್‌ನ ರಾಜಧಾನಿಯಲ್ಲಿ ನಡೆಯುವ ಈ ಕೂಟ ಅಥ್ಲೀಟುಗಳಿಗೆ ನೆರವಾಗಲಿದೆ. 26 ವರ್ಷದ ಚೋಪ್ರಾ ಎರಡು ಏಷ್ಯನ್ ಗೇಮ್ಸ್ ಸ್ವರ್ಣಗಳ ಜೊತೆ ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಚಾಂಪಿಯನ್ ಆಗಿದ್ದಾರೆ. 90 ಮೀ. ಗಡಿದಾಟುವ ಅವರ ಆಸೆ ಇನ್ನೂ ಕೈಗೂಡಿಲ್ಲ.

ಯಾನ್ ಜೆಲೆಂಝಿ 1996ರಲ್ಲಿ ಜಾವೆಲಿನ್‌ಅನ್ನು 98.48 ಮೀ. ದೂರ ಎಸೆದಿದ್ದು ವಿಶ್ವ ದಾಖಲೆಯಾಗಿದೆ.

2018ರಲ್ಲಿ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ 88.06 ಮೀ. ಎಸೆದಾಗಿನಿಂದ ತಮಗೆ ಈ ಮೈಲಿಗಲ್ಲಿನ ಪ್ರಶ್ನೆ ಎದುರಾಗುತ್ತಿದೆ ಎಂದು ಅವರು ಹೇಳಿದರು.

ಮೊಣಗಂಟಿನ ಗಾಯದಿಂದ 2019ರಲ್ಲಿ ಅವರು ಯಾವುದೇ ಕೂಟದಲ್ಲಿ ಸ್ಪರ್ಧಿಸಿರಲಿಲ್ಲ. ನಂತರ ಅವರು 88 ಮೀ. ನಿಂದ 90 ಮೀ. ಮಧ್ಯೆ ಎಸೆಯುತ್ತಿದ್ದಾರೆ.



ನೀರಜ್ ಚೋಪ್ರಾ

ಲಂಕಾ ತಂಡಕ್ಕೆ ಹಸರಂಗ ನಾಯಕ

ಕೊಲಂಬೊ (ಎಎಫ್‌ಪಿ); ಮುಂಬರುವ ಟಿ20 ವಿಶ್ವಕಪ್‌ಗಾಗಿ ಶ್ರೀಲಂಕಾ ತಂಡವನ್ನು ಗುರುವಾರ ಪ್ರಕಟಿಸಲಾಗಿದ್ದು, ಪ್ರಸಕ್ತ ವರ್ಷ ಬಾಂಗ್ಲಾದೇಶ, ಆಫ್ಘಾನಿಸ್ತಾನ ಮತ್ತು ಜಿಂಬಾಬ್ವೆ ವಿರುದ್ದ ಮೂರು ಸರಣಿಗಳನ್ನು ಗೆದ್ದ ತಂಡದಲ್ಲಿದ್ದ ಆಟಗಾರರನ್ನೇ ಉಳಿಸಿಕೊಳ್ಳಲಾಗಿದೆ.

ವನಿಂದು ಹಸರಂಗ ಅವರನ್ನೇ ನಾಯಕನನ್ನಾಗಿ ಉಳಿಸಿಕೊಳ್ಳಲಾಗಿದೆ.

ತಂಡ: ವನಿಂದು ಹಸರಂಗ (ನಾಯಕ), ಚರಿತ್ ಅಸಲಂಕಾ, ಕುಸಲ್ ಮೆಂಡಿಸ್, ಪಥುಮ್ ನಿಸ್ಸಾಂಕಾ, ಕಮಿಂದು ಮೆಂಡಿಸ್, ಸದೀರಾ ಸಮರವಿಕ್ರಮ, ಏಂಜೆಲೊ ಮ್ಯಾಥ್ಯೂಸ್, ದಸುನ್ ಶನಕಾ, ಧನಂಜಯ ಡಿ ಸಿಲ್ವಾ, ಮಹೇಶ್ ತೀಕ್ಷಣ, ದುನಿತ್ ವೆಲ್ಲಲ್ಗಾ, ದುಷ್ಮಂತ ಚಮಿರಾ, ನುವಾನ್ ತುಷಾರಾ, ಮಧುಶಂಕಾ.



ವನಿಂದು

ಅಮೆರಿಕ ಆರಂಭಿಕ ಪಂದ್ಯವನ್ನು ಕೆನಡಾ ವಿರುದ್ಧ ಆಡಲಿದೆ.